Version 2

# ಜೀವನ ವಿದ್ಯೆ – ಒಂದು ಪರಿಚಯ

ಪ್ರಸ್ತಾಪಕ -

**ಮುಗಲೂರು ಅಗ್ರಹಾರ ನಾಗರಾಜ್**

**(ಮೂಲತಃ ಹಿಂಧಿ ಭಾಷೆಯಲ್ಲಿ )**

ಸಂಯುಕ್ತ ಹಿಂಧಿ-ಕನ್ನಡ ಸಂಸ್ಕರಣ

ದಿವ್ಯ ಪಥ ಸಂಸ್ಥಾನ

ಅಮರ್ಕಂಟಕ್

Version 2

## ಭಾಷಾಂತರಕಾರರ ಟಿಪ್ಪಣಿ

ಮಧ್ಯಸ್ಥ ದರ್ಶನದ ಗ್ರಂಥಗಳು ಮೂಲತಃ ಹಿಂದಿ ಭಾಷೆಯಲ್ಲಿವೆ. ಪೂಜ್ಯ ಶ್ರೀ ಎ. ನಾಗರಾಜ್ ನವರ ಸಲಹೆ ಹಾಗು ಪ್ರೇರಣೆಯಿಂದ ನಾನು ಇದರ ಕನ್ನಡ ಭಾಷಾಂತರ ಮಾಡಲಾರಂಭಿಸಿದೆ. ಮಧ್ಯಸ್ಥ ದರ್ಶನದ ಹಾಗು ಅದರ ಪರಿಷ್ಕರಣೆಯ ಅಧಿಕಾರ ಶ್ರೀ ಎ. ನಾಗರಾಜ್ ನವರದಾಗಿದ್ದು, ಈ ಭಾಷಾಂತರದ ಜವಾಬ್ದಾರಿಯನ್ನು ನಾನು ವಹಿಸುತ್ತೇನೆ. ಕನ್ನಡ ಭಾಷೆಯಲ್ಲಿ ನನ್ನ ಸಾಮರ್ಥ್ಯ ಸಾಧಾರಣ. ಮಧ್ಯಸ್ಥ ದರ್ಶನದ ವಿಧ್ಯಾರ್ಥಿಯಾಗಿ, ಇದನ್ನು ನಾನು ನನ್ನ ಅಧ್ಯಯನದ ಕ್ರಮದಲ್ಲಿ ಒಂದು ಸಹಾಯಕ ಹಾಗು ಪುಷ್ಟಿದಾಯಕ ಅಭ್ಯಾಸವೆಂದು ಪರಿಗಣಿಸುತ್ತೇನೆ. ಈ ಭಾಷಾಂತರದಲ್ಲಿ ಪರಿಷ್ಕರಣೆಗೆ ಅವಾಕಾಶವಿದೆ. ಮಧ್ಯಸ್ಥ ದರ್ಶನದಲ್ಲಿ ಅಧ್ಯಯನ ರತರಾದವರು ಹಾಗು ಈ ಭಾಷಾಂತರ ಕಾರ್ಯವನ್ನು ಪರಿಸುವವರು, ಶಿಕ್ಷಣದಲ್ಲಿ ಪ್ರಯೋಗಿಸುವವರು, ನೀಡುವ ಆಲೋಚನೆ ಹಾಗು ಸಲಹೆಯ ಆಧಾರದಮೇಲೆ ಇದರ ಪರಿಷ್ಕರಣವಾಗುತ್ತಲಿರುತ್ತದೆ. ಈ ಭಾಷಾಂತರದಿಂದ ಶ್ರೀ ಎ. ನಾಗರಾಜ್ ಪ್ರತಿಪಾದಿಸಿರುವ ಮಧ್ಯಸ್ಥ ದರ್ಶನದ ಮೂಲ ಪ್ರತಿಪಾದನೆಯನ್ನು ಕನ್ನಡಭಾಷಿಯರಿಗೆ ಸುಲಭಸಾಧ್ಯವಾಗಲೆಂದು ನಾನು ಆಶಿಸುತ್ತೇನೆ.

ಗೌರಿ ಶ್ರೀಹರಿ
(ಅಮರ್ಕಂಟಕ್)
gowrisrihari@gmail.com

ಹೆಚ್ಚು ಮಾಹಿತಿಗೆ www.madhyasth-darshan.info ನೋಡಿ

*The final version will have the original Hindi text along with the kannda text. This book is to be always read with the original in Hindi. Due to technical reasons the Hindi version has not been incorporated here. The original book in Hindi is provided in the zip file. Please download it and read it along with the kannda version.*

*ಅಂತಿಮ ಸಂಸ್ಕರಣವು ಕನ್ನಡ ಭಾಷೆಯ ಪಠ್ಯದೊಂದಿಗೆ ಮೂಲ ಹಿಂದಿ ಪಠ್ಯವನ್ನು ಹೊಂದಿರುತ್ತದೆ. ಈ ಪುಸ್ತಕವನ್ನು ಯಾವಾಗಲು ಮೂಲ ಹಿಂದಿ ಭಾಷೆಯ ಪುಸ್ತಕದ ಜೊತೆ ಓದುವುದೇ ಉತ್ತಮ. ತಾಂತ್ರಿಕ ಕಾರಣಗಳಿಂದ ಮೂಲ ಹಿಂದಿ ಪಠ್ಯವನ್ನು ಇಲ್ಲಿ ಅಳವಡಿಸಲಾಗಿಲ್ಲ. ಹಿಂದಿ ಭಾಷೆಯ ಮೂಲ ಪುಸ್ತಕವನ್ನು ಜಿಪ್ ಫೈಲ ನಲ್ಲಿ ಒದಗಿಸಲಾಗಿದೆ. ದಯವಿಟ್ಟು ಅದನ್ನು ಡೌನ್ಲೋಡ್ ಮಾಡಿ ಅದನ್ನು ಕನ್ನಡ ಪುಸ್ತಕದೊಂದಿಗೆ ಓದಿ.*

# ಜೀವನ ವಿದ್ಯಾ: ಒಂದು ಪರಿಚಯ

ಮಾನವ ಬಂಧುಗಳೇ ! ನಾನು ಸ್ವೇಚ್ಛೆಯಿಂದ ಗತಕಾಲದ ವೈದಿಕ ವಾಙ್ಗಮಯಗಳನ್ನು ಕೇಳಿದ್ದೇನೆ (ಅರಿತುಕೊಂಡಿದ್ದೇನೆ). ಇದರಲ್ಲಿ ಯಾರ ಒತ್ತಡವೂ ಇರಲಿಲ್ಲ. ಅರಿತುಕೊಂಡ ಮೇಲೆ ನನ್ನದೊಂದು ಕಾಮನೆಯಾಯಿತು. ಈ ಧರಣಿಯ ಮೇಲೆ ಮಾನವ ಹೇಗಿರಬೇಕು? ಇದಕ್ಕೆ ನಾನು ನನ್ನಲ್ಲೇ ಒಂದು ವಿಸ್ಫೋಟವನ್ನು ಪಡೆದೆನು, ಏನೆಂದರೆ "ಭೂಮಿ ಸ್ವರ್ಗವಾಗಲೀ, ಮನುಷ್ಯ ದೇವತನಾಗಲೀ, ಧರ್ಮ ಜಯವಾಗಲೀ, ನಿತ್ಯವೂ ಶುಭವಿರಲಿ."

ಭೂಮಿ ಸ್ವರ್ಗತಾಂ ಯಾತು,

ಮನುಷ್ಯೋ ಯಾತು ದೇವತಾಂ I

ಧರ್ಮೋ ಸಫಲತಾಂ ಯಾತು,

ನಿತ್ಯಂ ಯಾತು ಶುಭೋದಯಂ II

ಇದು ಹೇಗೆ ಉದ್ಗಮಿತವಾಯಿತೆಂದು ಇದರ ಹಿನ್ನಲೆ ನಾನು ನಿಮ್ಮ ಸಮ್ಮುಖವಿಡಲು ಬಯಸುತ್ತೇನೆ. ಈ ಶರೀರ ಯಾತ್ರೆ ಒಂದು ಪರಿಶ್ರಮಿ, ಸೇವೆ ಮಾಡುವ, ವೈದಿಕ ಧರ್ಮಪಾರಾಯಣ ಮಾಡುವ, ಆರ್ಯಶ್ರೇಯ ಕುಟುಂಬದಲ್ಲಿ ಪ್ರಾರಂಭವಾಯಿತು. ನಿಮಗೆಲ್ಲಾ ತಿಳಿದಿರುವಂತೆ, ಪ್ರತ್ಯೇಕ ಮಾನವ ಸಂತಾನ, ಯಾವುದಾದರೊಂದು ತಾಯಿಯ ಗರ್ಭದಿಂದ ಜನ್ಮಿಸಿ, ಯಾವುದಾದರೊಂದು ಧರ್ಮವನ್ನು ನಂಬಿರುವವನಾಗಿದ್ದು, ಯಾವುದಾದರೊಂದು ರಾಜ್ಯ ಸಂವಿಧಾನವನ್ನು ಸ್ವೀಕರಿಸಿರುತ್ತಾನೆ. ಪರಂಪರೆಯಿಂದ ಪ್ರಾಪ್ತ ಶಿಕ್ಷಣಕ್ಕೆ ಅರ್ಪಿತನಾಗಿರುತ್ತಾನೆ ಹಾಗು ಶಿಕ್ಷಣ ವಿಧಗಳ ಅನುಸಾರ ನಡೆದುಕೊಂಡಿರುತ್ತಾನೆ. ಇದು ಇಂದಿನವರೆಗಿರುವ ಪರಂಪರೆಯ ಮಾತಾಯಿತು. ಇದೇ ರೀತಿಯಲ್ಲಿ ನಾನು ಎಲ್ಲಿಂದ ಪ್ರಾರಂಭಿಸಿದೆನೋ, ಯಾವ ಕುಟುಂಬದಲ್ಲಿ ಪ್ರಾರಂಭಿಸಿದೆನೋ, ಇವೆಲ್ಲದಿಂದಲೇ ಕಳೆದೆನು. ಇದರ ಸಹಿತ ರೂಢಿಗತ ಪರಂಪರೆಯ ಮಾತುಗಳು, "ಇವರ ಜೊತೆ ಸೇರು, ಇವರ ಜೊತೆ ಸೇರಬೇಡ, ಇದನ್ನು ಮಾಡು, ಇದನ್ನು ಮಾಡಬೇಡ", ಇವೆಲ್ಲಾ ರೂಢಿಗಳಿಂದ ಶುರುವಿನಿಂದಲೇ ನನ್ನ ಮನಸ್ಸು ತುಂಬಲಿಲ್ಲ. ಮೊದಮೊದಲು, ಇದು ಹುಡುಗಾಟವೆಂದು (ಹುಡುಗನೆಂದು), ಹಿರಿಯರು ನಂಬಿದರು. ಸ್ವಲ್ಪ ದಿನಗಳ ನಂತರ ಅವರಲ್ಲೂ ಬದಲಾವಣೆ ಬಂದಿತು. ದೃಷ್ಟಿ, ನಿಲುವು, ಭಂಗಿ, ಮುಖಗಂಟು, ಎಲ್ಲಾ ಬದಲಾಗಲಾರಂಭಿಸಿತು. ನನಗನಿಸಿತು, ನನ್ನ ಹಿರಿಯರು ನನ್ನಿಂದ ಪ್ರಸನ್ನರಾಗಲಿಲ್ಲ. ಇದು ನನ್ನ ದುಃಖಕ್ಕೆ ಮೊದಲ ಕಾರಣವಾಯಿತು. ಆದರೆ ಅವರನ್ನು ಪ್ರಸನ್ನಗೊಳಿಸುವುದು ಹೇಗೆ? ಅವರು ಹೇಳಿದಂತೆಯೇ ನಡೆದುಕೊಂಡರೂ ನಾನು ಅವರನ್ನು ಪರೀಕ್ಷೆ ಮಾಡುತ್ತಲಿದ್ದೆ. ಪ್ರತಿ ದಿನವೂ, ಪ್ರತಿ ಕ್ಷಣವೂ ಅವರು ಪ್ರಸನ್ನವಾಗೇನೋ ಇರುವುದಿಲ್ಲ? ಇದನ್ನು ನಾನು ನೋಡಿದ್ದೇನೆ. ಮುಖ್ಯ ಮಾತು ಇಲ್ಲಿಂದ ಶುರುವಾಯಿತು. ನಮ್ಮ ಹಿರಿಯರು ನಮಗೆ ಹೀಗೆ ಮಾಡು, ಹಾಗೆ

ಮಾಡೆಂದು ಹೇಳುತ್ತಾರೆ, ಹೇಳಿದಂತೆ ಅವರು ಮಾಡುತ್ತಾರೋ ಇಲ್ಲವೋ, ಆದರೆ ಅವರು ಪ್ರತಿ ದಿನ ಪ್ರತಿ ಸಮಯ ಪ್ರಸನ್ನವಾಗಂತೂ ಇರುವುದಿಲ್ಲವೆಂದು ನನಗನಿಸಿತು. ಹಾಗೆ ನೋಡಿದರೆ, ಅವರಿಗಿಂತ ಹೆಚ್ಚು ಆರ್ಯಶ್ರೇಯ, ವಾಙ್ಗಮಯದ ವಿದ್ವಾಂಸರು ಎಲ್ಲು ಕಂಡುಬರುವುದಿಲ್ಲ. ಇಂತಹ ಎಲ್ಲಾ ಸಿದ್ಧಿಗಳನಂತರ, ಯಾವುದೇ ವಿಧವಾದ ರೂಢಿಗಳನ್ನು ನಂಬಬಾರದೆಂದು, ನಾನು ನನ್ನಲಿ ಒಂದು ನಿರ್ಣಯಕ್ಕೆ ಬಂದೆನು. ಇದು ವಂದು ರೀತಿಯ ಪ್ರತಿಜ್ಞೆಯಾಯಿತು. ಇನ್ನೊಂದು ಕಾರಣ ಜೊತೆಗೂಡಿತು, ನನಗೆ ಅರಿವಾಗುವಂತೆ ನನ್ನ ಹಿರಿಯರು ನನಗೆ ಹೇಳಿಕೊಡಲಿಲ್ಲ. ಒಟ್ಟಿನಲ್ಲಿ, ಅವರು ಎಷ್ಟೇ ವಿಫಲವಾದರೋ, ಅಷ್ಟೇ ನನ್ನ ಅಹಂಕಾರ ಹೆಚ್ಚಾಯಿತು. ಈ ನನ್ನ ಅಹಂಕಾರ ಹೆಚ್ಚಾಗುವುದು ಹಾಗು ರೂಢಿಗಳ ಪಾಲನೆ ಮಾಡದಿರುವುದು, ಇವೆಲ್ಲಾ ಒಂದೇ ಜೊತೆಗೆ ನಡೆದೆವು. ಈ ಕ್ರಮದಲ್ಲಿ ನಾನು ಮಾಡುವುದಾದರೇನು? ಹೀಗಿರುವಾಗ, ಹಿರಿಯರೆಲ್ಲಾ, ಇವನು ವೇದವನ್ನು ತಿಳಿದಿಲ್ಲ, ವೇದಾಂತವನ್ನು ತಿಳಿದಿಲ್ಲ, ಶಾಸ್ತ್ರವನ್ನು ತಿಳಿದಿಲ್ಲವೆಂದು ಹೇಳಲಾರಂಬಿಸಿದರು. ಇವನು, ತನ್ನಲ್ಲಿಯೇ, ಸ್ವಯಂಭೂ ರೂಪದಲ್ಲಿ, ಪ್ರತಿಯೊಂದು ರೂಢಿಯನ್ನು, ಮಾತನ್ನು, ತಿರಸ್ಕರಿಸುತ್ತಾನೆ, ಇದು ಎಲ್ಲಿವರಿಗೆ ಸರಿ? ಈ ಮಾತಿನಮೇಲೆ ಚಿಂತಿತವಾದರು. ಇದು ನನ್ನಲ್ಲಿ ದುಃಖಕ್ಕೆ ಎರಡನೆಯ ಕಾರಣವಾಯಿತು. ಈಗ ನಾನೇನು ಮಾಡಲಿ? ಬೇರೆಯಾವುದೇ ದಾರಿ ತೋರದೆ, ಯಾವುದನ್ನು ಅವರು ಸರ್ವೋತ್ತಮವೆಂದು ನಂಬಿದ್ದರೋ, ಆ ಋಷಿ ಗ್ರಂಥಗಳ ಅನುಸಾರ, ನಾನು ವೇದಾಂತವನ್ನು ಅರಿತುಕೊಂಡೆನು.

ಪ್ರಥಮ ಭೂಮಿ, ವೇದಾಂತದಲ್ಲಿ ಅಂದರೆ ನಂಬಿರುವ ವೈದಿಕ ವಿಚಾರದಲ್ಲಿ, ಕರ್ಮ. ವೈದಿಕ ವಿಚಾರದ ಅನುಸಾರ, ಯಾವುದರಿಂದ ಸ್ವರ್ಗ ಪ್ರಾಪ್ತವಾಗುತ್ತದೆಯೋ, ಅದನ್ನು ಕರ್ಮವೆಂದು ನಂಬುತ್ತಾರೆ. ಎರಡನೆಯದಾಗಿ ಉಪಾಸನ, ಇಂದ್ರ ಅಥವಾ ಇತರ ದೇವರು ದೇವತೆಯರಾಗಳು ಮಾಡುವ ಉಪಕ್ರಮಕ್ಕೆ ವೇದ-ಉಪಾಸನವೆಂದು ಹೇಳುತ್ತಾರೆ. ಜ್ಞಾನವೇ ಸರ್ವೋತ್ತಮವೆಂದು ಮೂರನೇ ಶೀರ್ಷ ಭಾಗದಲ್ಲಿ ಹೇಳುತ್ತಾರೆ. ಜ್ಞಾನವೆಂದರೇನು? ಎಂದು ಕೇಳಿದರೆ, ಬ್ರಹ್ಮಜ್ಞಾನ. ಬ್ರಹ್ಮಜ್ಞಾನವೆಂದರೇನು? ಎಂದು ಕೇಳಿದರೆ, ನಿನಗೆ ಅರಿವಾಗುವುದಿಲ್ಲ. ಅರಿವಾಗುವುದಿಲ್ಲವೆಂದರೆ ನಾವು ಪಾರಂಗತರಾಗುವುದು ಹೇಗೆ? ಹಿರಿಯರು ಹೇಳಿರುವಂತೆ; 'ಮಾಡು, ಮಾಡಬೇಡ', ಈ ವಿಧಿಯಿಂದಲೇ ನಾವು ಪಾರಂಗತರಾಗುವೆವು. ಏನು ಮಾಡುವುದು? ಇದರಿಂದೇನಾಗುತ್ತದೆ? ಇದು ನಿನಗೆ ಸಮಾಧಿಯಲ್ಲೇ ದೊರಕುತ್ತದೆ. ಸಮಾಧಿಯಿಂದಲೇ ಎಲ್ಲಾ ಪ್ರಶ್ನೆಗಳ ಉತ್ತರ ದೊರಕುತ್ತದೆ ಎಂಬ ಆಶ್ವಾಸನೆ ನನಗೆ ಹಿರಿಯರಿಂದಲೇ ಸಿಕ್ಕಿತು. ಈ ಆಧಾರದ ಮೇಲೆ ನಾನು ನನ್ನ ಮನಸನ್ನು ದೃಡ ಮಾಡಿಕೊಂಡೆನು, ಏನಾದರಾಗಲಿ ಒಂದು ಬಾರಿ ಸಮಾಧಿಯ ಸ್ಥಿತಿಯನ್ನು ನೋಡಲೇ ಬೇಕು, ಬೇರೆ ಯಾವ ದಾರಿಯು ಇಲ್ಲಾ. ನನ್ನ ಬೇರೆ ಯಾವುದೇ ಮಾತಿಗೆ ಅರ್ಥವಿಲ್ಲ. ಒಂದು ಬಾರಿ ನನಗೆ ನನ್ನ ಪ್ರಶ್ನೆಗಳ ಉತ್ತರ ದೊರಕಲೇಬೇಕು.

ವೇದಾಂತವನ್ನು ಹಲವು ಪ್ರಕಾರ ಕೇಳಿದನಂತರ ಮೊದಲ ಪ್ರಶ್ನೆ ಮೂಡಿತು, ಬಂಧನ ಹಾಗು ಮೊಕ್ಷವೆಂಬುವುದೇನು? ಮಾಯವಿಂದಲೇ ನಾವು ಬಂಧನದಲ್ಲಿರುತ್ತೇವೆ ಎಂದು ಹೇಳುತ್ತಾರೆ. ಮೋಕ್ಷವೆಂದರೆ,

ಆತ್ಮ ಬ್ರಹ್ಮದಲ್ಲಿ ವಿಲೀನವಾಗುವುದೆಂದು ಹೇಳುತ್ತಾರೆ. ಆತ್ಮ ಎಲ್ಲಿಂದ ಬಂದಿತು? ಇದಕ್ಕೆ, "ಜೀವಗಳ ಹೃದಯದಲ್ಲಿ ಬ್ರಹ್ಮ ಸ್ವಯಂ ಆತ್ಮದ ರೂಪದಲ್ಲಿ ನಿವಾಸಿಸುತ್ತಾನೆ" ಎಂದು ಹೇಳುತ್ತಾರೆ. "ಜೀವ ಮುಕ್ತಿ ಪಡೆಯಲು ಅರ್ಥಾತ್ ಆವಾಗಮನದಿಂದ, ಅಂದರೆ ಸ್ವರ್ಗ-ನರಕದಿಂದ ಮುಕ್ತಿ ಪಡೆಯಲು, ಆತ್ಮ ಬ್ರಹ್ಮನಲ್ಲಿ ವಿಲೀನವಾಗಲೇ ಬೇಕು." ಆತ್ಮ ಅಂತಿಮವಾಗಿ ಬ್ರಹ್ಮನಲ್ಲಿಯೇ ವಿಲೀನವಾಗಬೇಕಾಗಿರುವಾಗ ಈ ಬ್ರಹ್ಮ, ಜೀವಗಳ ಹೃದಯದಲ್ಲಿ ಆತ್ಮದ ರೂಪದಲ್ಲೇಕೆ ನೆಲೆಸಿದೆ? ಮೊದಮೊದಲು ಜೀವಿಗಳಾದ ಸಮಯದಲ್ಲಿ ಜೀವಿಗಳಲ್ಲಿ ಯಾವ ಆತ್ಮವೂ ಇರಲ್ಲಿಲ್ಲ, ಮತ್ತೆ ಬ್ರಹ್ಮನಿಗೆ ಅದರೊಳಗೆ ನುಗ್ಗಲೇನು ಅವಶ್ಯಕತೆಯಿತ್ತು? ಹೀಗೆ ನನ್ನ ಮಾತು ವಿತಂಡವಾದದಂತೆ ಆಯಿತು. ಹಿರಿಯರ ಧ್ವನಿಗೆ ನಾನು ಧ್ವನಿಕೊಡಲಿಲ್ಲವೆಂದು ನನ್ನನ್ನು ವಿತಂಡವಾದಿ ಎಂದು ಕರೆದರು. ನಾನು ಹೇಳಿದೆ, "ನೀವು ತಿಳಿದುಕೊಂಡಿರುವುದು ಸೆರಿಯೇ, ಆದರೆ ನನ್ನ ಪ್ರಶ್ನೆಗಳಿಗೆ ಉತ್ತರವಾದರೂ ಪ್ರಸ್ತುತ ಪಡಿಸಿ." ಆದರೆ ಈ ಪ್ರಶ್ನೆಗಳ ಉತ್ತರ ಸಿಗಲಿಲ್ಲ. "ಇದರ ಉತ್ತರ ನಿನಗೆ ಸಮಾಧಿಯಲ್ಲಿಯೇ ದೊರಕುತ್ತದೆ" ಎಂದು ಹೇಳಿದರು. ಈಗೇನು ಮಾಡುವುದು? ಸಮಾಧಿಗೆ ತತ್ಪರವಾಗಲು ನಾನು ತಯಾರಾದೆ. ನನ್ನ ಮನ್ನಸ್ಸು ನಿಧಾನವಾಗಿ ಸಜ್ಜಾಯಿತು. ಈ ರೀತಿ 1944 ಇಸಿವಿಯಲ್ಲಿ ಶುರುವಾಗಿ 1946 ತನಕ ನಾನು ಸಮಾಧಿಗೆ ತತ್ಪರನಾದೆನು. ಆ ಸಮಯದಲ್ಲಿ ಇನ್ನೊಂದು ಸ್ಥಿತಿ ತೊಡಗಿತು, ದೇಶ ಸ್ವರಾಜ್ಯವಾಗುವ ಸಂಭವನೀಯತೆ ದೃಡವಾಯಿತು. 1942 ನಲ್ಲಿ, ನಾವೆಲ್ಲರೂ ಆಶಿಸುವಂತೆ ಸರಕಾರದ ಅಧಿಕಾರ ಹಸ್ತಾಂತರವಾಯಿತು. ಅದರಲ್ಲಿಯೂ ಚಿಂತನಶೀಲರಿದ್ದರು, ಹಿರಿಯರಿದ್ದರು, ವಿಚಾರಶೀಲರಿದ್ದರು, ಅವರ ಮಾತುಗಳನ್ನು ಕೇಳುತ್ತಾ ಬಂದೆನು, ಸಫಲತೆಯ ದಿನಗಳ ತನಕ ಅದರಲ್ಲಿಯೂ ವ್ಯತಿರೇಖ ಕಂಡುಬಂದಿತು. ಇದರಲ್ಲೂ ನಾನು ಪೀಡಿತನಾದೆನು. ಈ ನಂತರ ಇನ್ನೊಂದು ಆಶೆ ತೊಡಗಿತು, ಈಗ ನಮ್ಮದೊಂದು ಸಂವಿಧಾನ ತಯಾರಾಗುತ್ತದೆ. ಒಂದು ವೇಳೆ ಇದರಲ್ಲಾದರು ಶುದ್ಧ ಮಾನವನ ಮೌಲ್ಯಮಾಪನದ ವ್ಯವಸ್ಥೆ ಇರಬಹುದೋ, ಸಂವಿಧಾನದಿಂದಲೇ ಮಾರ್ಗದರ್ಶನ ಸಿಗಬಹುದೆಂದು ನಾನು ನನ್ನಲ್ಲಿಯೇ, ಯೋಚಿಸಿದೆ.

ಸಂವಿಧಾನದ ರಚನೆಯಾದಾಗ, ಈ ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಬಂದ ಲೇಖನೆಗಳನ್ನು ನಾನು ಧ್ಯಾನವಿಟ್ಟು ಕೇಳುತ್ತಿದ್ದೆ ಹಾಗು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೆ. 1950 ವರೆಗಿನ ಎಲ್ಲಾ ವರದಿಗಳನ್ನು ಕೇಳಿದ ನಂತರ, ಈ ಸಂವಿಧಾನದ ಮೂಲಕ ಶುದ್ಧ ಮಾನವನ ಮೌಲ್ಯಮಾಪನವಾಗಲು ಸಾಧ್ಯವಿಲ್ಲ, ಎಂಬುವ ವಿಚಾರ ನನ್ನ ಮನಸ್ಸಿನಲ್ಲಿ ಬಂದಿತು. ರಾಷ್ಟ್ರೀಯ ಚಾರಿತ್ರ್ಯ ಎಂದು ಹೇಳಬಲ್ಲ ಶುದ್ಧ ಮಾನವನ ಚಾರಿತ್ರ್ಯ ಇದರಲ್ಲಿ ವ್ಯಾಖ್ಯಾಯಿತವಾಗಿಲ್ಲವೆಂಬುವ ಮಾತು ಈ ವಿಚಾರದ ಆಧಾರವಾಗಿತ್ತು. ಈಗೇನು ಮಾಡುವುದು? ಮೊದಲಿಂದಲೇ ಇದ್ದ ಸಂಕಟ, ವೇದಾಂತ ಹಾಗು ಸಮಾಧಿ; ಸಮಾಧಿಯಲ್ಲೇ ಎಲ್ಲಾ ಉತ್ತರ ಸಿಗುತ್ತದೆ. ಈ ಪ್ರಶ್ನೆಯನ್ನು ಮೊದಲ್ಲಿದ್ದ ಪ್ರಶ್ನೆಯೊಂದಿಗೆ ಜೋಡಿಸಿದೆ. ಸಮಾಧಿಯಲ್ಲೇ ಈ ಪ್ರಶ್ನೆಗಳ ಉತ್ತರ ಪಡೆಯಬಲ್ಲೆ, ಯಾವ ಹಿರಿಯರೂ ಅಥವ ವಿದ್ವಾಂಸರ ಸಹಿತ ತರ್ಕ ಮಾಡುವ ಆವಶ್ಯಕತೆ ಇಲ್ಲ. ಉತ್ತರ ಸಿಗುವುದ್ದಿದ್ದರೆ ಎಲ್ಲಾ ಪ್ರಶ್ನೆಗಳಿಗೂ ಸಿಗುತ್ತದೆ, ಸಿಗುವುದಿಲ್ಲದಿದ್ದರೆ ಈ ಶರೀರದ ಯಾತ್ರೆ ತಿಳಿವಳಿಕೆಗಾಗಿ ಅರ್ಪಿತವೆಂದು ನಾನು ನಿರ್ಣಯ ಮಾಡಿದೆ.

ಇದಕ್ಕೆ ಇನೊಂದು ವ್ಯಕ್ತಿ ತಯಾರಾದರು, ಅದು ನನ್ನ ಧರ್ಮಪತ್ನಿ. ನಾವು ಅಮರ್ಕಂಟಕ್ ಎಂಬುವ ಸ್ಥಳವಿದೆ, ಪ್ರಾಣ-ಸ್ಥಳ, ನರ್ಮದಾಮಾತೆಯ ಉಗಮ ಸ್ಥಳ ಎಂದು, ಕೇಳುತ್ತಲೇ ಬಂದಿದ್ದೆವು. ಆ ಪಾವನ ವಿಚಾರದ ಆಧಾರದ ಮೇಲೆ, ಯಾಕೆ ನಾವು ಅಲ್ಲೇ ಹೋಗಿ ಈ ಅಂತಿಮ ಪ್ರಯತ್ನವನ್ನು ಮಾಡಬಾರದೆಂದು, ನಾವು ಅಮರ್ಕಂಟಕ್ ಎಂಬುವ ಸ್ಥಾನಕ್ಕೆ ಬಂದೆವು. ಇಲ್ಲಿ ಬಂದು ನಾನು ಆಗಮ ತಂತ್ರೋಪಾಸನ ವಿಧಿಯಿಂದ ಸಾಧನೆ ಮಾಡಲಾರಂಭಿಸಿದೆ. ಈ ವಿಧಿಯಲ್ಲಿ ಸಮಾಧಿಯ ಒಂದು ಪ್ರಕಾರ ಹೇಳಲಾಗಿದೆ, ಏನೆಂದರೆ ಎಲ್ಲಾ ದೇವರು, ದೇವತೆಯರನ್ನು ನಮ್ಮ ಶರೀರದ ಪ್ರತಿಯೊಂದು ಭಾಗದಲ್ಲಿ ನೋಡುವಂತೆ ವಿವರವಿದೆ. ನಮ್ಮ ಕಲ್ಪನೆಯಿಂದಲೇ ದೇವರು ದೇವತೆಯರನ್ನು ನೋಡಿ, ಅವರ ಪೂಜೆ ಮಾಡುವ ವಿಧಾನ. ಹೀಗೆ ನಾವು ನಮ್ಮ ಶರೀರದ ಅಂಗ ಪ್ರತ್ಯಂಗದಲ್ಲಿ ಯಾವುದೇ ದೇವರು ದೇವತೆಯರ ಕಲ್ಪನೆ ಮಾಡುವ ಕ್ರಿಯೆಯ ಹೆಸರು 'ನ್ಯಾಸ'. ಇದರ ಮೂಲದಲ್ಲಿ ಹೇಳಿರುವ ಸೂತ್ರ ' ದೇವೋಭೂತ್ವಾ ದೇವಾನ್ ಯಜೇತ್' ಅಂದರೆ ನೀನು ಸ್ವಯಂ ದೇವರೂಪವಾಗಿ ದೇವತೆಯರ ಆರಾಧನೆ ಮಾಡು. ಈ ಮಾತು ನನಗೆ ಹೇಳಲಾಗಿತ್ತು. ಅದೇ ಪ್ರಕಾರದಲ್ಲಿ, ನಿಷ್ಠೆಯಿಂದ ಮಾಡಲು ನಾನು ತತ್ಪರನಾದೆ. ನನ್ನಿಂದ ಹೇಗೆ ಮಾಡಲು ಬಂದಿತೋ ಮಾಡಿದೆ. ಮಾಡುತ್ತಾ-ಮಾಡುತ್ತಾ ಒಂದು ದಿನ ನಾನು, ದೇವರು ದೇವತೆಯರ ಸಾನಿಧ್ಯದಿಂದ ಮುಕ್ತನಾದೆ. "ನಾನು ಇರುವೆನು", ಇದರ ಬೋಧವಿತ್ತು. ನನ್ನಲ್ಲಿ ಬೇರೆ ಯಾವ ವಿಚಾರವೂ ಇರಲ್ಲಿಲ್ಲ.

ನನಗೆ ಯಾವುದಾದರು ಪದಾರ್ಥ ಪಡೆಯಬೇಕು ಎಂಬುವ ವಿಚಾರ ಇರಲ್ಲಿಲ್ಲ, ನನ್ನ ಹತ್ತಿರ ಯಾವುದಾದರು ವಸ್ತು ಇದೆ ಎಂಬುವ ವಿಚಾರವೂ ಇರಲ್ಲಿಲ್ಲ, ನಾನು ಏನಾದರು ಮಾಡಬೇಕೆಂಬುವ ವಿಚಾರವೂ ಇರಲ್ಲಿಲ್ಲ. ಇದು ಒಂದು ಹೊಸ, ಚಿಕ್ಕ ಘಟನೆ ನಡೆದಿತು. ಈ ಘಟನೆ ನಡೆದ ಸ್ವಲ್ಪ ಗಂಟೆಗಳ ತನಕ ಹೀಗೇ ಇತ್ತು. ನಂತರ ಶರೀರದ ಬೋಧವಾದನೊಡನೆ ಸಮಯದ ಬೋಧವಾಯಿತು. ಅವಾಗ ನನಗೆ ತಿಳಿಯಿತು ಈ ಮೂರರ (ಶರೀರ, ಸಮಯ, ಸ್ಥಳ) ಬೋಧ ನನಗಿರಲ್ಲಿಲ್ಲವೆಂದು. ನನಲ್ಲಿ ಯಾವುದೇ ವಿಚಾರವೂ ಇರಲ್ಲಿಲ್ಲ. ಹೀಗೆ ನನಗೆ ನನ್ನಲೇ ವಿಶ್ವಾಸವಾಯಿತು. ಇದಾದನಂತರ ನಾನು ಸಮಾಧಿಯ ಸ್ಥಿತಿ ಪಡೆದೆನೆಂದು ಯೋಚಿಸಲಾರಂಭಿಸಿದೆ. ಸಮಾಧಿಯ ಸ್ಥಿತಿಯಲ್ಲಿ ಪ್ರತಿದಿನ ಹಲವು ಗಂಟೆಗಳ ಕಾಲ ಪದೇ ಪದೇ ಹೋಗುತ್ತಾ, ಇವಾಗ ಉತ್ತರ ಸಿಗುತ್ತದೆ, ಇವಾಗ ಸಿಗುತ್ತದೆಯೆಂದು, ಪ್ರತೀಕ್ಷೆ ಮಾಡುತ್ತಲಿದ್ದೆ. ಆದರೆ ವರ್ಷದ ಪ್ರತಿಕ್ಷೆಯ ನಂತರವೂ ನನ್ನ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ. ಇದು ನನಗೆ ಬಂದ ಎರಡನೆಯ ವಿಫಲತೆ. ಈಗೇನುಮಾಡುವುದು? ವೇದಾಂತವನ್ನು ಅರಿತುಕೊಂಡ ನಂತರ ಉತ್ತರ ಸಿಗಲಿಲ್ಲ, ಸಮಾಧಿಯ ನಂತರ ಉತ್ತರ ಸಿಗಲಿಲ್ಲ, ನಮ್ಮ ಕುಟುಂಬದ ಸರ್ವೋತ್ತಮ ವಿದ್ವಾಂಸರಿಂದಲೂ ಉತ್ತರ ಸಿಗಲಿಲ್ಲ. ಈಗ ಎಲ್ಲಿ ಹೋಗುವೆನು? ಈಗ ಯಾರಮೇಲೂ ಆರೋಪ ಮಾಡುವ ಸ್ಥಳವಿರಲಿಲ್ಲ, ಹಾಗಾಗಿ ಈ ಬಂಧನದಲ್ಲಿ ನಾನು ಬಾಳುತ್ತಿದ್ದೆ.

ಒಂದು ದಿನ ನನಗೆ ಸಮಾಧಿಯಾಗಿದೆಯೆಂದು ವಿಶ್ವಾಸವಾಯಿತು. ಆದರೆ ಇದೇ ಸಮಾಧಿಯೆಂದು ನಾನು ಮತ್ತವರಿಗೆ ಹೇಗೆ ಹೇಳುವುದು? ಇದನ್ನು ನಾನು ದೃಡವಾಗಿ ಹೇಗೆ ನಂಬುವುದು, ಯಾವುದನ್ನು ಪ್ರಮಾಣವೆಂದು

ನಂಬುವುದು. ಇದರಲ್ಲಿ ಹೇಳಲೇನು ಇಲ್ಲದಿರುವಾಗ, ನಾನು ಪ್ರಮಾಣವನ್ನು ಪ್ರಸ್ತುತಿಸುವುದು ಹೇಗೆ? ಈ ಜಿಜ್ಞಾಸ ದೀರ್ಘವಾದಂತೆ, ನನಗೆ ಸಮಾಧಿಯಾಗಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ನಾನು ಸಂಯಮ ಎಂಬುವ ಒಂದು ಕ್ರಿಯೆಯನ್ನು ಮಾಡಿದೆ. ಇದಕ್ಕೂ ಸಲಹೆ ಪೂರ್ವಜರಿಂದಲೇ ದೊರಕಿತು. ಇದು ಪತಾಂಜಲಿ ಯೋಗ ಸೂತ್ರದಲ್ಲಿ ಉಲ್ಲೇಖಿತವಾಗಿದೆ "ಧಾರಣಾ ಧ್ಯಾನ ಸಮಾಧಿ ತ್ರಯಮೇಕತ್ರತ್ವಾತಾತ್ ಸಂಯಮಃ" ಎಂದು. ಯಾವುದೇ ಮೇಧಾವಿ ವ್ಯಕ್ತಿ, ಇದನ್ನು ಓದಿ, ನೋಡಬಹುದು. ಸಂಯಮದ ಬಗೆ ಬರೆದಿರುವ ಯಾವುದೇ ಮಾತು ನನಗೆ ಸ್ವೀಕಾರವಾಗಲಿಲ್ಲ. ನನ್ನ ರೀತಿಯಲ್ಲಿ ನಾನು ಸಮಾಧಿಯ ಒಂದು ಚಿತ್ರ, ಒಂದು ವಿಧಿಯನ್ನು ತಯಾರಿಸಿದೆ. ಈ ವಿಧಿಯಿಂದ ನಾನು ಸಂಯಮ ಮಾಡಿದೆ. ಸಂಯಮ ಮಾಡಿದ ಫಲಸ್ವರೂಪ ಕ್ರಮವಾಗಿ ಅಸ್ತಿತ್ವ ನನಗೆ ಕಾಣಲಾರಂಭಿಸಿತು, ನನ್ನ ಎದುರು ನೋಡಿದೆ; ನೋಡಿದೆ ಎಂಬುದರ ತಾತ್ಪರ್ಯ ಅರಿತುಕೊಂಡೆ.

ಒಂದು ಪರಮಾಣುವಿನಿಂದ ಸಂಪೂರ್ಣ ಪೃಥ್ವಿಯ ತನಕ ಯಾವ ಯಾವ ಪ್ರಕ್ರಿಯೆಯಿಂದ ಕಳೆದಿತೋ ಅದನ್ನು ನಾನು ಕ್ರಮಬದ್ಧವಾದಿ ನೋಡಿದೆ. ವಿಧಿವತ್ತಾಗಿ ನೋಡಿದೆ. ಅದನ್ನು ತಮಗೆಲ್ಲರಿಗೂ ಬೋಧಿಸಬಹುದು. ಈ ಸ್ಥಿತಿ ನನ್ನಲ್ಲಿ ಸ್ಥಾಪಿತವಾಯಿತು. ಇದರ ಜೊತೆ ಪರಮಾಣುವಿನ ಸಾಲಲ್ಲಿ ಒಂದು ಜೀವನ ಪರಮಾಣುವನ್ನು ನೋಡಿದೆ. ಆ ಜೀವನ ಪರಮಾಣು ನನ್ನಲಿ, ನಿಮ್ಮಲ್ಲಿ, ಇವತ್ತು ಹುಟ್ಟಿರುವ ಮಗುವಿನಲ್ಲಿ, ಶರೀರವನ್ನು ತ್ಯಜಿಸಿರುವ ಸ್ಥಿತಿಯಲ್ಲಿ, ಸಮಾನವಾಗಿರುತ್ತದೆ. ಶರೀರವನ್ನು ತ್ಯಾಗ ಮಾಡಿದ ನಂತರವೂ ಜೀವನ ಇರುತ್ತದೆ ಹಾಗು ಶರೀರದ ಸಹಿತವೂ ಜೀವನ ಇರುತ್ತದೆಯೆಂದು ಬೋಧವಾಯಿತು. ಜೀವನ ಶರೀರದ ಜೊತೆ ಏಕೆ ಇರುತ್ತದೆ ಎಂದು ಕೇಳಿದರೆ, ಇದನ್ನು ನಾನು ಮುಂದೆ ಪ್ರಸಂಗವಶ ಹೇಳುತ್ತೇನೆ. ಈ ಸ್ಥಳದಲ್ಲಿ ನಾನು ನೋಡಿದೆ, ಶರೀರದ ಮಾಧ್ಯಮದಿಂದ 'ಜೀವನ' ತನ್ನನ್ನು ಪ್ರಮಾಣೀಕರಿಸಲು ಬಯಸುತ್ತದೆ. ಇದರ ಸೂತ್ರವೇ ಇಷ್ಟು. ಈ ಜೀವನ ಏನನ್ನು ಪ್ರಮಾಣೀಕರಿಸಲು ಬಯಸುತ್ತದೆ? ಇದರ ಉತ್ತರ, ಜೀವನ ಮೊದಲು ಬಾಳಲು ಬಯುಸುತ್ತದೆ ನಂತರ ಬಾಳುವುದರ ಸಹಿತ ಸುಖವಾಗಿರಲು ಬಯಸುತ್ತದೆ. ಸುಖವಾಗಿರುವ ಜೊತೆಗೆ ಪ್ರಮಾಣೀಕರಿಸಲು ಬಯಸುತ್ತದೆ.

ಈ ಮೂರು ಸ್ಥಿತಿಗಳಿವೆ. ಇದರಲ್ಲಿ ಮೊದಲನೆಯ ಸ್ಥಿತಿ, ಬಾಳುವ ಬಯಕೆ ಜೀವಿಶ್ರೇಣಿಯಲ್ಲೇ ಪೂರೈಸಲಾಗುತ್ತದೆ. ಇದರ ಜೊತೆಗೆ ಸುಖ ಪಡೆಯುವ ಬಯಕೆ ಹಾಗು ಪ್ರಮಾಣ ಪಡೆಯುವ ಬಯಕೆ ಮಾನವ ಶ್ರೇಣಿಯಲ್ಲೇ ಪೂರೈಸಲಾಗುತ್ತದೆ. ಬೇರೆ ಎಲ್ಲೂ ಪೂರೈಸಲಾಗುವುದಿಲ್ಲ. ಇದನ್ನು ನಾನು ನಾನಾ ಪ್ರಕಾರವಾಗಿ ನೋಡಿದ್ದೇನೆ. ಇದು ಅತಿ ಸಂತುಷ್ಟಿಯ ಸ್ಥಳ ನನಗೆ ಸಿಕ್ಕಿತು. ಈ ನಂತರ ಸುಖವಾಗಿ ಬಾಳುವ ಸೂತ್ರ, 'ವ್ಯವಸ್ಥೆಯಲ್ಲಿ ಬಾಳುವುದು' ಇದನ್ನೂ ನಾನು ಕಂಡೆನು.

ಪದಾರ್ಥಾವಸ್ಥೆ, ಪ್ರಾಣಾವಸ್ಥೆ ಎಂಬುವ ಜಡ ಸಂಸಾರವೆಲ್ಲಾ ಗಟ್ಟಿ, ದ್ರವ ಹಾಗು ಅನಿಲ ರೂಪದಲ್ಲಿವೆ ಮತ್ತು ಪ್ರಾಣಕೋಶಗಳಿಂದ ರಚಿತ ಎಲ್ಲಾ ರಚನೆಗಳ ಮೂಲದಲ್ಲಿ ಹಲವಾರು ರಸ-ರಸಾಯನಗಳ ಸಂಯೋಗವಿರುವ ಅನುಭವವಾಯಿತು. ಇದರಿಂದ ರಚಿತ ಎಲ್ಲಾ ವಸ್ತುಗಳ ಸಂಯೋಗದಿಂದಲೇ ಶರೀರದ ರಚನೆಯನ್ನು ನೋಡಿದೆ. ಭೌತಿಕ ರಾಸಾಯನಿಕ ವಸ್ತುಗಳಿಂದಲೇ ಈ ಜೀವ-ಜಂತು ಮತ್ತು ಮಾನವನ ಶರೀರವು ರಚಿತವಾಗುತ್ತದೆ. ಜೀವ-

ಜಂತು ಹಾಗು ಮಾನವನ ಶರೀರದಲ್ಲಿ ನಾನು ನೋಡಿದ ಅಂತರವೇನೆಂದರೆ, ಮಾನವ ಶರೀರ ರಚನೆಯಲ್ಲಿ ಮಸ್ತಿಷ್ಕ ಯಂತ್ರ ಪೂರ್ಣ ಸಮೃದ್ಧವಾಗುತ್ತದೆ. ಸಮೃದ್ಧವಾಗುವ ಅರ್ಥ ಜೀವನ ಬಹುಮುಖಿ ವಿಧಿಯಿಂದ ಪ್ರಮಾಣೀಕರಿಸಲು ಯೋಗ್ಯ ಮಸ್ತಿಷ್ಕ ಯಂತ್ರ ರಚಿಸಿರುತ್ತದೆ. ಇದನ್ನು ನಾನು ಸ್ಪಷ್ಟವಾಗಿ ನೋಡಿದ್ದೇನೆ.

ಇವೆಲ್ಲಾ ನೋಡಿದ ನಂತರ ನನಗನಿಸಿತು, ಜೀವಿಶ್ರೇಣಿ, ತನ್ನ ವ್ಯವಸ್ಥೆಯಲ್ಲಿದೆ, ವ್ಯಾಖ್ಯಾಯಿತವಾಗಿದೆ, ತನ್ನಲ್ಲೇ ಪರಿಭಾಷಿತವಾಗಿದೆ. ಹೀಗೆಯೇ ಮಾನವನೂ ತನ್ನಲ್ಲೇ ಪರಿಭಾಷಿತವಾಗಿದ್ದು, ವ್ಯಾಖ್ಯಾಯಿತವಾಗಿದ್ದು, ಇದೇ ರೀತಿಯಲ್ಲಿ ಬಾಳುವುದರಿಂದ ಸುಖವನ್ನು ಪ್ರಾಪ್ತಿಸುತ್ತಾನೆ ಎಂಬುವುದನ್ನು ನಾನು ನೋಡಿದೆ. ಇದರ ಸಹಿತ ಮೋಕ್ಷವೆಂದರೇನು?, ಬಂಧನವೆಂದರೇನು?, ಈ ಉತ್ತರವನ್ನೂ ಪಡೆದೆನು. ನಾನು ಯಾವ ಉತ್ತರ ಪಡೆಯಲು ಹೊರಟಿದ್ದೆನೋ ಅದು ಈ ಸ್ಥಾನದಲ್ಲಿ ಉತ್ತರಿತಾವಾಯಿತು. ಉತ್ತರ ಹೇಗೆ ಸಿಕ್ಕಿತು? ಜೀವನ, ಪ್ರತಿಯೊಂದು ಮನುಷ್ಯ ಶರೀರವನ್ನು ಸಂಚಾಲಿಸುತ್ತದೆ. ಏನನ್ನು ಪ್ರಮಾಣೀಕರಿಸಲು? ಸುಖವನ್ನು ಪ್ರಮಾಣೀಕರಿಸಲು. ಸುಖವನ್ನು ಪ್ರಮಾಣೀಕರಿಸಲು ಏನು ಮಾಡಬೇಕು? ಅರಿವುಳ್ಳವವನಾಗಬೇಕು. ಮಾನವ ಅರಿತುಕೊಂಡ ವ್ಯವಸ್ಥೆಯನ್ನು ಪ್ರಮಾಣೀಕರಿಸುತ್ತಾನೆ ಮತ್ತು ಸುಖವನ್ನು ಪ್ರಮಾಣೀಕರಿಸುತ್ತಾನೆ, ಬೇರೆ ಯಾವ ವಿಧಿಯಿಂದಲಾಗುವುದಿಲ್ಲ.

ನಾನು ಸ್ವಯಂ ಸಾಧನೆ ಮಾಡುತ್ತಿದ್ದೆ, ಎಲ್ಲರು ಹೇಳುತ್ತಿದ್ದರು, ಬಹಳ ನಿಯಮದಿಂದ, ಬಹಳ ಸಂಯಮದಿಂದ, ಬಹಳ ನಿಷ್ಕ್ರುಷ್ಟತೆಯಿಂದ ಇರುತ್ತಾನೆಂದು. ಎಲ್ಲಾರು ನನನ್ನು ನೋಡಲು ಬರುತ್ತಿದ್ದರು, ಆದರೆ ನಾನು ಸಾಕ್ಷಿಯಾಗಿ ಹೇಳುತ್ತಿದ್ದೇನೆ, ನನ್ನಲ್ಲಿ ಮಾನಸಿಕ ಸಂಯಮವಿರಲಿಲ್ಲ. ನಾನು ಸಮಾಧಿಸ್ಥನಾಗುವವರಗೆ ನನ್ನಲ್ಲಿ ಯಾವ ಮಾನಸಿಕ ಸಂಯಮವೂ ಇರಲ್ಲಿಲ್ಲ. ನನ್ನಲ್ಲಿದ್ದ ಒಂದೇ ಮಾತು, ನಾನು ಸಾಧನೆ ಮಾಡಬೇಕು, ಯಾವ ರೀತಿಯ ವೈಪರೀತ್ಯ ಕೆಲಸ ನಾನು ಮಾಡಲಾರೆ. ಆದರೆ ವೈಪರೀತ್ಯ ವಿಚಾರ ನನ್ನ ಮನಸಿನಲ್ಲಿ ಬರಲಿಲ್ಲವೆಂಬುವುದಿಲ್ಲ. ಈ ಆಧಾರದ ಮೇಲೆ ನಾನು ಕಚಿತವಾಗಿ ಹೇಳಬಹುದು, ಮಾನವ ಸಮಾಧಿಸ್ತವಾಗುವವರೆಗೆ ವೈಪರೀತ್ಯ ವಿಚಾರ ಬರುವುದಿಲ್ಲವೆಂಬ ಯಾವುದೇ ನಿಯಮ ಅಸ್ತಿತ್ವದಲ್ಲಿಲ್ಲ. ವೈಪರಿತ್ಯ ಮಾತು ಮನಸ್ಸಿನಲ್ಲಿ ಬರಲೆಂದು ಮಾನವ ಸ್ವಯಂ ಬಯಸುವುದಿಲ್ಲ, ಸಾಧನೆ ಮಾಡುವವರಂತು ಖಂಡಿತ ಬಯಸುವುದಿಲ್ಲ. ನಾನು ಬಯಸಲಿಲ್ಲ ಆದರು ವೈಪರೀತ್ಯ ವಿಚಾರ ಬಂದಿತು. ಇದೇ ಸಂಕಟ ಎಲ್ಲಾ ಸಾಧಕರ ಮುನ್ನ ಬರುತ್ತದೆ. ಇದನ್ನು ಸಾಧಕ ಸಹಿಸಲಾಗುವವರೆಗೂ ಸಹಿಸುತ್ತಾನೆ, ಸಹಿಸಲಾಗದಿರುವಾಗ ಸಹಿಸುವುದಿಲ್ಲ, ಇದೇ ನಾನು ಹೇಳ ಬಲ್ಲೆ, ಇದೇ ಇದರ ಸಮೀಕ್ಷೆ.

ಬಂಧನ ಮತ್ತು ಮೋಕ್ಷವೆಂದರೇನು, ಈ ಮಾತಿನ ಉತ್ತರ ಸಿಕ್ಕಿತು. ಬಂಧನವೆಂದರೆ ಅರಿವಿಲ್ಲದಿರುವುದು, ಭ್ರಮೆ. ಅರಿವಿಲ್ಲದಿರುವುದು ಎಂದರೇನು, ನಾವು ಜೀವಿ, ಪ್ರಾಣಿಗಳಂತೆ ಬಾಳುವುದು. ಪ್ರಾಣಿಗಳ ಕ್ರಿಯಾಕಲಾಪವನ್ನು ಮೋಡಲ್ ಎಂದು ನಂಬುವುದು. ಇದನ್ನೇ ಪ್ರಮಾಣವೆಂದು ನಂಬಿದ್ದು, ಅದರ ಅನುರೂಪ ಬಾಳಲು ನಾವು ಪ್ರವೃತ್ತರಾದರೆ ಸ್ವಾಭಾವಿಕವಾಗಿ ಇದು ನಮ್ಮಲ್ಲಿ ಭ್ರಮೆ. ಅರಿವಿಲ್ಲದೆ ಬಾಳಲು ಪರಂಪರೆ ನಮ್ಮನ್ನು

ನಿರ್ಬಂಧಿಸುತ್ತದೆ. ಇದರ ಪ್ರಮಾಣ ಕಾಮೋನ್ಮಾದಿ ಮನೋವಿಜ್ಞಾನ, ಭೋಗೋನ್ಮಾದಿ ಸಮಾಜಶಾತ್ರ ಮತ್ತು ಲಾಭೋನ್ಮಾದಿ ಅರ್ಥಶಾಸ್ತ್ರ. ಇದರ ನಡುವೆ ಬಾಳುತ್ತಿರುವ ಮನುಷ್ಯ ತನ್ನ ಮಕ್ಕಳನ್ನು ಒಳ್ಳೆಯವರಾಗಲಿ, ಶ್ರೇಷ್ಟರಾಗಲಿ, ಸಂಸ್ಕಾರಿಯಾಗಲಿ, ಸುಖಕರವಾಗಲಿ, ಸುಶೀಲವಾಗಲಿ ಎಂದು ಆಶೀರ್ವಾಧಿಸುತ್ತಾರೆ. ಇವಾಗ, ಇದರ-ಅದರ ಹೊಂದಾಣಿಕೆ ಎಲ್ಲಿದೆ? ಮಕ್ಕಳಿಗೆ ನಾವು ಹೇಳಿಕೊಡುವದಕ್ಕೂ, ಶಿಕ್ಷಣ ಕೊಡುವುದಕ್ಕೂ, ಇವೆಲ್ಲಾ ಆಶಿಸುವುದಕ್ಕೂ, ಹೊಂದಾಣಿಕೆ ಎಲ್ಲಿದೆ?

ನನ್ನ ಎರಡನೆಯ ಪ್ರಶ್ನೆ, ರಾಷ್ಟ್ರೀಯ ಚಾರಿತ್ರ್ಯದ ವ್ಯಾಖ್ಯಾನ, ಇದರ ಉತ್ತರವೂ ಸಿಕ್ಕಿತು. ಏನೆಂದರೆ, ಅಸ್ತಿತ್ವದಲ್ಲಿ ಪ್ರತಿಯೊಂದು ಘಟಕ ತನ್ನ ತ್ವ ಸಹಿತ ವ್ಯವಸ್ಥೆಯಲ್ಲಿದ್ದು ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುತ್ತದೆ. ಇದು ಮಾನವನಲ್ಲಿಯು ಬರುವುದಕ್ಕೆ ದಾರಿ ಸಿಕ್ಕಿತು, ಮಾನವನ ಪರಿಭಾಷೆ ಸಿಕ್ಕಿತು. 'ಮಾನವತೆಯೇ', ಜಾಗೃತ ಮಾನವನ ಕಾರ್ಯ ವ್ಯವಹಾರದ ಸ್ವರೂಪ. ಆ ಕಾರ್ಯ-ವ್ಯವಹಾರವನ್ನು ಸೂತ್ರಿತ ವ್ಯಾಖ್ಯಾಯಿತ ಮಾಡಿದರೆ ಇದೇ ಸಮಾಜ ಶಾಸ್ತ್ರ ಅಥವಾ ಸಂವಿಧಾನ ಎಂದು ಹೇಳಲಾಗುತ್ತದೆ. ಮಾನವನ ನಡತೆಯನ್ನು ಬೋಧಿಸುವುದೇ ಸಮಾಜಶಾಸ್ತ್ರದ ಮೂಲ ವಸ್ತು; ಇದು ನನಗೆ ಅರಿವಾಯಿತು. ಈ ರೀತಿಯಲ್ಲಿ ಎರಡು ಬಿಂದುಗಳ ಮೇಲೆ ನನಗೆ ಉತ್ತರ ಸಿಕ್ಕಿತು, ಮಾನವೀಯ ಆಚಾರ (ನಡತೆ) ಸಂಹಿತೆ ಸಂವಿಧಾನದಿಂದಲೇ ಆಗುತ್ತದೆ. ಸಂವಿಧಾನದ ರೂಪದಲ್ಲಿ ನಾವು ರಾಷ್ಟ್ರೀಯ ಚಾರಿತ್ರ್ಯವನ್ನು ಗುರುತಿಸಬಹುದು. ಈ ನಂತರ ನಾವು ಭ್ರಮೆ ಮುಕ್ತಿಯಾಗಿ ಮಾನವನ ಹಾಗೆ ಬಾಳಿದರೆ, ಈ ಭ್ರಮೆ ಮುಕ್ತಿಯೇ ಮೋಕ್ಷ. ಹಿಮವನ್ನು ಕಲ್ಲಾಗಿಸುವುದಲ್ಲ, ಕಲ್ಲನ್ನು ನೀರಾಗಿಸುವುದಲ್ಲ, ಆಶೀರ್ವಾದ ಕೊಡುವುದಲ್ಲ, ಯಾವ ಚಮತ್ಕಾರ ಮಾಡುವುದಲ್ಲ, ಯಾವುದೇ ಸಿದ್ಧಿ ತೋರಿಸುವುದಲ್ಲ. ಅಸ್ತಿತ್ವದಲ್ಲಿ ಯಾವ ಸಿದ್ಧಿಯು ಇಲ್ಲ, ಯಾವ ಪವಾದವೂ ಇಲ್ಲ, ಇದನ್ನು ನಾನು ಸ್ಪಷ್ಟವಾಗಿ ನೋಡಿದ್ದೇನೆ. ಈಗಿನ ಕಾಲದಲ್ಲಿಯೂ ಶಾಪ ಹಾಗು ಆಶೀರ್ವಾದದ ನಡುವೆ ತೂಗಾಡುತ್ತಿರುವ ಮಾನವ ಕೋಟಿ-ಕೋಟಿ ಇದ್ದಾರೆ. ಇದಕ್ಕೆ ಒಂದೇ ಉತ್ತರ, ಯಾವ ಕ್ಷಣ ನಾವೆಲ್ಲರೂ ಜಾಗೃತಿಯ ದಿಶೆಯಲ್ಲಿ ಒಂದು ಹೆಜ್ಜೆ ಮುಂದಿಡುತ್ತೇವೆಯೋ ಅದೇ ಮುಹೂರ್ತದಲ್ಲಿ ಸಂಪೂರ್ಣ ಶಾಪ, ತಾಪ, ಪಾಪ, ಮೂರೂ ಧ್ವಂಸವಾಗುತ್ತದೆ. ಇದರ ಯಾವುದೇ ಕಳಂಕ ಶೇಷವಿರುವುದಿಲ್ಲ. ಇದನ್ನು ಗಣಿತೀಯ ವಿಧಿಯಿಂದ ಈ ರೀತಿ ನೋಡಬಹುದು. ನಾವು ಗಣಿತವನ್ನು ಸಾವಿರ ಸಲ ತಪ್ಪು ಮಾಡಿರಬಹುದು ಆದರೆ ಸರಿಯಾದ ಉತ್ತರ ತಿಳಿದೊಡನೆ ಆಜೀವ ಸಮಯಕ್ಕೆ ಸರಿಯಾಗುತ್ತದೆ. ತಪ್ಪನ್ನು ಮಾಡುವವರೆಗೆ, ಒಂದು ಬಾರಿ ಮಾಡುವ ತಪ್ಪನ್ನು ಪುನಃ ಅದೇ ತಪ್ಪನ್ನು ಮಾಡುವುದಿಲ್ಲ, ಬೇರೆ ತಪ್ಪನ್ನು ಮಾಡುತ್ತೇವೆ. ಅದನ್ನು ನಾವು ಘಟನೆಯ ರೂಪದಲ್ಲಿ ನೋಡಬಹುದು. ಕೋಟಿ ಮಕ್ಕಳಿಗೆ ಗಣಿತದ ಪ್ರಶ್ನೆ ಕೊಟ್ಟು ನೋಡಿ, ಸರಿಯಾದ ಉತ್ತರ ನೀಡಿದರಿ, ಎಲ್ಲರ ಉತ್ತರವೂ ಒಂದೇ ಆಗಿರುತ್ತದೆ. ತಪ್ಪು ಉತ್ತರವಿದ್ದರೆ ಕೋಟಿ ಉತ್ತರವಿರುತ್ತದೆ. ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಯೂ ಇದನ್ನು ಸರ್ವೇಕ್ಷಣೆ ಮಾಡಬಹುದು. ಈ ರೀತಿಯಲ್ಲಿ ನಾನು ಇನೊಂದು ಸೂತ್ರ ಪಡೆದೆನು. ನಾವು ಮಾನವರು ಸರಿಯಾಗಿರುವುದರಲ್ಲಿ ಒಂದೇ ಆದರೆ ತಪ್ಪಿನಲ್ಲಿ ಅನೇಕ.

ಅಸ್ತಿತ್ವವನ್ನು ನೋಡಿದಾಗ; ಮಹಿಮೆ ಸಂಪನ್ನ ಒಂದು ಸೂತ್ರವನ್ನು ಪಡೆದೆನು. ಅಸ್ತಿತ್ವದಲ್ಲಿ ಎರಡೇ ಪ್ರಜಾತಿಯ ವಸ್ತುಗಳಿವೆ. ಮೊದಲು, ಒಂದೊಂದರ ರೂಪದಲ್ಲಿ ಎಣಿಸಬಹುದಾದ ವಸ್ತು, ಇದನ್ನು ಪ್ರಕೃತಿ ಎಂದು ಕರೆಯಬಹುದು. ಎರಡನೆಯದು, ಸರ್ವತ್ರ ಹರಡಿರುವುದು (ವ್ಯಾಪಿಸುವ), ಇದನ್ನು ಪ್ರತಿ ವ್ಯಕ್ತಿ ಪ್ರತಿ ಕ್ಷಣ ಅರಿಯಬಹುದು. ಪ್ರತ್ಯೇಕ ಒಂದೊಂದು ವಸ್ತು ಈ ಎರಡೆನೆಯ ವಸ್ತುವಿನಲ್ಲಿ ನೆನೆದು, ಅದರಿಂದ ಆವರಿಸಿದ್ದು, ಅದರಲ್ಲಿ ಮುಳುಗಿದೆ. ಇದನ್ನು ವ್ಯಾಪಕ ವೆಂದು ಹೇಳಬಹುದು. ಪ್ರಕೃತಿಯ ಒಂದೊಂದು ವಸ್ತು (ಘಟಕ) ಎರಡು ಪ್ರಜಾತಿಯಲ್ಲಿವೆ - ಒಂದು ಜಡ, ಎರಡನೆಯದು ಚೈತನ್ಯ. ಚೈತನ್ಯ ವಸ್ತುವಿನ ಅರ್ಥ - ಜೀವಿಶ್ರೇಣಿ - ಮಾನವ ಶ್ರೇಣಿ ಮತ್ತು ಜಡ ವಸ್ತುವಿನ ಅರ್ಥ - ಪಧಾರ್ಥಾವಸ್ತೆ, ಪ್ರಾಣಾವಸ್ಥೆ. ಇದರಲ್ಲಿ ಎಲ್ಲಾ ಖನಿಜ, ಮಣ್ಣು, ಧಾತು ಹಾಗು ಪ್ರಾಣಕೊಶಗಳಿಂದ ರಚಿತ ವಿರಚಿತ ವಸ್ತುಗಳಿವೆ. ಇವೆಲ್ಲವೂ ವ್ಯಾಪಕ ವಸ್ತುವಿನಲ್ಲಿ ನೆನೆದಿವೆ, ಆವೃತವಾಗಿವೆ ಹಾಗು ಮುಳುಗಿವೆ. ಇದನ್ನು ನಾನು ಸ್ಪಷ್ಟವಾಗಿ ನೋಡಿದ್ದೇನೆ. ವ್ಯಾಪಕ ವಸ್ತುವಿನಿಂದ ಒಂದೊಂದು ವಸ್ತು (ಪ್ರಕೃತಿ) ಬೇರೆಯಾಗುವಂತೆ ಅಸ್ತಿತ್ವದಲ್ಲಿ ಯಾವ ಪ್ರಾವಧಾನವು ಇಲ್ಲ. ಅಸ್ತಿತ್ವದಲ್ಲಿ ಯಾವುದಕ್ಕೆ ಪ್ರಾವಧಾನ ವಿಲ್ಲವೋ, ಅದನ್ನು ಮಾನವ ರಚಿಸಲಾಗುವುದಿಲ್ಲ.

ಅಸ್ತಿತ್ವದಲ್ಲಿ ಯಾವುದರ ಸೌಲಭ್ಯವಿದೆಯೋ, ಅದರ ಉಪಯುಕ್ತತೆ ಅಲ್ಲದೆ ದುರುಪಯೋಗಿತೆಯ ದಿಕ್ಕಿನಲ್ಲಿ ಮಾನವ ಏನು ಸಾಧಿಸಿದರೂ, ನಷ್ಟವಾಗುತ್ತದೆ ಹೊರೆತು ಬೇರೆ ಏನು ಕೈಯಿಗೆ ಬರುವುದಿಲ್ಲ. ಉದಾಹರೆಣೆಗೆ, ಯುದ್ಧಕ್ಕೆ ನಾವು ಹಲವಾರು ವಸ್ತುಗಳ ಉಪಯೋಗ ಮಾಡಿದೆವು. ಇದರಿಂದ ಧರಣಿಯ ಹಾಗು ಮಾನವನ ನಾಶ ಹೊರೆತು ಬೇರೆ ಏನ್ನನ್ನು ಮಾಡಲಿಲ್ಲ. ಒಂದು ವೇಳೆ ಈ ಮಾತು ನಿಧಾನವಾಗಿ ಎಲ್ಲಾ ವೈಜ್ಞಾನಿಕರಿಗೆ ಅರಿವಾಗುತ್ತಿದೆಯೋ ಏನ್ನೋ, ಇದು ಮೊದಲೇ ಅರಿವಾಗಿದ್ದರೆ ಮಾನವ ಸಮೃದ್ಧ ಹಾಗು ಸುಖ ಉಳ್ಳವವರು ಆಗಿರಬಹುದಾಗಿತ್ತು. ಅನೇಕ ದಡವನ್ನು ಮುಟ್ಟಿದ ನಂತರವೇ ನದಿ ಸಮುದ್ರಕ್ಕೆ ಸೇರುತ್ತದೆ, ಒಂದು ವೇಳೆ ಇದೇ ನಿಯತಿಯಾಗಿರಬಹುದು. ಮೊದಲು, ರಹಸ್ಯಮಯ ಅಂದರೆ ಆದರ್ಶವಾದದ ಸಂಗತಿಯಲ್ಲಿ ಮಾನವ ಬರುವಂತಾಯಿತು, ಸ್ವೀಕರಿಸುವಂತಾಯಿತು, ಇದರಿಂದ ಪಡೆದ ಆರಾಮ ಮಾನವನಿಗೆ ಸಾಲಲಿಲ್ಲ. ಪುನಃ ಭೌತಿಕವಾದದ ಬಿಗಿಹಿಡಿತದಲ್ಲಿ ಬಂದೆವು. ಇದರಿಂದಲೂ ಪಡೆದ ಆರಾಮಾ, ಸುಖ, ಸಮೃದ್ಧಿಯ ಅರ್ಥದಲ್ಲಿ, ಸಾಲಲಿಲ್ಲ. ಇವತ್ತಿರುವ ನೊಂದಣೆಯ ಮಾತಿದು. ಈ ಎರಡೂ ಜಾಗದಲ್ಲಿಯು ನಾವು ಪೂರ್ಣ ಆರಾಮ ಪಡೆಯಲಿಲ್ಲ. ಸ್ವಾಭಾವಿಕವಾಗಿ ಮೂರನೆಯ ಮುಂದಿನ ಹೆಜ್ಜೆಯ ಅವಶ್ಯಕತೆಯಿದೆ.

ಬಂಧನ ಹಾಗು ಮೋಕ್ಷದ ಮೇಲಿದ್ದ ನನ್ನ ಪ್ರಶ್ನೆಗೆ ಉತ್ತರ ಹೀಗೆ ಪಡೆದೆನು - ' ಮಾನವ ಅರಿವುಲ್ಲವವನಾದರೆ ಬಂಧನೆಯಿಂದ ಮುಕ್ತಿ ಪಡೆಯುತ್ತಾನೆ.' ಅರಿವುಳ್ಳವವನಾಗುವುದು ಹೇಗೆ? ನನ್ನಲ್ಲಿರುವ ಭ್ರಮೆಯೇನು? 'ನನ್ನಲಿ' ನಾನು ಪರೀಕ್ಷಣೆ ಮಾಡಿ, 'ನನ್ನಲ್ಲಿ ನಾನು ನಿರೀಕ್ಷಣೆ ಮಾಡಿದ ನಂತರ, ನನ್ನಲಿ ಬಂಧನದ ಕಾರಣ ನಾನು ಕಾಣಲಿಲ್ಲವೆಂದು ನನಗೆ ತಿಳಿಯಿತು, ಹಾಗಾದರೆ ಇದೇ ಸ್ಥಿತಿಯನ್ನು ಎಲ್ಲರಲ್ಲಿ ಯಾಕೆ ಉತ್ಪನ್ನಿಸಬಾರದು? ಎಲ್ಲರಲ್ಲಿ ಉತ್ಪನ್ನವಾದ ಮೇಲೆ ಹೇಗೆ ಕಂಡುಬರುತ್ತದೆ? ಮೊದಲು ಹೇಳಿದಂತೆ ಧರಣಿ ಸ್ವರ್ಗವಾಗಲಿ, ಮಾನವ

ದೇವತನಾಗಲಿ, ಧರ್ಮ ಸಫಲವಾಗಲಿ, ನಿತ್ಯ ಜಯವಿರಲಿ. ಪರಂಪರೆಯ ರೂಪದಲ್ಲಿ ನಿತ್ಯ ಶುಭವಾಗುತ್ತದೆ. ಇದನ್ನು ನಾನು ನನ್ನಲ್ಲಿಯೇ ಮತ್ತೊಮ್ಮೆ ಪರೀಕ್ಷಣೆ ಮಾಡಿದೆ, ನಾನು ಇದನ್ನು ಮತ್ತವರಿಗೆ ಪೂರ್ಣವಾಗಿ ಪ್ರಸ್ತುತಿಸಬಲ್ಲೆನಾ? ಜನಗಳಲ್ಲಿ ಇದರ ಅವಶ್ಯಕತೆ ಇದೆಯೇ? ಎಂದು ನನ್ನಲ್ಲೇ ಶೋಧಿಸಲಾರಂಭಿಸಿದೆ.

ಈ ಚಳುವಳಿ (ಜೀವನ ವಿದ್ಯಾ) ಇದಾದ ನಂತರ ಶುರುವಾಯಿತು. ಮುಖ್ಯ ಮಾತೇನೆಂದರೆ ನನ್ನಲ್ಲಿ ಆಶ್ವಸ್ತನಾದೆನು ಸಂವಿಧಾನದಲ್ಲಿ ಮಾನವೀಯ ನಡತೆ ರೂಪಿ ಮಾನವೀಯ ಆಚಾರ (ನಡವಳಿಕೆ) ಸಂಹಿತವನ್ನು ಸಮಾವೇಶ ಮಾಡಬಹುದು. ಇದರಿಂದ ಮಾನವೀಯ ರಾಷ್ಟ್ರೀಯ ಚಾರಿತ್ರ್ಯ ಪ್ರಮಾಣಿತವಾಗುತ್ತದೆ. ಇದರಲ್ಲಿ ನಾನು ನಿಶ್ಚಿತವಾಗಿದ್ದೇನೆ. ನಾನು ಸ್ವಯಂ ಪಾರಂಗತ ಹಾಗು ಪ್ರಮಾಣವಾಗಿದ್ದೇನೆ. **'ಅಸ್ತಿತ್ವ' ನನಗೆ ಅರಿವಾಗಿದೆ, ನಿಮಗೆ ಬೋಧಿಸುತ್ತೇನೆ ಮತ್ತು 'ಜೀವನ' ನನಗೆ ಅರಿವಾಗಿದೆ ಮತ್ತು ನಿಮಗೆ ಬೋಧಿಸುತ್ತೇನೆ. 'ಮಾನವೀಯ ಪೂರ್ಣ ನಡತೆ' ನನಗೆ ಅರಿವಾಗಿದೆ, ನಿಮಗೆ ಬೋಧಿಸುತ್ತೇನೆ**. ಈ ಮೂರು ತತ್ವವು ಅರಿವಾದ ನಂತರ ಭ್ರಮೆ ರೂಪಿ ಬಂಧನದಿಂದ ಮುಕ್ತಿ ಪಡೆಯುತ್ತೇವೆ. ಮೊದಲು ಹಿರಿಯರು ಹೇಳಿದರು ಆವಾಗಮನದಿಂದ ಮುಕ್ತಿಯಾಗುತ್ತದೆಯೆಂದು. ಆವಾಗಮನಕ್ಕೂ ಮುಕ್ತಿಗೂ ಯಾವ ಸಂಬಂಧವೂ ಇಲ್ಲ. ಯಾರೂ ಎಲ್ಲೂ ಹೋಗುವುದಿಲ್ಲ, ಬರುವುದೂ ಇಲ್ಲ. ಏನಿದ್ದರು ಅಸ್ತಿತ್ವದಲ್ಲೇ ಇರುತ್ತದೆ.

ಸಾವಿನ ನಂತರವೂ ಜೀವನ ಅಸ್ತಿತ್ವದಲ್ಲೇ ಇರುತ್ತದೆ ಹಾಗು ಶರೀರವನ್ನು ಚಾಲಿಸುವ ಸಮಯವೂ ಜೀವನ ಅಸ್ತಿತ್ವದಲ್ಲೇ ಇರುತ್ತದೆ. ಕಲ್ಲಿದ್ದಲನ್ನು ಸುಟ್ಟದನಂತರ ವಿಭಿನ್ನ ಸ್ವರೂಪದಲ್ಲಿರುತ್ತದೆ. ಭೌತಿಕ-ರಾಸಾಯನಿಕ ಶಾಸ್ತ್ರಿಗಳು ಈ ಮಾತನ್ನು ತಿಳಿದಿರುತ್ತಾರೆ. ತಿಳಿದುಕೊಂಡಿಲ್ಲವೆಂದರೆ, ಇದನ್ನು ತಿಳಿದುಕೊಳಲ್ಲೇ ಬೇಕು, ಇದು ನಮ್ಮ ನಿರ್ಬಂಧ. ಈ ರೀತಿ 'ಅರಿವು' ಎಂದರೇನು ಎಂಬುವುದನ್ನು ತಿಳಿಯುತ್ತೇವೆ. ಮೂಲದಲ್ಲಿ 'ವಸ್ತು' ವಿನ ನಾಶವಾಗವುದಿಲ್ಲ. ಇದೇ ಆಧಾರದ ಮೇಲೆ ನಾನು ಮಂಗಳ ಕಾಮನೆ ಮಾಡಿದ್ದೇನೆ. ಭೂಮಿ ಶಕ್ತವಾಗಿದ್ದರೇ, ಮಾನವ ವ್ಯವಸ್ಥೆಯಲ್ಲಿದ್ದರೆ, ಇದೇ ಸಾರ್ವತ್ರಿಕ ನಿತ್ಯ ಮಂಗಳವಾಗುವ ಆಧಾರ. ಈ ವಿಧಿಯಲ್ಲಿ ನನ್ನ ಮನಸ್ಸಿನಲ್ಲಿ ಚಿಗುರಿದ ಮಂಗಳ ಕಾಮನೆಯ ಸಮರ್ಥನೆಯಲ್ಲಿ ಸಂಪೂರ್ಣ ಅಸ್ತಿತ್ವದಲ್ಲಿ ಮಾನವೀಯತೆ ಪೂರ್ಣ ನಡತೆಯೇ ಒಂದು ಪ್ರಧಾನ ಬಿಂದು. ಇದಕ್ಕಿಂತಲೂ ದೊಡ್ಡ ಉಪಕಾರವೇನೆಂದರೆ, ಧರಣಿಯನ್ನು ಗಾಯ ಮಾಡದೆ, ಹೊಟ್ಟೆಯನ್ನು ಬಗಿಯದೆ, ಧ್ವಂಸ ಮಾಡದೆ ಮಾನವ ಚಿರಕಾಲ ತನಕ ಈ ಧರಣಿಯ ಮೇಲೆ ಇರಬಹುದಾದ ವಿಧಿಯೂ ಇದೇ ಅರಿವಿನಿಂದ ಬರುತ್ತದೆ (ಈ ಧರಣಿ ಸ್ವಯಂ ಗುಣಪಡುವುದಾದರೆ).

ಇಂದಿನವರೆಗೆ ಇತಿಹಾಸದಲ್ಲಿ ಮಾನವನಿಂದ ಘಟಿತ ಎಲ್ಲಾ ಅನಿರೀಕ್ಷಿತ ಘಟನೆ ಅರಿವಿಲ್ಲದಿರುವುದರಿಂದ ಘಟಿತವಾಗಿದೆ. ಧರಣಿಯನ್ನು ಗಾಯ ಮಾಡಿ, ಹೊಟ್ಟೆಯನ್ನು ಬಗಿದು, ಜ್ವರಬರಿಸಿ, ಭೂಮಿಯ ಮೇಲೆ ಅನೇಕ ಪ್ರಕಾರದ ವಿಕೃತಿಗಳು ತಯಾರಿಸಲಾಗಿದೆ, ಇದರ ಫಲಸ್ವರೋಪ ನದಿ, ಕಾಲುವೆ, ಇವೆಲ್ಲಾ ನಾಶವಾಗಿ, ಗಾಳಿ ನೀರನ್ನು ನಾಶ ಮಾಡಿ ಮತ್ತು ಇದರಿಂದ ಮಾನವ ತ್ರಸ್ತನಾಗುತ್ತಿದ್ದಾನೆ ಎಂಬುವುದು ನಮ್ಮೆಲ್ಲರಿಗೂ ತಿಳಿದಿದೆ. ಧರಣಿಯು ಕಷ್ಟಗ್ರಸ್ತವಾಗಿರುವವರೆಗೂ ಧರಣಿಯ ಮೇಲಿರುವ ಸಮಸ್ತ ಗಿಡಮರಗಳು ಸಮಸ್ತ ಜೀವಿ ಮತ್ತು

ಮಾನವ, ಎಲ್ಲವೂ ಕಷ್ಟಗ್ರಸ್ತರಾಗಿರುತ್ತಾರೆ. ಧರಣಿಯನ್ನು ಗಾಯಮಾಡಿ ಮಾನವ ಸ್ವಸ್ಥವಾಗಿರುತ್ತಾನೆ, ಸುಖವಾಗಿರುತ್ತಾನೆಂಬುವ ಪರಿಕಲ್ಪನೆ ಎಷ್ಟು ವಳ್ಳೆ ವಿಚಾರವೆಂಬುದನ್ನು ನೀವೇ ಯೋಚಿಸಿ. ಸಂತೋಷ ಜನಕ ಸುದ್ದಿ ಹಾಗು ಭರವಸೆಯ ವಿಷಯವೇನೆಂದರೆ ಧರಣಿಯನ್ನು ತೊಂದರೆ ಮಾಡುವುದನ್ನು ನಿಲ್ಲಿಸಿದರೆ, ಭೂಮಿಯ ಮೇಲಿರುವ ಸಂಪತ್ತು ಈ ಧರಣಿಯಲ್ಲಿರುವ ಎಲಾ ಮನುಷ್ಯರಿಗು ಬಾಳಲು ಪೂರೈಸುತ್ತದೆ. ತಪ್ಪು, ಅಪರಾದ, ದ್ರೋಹ, ವಿದ್ರೋಹ, ಇವೆಲ್ಲಾ ಮಾನವನ ಅರಿವಿಲ್ಲದಿರುವ ದೋಷ. ಇದು ಅರಿವಿನ ಫಲವಲ್ಲ ಎಂಬುವ ಪ್ರಮಾಣವೇನೆಂದರೆ ಮಾನವ ಅಸಂತುಲಿತ, ಧರಣಿ ಅಸಂತುಲಿತ, ನದಿ-ಕಾಲುವೆ, ಬೆಟ್ಟ, ವನ, ಎಲ್ಲಾ ಅಸಂತುಲಿತವಾಗಿದೆ. ನಾವು, ಮಾನವರು, ವಿಜ್ಞಾನ ಯುಗದಲ್ಲಿ ಇವೆಲ್ಲಾ ಅಪರಾಧ ಮಾಡಿದ್ದೇವೆ ಆದರೂ ಮಾಡಿದ ನಂತರ ನಮ್ಮ ಎದೆ ಬಡಿತ (ಹೆಮ್ಮೆ / ಜಂಬ) ಕಡಿಮೆಯಾಗಿಲ್ಲ ಮತ್ತು ವಿಜ್ಞಾನದಿಂದಲೇ ಒಳ್ಳೆಯದನ್ನು ಪಡೆಯುತ್ತಿದ್ದೇವೆಂದು ಯೋಚಿಸುತ್ತಿದೇವೆ ಆದರೆ ಧರಣಿಯಿಂದ ಮಾನವ ಜಾತಿ  ಪರಾರಿಯಾಗುವ ಸ್ಥಿತಿ ಯಲ್ಲಿ ಬಂದಿದ್ದೇವೆ. ಇದರ ಮೇಲೆ ಧ್ಯಾನ ನೀಡುವ ಅವಶ್ಯಕತೆಯಿದೆ. ಈ ಸಮಸ್ಯೆಯಿಂದ ದೂರಾಗಲು ಮಾನವನು ಅರಿವುಳ್ಳವವನಾಗಲೇಬೇಕು. ಬೇರೆ ಯಾವ ದಾರಿಯೂ ಇಲ್ಲ.

ಅಜ್ಞಾನದಿಂದ ಅಪರಾಧಗಳನ್ನು ತಡೆಯಲಾಗುವುದಿಲ್ಲ, ಅದು ರಾಷ್ಟ್ರೀಯ ಸಂವಿಧಾನದ ವಿಧಿಯಿಂದಲೇ ಆಗಿರಲಿ, ಅಪರಾಧ ಅಪರಾಧವೇ. ಇವಾಗ ಭೂಮಿಯ ಮೇಲೇ ನಿವಾಸಿಸುವ ಎಲ್ಲಾ ರಾಷ್ಟ್ರಕ್ಕೂ ತನ್ನದೇ ಒಂದು ಸಂವಿಧಾನವಿದೆ. ಎಲ್ಲಾ ರಾಷ್ಟ್ರಗಳ ಸಂವಿಧಾನದಲ್ಲಿರುವ ಮಹಾವಾಕ್ಯ 'ಶಕ್ತಿ ಕೇಂದ್ರಿತ ಶಾಸನ'. ಶಕ್ತಿ ಕೇಂದ್ರಿತ ಶಾಸನದ ವ್ಯಾಖ್ಯೆಯಲ್ಲಿ, ತಪ್ಪನ್ನು ತಪ್ಪಿಂದಲೇ ತಡೆಯುವುದು, ಅಪರಾಧವನ್ನು ಅಪರಾಧದಿಂದಲೇ ತಡೆಯುವುದು, ಯುದ್ಧವನ್ನು ಯುದ್ಧದಿಂದಲೇ ತಡೆಯುವುದೆಂಬ ಮೂರು ಕರ್ಮಗಳಿವೆ. ಈ ಮೂರೂ ಕರ್ಮಗಳಿಂದ, ಅಪರಾಧಗಳಿಂದ ನಾವು ಮುಕ್ತಿಯನ್ನು ಪಡೆಯುತ್ತೇವೆಂದು ಎಲ್ಲೂ ಕಂಡುಬರುವುದಿಲ್ಲ. ಈ ಮೂರವೂ ತಮ್ಮಲ್ಲಿಯೇ ಪ್ರತಿ ದಿನ, ಪ್ರತಿ ಮಾಸ, ಪ್ರತಿ ವರ್ಷ, ಪ್ರತಿ ಶತಾಬ್ದಿ ಹೆಚ್ಚು ಬಲವಾಗುತ್ತಲೇ ಇರುತ್ತದೆ. ಯುದ್ದದ ಬಲ, ಅಪರಾಧಗಳ ವಿಪುಲತೆ, ತಪ್ಪುಗಳ ಸಾಲು ಇತಿಹಾಸದಲ್ಲಿ ತುಂಬಿವೆ. ಪುಟಗಳು ರಂಗಭರಿತವಾಗಿವೆ. ಇದೇ ಸಾಕ್ಷಿ. ಇದರ ಸಮಾಧಾನವೇನೆಂದು ನೋಡಲು ಹೋದರೆ ಇದರ ಮೂಲದಲ್ಲಿ, ಈ ಎಲ್ಲಾ ಪರಿಸ್ಥಿತಿಗಳಿಗೆ, ಕಾರಣ ಮಾನವನೇ. ಇನ್ನೊಂದು ಮುಖ್ಯವಾದ ಕಾರಣ 'ಧರ್ಮ ಸಂವಿಧಾನ'. ಸಂಪೂರ್ಣ ಧರಣಿಯಲ್ಲಿರುವ ಎಲ್ಲಾ ಧರ್ಮ ಸಂವಿಧಾನದ ನಂಬಿಕೆ, ಮಾನವ ಮೂಲತಃ ಪಾಪಿ, ಅಜ್ಞಾನಿ, ಸ್ವಾರ್ತಿ ಎಂದು, ಆದರೆ ವಾಸ್ತವಿಕೆತ ಬಿನ್ನವಾಗಿದೆ. ಪಾಪಿಯನ್ನು ಉದ್ಧರಿಸು, ಅಜ್ಞಾನಿಯನ್ನು ಜ್ಞಾನಿ ಮಾಡಲು, ಸ್ವಾರ್ಥಿಯನ್ನು ಪಾರಮಾರ್ಥಿ ಮಾಡಲು ಎಲ್ಲಾ ಧರ್ಮ ಸಂವಿಧಾನ ತಮ್ಮ - ತಮ್ಮ ವಿಧಿಯಲ್ಲಿ ಯುಕ್ತಿ, ಚಾರಿತ್ರ್ಯ, ಕರ್ತವ್ಯ, ದಾಯಿತ್ವ ಹಾಗು ಕರ್ಮಕಾಂಡ ಇತ್ಯಾದಿಗಳನ್ನು ನಿರ್ಮಿಸಿದ್ದಾರೆ. ಇದೂ ಒಂದು ಸ್ಪಷ್ಟ ಘಟನೆ. ಇದರ ಪರಿಣಾಮವೇನಾಯಿತು? ಇಂದಿನವರೆಗೂ, ಅಜ್ಞಾನಿಯಾರಾದರು ಜ್ಞಾನಿಯಾಗಿರುವುದನ್ನು ಮಾನವ ಜಾತಿ ಗುರುತಿಸಿಲ್ಲ. ಸ್ವಾರ್ಥಿ ಪರಮಾರ್ಥಿಯಾಗಿರುವುದರ ಪ್ರಮಾಣವೂ ಸಿಕ್ಕಿಲ್ಲ. ಪಾಪಿ ಪಾಪದಿಂದ ಮುಕ್ತನಾಗಿರುವ ಪ್ರಮಾಣವೂ ಸಿಕ್ಕಿಲ್ಲ.

ನಾನು ನಿಮಗೆ ಈ ಮುನ್ನ ಒಂದು ವಿಷಯ ಹೇಳಿದ್ದೆ. ಸಮಾಧಿ ಪರ್ಯಂತ ಸಾಧನೆಯಿದೆ. ಸಾಧನೆ ಕಾಲದಲ್ಲಿ, ಮಾನವನಲ್ಲಿ ವೈಚಾರಿಕ ಸಮಾಧಾನವಾಗಿರುವುದಿಲ್ಲ. ಮನ ಉದ್ವೇಗಗೊಂಡಿದ್ದೇ ಇರುತ್ತದೆ, ಏಕೆಂದರೆ ಮಾನವ ಸಮಸ್ಯೆಯಿಂದ ಪೀಡಿತವಾಗಿಯೇ ಸಮಾಧಿಯ ದಿಕ್ಕಿನಲ್ಲಿ ಓಡುತ್ತಾನೆ. ಸಮಾಧಿಗೆ ಪ್ರಯಾಸ ಮಾಡುವಾಗಲೇ ಮಾನವನ ಮಹತ್ವ ತಿಳಿದುಬರುತ್ತದೆ. ಸಾಧನೆ ಕಾಲದಲ್ಲಿ ಮಾನವನಿಗೆ ಎಲ್ಲಾ ಪ್ರಕಾರದ ವೈಪರೀತ್ಯ ಮಾತುಗಳು ಬರುತ್ತದೆ, ಸಮಾಧಿಯ ನಂತರ ಅದರ ಶಮನವಾಗುತ್ತದೆ. ವಿಕಲ್ಪ ವಿಧಿಯಿಂದ ಅಧ್ಯಯನ, ಪಾರಂಗತವಾಗುವ ಹಾಗು ಪ್ರಮಾಣೀಕರಿಸುವ, ವಿಧಿಯಿದೆ.

ಸಮಾಧಿಯನಂತರ ಮಾನವನಿಗೆ ಏನನ್ನೂ ಮಾಡುವ ಇಚ್ಛೆ ಇರುವುದಿಲ್ಲ, ಪಡೆಯುವ ಇಚ್ಛೆ ಇರುವುದಿಲ್ಲ, ಸಂಗ್ರಹದ ಇಚ್ಛೆ ಇರುವುದಿಲ್ಲ; ಇದನ್ನು ನೋಡಲಾಗಿದೆ. ಹೀಗಿರುವಾಗ ನನಗೆ ಹೇಗೆ ಇಚ್ಛೆಯಾಯಿತು ಇದನ್ನೆಲ್ಲಾ ತಯಾರು ಮಾಡಲು. ನಾನು ನಿಮಗೆ ಮೊದಲೇ ವಿನಂತಿಸಿದ್ದೇನೆ, ನಾನು ಮುಕ್ತಿಗೆ, ಸ್ವರ್ಗಕ್ಕೆ ಸಮಾಧಿ ಪಡೆಯಲಿಲ್ಲ, ನಾನು ನನ್ನ ಪ್ರಶ್ನೆಗಳ ಉತ್ತರ ತಿಳಿದುಕೊಳ್ಳುವುದಕ್ಕಾಗಿ ಸಮಾಧಿಗೆ ಪ್ರವೃತ್ತನಾದೆ. ಸಮಾಧಿಯಲ್ಲಿ ನನ್ನ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ, ಈ ನಂತರ ನನಗೆ ಸಮಾಧಿ ಆಗಿದೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ಶೋಧಿಸಲಾರಂಭಿಸಿದೆ. ಇದೇ ಶೋಧನೆಯಲ್ಲಿ ಈ ಮಾತು ಅರಿವಾಯಿತು. ಮಾನವನ ಪುಣ್ಯ ವಶ , ಮಾನವನ ಭವಿಷ್ಯವಶ, ಮಾನವನ ಸರ್ವಶುಭ ವಶ, ಸರ್ವಕಲ್ಯಾಣವಶ ಈ ವಿಷಯ ಹೊರಬಂದಿತು. ಇದು ಪುಸ್ತಕಗಳಿಂದ ಬರಲಿಲ್ಲ. ಹಿರಿಯರು ನನಗೆ ಕೊಟ್ಟ ಮಾರ್ಗದರ್ಶನ ಸಮಾಧಿಯಿಂದಲೇ ಉತ್ತರ ಪಡೆಯಬಲ್ಲೆ ಎಂದು ಮಾತ್ರ. ಸಮಾಧಿ ನನಗಾಗಿದೆಯೋ ಇಲ್ಲವೋ ಎಂದು ಪ್ರಮಾಣೀಕರಿಸಲು ನಾನು ಸಂಯಮ ಮಾಡಿದೆ. ಇದರ ಆಧಾರವೇ ಈ ಮಾತು ಹೊರಬಂದಿತು.

ಮಾನವನ ಅರಿವು ತರಂಗತವಾಗಿದೆ. ವನಯುಗದಲ್ಲಿ, ಶಿಲಾಯುಗದಲ್ಲಿ ಮತ್ತು ಧಾತು ಯುಗದಲ್ಲಿ ಮಾನವ ಬಾಳಿರುವ ರೀತಿ ಇತಿಹಾಸದಲ್ಲಿ ಲಿಖಿತವಾಗಿದೆ. ರಾಜಯುಗದ ಪ್ರಾರಂಭದಿಂದಲೇ ಹಲವಾರು ಜನರು ಸಾಂತ್ವನ ಪಡೆದರು. ರಾಜ, ಜನಾಸ್ತಿಯ ರಕ್ಷಣೆ ಮಾಡುತ್ತಾನೆಂದು ನಂಬಿದರು, ಆದರೆ ಇದು ಇವತ್ತಿಗೂ ನಡೆದ ಮಾತಲ್ಲ. ಜನಾಸ್ತಿ ರಕ್ಷಣೆ ಆಗಲಿಲ್ಲ, ನೆಮ್ಮದಿ, ವಿಶ್ರಾಂತಿ ಇನ್ನು ಬಹಳ ದೂರ.

ಪ್ರತಿಯೊಂದು ಕುಟುಂಬ, ಪ್ರತಿಯೊಂದು ಸಮುದಾಯ ಜನಾಸ್ತಿಯ ರಕ್ಷಣೆ, ನೆಮ್ಮದಿ ಹಾಗು ಶಾಂತಿಗೆ ಚಿಂತಿತವಾಗಿದ್ದೇ ಇರುತ್ತದೆ. ಆದರ್ಶವಾದದ ದಾರಿಯಿಂದ ಜನರಿಗೆ ಸ್ವಲ್ಪ ಸಾಂತ್ವನ ಸಿಕ್ಕಿತು ಆದರೆ ಸ್ವಲ್ಪ ಕಾಲದ ನಂತರವೇ ಇದೂ ಸಾಕಾಗಲಿಲ್ಲ. ಹಾಗಾಗಿ ಸ್ವಾಭಾವಿಕವಾಗಿ  ಪುನಃ ವಿಚಾರ ಮಾಡಿದರು. ವಿಚಾರದ ರೂಪದಲ್ಲಿ ವಿಜ್ಞಾನವಾದ ಬಂದಿತು. ಇದರಲ್ಲಿ ತರ್ಕಬದ್ಧತೆವಿರುವ ಕಾರಣ ಜನರಿಗೆ ಇದು ಸ್ವೀಕೃತವಾಯಿತು. ಉಪದೇಶವಾದದಲ್ಲಿ ತರ್ಕಕ್ಕೆ ಆಸ್ಪದವಿರಲಿಲ್ಲ. ಆದರ್ಶವಾದದ ಉಪದೇಶಗಳಲ್ಲಿ ನಂಬದಿರುವವರನ್ನು ಪಾಪಿಯೆನ್ನುತ್ತಿದ್ದರು ಹಾಗು ಅವರನ್ನು ಪೀಡಿಸುತ್ತಿದ್ದರು. ಇದು ಇತಿಹಾಸದಲ್ಲಿ ಲಿಖಿತವಾಗಿದೆ. ತರ್ಕಬದ್ಧ ಹಾಗು ತರ್ಕವನ್ನು ಆಮಂತ್ರಿಸುವುದರ ಕಾರಣ ಮಾನವ ವಿಜ್ಞಾನವಾದವನ್ನು ಸ್ವೀಕರಿಸಿದ.

ಎರಡನೆಯದಾಗಿ, ಸ್ವರ್ಗದ ಯಾವ ಕಲ್ಪನೆಗಳಿದ್ದವೋ, ಸುಖಗಳ ಕಲ್ಪನೆಗಳಿದ್ದವೋ ಅವೆಲ್ಲಾ ವಿಜ್ಞಾನದಿಂದ ಪ್ರಾಪ್ತ ಸೌಕರ್ಯಗಳಿಂದ ಮಾನವನಿಗೆ ಸಿಗಲಾರಭಿಸಿತು. ಮಾನವ ಇದರ ರುಚಿಯನ್ನೂ ನೋಡಾಯಿತು. ಇದರಲ್ಲೂ ವಿಜ್ಞಾನದ ಲಭ್ಯಗಳು ಮಾನವನಿಗೆ ಸಾಕಾಗಲಿಲ್ಲ. ಪುನಃ ಮಾನವ ಜಂಜಾಟದಲ್ಲಿ ಸಿಕ್ಕಿಬಿದ್ದ. ಈ ರೀತಿಯಲ್ಲಿ ಮಾನವ ಭಕ್ತಿ-ವಿರಕ್ತಿ ಮತ್ತು ಸಂಗ್ರಹ ಸೌಕರ್ಯಗಳ ನಡುವೆ ತೂಗುತ್ತಲೇ ಇರುತ್ತಾನೆ. ಸಂಗ್ರಹ ಸೌಕರ್ಯಗಳಿಂದ ಆಯಾಸಗೊಂಡಾಗ ಮಾನವ ಭಕ್ತಿ-ವಿರಕ್ತಿಯ ದಿಕ್ಕಿನಲ್ಲಿ ಓಡುತ್ತಾನೆ ಮತ್ತು ಭಕ್ತಿ-ವಿರಕ್ತಿಯಿಂದ ಕಾಲು ತಣ್ಣಗಾದಾಗ ಸಂಗ್ರಹ ಸೌಕರ್ಯಗಳ ದಿಕ್ಕಿನಲ್ಲಿ ಓಡುತ್ತಾನೆ. ಎರಡೂ ಕೇಳುವುದಕ್ಕೆನೋ ಚೆನ್ನಾಗನಿಸುತ್ತದೆ (ಒಳ್ಳೆಯದನಿಸುತ್ತದೆ) ಆದರೆ ಚೆನ್ನಾಗನಿಸುವುದಕ್ಕೂ ಒಳ್ಳೆಯದಾಗಿರುವುದಕ್ಕೂ ಎಷ್ಟು ದೂರದ ಅಂತರ. ಇದು ಪ್ರತ್ಯೇಕ ವ್ಯಕ್ತಿ ಯೋಚಿಸಬಹುದು. ಚೆನ್ನಾಗನಿಸುವ ಮಾತ್ರಕ್ಕೆ ಒಳ್ಳೆಯದಾಗಿರುವುದಿಲ್ಲ. ಹೇಗೆಂದರೆ, ತಣ್ಣೀರು, ಕುಡಿಯುವುದಕ್ಕೆ ಚೆನ್ನಾಗಿದೆ ಅನಿಸುತ್ತದೆ, ಆದರೆ ಇದರಿಂದ ಒಳ್ಳೆಯದೇ ಆಗುತ್ತದೆ ಎಂದು ಯಾವ ನಿಯಮವೂ ಇಲ್ಲ. ತಣ್ಣೀರು ಕುಡಿಯುವುದರಿಂದ ರೋಗಿಯಾಗಬಹುದು, ಕೆಮ್ಮು ಬರಬಹುದು. ಅತಃ ತಣ್ಣೀರು ಚೆನ್ನಾಗನಿಸುವುದು ಅಥವಾ ಚೆನ್ನಾಗನಿಸದೇ ಇರುವುದು, ಎರಡೂ ಸಾರ್ವತ್ರಿಕವಾಗಲಾರದು.

ವಿಜ್ಞಾನವಾದದ ಕಾರಣ ನಾವು ಒಂದು ಅಸ್ಥಿರ, ಅನಿಶ್ಚಯ ದಿಕ್ಕಿನಲ್ಲಿ ಹೋಗುತ್ತಿದ್ದೇವೆ ಮತ್ತು ವಿಜ್ಞಾನಿಯರು ಮಾನವನ್ನನ್ನು ಒಂದು ಯಂತ್ರದ ರೂಪದಲ್ಲಿ ವ್ಯಾಖಾಯಿತ ಮಾಡುವ ಪ್ರಯಾಸ ಮಾಡಿದ್ದಾರೆ. ಅವರು ಇಂದಿನವರೆಗೂ ಸಫಲತೆ ಪಡೆದಿಲ್ಲ. ಮಾನವನನ್ನು ಯಂತ್ರದ ರೂಪದಲ್ಲಿ ವ್ಯಾಖ್ಯಾಯಿತ ಮಾಡುವ ವೈಜ್ಞಾನಿಕನು ಸ್ವಯಂ ಈ ವ್ಯಾಖ್ಯೆಯಿಂದ ಅಸಂತುಷ್ಟನಾಗಿರುತ್ತಾನೆ. ಮಾನವನ ಯಾಂತ್ರಿಕ ಕಾರ್ಯವಿಧಿಯನ್ನು ಅರಿತುಕೊಳ್ಳುವುದು ಒಂದು ದೊಡ್ಡ ವಿಷಯವೆಂದು ನಂಬಲಾಗಿದೆ. ಇದರ ಆಧಾರದ ಮೇಲೆಯೇ ಮಾನವನ ವ್ಯವಹಾರದಲ್ಲಿ ಗತಿ (ಸ್ಪೀಡ್), ಕಾರ್ಯದಲ್ಲಿ ಗತಿ, ವಿಚಾರದಲ್ಲಿ ಗತಿ ಬರುವುದೆಂದು ನಂಬಿದ್ದಾರೆ ಆದರೆ ಮಾನವ ಯಾಂತ್ರಿಕ ಚೌಕಟ್ಟಿನಲ್ಲಿ (ಫ್ರೇಮಿನಲ್ಲಿ) ಬರುವುದಿಲ್ಲ. ವಿಜ್ಞಾನವು ಯಾಂತ್ರೀಕರಣವನ್ನು ಸರಿ ಎಂದು, ಉಚಿತವೆಂದು, ಇದನ್ನು ಮಾನವ ಅರಿಯಬಲ್ಲ, ನಿಭಾಯಿಸಬಲ್ಲವೆಂದು ನಂಬಿದ್ದಾನೆ. ಆದರ್ಶವಾದಿಯರು ಸಂವೇದನಶೀಲತೆಯ ವಕಾಲತ್ತು ಮಾಡಿದರು ಆದರೆ ಸಂವೇದನಶೀಲತೆಯನ್ನು ಮಾನವ ಅರಿತುಕೊಳ್ಳಲಾಗುವುದಿಲ್ಲ, ನಿಭಾಯಿಸಲಾಗುವುದಿಲ್ಲ ಎಂದು ಹೇಳಿದರು. ಈ ಎರಡೂ ವಾದಗಳಲ್ಲಿ ಭೇದ ಇಂದಿಗೂ ಇದೆ. ಈ ರೀತಿಯಲ್ಲಿ ಒಂದು ಸಮಸ್ಯೆಯಿಂದ ಮತ್ತೊಂದು ಸಮಸ್ಯೆಯಲ್ಲಿ ಮಾನವ ಬಂಧಿತನಾದನು. ಸಮಸ್ಯೆಗಳ ಸಹಿತವೇ ಶರೀರ ಯಾತ್ರೆಯನ್ನು ಸಮಾಪ್ತಿಸುತ್ತೇವೆ. ಒಟ್ಟಿನಲ್ಲಿ ನಮ್ಮಲ್ಲಿ ಈ ರೀತಿಯ ಸ್ಥಿತಿಯಾಗಿದೆ. ಇವಾಗ ನಾನು ಮಾನವ ಕುಲದ ಮುಂದೆ ಇಡುವ ಪ್ರಸ್ತಾಪ, ಮಾನವ ಜಾತಿಯ ಪುಣ್ಯವೇ ಎಂದು ನನ್ನ ಸ್ವೀಕೃತಿ. ನಾನು ಮಾಡಿದ ಪರಿಶ್ರಮದ ಮೌಲ್ಯಮಾಪನ ಮಾಡಿದರೆ, ಅದು ಇಷ್ಟು ದೊಡ್ಡ ಫಲದ (ನನಗೆ ಸಿಕ್ಕಿರವಷ್ಟು) ಯೋಗ್ಯವಲ್ಲ. ಹೇಗೆ ಒಂದು ಸೀಬೇಹಣ್ಣಿನ ಮರದಲ್ಲಿ ಒಂದು ಟನ್ನು ಸೀಬೇಹಣ್ಣು ಫಲಿತವಾದರೆ ಅದರ ಕೊಂಬೆ ಒಡೆಯುತ್ತದೆಯೋ, ಹಾಗೆಯೇ ಇದನ್ನು ಕಾಣಬಹುದು. ನನ್ನ ಜೊತೆಯೂ ಇದೇ ರೀತಿಯ ಘಟನೆ ಘಟಿತವಾಗಿದೆ. ಈ ಮಾತು ನನ್ನ ಪರಿಶ್ರಮಗಿಂತ ಅಧಿಕ. ಇದರಲ್ಲಿ ಮುಖ್ಯವಾದ ಮಾತೇನೆಂದರೆ ಮಾನವನ ಪರಿಶ್ರಮದ

ಫಲವನ್ನು ಯಾರು ಪುನಃ ಪುನಃ ವಹಿಸುತ್ತಾರೆ? ಇದನ್ನು ನಾನು ಸ್ಪಷ್ಟವಾಗಿ ನೋಡಿದ್ದೇನೆ. 'ಜೀವನ' ಇಂತಹ ಫಲವನ್ನೂ ವಹಿಸಲು ಸಮರ್ಥವಾಗಿದೆ, ಹೇಗೆ? ಜೀವನವನ್ನು ನಾನು ಅಕ್ಷಯ ಬಲ, ಅಕ್ಷಯ ಶಕ್ತಿಯ ರೂಪದಲ್ಲಿ ನೋಡಿದ್ದೇನೆ. ನಿಮಗೋ ಅಧ್ಯಯನ ಮಾಡಿಸುತ್ತೇನೆ. ನಿಮಗೆ ಜಿಜ್ಞಾಸವಿದ್ದರೆ ನೀವು ಅರಿತುಕೊಳ್ಳಬಹುದು. ನಿಮಗೂ ಅರಿತುಕೊಳ್ಳುವ ಅವಶ್ಯಕತೆಯಿದೆಯೆಂದು ನನ್ನ ವಿಶ್ವಾಸ. ಆದ್ದರಿಂದ ನೀವೂ ಅರಿತುಕೊಳ್ಳುವಿರಿ.

ಜೀವನ ಶರೀರದ ಮಾಧ್ಯಮದಿಂದ ನಿರ್ಣಯಿಸುವ ಎಲ್ಲಾ ಮಾತು ಶರೀರದ ಆವಷ್ಯಕತೆಗಿಂತ ಅಧಿಕವಾಗಿಯೇ ಇರುತ್ತದೆ ಎಂದು ಅರಿವಾಗುತ್ತದೆ. ಇದು ಸಹಜ ಪ್ರಕ್ರಿಯೆ. ನಾನು ಜೀವನವನ್ನು ನೋಡಿದ್ದೇನೆ; ಮಾನವನನ್ನು ಜೀವನ ಹಾಗು ಶರೀರದ ಸಂಯುಕ್ತ ರೂಪದಲ್ಲಿ ನೋಡಿದ್ದೇನೆ.

ಇಂದಿನವರೆಗೂ ಮಾನವ ಜೀವನವನ್ನು ಹಾಗು ಅಸ್ತಿತ್ವವನ್ನು ಅಧ್ಯಯನ ವಿಧಿಯಿಂದ ಅರಿತುಕೊಳ್ಳಲು ಅಸಮರ್ಥನಾಗಿದ್ದಾನೆ. ವಿಜ್ಞಾನ, ಎಲ್ಲೆಲ್ಲಿ ಅಸ್ತಿತ್ವ ಬೋಧಿಸಲು ಹೊರಟಿತೋ ಅಲ್ಲಲ್ಲಿ ಅಸ್ಥಿರತೆ, ಅನಿಶ್ಚಯತೆಯನ್ನು ತೋರಿತು, ಹಾಗು ಲಾಭೋನ್ಮಾದ, ಭೋಗೋನ್ಮಾದ, ಕಾಮೋನ್ಮಾದಗಳಿಗಾಗಿ, ಸಂಗರ್ಷ ಮಾಡಲು ವಿಚಾರ ನೀಡುತ್ತಿತ್ತು. ನಾವು ಮಾನವರು ಇದನ್ನು ಸ್ವೀಕರಿಸುತ್ತಾ ಬಂದೆವು. ಸ್ವೀಕರಿಸಿ, ಭೋಗಿಸಿದ ನಂತರವೂ ಅದು ನಮ್ಮ ತೃಪ್ತಿಯ ಆಧಾರವಾಗಲಿಲ್ಲ. ಹೀಗೆ ನಾವು ಅಂತರವಿರೋಧಿಗಳಾಗಿಯೂ ಬಾಳುತ್ತಾ ಬಂದೆವು. ಇವಾಗ ನಿಮ್ಮ ಮುಂದೆ ಪ್ರಸ್ತುತ ಪ್ರತಿಪಾದನೆಯನ್ನು ಅರಿತುಕೊಳ್ಳಲೇಬೇಕು. ನಾನು ಇದನ್ನು ಹೇಗೆ ನನ್ನಲ್ಲಿ ಶೋಧಿಸಿದೆನೋ, ನೀವುಕೂಡ ಹಾಗೆಯೇ ಶೋಧಿಸಬೇಕು. ಶೋಧಿಸಿ ನಿಮಗೆ ತೃಪ್ತಿಯಾದಾಗ, ಮತ್ತವರಿಗೆ ಇದನ್ನು ಅರಿವುಪಡಿಸಲು ನೀವು ಸಹಜವಾಗಿ ಅರ್ಪಿತರಾಗುತ್ತೀರ. ನಾವು ಯಾವಾಗ ಮತ್ತವರಿಗೆ ಅರಿವುಪಡಿಸುತ್ತೆವೋ ಅವಾಗ ನಮ್ಮ ಅರಿವಿನ ಪ್ರಮಾಣ ಸಿಗುತ್ತದೆ, ಇದು ಅರಿವುಳ್ಳವವನಾಗಿರುವುದಕ್ಕೆ ಒರೆಗಲ್ಲು.

ನನಗೆ ಅನುಭವವಾಗಿದೆ; ಅರಿವಿನಲ್ಲಿ ಸಹ-ಅಸ್ತಿತ್ವವನ್ನು ನೋಡಿದ್ದೇನೆ. ಸಹ-ಅಸ್ತಿತ್ವದಲ್ಲಿ ಮಾನವ ತನ್ನ ಪರಿವಾರದ ಅವ್ವಷ್ಯಕತೆಗಿಂತ ಅಧಿಕ ಉತ್ಪಾದನೆ ಮಾಡಿ ಸಮೃದ್ಧಿಯನ್ನು ಅನುಭವಿಸಬಹುದು. ವ್ಯವಹಾರದ ಪ್ರತಿಯೊಂದು ಮೂಲ ಪ್ರಕರಣದಲ್ಲಿ, ಮಾನವನ ಅರಿವು ಸಮಾಧಾನದ ರೂಪದಲ್ಲೇ ದೃವೀಕೃತವಾಗುತ್ತದೆ. ಈ ಮೂರು ಮಾತನ್ನು ನಾನು ನೋಡಿದ್ದೇನೆ, ಇದನ್ನು ಅಧ್ಯಯನ ಮಾಡಿಸುವ ಕ್ರಮದಲ್ಲಿ, ಪ್ರಮಾಣೀಕರಿಸುವ ಕ್ರಮದಲ್ಲಿ ನಮ್ಮ ಅರಿವು, ವಿಚಾರ, ಶರೀರದ ಮಿತಿ ಮೀರಿ, ದೂರ-ದೂರ ತನಕ ಹರಡುತ್ತದೆ. ಮಾನವನಿಗೆ ಪ್ರಸ್ತುತ ಪಡೆಸುತ್ತಿರುವ ಈ ಪ್ರಸ್ತಾಪ, ಸ್ವಯಂನಲ್ಲಿ ಒಂದು ವ್ಯಕ್ತಿಯ ಉದ್ದ, ಅಗಲ, ಎತ್ತರಗಿಂತ ಅಧಿಕ ಬಹಳ ದೂರದ ತನಕ ಹರಡುವ ಅರಿವು. ಪ್ರತಿಯೊಬ್ಬ ಮಾನವನಲ್ಲಿ ಈ ಯೋಗ್ಯತೆಯಿದೆ, ಪ್ರತಿಯೊಬ್ಬ ಮಾನವನಲ್ಲಿ ಈ ಆಸೆಯಿದೆ, ಪ್ರತಿಯೊಂದು ಮಾನವನಲ್ಲಿ ಅರಿವಿನ ಅರ್ಥದಲ್ಲಿ ಉತ್ಸಾಹವನ್ನು ಉದ್ಭವಿಸಬಹುದು, ಇದೇ ಈ ಪ್ರಸ್ತಾಪದ ಅರ್ಥ.

ವಿಜ್ಞಾನ ಒಂದು ಮೆಟ್ಟಿಲು, ಇದರ ಹಿಂದಿನ ಮೆಟ್ಟಿಲು ಆದರ್ಶವಾದ, ಇದರ ಹಿಂದಿನ ಮೆಟ್ಟಿಲು ಗ್ರಾಮ ಯುಗ, ಇದರ ಹಿಂದಿನ ಮೆಟ್ಟಿಲು ಕಾಡಿನಲ್ಲಿ ಅಲೆದಾಡುತ್ತಿರುವ ಮಾನವ, ಶಿಲಾಯುಗ. ಈ ರೀತಿ ಮೆಟ್ಟಲಿಂದ ಮೆಟ್ಟಲಿಗೆ

ನಾವು ಇಲ್ಲಿಯ ತನಕ ಬಂದ್ದಿದೇವೆ. ಈ ಉಪಕಾರವನ್ನು ನಾವ ಸ್ವೀಕರಿಸಬೇಕು ಹಾಗು ಇದಕ್ಕೆ ನಾವು ಕೃತಜ್ಞರಾಗಿರಬೇಕು. ಈ ಪ್ರಸ್ತಾಪದ ಪೃಷ್ಠಭೂಮಿಯ ಸಾಮಾನ್ಯ ಉಪಕ್ರಮ ನಿಮಗೆ ತಿಳಿಸಿದೆ.

ಸಂಕ್ಷಿಪ್ತದಲ್ಲಿ, ಪರಂಪರೆಯು ನಮಗೆ ಪ್ರಸ್ತುತಗೊಳಿಸಿರುವ ಅತ್ಯುತ್ತಮ ವಸ್ತುವಿನಲ್ಲಿ ನಮಗೆ ಸಂತುಷ್ಟಿಯಾಗಲಿಲ್ಲ. ಫಲಸ್ವರೂಪ ನಾನು ನನ್ನನ್ನು ಒಂದು ಜವಾಬ್ದಾರಿ ವ್ಯಕ್ತಿಯೆಂದು ನಂಬಿದ್ದು, ನನ್ನ ಪ್ರಶ್ನೆಗಳ ಉತ್ತರ ಹುಡುಕುವ ಜವಾಬ್ದಾರಿ ನನ್ನದೆಂದು ನಾನು ಸ್ವೀಕರಿಸಿದೆ. ಫಲಸ್ವರೂಪ ನಾನು ಪ್ರಯತ್ನಿಸಿದೆ. ನನ್ನ ಪ್ರಯತ್ನಕ್ಕೆ ಬೇರೆ ಯಾವ ಕಾರಣವೂ ಇಲ್ಲ. ಈ ವೈಚಾರಿಕ ಪ್ರಯತ್ನದಲ್ಲಿ ಕೊನೆದಾಗಿ ಪಡೆದ್ದಿದ್ದೇನೆಂದರೆ, ಎಲ್ಲಾ ಮಾನವ ಸುಖವಾಗಿರಬಹುದು, ಧರ್ಮ ಸಫಲವಾಗಬಹುದು, ಧರಣಿ ಸ್ವರ್ಗವಾಗಬಹುದು ಹಾಗು ಮಾನವ ದೇವತನಾಗಬಹುದು. ಆದ್ದರಿಂದ ಈ ಮಾತನ್ನು ಮಾನವ ಕುಲದ ಸಮ್ಮುಖ ಪ್ರಸ್ತುತವಾಗಲಿ ಎಂದು ನನಗೆ ಇಚ್ಛೆ, ಉತ್ಸಾಹವಾಯಿತು. ಅದೇ ಪ್ರಯತ್ನದಲ್ಲಿ ನಾನು ಮುಂದುವರೆಯುತ್ತಿದೇನೆ.

ನಾನು ಅಸ್ತಿತ್ವ, ಜೀವನ ಹಾಗು ಮಾನವೀಯತೆ ಪೂರ್ಣ ನಡತೆಯನ್ನು ಎಲ್ಲಾ ರೀತಿಯಲ್ಲಿ ಅರಿತುಕೊಂಡ ತಕ್ಷಣವೇ ನನ್ನಲಿ ಎಂತಹ ಸ್ಥಿತಿ ಆಯಿತು ಎಂಬುವುದನ್ನು ನಿಮ್ಮ ಸಮ್ಮುಖ ಪ್ರಸ್ತುತಗೊಳಿಸುತ್ತಿದೇನೆ. ಅರಿವಾದನಂತರ **ಸ್ವಯಂನಲ್ಲಿ ವಿಶ್ವಾಸ ಬಂದಿತು**. ಇದಕ್ಕೆ ಯಾವ ಪ್ರಯಾಸವೂ ಅಥವಾ ಬಹಳ ಪರಿಶ್ರಮವೇನು ಮಾಡಲಿಲ್ಲ. ವಿಶ್ವಾಸವನ್ನು ನಾನು ಎಲ್ಲಾ ಆಯಾಮಗಳಲ್ಲಿ ಶೋಧಿಸಲಾರಂಭಿಸಿದೆ. ಇದೇ ರೀತಿ ನನ್ನಲ್ಲಿ **ಶ್ರೇಷ್ಠತೆಗೆ ಮನ್ನಣೆ**ಕೊಡುವ ಅರ್ಹತೆ ಬಂದಿತು. ಶ್ರೇಷ್ಠತೆಯ ಮೌಲ್ಯಮಾಪನ ಮಾಡಲು ಸಾಧ್ಯವಾದರೆ ಅದರ ಮನ್ನಣೆಯು ಮಾಡಲಾಗುತ್ತದೆ. ಮೂರನೆಯದಾಗಿ, ನನ್ನ ಅರಿವಿನ ಅನುಸಾರ ನನ್ನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಒಂದು ಸುಗಮ ವಿಧಿಯಿಂದ ಸಂಬಾಳಿಸುವ ಯೋಗ್ಯನಾದೆ. ನನಗೆ, ಪ್ರತಿಭೆಯ ಅನುಸಾರ, ಅಸ್ತಿತ್ವ ಸಹಜ, ಜೀವನ ಸಹಜ ವಿಧಿಯಿಂದ ನಾನು ಬಾಳಲಾರೆಂದು, ಯಲ್ಲಿಯೂ ಯಾವರೀತಿಯಾದ ಕಷ್ಟವು ಅನಿಸಲಿಲ್ಲ. ಇದಕ್ಕೆ **ಪ್ರತಿಭೆ ಮತ್ತು ವ್ಯಕ್ತಿತ್ವದಲ್ಲಿ ಸಂತುಲನವೆಂದು** ಹೆಸರು ನೀಡಿದೆ. ಇದನ್ನು ನಾನು ಪೂರ್ಣವಾಗಿ ನಿಶ್ಚಿತವಾಗಿ ಪ್ರಮಾಣೀಕರಿಸಿದೆ. ನಾಲಕ್ಕನೆಯ ಸ್ಥಿತಿ - ನಾನು ನನ್ನು **ವ್ಯವಹಾರದಲ್ಲಿ ಸಾಮಾಜಿಕನಾದೆನು**. ಸಾಮಾಜಿಕನಾದ ನಂತರ ನನ್ನಲ್ಲಿಯೇ ತೃಪ್ತಿ ಆಗಲಾರಂಭಿಸಿತು. ಇದರ ಲಾಭಾ, ನನಗೆ ಪ್ರಪಂಚದ ಮೇಲೆ ಯಾವ ಆರೋಪವೂ ಇರಲಿಲ್ಲ. ನಾನು ಎಷ್ಟು ಸಾರ್ಥಕ ಮಾಡಬಲ್ಲೆನೆಂದು ನಾನು ನಿರಂತರ ಶೋಧನೆ ಮಾಡುತ್ತಿರುತ್ತೇನೆ. ನಾನು ಬಾಳುವ ಎಲ್ಲಾ ಸಂಬಂಧಗಳಲ್ಲಿ ದಾಯಿತ್ವ ಕರ್ತವ್ಯಗಳ ಸಹಿತ ಸಾರ್ಥಕವಾಗಿ ಬಾಳುತ್ತೇನೆ. ಐದನೇ ಸ್ಥಿತಿ **ಸಮೃದ್ಧಿ (ವ್ಯವಸಾಯದಲ್ಲಿ ಸ್ವಾವಲಂಬಿ)**. ಹೇಗಿದ್ದರೂ ನಾನು ಪರಿಶ್ರಮಿ ಪರಿವಾರದಲ್ಲಿ ಜನ್ಮಿಸಿದವನು, ಪರಿಶ್ರಮ ಮಾಡುವುದು, ಸೇವೆ ಮಾಡುವುದು ತಿಳಿದಿತ್ತು. ಆದರೆ ಸಮೃದ್ಧಿಯ ಅರ್ಥ ನನಗೆ ಅರಿವಾಗಿರಲಿಲ್ಲ. ಈಗ ಸಮೃದ್ಧಿಯ ಅರ್ಥ ಅರಿವಾಯಿತು. ನನ್ನ ಕುಟುಂಬಕ್ಕಾಗಿ ಎಷ್ಟು ಅವಶ್ಯಕತೆಯೋ ಅದಕ್ಕಿಂತ ಹೆಚ್ಚಾಗಿ ನಾನು ಉತ್ಪಾದಿಸುತ್ತೇನೆ ಆದ್ದರಿಂದ ನಾನು ಸಮೃದ್ಧಿಯನ್ನು ಅನುಭವಿಸುತ್ತೇನೆ. ಈ ರೀತಿ ಬಹಳಷ್ಟು ಅದ್ಭುತ ವಿಷಯಗಳು ನನಗೆ ಅರಿವಿನಿಂದ ಸಿಕ್ಕಿದೆವು. ಇದಕ್ಕೆ ಸ್ವಾಯತ್ತತೆ ಎಂಬ ಹೆಸರು ಕೊಟ್ಟೆನು. ನಾನು ನನ್ನಲಿ

ಸ್ವಾಯತ್ತನಾದೆನು, ಹಾಗೆಯೇ ನೀವೂ (ಅರಿತುಕೊಂಡು) ಆಗಬಹುದು. ನಾನು ಸ್ವಾಯತ್ತನಾದ ನಂತರ ಇದನ್ನು ನಾನು ಪ್ರಪಂಚಕ್ಕೆ ಅರ್ಪಿಸಬಹುದು, ಅರಿವುಗೊಳಿಸಬಹುದು, ಹೇಳಬಹುದು ಎಂದು ಅನಿಸಿತು. ಫಲಸ್ವರೂಪ ಅದನ್ನು ಒಂದು ಸಾಹಿತ್ಯದ ಗ್ರಂಥದ ರೂಪ ಕೊಡಲಾರಂಭಿಸಿದೆ. ಮೊದಲನೆಯ ಗ್ರಂಥ 'ಮಧ್ಯಸ್ಥ್ ದರ್ಶನ್ ಸಹ-ಅಸ್ತಿತ್ವವಾದ್''. ಮಧ್ಯಸ್ಥ ದರ್ಶನವನ್ನು ನಾಲಕ್ಕು ಭಾಗದಲ್ಲಿ ಗುರುತಿಸಿ, ಪ್ರಸ್ತುತ ಪಡಿಸಿದೆ.

ಪ್ರಥಮ ಭಾಗದ ಹೆಸರು 'ಮಾನವ್ ವ್ಯವಹಾರ್ ದರ್ಶನ್' ಎಂದು ನೀಡಿದೆ. ದ್ವಿತೀಯ ಭಾಗದ ಹೆಸರು - 'ಮಾನವ್ ಕರ್ಮ್ ದರ್ಶನ್', ತ್ರಿತೀಯ ಭಾಗ 'ಅಭ್ಯಾಸ್ ದರ್ಶನ್'. ಚತುರ್ಥ ಭಾಗದ ನಾಮ - 'ಅನುಭವ್ ದರ್ಶನ್'

ಈ ರೀತಿಯಲ್ಲಿ ನಾಲಕ್ಕು ಭಾಗದಲ್ಲಿ ದರ್ಶನವನ್ನು ಬರೆದೆನು. ಇವುಗಳ ಮೂಲ ತತ್ವ ಮಧ್ಯಸ್ಥ ದರ್ಶನ ('ಮಧ್ಯಸ್ಥ' ಎಂಬುವುದರ ದರ್ಶನ). ಅಸ್ತಿತ್ವದಲ್ಲಿ ಸಮ, ವಿಷಮ ಮತ್ತು ಮಧ್ಯಸ್ಥ ಶಕ್ತಿಗಳು ಅಂದರೆ ಗತಿಗಳಿವೆ. ಇವುಗಳಿಗೆ ತಮ್ಮ-ತಮ್ಮ ರೀತಿಯ ಪರಿಣಾಮಗಳಿವೆ. ಇವಲ್ಲಿ ಮಧ್ಯಸ್ಥ ಬಲ ಹಾಗು ಶಕ್ತಿ ವೈಭವಿತವಾಗುವುದೇ ಮಾನವ ಪರಂಪರೆಯ ಅದ್ಭುತ ಧ್ಯೇಯ. ಇದನ್ನು ನಾನು ಕಂಡಾಗ (ತಿಳಿದಾಗ) ಚಮತ್ಕೃತನಾದೆನು. ಇದರ ಇರುವಿಕೆಯ ಬಗ್ಗೆ ಅವಗತರಾಗಿರುವರು ಯಾರೇ ಆಗಲಿ, ವೈಜ್ಞಾನಿಯಾಗಿರಲಿ, ಜ್ಞಾನಿಯಾಗಿರಲಿ, ಅಜ್ಞಾನಿಯಾಗಿರಲಿ, ಅವರು ಚಮತ್ಕೃತ ಆಗೇ ಆಗುತ್ತಾರೆ. ವಿಜ್ಞಾನಿಗಳು ಸಮ, ವಿಷಮ ಶಕ್ತಿಗಳನ್ನು ಗುರುತಿಸಿದ್ದಾರೆ ಹಾಗು ನಂಬುತ್ತಾರೆ ಆದರೆ, ಮದ್ಯಸ್ಥ ಶಕ್ತಿ, ಮಧ್ಯಸ್ಥ ಬಲವನ್ನು ಹಾಗು ಅದರ ಯಾವುದೇ ಪ್ರಯೋಜನವನ್ನು ಅರಿತುಕೊಂಡಿಲ್ಲ. ನನ್ನ ಅಭಿಪ್ರಾಯದಲ್ಲಿ ಇದು ಒಂದು ದೊಡ್ಡ ಕೊರತೆ. ಆದ್ದರಿಂದ ಪುನರ್ವಿಚಾರ ಮಾಡುವ ಬಹಳ ಆವಷ್ಯಕತೆ ಇದೆ. ಈ ಕಾರಣದಿಂದ ಮಧ್ಯಸ್ಥ ಬಲ, ಮಧ್ಯಸ್ಥ ಶಕ್ತಿ, ಮಧ್ಯಸ್ಥ ಸತ್ವ, ಮಧ್ಯಸ್ಥ ಜೀವನ, ಈ ನಾಲಕ್ಕು ಮಾತನ್ನು, ನಾಲಕ್ಕು ತತ್ಯವನ್ನು  ಅರಿತುಕೊಳ್ಳುವ ಹಾಗು ಅರಿವು ಪಡಿಸುವ ಕಾರ್ಯವನ್ನು ಮಾಡಿದ್ದೇನೆ - ಇದರ ಹೆಸರೇ ' ಮಧ್ಯಸ್ಥ ದರ್ಶನ'.

ಸಹ-ಅಸ್ತಿತ್ವವಾದವನ್ನು ಸ್ಪಷ್ಟ ಪಡಿಸಲು ಮೂರು ವಾದಗಳ ಸ್ವರೂಪದಲ್ಲಿ, ಮೂರು ಶೀರ್ಶಕದ ಕೆಳಗೆ ಸಜ್ಜುಪಡಿಸಿದೆ. ಪ್ರಥಮವಾಗಿ - 'ಸಮಾಧಾನಾತ್ಮಕ ಭೌತಿಕವಾದ'. ಇದರ ಧ್ರುವ ಬಿಂದು - ಸಂಪೂರ್ಣ ಭೌತಿಕ ಮತ್ತು ರಾಸಾಯನಿಕ ವಸ್ತುಗಳು, ತಮ್ಮಲ್ಲಿಯೇ 'ತ್ವ' (ಅದರ ಮೌಲಿಕತೆ, ಅದರ ಸ್ವಭಾವ) ಸಹಿತ ವ್ಯವಸ್ಥೆಯ ರೂಪದಲ್ಲಿ ಪ್ರಕಾಶಮಾನವಾಗಿರುತ್ತವೆ. ಸಮಗ್ರ ವ್ಯವಸ್ಥೆಯಲ್ಲಿ ನಿಶ್ಚಿತವಾಗಿ ಭಾಗವಹಿಸುತ್ತವೆ. ಚೈತನ್ಯ ಪ್ರಕೃತಿಯ ಸಹಿತ ಪೂರಕವಾಗಿವೆ. ಇದನ್ನು ಸ್ಪಷ್ಟ ಮಾಡುವ ಪ್ರಯತ್ನ ಮಾಡಲಾಗಿದೆ. ಈದಿನ ಮಾನವನ ಹತ್ತಿರವಿರುವ ವಾದ ಸಂಗರ್ಷಾತ್ಮಕ ಹಾಗು ದ್ವಂದ್ವಾತ್ಮಕ ಭೌತಿಕವಾದವಾಗಿದೆ. ಆದರೆ ಸಹ-ಅಸ್ತಿತ್ವ ಸಹಜ ಸ್ಥಿತಿ-ಗತಿಯಲ್ಲಿ ಯಾವ ಜಗಳವೂ ಇಲ್ಲ, ವಿದ್ರೋಹವಿಲ್ಲ, ದೋಚುವುದು, ಕಳ್ಳತನವಿಲ್ಲ, ಒಬ್ಬರೋಬ್ಬರಿಗೇ ಪೂರಕವಾಗಿ, ಒಂದು ಉತ್ಸವವಾಗಿ, ಒಂದು  ಸಮಾರಂಭ, ನಿರಂತರ ವಿಕಾಸವಾಗಿದೆ. ಈ ಮಾತನ್ನು ಅರಿವು ಪಡಿಸುವ ಪ್ರಯತ್ನ ಮಾಡಲಾಗಿದೆ. ವಾಙ್ಗಮಯದಲ್ಲಿ ಶಬ್ಧದಿಂದ ಮಾಹಿತಿ ದೊರಕುತ್ತದೆ, ಆದರೆ ನನ್ನ ಪ್ರಕಾರ ಮಾನವ

ಮಾನವನಿಂದಲೇ ಅರಿತುಕೊಳ್ಳುತ್ತಾನೆ. ಇದರಲ್ಲಿ ಮೂಲ ವಿಷಯವೇನೆಂದರೆ ವಿಜ್ಞಾನ ಸಮ್ಮತ ವಿವೇಕ, ವಿವೇಕ ಸಮ್ಮತ ವಿಜ್ಞಾನ ವಿಧಿಯಿಂದ ತರ್ಕವನ್ನು ಪ್ರಸ್ತುತ ಪಡಿಸಲಾಗಿದೆ. ವಿವೇಕದ ತಾತ್ಪರ್ಯ ಪ್ರಯೋಜನೆಯ ಗುರುತು. ಪ್ರಯೋಜನೆ ಅರಿತುಕೊಂಡರೆ, ಅದನ್ನು ಗುರುತಿಸಿ, ವಿಶ್ಲೇಷಿಸಬಹುದು. ವಿಜ್ಞಾನವು ಮಾನವನನ್ನೂ ಇವತ್ತು ಯಾವ ಸ್ಥಿತಿಯಲ್ಲಿಟ್ಟಿದೆಯೋ ಅಥವಾ ಸಿಕ್ಕಿಸಿದೆಯೋ ಅದನ್ನು ನೀವೇ ಸ್ವಯಂ ಮೌಲ್ಯಮಾಪನ ಮಾಡಬಹುದು. ಸಮಾಧಾನತ್ಮಕ ಭೌತಿಕವಾದದ ಅನುಸಾರವಾಗಿ ಅಸ್ತಿತ್ವದಲ್ಲಿರುವ ಎಲ್ಲಾ ಪದಾರ್ಥ ಭೌತಿಕ ಹಾಗು ರಾಸಾಯನಿಕ ರೂಪದಲ್ಲಿದೆ, ಇವು ಮಾನವನಿಗೆ ವ್ಯವಸ್ಥೆಯಲ್ಲಿ ಬಾಳಲು ಪ್ರೇರಕವಾಗಿವೆ ಹಾಗು ಸಮಗ್ರ ಘಟಕಗಳು ಒಂದಕ್ಕೊಂದು ಪೂರಕವಾಗಿವೆ, ವೈಭವಕ್ಕಾಗಿ ಸಹಾಯಕವಾಗಿವೆ ಹಾಗು ಮುಂದಿನ ವಿಕಾಸಕ್ಕಾಗಿ ಒಂದಕ್ಕೊದು ಪರಸ್ಪರ ಸಂಬಂಧದಲ್ಲಿವೆ. ಈ ರೀತಿಯಲ್ಲಿ ಸಮಾಧಾನ ವಿವರಿಸಲಾಗಿದೆ. ಸಹ-ಅಸ್ತಿತ್ವವಾದದ ಎರಡನೆಯ ಪ್ರಬಂಧಕ್ಕೆ ಕೊಟ್ಟ ಹೆಸರು :- ' ವ್ಯವಹಾರಾತ್ಮಕ ಜನವಾದ ' ಮಾನವ ಅಸ್ತಿತ್ವದಲ್ಲಿದ್ದಾನೆ. ವ್ಯವಹಾರದಿಂದಲೇ ಸಂತುಷ್ಟಿ ಪಡೆಯಬಹುದು. ವ್ಯವಹಾರ 'ಮಾನವ' ಮಾನವನ ಸಹಿತ ಮಾಡುತ್ತಾನೆ. ಮಾನವನ ವ್ಯವಹಾರ ಮಾನವೀಯತೆ ಪೂರ್ಣ ನಡತೆಯ ರೂಪದಲ್ಲಿ ಸ್ಪಷ್ಟವಾಗುತ್ತದೆ ಹಾಗು ಇದನ್ನೇ ಸ್ಪಷ್ಟ ಪಡಿಸುವ ಪ್ರಯತ್ನಮಾಡಲಾಗಿದೆ.

ಮುಂದಿನ, ಮೂರನೆಯ ಪ್ರಬಂಧ 'ಅನುಭವಾತ್ಮಕ ಅಧ್ಯಾತ್ಮವಾದ'. ಇಂದಿನವರೆಗೂ ಪ್ರಪಂಚ, 'ಅಧ್ಯಾತ್ಮ' ಎಂದರೇನು ಎಂಬುವುದನ್ನು ಅರಿವುಪಡಿಸಲು ಅಸಮರ್ಥವಾಗಿದೆ. ಅಧ್ಯಾತ್ಮವನ್ನು ನಾವು ಅನಾಯಾಸವಾಗಿ ಒಂದು ಕ್ಷಣದಲ್ಲೇ ಅರಿತುಕೊಳ್ಳಬಹುದು. ನಮ್ಮ ನಿಮ್ಮ ನಡುವೆ ಇರುವ ರಿಕ್ತತೆ, ಕಂಡುಬರುವ ರಿಕ್ತತೆ, ಇದನ್ನೇ ವಿಸ್ತಾರ ಹಾಗು ಶೂನ್ಯ ಎಂದೂ ಹೇಳಬಹುದು. ನಮ್ಮ ನಿಮ್ಮ ನಡುವೆ ಇರುವ ರಿಕ್ತತೆಯಂತೆಯೇ ನಮ್ಮ ಪೃಥ್ವಿ ಹಾಗು ಇನ್ನೊಂದು ಗ್ರಹದ ನಡುವೆಯೂ ರಿಕ್ತತತೆಯಿದೆ. ಒಂದು ಸೌರವ್ಯೂಹ ಮತ್ತು ಇನ್ನೊಂದು ಸೌರವ್ಯೂಹದ ನಡುವೆ ಈ ರಿಕ್ತತೆಯಿದೆ. ಒಂದು ಆಕಾಶ ಗಂಗೆ ಇನ್ನೊಂದು ಆಕಾಶ ಗಂಗೆಯ ನಡುವೆಯೂ ಹೀಗಿದೆ. ಈ ವಿಸ್ತಾರವು ಪ್ರತಿಯೊಂದು ಜಾಗದಲ್ಲಿ ಹೀಗೇ ಇದೆ. ಆದ್ದರಿಂದ ಈ ವಸ್ತು ವ್ಯಾಪಕ ಎಂದು ಜ್ಞಾನವಾಗುತ್ತದೆ. ವ್ಯಾಪಕ ವಸ್ತುವಿನಲ್ಲಿ ಸಮಸ್ತ ಒಂದು-ಒಂದು ವಸ್ತು (ಘಟಕಗಳು) ಮುಳುಗಿ, ನೆನೆದು, ಆವೃತವಾಗಿದೆ. ಇದರ ಅನುಭವವೇ ಮಾನವನಿಗೆ ಸರ್ವ ಪ್ರಥಮವಾಗುತ್ತದೆ. ನಂತರ ಮಾನವನಿಗೆ ಸ್ವಯಂ ಇರುವ ಅನುಭವವಾಗುತ್ತದೆ. ನಮ್ಮ ನಿಮ್ಮ ನಡುವೆ ಈ ವ್ಯಾಪಕವಿಲ್ಲದಿದ್ದರೆ ನಿಮ್ಮ ಅನುಭವ ನನಗಾಗುವುದೇ ಇಲ್ಲ. ಆದ್ದರಿಂದ ಸರ್ವಪ್ರಥಮ, ಏನೇ ಅನುಭವವಾದರೂ ವ್ಯಾಪಕದಲ್ಲೇ ಆಗುತ್ತದೆ. ಇದನ್ನೇ ಸ್ಪಷ್ಟ ಪಡಿಸುವ ಪ್ರಯತ್ನ ಮಾಡಲಾಗಿದೆ. ಇದರ ಅವಶ್ಯಕತೆಯ ಬಗೆಯೂ ಪ್ರಕಾಶ ನೀಡುವ ಪ್ರಯತ್ನ ಮಾಡಲಾಗಿದೆ. ಅಸ್ತಿತ್ವವನ್ನು ಅರಿತುಕೊಳ್ಳದೆ ಅಸ್ತಿತ್ವದೇ ಒಂದು ಅಂಶ ಆಗಿರುವ ಮಾನವ ಜಾತಿಯನ್ನು ಹೇಗೆ ಅರಿತುಕೊಳ್ಳಲು ಸಾಧ್ಯ. ಆದ್ದರಿಂದ ಅಸ್ತಿತ್ವವನ್ನು ಅರಿತುಕೊಳ್ಳುವುದು ಬಹಳ ಅಗತ್ಯ. ವ್ಯಾಪಕ ವಸ್ತುವಿನಲ್ಲೇ ಸಂಪೂರ್ಣ ಒಂದು-ಒಂದು ವಸ್ತು ಇರುವುದು ಸಹ-ಅಸ್ತಿತ್ವದ ಸಾಕ್ಷಿಯಾಗಿದೆ. ಅಸ್ತಿತ್ವ ಸಹಜ ಸಹ-ಅಸ್ತಿತ್ವವನ್ನು ನಾವು ಮರೆತುಹೋದರೆ ಸಂಕಟ, ದುಃಖವಲ್ಲದೆ ಬೇರೆ ಏನು ಆಗುವುದಿಲ್ಲ. ಇಲ್ಲಿನವರೆಗೆ ನಾವು ಮಾಡಿರುವ ಶೋಷಣೆ, ದ್ರೋಹ, ವಿದ್ರೋಹ, ಯುದ್ಧ, ಇವೆಲ್ಲಾ ಸಹ-

ಅಸ್ತಿತ್ವವಾದದ ವಿರೋಧಿ. ಇವೆಲ್ಲಾ ಮಾಡಿದನಂತರ ನಾವು ಸರಿಯಾದುದನ್ನು ಪಡೆಯಲು ಇಚ್ಛೆ ಪಟ್ಟೆವು, ಹಾರೈಸಿದೆವು. ನಮ್ಮ ಹಾರೈಕೆ ಪೂರ್ತಿಯಾಗಲಿಲ್ಲ; ನಾವು ಮಾಡಿದ ಕ್ರಿಯೆಗಳಿಂದ ಘಟನೆಗಳು ನಮ್ಮ ಎದುರು ಘಟಿತವಾದೆವು. ನಾವು ಒಮ್ಮೆ ನಗುತ್ತಲೂ ಹಾಗು ಒಮ್ಮೆ ಅಳುತ್ತಲೂ ಇದ್ದೆವು. ಉದಾಹರಣೆಗೆ, ಒಂದು ಕುಟುಂಬ ಅಥವಾ ಸಮುದಾಯ ಸದಸ್ಯರು ಮತ್ತೊಂದು ಕುಟುಂಬದ ಅಥವಾ ಸಮುದಾಯದ ಸದಸ್ಯನನ್ನು ಕೊಲೆ ಮಾಡಿ, ನಮ್ಮ ಶತ್ರುವನ್ನು ಕೊಲೆ ಮಾಡಿದೆವು ಎಂದು ಸಂತೋಷ ಪಡುತ್ತಾರೆ. ಸರಕಾರವೂ, ದೇಶವೂ, ಹೀಗೆಯೇ ಯೋಚಿಸುತ್ತದೆ. ಹೀಗಿರುವಾಗ ಏನುಮಾಡುವುದು? ಧರ್ಮಗದ್ದಿಯೂ ಹೀಗೆಯೇ ಯೋಚಿಸಿದರೆ ಮಾನವನು ಇವಾಗ ಯಾರ ಶರಣೆಯಲ್ಲಿ ಹೋಗುವನು? ಈ ರೀತಿಯಲ್ಲಿ, ಧರ್ಮ ಪೀಠ, ರಾಜ ಪೀಠ, ಶಿಕ್ಷಣ ಪೀಠ, ವ್ಯಾಪಾರ ಪೀಠ ಎಲ್ಲೆಲ್ಲಿಯೂ ದಿಕ್ಕಿಲ್ಲದೆ, ಪ್ರಯೋಜನವಿಲ್ಲದೆ, ಭ್ರಮೆಯೇ ಸಿಗುತ್ತದೆ. ಇವಾಗ ಎಲ್ಲಿಹೋಗುವುದು? ಏನು ಮಾಡುವುದು? ಹೀಗೇ ಬವಣೆಗಳಿದ್ದೆವು. ಈ ಬವಣೆಗಳು ಜಾಗೃತಿಯ ಮುನ್ನ ನನ್ನಲ್ಲೂ ಇದ್ದೆವು. ಜಾಗೃತಿಯ ನಂತರ, ಈ ಅನುಸಂಧಾನವನ್ನು ಮಾನವನಿಗೆ ಸಲ್ಲಿಸಬೇಕೆಂದು, ನಾನು ಸ್ವೀಕರಿಸಿದೆ.

ಇದಾದನಂತರ, ಇದನ್ನು ಶಾಸ್ತ್ರದ ರೂಪದಲ್ಲಿ ಪ್ರಸ್ತುತ ಪಡಿಸಿದೆ, ಬಾಳುವ ಕಲೆಯ ರೂಪದಲ್ಲಿ ಪ್ರಸ್ತುತ ಪಡಿಸಿದೆ. ಪ್ರಚಲಿತವಾಗಿರುವ ಅರ್ಥಶಾಸ್ತ್ರವೆಲ್ಲಾ ಲಾಭೋನ್ಮಾದ ಶಾಸ್ತ್ರಗಳು. ಇದರಿಂದ ಮಾನವ ಸುಖವಾಗಲು ಸಾಧ್ಯವಿಲ್ಲ. ಎಲ್ಲಾ ಮನುಷ್ಯರೂ ಸುಖವಾಗಿ ಬಾಳಬೇಕೆಂದರೆ ಒಂದೇ ದಾರಿ, ಆವರ್ತನಶೀಲ ಅರ್ಥಶಾಸ್ತ್ರದ ವಿಧಿಯಿಂದ. ಇದು ಸ್ವಾಭಾವಿಕವಾಗಿದ್ದು, ವ್ಯವಸ್ಥೆಯ ಅರ್ಥದಲ್ಲಿದೆ. ಎರಡನೆಯ ಪ್ರಬಂಧ - "ವ್ಯವಹಾರವಾದಿ ಸಮಾಜಶಾಸ್ತ್ರ'. ಮಾನವ ನ್ಯಾಯಪೂರ್ಣ ವ್ಯವಹಾರದಿಂದಲೇ ಸಂತುಷ್ಟಿಯನ್ನು ಪಡೆಯುತ್ತಾನೆ. ಮಾನವನ ಸಹಿತವೇ ವ್ಯವಹಾರವನ್ನು ಮಾಡುತ್ತಾನೆ, ವ್ಯವಹಾರ ನ್ಯಾಯದಿಂದಾದರೆ ಸಂತುಷ್ಟಿ ಇರುತ್ತದೆ. ಈ ಪ್ರಬಂಧದ ಮೂಲ ಧ್ರುವ ಬಿಂದು - ಮಾನವೀಯತೆಪೂರ್ಣ ನಡತೆ ಫಲಸ್ವರೂಪ ರಾಷ್ಟ್ರೀಯ ಆಚಾರ ಸಂಹಿತದ ರೂಪದಲ್ಲಿ ನಾವು ಮಾನವೀಯ ನಡತೆಯನ್ನು ಸ್ವೀಕರಿಸಬಹುದು. ಇದನ್ನು ಎಲ್ಲಾ ದೇಶದ ದೇಶವಾಸಿಯರು ಸಂವಿಧಾನದ ರೂಪದಲ್ಲಿ ಸ್ವೀಕರಿಸಬಹುದು.

ಇದರಿಂದ ಪ್ರಪಂಚದಲ್ಲಿ, ಸಮುದಾಯಗಳ ನಡುವೆ ಇರುವ ಯುದ್ಧದ ಭಯದ ನಿವಾರಣೆಯಾಗಬಹುದು. ಯುದ್ಧಕ್ಕಾಗಿ ಪ್ರಯಾಸವಿರುವ ತನಕ ಮಾನವ ಧರಣಿಯನ್ನು ಪೀಡಿಸದೆ ಬಾಳಲು ಸಾಧ್ಯವಿಲ್ಲ, ಹಾಗು ಹೆಚ್ಚಾಗಿ ಪೀಡಿಸಲು ಅಧಿಕ ಬುದ್ಧಿಯ ಪ್ರಯೋಗ ಮಾಡಬೇಕು. ಇದರಿಂದ ವಿಜ್ಞಾನದ ಬುದ್ಧಿಯ ಮೌಲ್ಯಮಾಪನವಾಗುತ್ತದೆ. ಯುದ್ಧದ ಸಂರಕ್ಷಣೆಗೆ ವಿಜ್ಞಾನ ಹಾಗು ಹಲವಾರು ವೈಜ್ಞಾನಿಕರ ಶ್ರಮ ಸಮರ್ಪಿತವಾಗಿದೆ, ಇದರಿಂದ ಧನವನ್ನು ಸಂಪಾದಿಸುತ್ತಾರೆ, ಹಾಗು ತಮ್ಮನ್ನು ಧನ್ಯರೆಂದು ನಂಬಿದ್ದಾರೆ. ಧರಣಿಯನ್ನು ವಿಧ್ವಂಸ ಮಾಡಬೇಕೆಂಬುವುದಷ್ಟೇ ಮಾತು. ಇದರಿಂದ ಮುಕ್ತಿ ಪಡೆಯಲೇಬೇಕು, ಹಾಗು ಇದಕ್ಕೆ ಅರಿವುಳ್ಳವವರಾಗಲೇಬೇಕು, ಬೇರೆ ಯಾವ ದಾರಿಯೂ ಇಲ್ಲ.

ಮೂರನೆಯ ಶಾಸ್ತ್ರ - "ಮಾನವ ಸಂಚೇತನಾವಾದಿ ಮನೋವಿಜ್ಞಾನ". ಇದರಲ್ಲಿ, ಸಂಚೇತನದ ಆಧಾರ ಜೀವನ. ಶರೀರ, ಸಂಚೇತನವನ್ನು ಮಾನವ ಪರಂಪರೆಯಲ್ಲಿ ವ್ಯಕ್ತ ಪಡಿಸಲು ಒಂದು ಮಾಧ್ಯಮ. ಈ ಮಾತನ್ನು ಅರಿವುಪಡಿಸಲು ಪ್ರಯಾಸ ಮಾಡಲಾಗಿದೆ. ಅದನ್ನು ನೀವೆಲ್ಲರೂ ಶೋಧಿಸಿ ನೋಡಿ. ನಿಮಗಿದು ಅರಿವಾದರೆ ನನ್ನ ಲೇಖನ ಸಾರ್ಥಕವಾಯಿತು.

ಈ ರೀತಿಯಲ್ಲಿ ದರ್ಶನ, ವಿಚಾರ, ಶಾಸ್ತ್ರ, ಮೂರನ್ನು ಪ್ರಸ್ತುತ ಪಡಿಸಿದ್ದೇನೆ. ಮಾನವನು ವ್ಯವಸ್ಥೆಯಲ್ಲಿ ಬಾಳಬೇಕೆಂಬುವುದೇ ಶಾಸ್ತ್ರಗಳ ಮೂಲ ಆಶಯ. ಬಾಳುವ ರೀತಿ, ವಿಧಿ, ನೀತಿ, ಪ್ರಣಾಳಿ, ಈ ಮಾತುಗಳನ್ನು ಶಾಸ್ತ್ರಗಳಲ್ಲಿ ನಾನು ಸ್ಪಷ್ಟ ಮಾಡಿದ್ದೇನೆ. ಈ ನಂತರ ಇದನ್ನು ಕ್ರಿಯಾನ್ವಯ ಮಾಡಲು ಯೋಜನೆಗಳು ನಿರ್ಮಿತವಾದೆವು. ಯೋಜನೆಗಳು ಮೂರು ಸ್ವರೂಪದಲ್ಲಿ ನಿರ್ಮಿತವಾದೆವು.

ಮೊದಲನೆಯ ಯೋಜನೆ - ಜೀವನ ವಿದ್ಯೆ ಯೋಜನೆ. ಆದಿಕಾಲದಿಂದ ಮಾನವ ತನ್ನ (ಸ್ವಯಂ) ಬಗ್ಗೆ ಅಜ್ಞಾನಿಯಾಗಿದ್ದ. ಆದರ್ಶ ಯುಗದಲ್ಲಿಯೂ ಆತ್ಮ-ಪರಮಾತ್ಮ ನಾಮದ ವಸ್ತುಗಳನ್ನು ಬಹಳ ಉಪದೇಶ ರೂಪದಲ್ಲಿ ಅರಿವು ಪಡಿಸುವ ಪ್ರಯಾಸ ಮಾಡಿದ, ಆದರೆ ಅರಿವುಗೊಳಿಸಲಾಗಲಿಲ್ಲ. ಈ, 'ಸ್ವಯಂ' ಬಗ್ಗೆ ಇರುವ ಅಜ್ಞಾನವೇ ಮಾನವನನ್ನು ಬಹಳ ಪೀಡಿಸಿದೆ. ಇದು ಅರಿವಾದರೆ ಮುಂದಿನ ಮಾತು ಅರಿವಾಗಲೇಬೇಕು. ಈ ಕಷ್ಟವನ್ನು ದೂರ ಪಡಿಸುವುದಕ್ಕಾಗಿಯೇ ಜೀವನ ವಿದ್ಯೆ ಯೋಜನೆ ಇರುವುದು. ಈ ಯೋಜನೆಯ ಕೇಂದ್ರ ಬಿಂದು ಜೀವನ. ಜೀವನ ಮಕ್ಕಳು-ವೃದ್ಧರು ಎಲ್ಲಾ ಮಾನವರಲ್ಲಿ ಸಮಾನ ರೂಪದಲ್ಲಿ ವಿದ್ಯಮಾನವಾಗಿದೆ. ಮಾನವನ ಸಮಾನತೆಯ ಆಧಾರವೇ ಜೀವನ. ಯಾವುದೇ ಎರಡು ಶರೀರ (ಮಾನವನ) ಒಂದೇ ಸಮಾನವಿರುವುದಿಲ್ಲ. ಜೀವನ ಸಮಾನವಾಗಿದೆ, ಜೀವನ ಶಕ್ತಿಗಳು ಹಾಗು ಬಲ ಸಮಾನವಾಗಿದೆ, ಜೀವನದ ಲಕ್ಷ್ಯ ಸಮಾನವಾಗಿದೆ. ಜೀವನ ಜಾಗೃತವಾಗಲು ಬಯಸುತ್ತದೆ, ಜಾಗೃತಿಯೇ ಇದರ ಲಕ್ಷ್ಯ. ಪ್ರತಿಯೊಬ್ಬ ವ್ಯಕ್ತಿ ಸಮಾಧಾನವನ್ನು ಪಡೆಯಲು ಬಯಸುತ್ತಾನೆ, ನ್ಯಾಯ ಬಯಸುತ್ತಾನೆ. ನೀವೆಲ್ಲರೂ ಈ ಮಾತನ್ನು ಶೋಧಿಸಬಹುದು. ನಿಮಲ್ಲಿ ಶರೀರದ ಯಾವುದೇ ಅಂಗ, ಅವಯವ ನ್ಯಾಯದ ಪ್ರತೀಕ್ಷೆಯಲ್ಲಿಲ್ಲ, ನ್ಯಾಯವನ್ನು ಬಯಸುವುದಿಲ್ಲ, ಸಮಾಧಾನವನ್ನು ಬಯಸುವುದಿಲ್ಲ. ಇದೇ ರೀತಿ ಶರೀರದ ಯಾವುದೇ ಅಂಗ, ಅವಯವ, ಸಮೃದ್ಧಿಯನ್ನು ಬಯಸುವುದಿಲ್ಲ, ಆದರೆ, ಮಾನವ ನ್ಯಾಯ, ಸಮಾಧಾನ, ಸಮೃದ್ಧಿ ಬಯಸುತ್ತಾನೆ. ಅತಃ ನ್ಯಾಯ, ಸಮಾಧಾನ, ಸಮೃದ್ಧಿ, ಇವೆಲ್ಲವೂ ಜೀವನದೇ ಬಯಕೆ ಎಂಬುವುದು ತಿಳಿಯುತ್ತದೆ. ಅತಃ ಜೀವನವನ್ನು ಅರಿತುಕೊಂಡು, ಜೀವನದ ಕ್ರಿಯೆಗಳನ್ನು ಅರಿತುಕೊಂಡು, ಜೀವನ ತೃಪ್ತಿ ಪಡೆಯಲು ನ್ಯಾಯ, ಧರ್ಮ, ಸತ್ಯವನ್ನು ಅರಿತುಕೊಂಡು ಬಾಳುವುದೇ ಒಂದು ಚಿಕ್ಕ ಕಾರ್ಯ! ಇದಕ್ಕಾಗಿಯೇ ಜೀವನ ವಿದ್ಯೆ ಯೋಜನೆ, ಕಾರ್ಯ ಯೋಜನೆಯಾಗಿ ಪ್ರಸ್ತುತವಾಗಿದೆ. ಸುಪ್ರಸಿದ್ಧ ವೈಜ್ಞಾನಿಕರು ತಥಾ ವಿಜ್ಞಾನ ತಿಳಿಯದಿರುವ ಜ್ಞಾನಿ-ಅಜ್ಞಾನಿಯರೆಲ್ಲರೂ ಇದನ್ನು ಕೇಳಿದ್ದಾರೆ, ಕೆಲವರು ಅರಿತುಕೊಂಡು ಮತ್ತವರಿಗೆ ಬೋಧಿಸುತ್ತಿದ್ದಾರೆ ಮತ್ತು ಬೋಧಿಸುವುದರಲ್ಲಿ ಸಫಲರಾಗಿದ್ದಾರೆ. ಇದನ್ನು ನೋಡಿ, ನಾನು ಅರಿತುಕೊಂಡಿರುವುದು ಸಾರ್ಥಕ ಮತ್ತು ಪ್ರಾಮಾಣಿಕವೆಂದು, ಇದನ್ನು

ಎಲ್ಲರು ಅರಿತುಕೊಂಡು ಮತ್ತವರಿಗೆ ಬೋಧಿಸಬಹುದೆಂದು ನನಗೆ ವಿಶ್ವಾಸವಾಯಿತು. ಎರಡನೆಯ ಯೋಜನೆ - ಶಿಕ್ಷಣವನ್ನು ಮಾನವೀಕರಿಸುವುದು. ಅರಿವುಳ್ಳವವನಾಗುವುದು ಎಲ್ಲರ ಅವಶ್ಯಕತೆಯಾಗಿದೆ. ಆದ್ದರಿಂದ ಅರಿವಿನ ಎಲ್ಲಾ ವಸ್ತುವನ್ನು ಶಿಕ್ಷಣದಲ್ಲಿ ಸಮಾವೇಶ ಮಾಡಬೇಕು. ಇದಕ್ಕೆ ಪಾಠ್ಯಕ್ರಮ (ಸಿಲಬಸ್) ತಯಾರಿಸಿ, ಶಾಲೆಯಲ್ಲಿ ಪ್ರಯೋಗ ಮಾಡಲಾಯಿತು. ಬಿಜನೋರ್ ಜಿಲ್ಲೆಯ ಗೋವಿಂದಪುರದ ಶಾಲೆಯಲ್ಲಿ ಮಾಡಲಾಯಿತು. ಅಲ್ಲಿ ಒಂದು ಒಳ್ಳೆಯ ಅನುಭವವಾಯಿತು. ಮೊದಲು ಎಲ್ಲಾ ಶಿಕ್ಷಕರು, ವಿಧ್ಯಾರ್ಥಿಗಳ ಮೇಲೆ ವಾತಾವರಣದ ಪ್ರಭಾವವಿರುತ್ತದೆ ಎಂದು ಹೇಳುತ್ತಿದ್ದರು. ಆದರೆ ವಿಧ್ಯಾರ್ಥಿಗಳ ಪ್ರಭಾವ ವಾತಾವರಣದ ಮೇಲಿರುತ್ತದೆಂಬುವ ಅನುಭವ ಗೋವಿಂದಪುರದಲ್ಲಾಯಿತು. ಇದನ್ನಿನೂ ವಿಶಾಲ ರೂಪದಲ್ಲಿ ನೋಡಬೇಕೆಂಬುವ ಆಶೆಯಿಂದ ಇದರಲ್ಲಿ ಪ್ರಯತ್ನ ಮುಂದುವರಿಯುತ್ತಿದೆ. ಮೂರನೆಯ ಯೋಜನೆ - ಪರಿವಾರ ಮೂಲಕ ಸ್ವರಾಜ್ಯ ವ್ಯವಸ್ಥೆ. ಶಕ್ತಿ ಕೇಂದ್ರಿತ ಶಾಸನದ ಸ್ಥಾನದಲ್ಲಿ ಸಮಾಧಾನ ಕೇಂದ್ರಿತ ವ್ಯವಸ್ಥೆ. ಈ ರೀತಿಯಲ್ಲಿ ದರ್ಶನ, ಶಾಸ್ತ್ರ ಮತ್ತು ಯೋಜನೆಗಳ ನಿಸ್ಪಂದಿತವಾಗುತ್ತದೆ.

**ಜಯವಾಗಲಿ, ಮಂಗಳವಾಗಲಿ, ಕಲ್ಯಾಣವಾಗಲಿ**

## ಜೀವನ ವಿದ್ಯೆ

ಜೀವನವನ್ನು ನಾನು ಅರಿತುಕೊಂಡಿದ್ದೇನೆ, ನಿಮಗೆ ಅರಿವು ಪಡಿಸುವ ಪ್ರಯಾಸ ಇಲ್ಲಿಂದ ಪ್ರಾರಂಭವಾಗುತ್ತದೆ. ಈ ಪ್ರಕ್ರಿಯೆಯ ಹೆಸರು "ಜೀವನ ವಿದ್ಯೆ". ಮೊದಲು ನಿಮಗೆ ಸ್ಪಷ್ಟ ಪಡಿಸಬೇಕೆಂದು ಬಯಸುತ್ತೇನೆ, ಜೀವನದಲ್ಲಿ ಸಮಾನತೆ ನಿತ್ಯ ವಿದ್ಯಮಾನವಾಗಿದೆ. ಜೀವನ ಎಂತಹ ವಸ್ತು, ಈ ಮಾತನ್ನು ಪ್ರತಿಯೊಬ್ಬ ವ್ಯಕ್ತಿ ಅರಿತುಕೊಳ್ಳಲು, ನಂಬಲು ಬಯಸುತ್ತಾನೆ ಮತ್ತು ಅದರ ಫಲ-ಪರಿಣಾಮಗಳನ್ನು ಪ್ರಮಾಣೀಕರಿಸಲು ಬಯಸುತ್ತಾನೆ, ಇದು ಇದರ ಮೂಲ ಉದ್ದೇಶ. "ಜೀವನ" ಭೌತಿಕವಲ್ಲ, ಅಭೌತಿಕವೂ ಅಲ್ಲ. "ಜೀವನ" ಒಂದು ಪರಮಾಣು, ಸಂಘಟನೆ-ಪೂರ್ಣ ಪರಮಾಣು ಚೈತನ್ಯ ಘಟಕವಾಗಿರುತ್ತದೆ. ಸಂಘಟನೆ-ಪೂರ್ಣತೆ ಎಂದರೇನು? ಈ ಪರಮಾಣುವಿನಲ್ಲಿ ವಿಸ್ಥಾಪನೆಯೂ ಇಲ್ಲ ಪ್ರಸ್ಥಾಪನೆಯೂ (ಅಂಶಗಳ ಸ್ಥಳಾಂತರ) ಆಗುವುದಿಲ್ಲ. ಆದರೆ ಭೌತಿಕ ರಾಸಾಯನಿಕ ರೂಪದಲ್ಲಿರುವ ಯಾವುದೇ ಪರಮಾಣುವಿನಲ್ಲಿ ಸಂಘಟಿಸಿರುವ ಅಂಶಗಳಲ್ಲಿ ಪ್ರಸ್ಥಾಪನೆ-ವಿಸ್ಥಾಪನೆಯಾಗುವುದು ಕಂಡುಬರುತ್ತದೆ. ಇದನ್ನೇ "ಪರಿಣಾಮ" ಎಂದು ಕರೆಯುತ್ತೇವೆ. ಪರಮಾಣುವಿನಲ್ಲಿ ನಿಹಿತ ಅಂಶಗಳ ಸಂಖ್ಯೆಯಲ್ಲಿ ಪರಿವರ್ತನೆಯಾಗುತ್ತಿರುತ್ತದೆ. ಇದೇ ಪರಿವರ್ತನೆ. ಪ್ರಪಂಚದಲ್ಲಿ ಬೇರೆಯಾವ ಪರಿವರ್ತನೆಯೂ ಇಲ್ಲ. ಮಾನವ ಯಾವುದೇ ರೀತಿಯ ಪರಿವರ್ತನೆ ಮಾಡಲು ಪ್ರಯತ್ನಿಸಿದರೂ, ಅದು ಪರಿಣಾಮಶೀಲ ಪರಮಾಣುಗಳ ಅಂಶಗಳಲ್ಲೇ ಪರಿವರ್ತನೆ ಮಾಡಬಲ್ಲ. ಈ ಪರಮಾಣುವಿನ ಎರಡು ಪ್ರಜಾತಿಯಿರುತ್ತದೆ - ಒಂದು ಹಸಿದ ಪರಮಾಣು, ಇನೊಂದು ಅಜೀರ್ಣ ಪರಮಾಣು. ಯಾವ ಪರಮಾಣುವಿನಲ್ಲಿ ತೃಪ್ತ ಆಗಲು ಕೆಲವು ಅಂಶಗಳ ಹಸಿವು (ಆವಶ್ಯಕತೆ) ಇರುತ್ತದೆಯೋ, ಹಾಗು ಪ್ರತಿಯೊಂದು ಪರಿಣಾಮ ತನ್ನಲ್ಲಿಯೇ ಯಥಾಸ್ಥಿತಿ ಸಂಪೂರ್ಣತೆ ಸ್ಪಷ್ಟವಾಗುತ್ತದೆಯೋ, ಅಂತಹ ಪರಮಾಣುಗಳನ್ನು ಹಸಿದ ಪರಮಾಣುವೆಂದು ಹೇಳಲಾಗಿದೆ. ಯಾವ ಪರಮಾಣುವಿನಲ್ಲಿ ಕೆಲವು ಅಂಶಗಳು ಬಹಿರ್ಗಮಿತವಾಗಲು ಬಯಸುತ್ತದೆಯೋ ಅಂತಹ ಪರಮಾಣುವನ್ನು ಅಜೀರ್ಣ ಪರಮಾಣುವೆಂದು ಹೇಳಲಾಗಿದೆ. ಈ ರೀತಿಯಲ್ಲಿ ಎರಡೂ ಪ್ರಕಾರದ ಪರಮಾಣು ತೃಪ್ತ ಆಗುವ ಅರ್ಥದಲ್ಲಿಯೇ ಕ್ರಿಯಾಶೀಲವಾಗಿರುತ್ತದೆ.

ಆ ತೃಪ್ತ ಪರಮಾಣುವೇ ಸಂಘಟನೆ-ಪೂರ್ಣ ಪರಮಾಣು. ಈ ಸಂಘಟನೆ-ಪೂರ್ಣ ಪರಮಾಣುವೇ ಚೈತನ್ಯ ಘಟಕ. ಚೈತನ್ಯ ಘಟಕ ಎಂದು ಹೆಸರು ಕೊಡುವ ಕಾರಣ, ಸಂಜ್ಞಾನಶೀಲತೆ, ಸಂವೇದನೆಶೀಲತೆಯನ್ನು ಪೂರ್ಣವಾಗಿ ಪ್ರಮಾಣಿಸುವ ಶಕ್ತಿ ಜೀವನದಲ್ಲಿದೆ. **ಜೀವನದ ಅಭಾವದಲ್ಲಿ, ಶರೀರವನ್ನು ನಾವು ರಚಿಸಿದರು, ಸಂವೇದನೆಶೀಲತೆಯನ್ನು ಪ್ರಮಾಣಿಸಲು ಸಾಧ್ಯವಿಲ್ಲ. ಸಂಜ್ಞಾನಶೀಲತೆಯಂತು ದೂರಿನ ಮಾತು**. ಈ ರೀತಿಯಲ್ಲಿ ಮಾನವ ಸಂವೇದನೆಶೀಲತೆ, ಸಂಜ್ಞಾನಶೀಲತೆಯನ್ನು ಪ್ರಮಾಣಿಸುವ ಕ್ರಮದಲ್ಲೆ ವ್ಯವಸ್ಥೆಯಲ್ಲಿ ಬಾಳಬಹುದು ಹಾಗು ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸಬಹುದು. ಇದೊಂದು ಪುಟ್ಟ ಕೆಲಸ. ಸಂವೇದನೆಶೀಲತೆಯನ್ನು ಜೀವಾವಸ್ಥೆಯ ಎಲ್ಲಾ ಜೀವಿ-ಪ್ರಾಣಿಗಳು ಪ್ರಮಾಣಿಸುತ್ತವೆ. ಎಷ್ಟೇ ಪ್ರಯತ್ನಿಸಿದರೂ, ಮಾನವ ಸಂಜ್ಞಾನಶೀಲತೆಯನ್ನು ಪ್ರಮಾಣಿಸದೆ ತುಪ್ತನಾಗುವುದಿಲ್ಲ, ಸುಖವಾಗಿರುವುದಿಲ್ಲ.

ಮಾನವ ಸುಖವಾಗಿರಲು ಬಯಸುತ್ತಾನೆ. ಸುಖವಾಗಿರಲು ಸಂಗ್ರಹದಿಂದ, ಸೌಕರ್ಯಗಳಿಂದ, ಸುಖವಾಗುತ್ತೇವೆಂದು; ಇಲ್ಲದಿದ್ದರೆ ಜಪ-ತಪದಿಂದ ಸುಖವಾಗುತ್ತೇವೆಂದು; ಇಲ್ಲದಿದ್ದರೆ ಭಕ್ತಿ-ವಿರಕ್ತಿಯಿಂದ ಸುಖವಾಗುತ್ತೇವೆಂದು ಯೋಚಿಸುತ್ತೇವೆ. ಎಲ್ಲಾ ಮನುಷ್ಯರು ಸುಖವಾಗಿರಲು ಯಾವುದಾದರೊಂದು ಪ್ರಯಾಸ ಮಾಡುತ್ತಲೇ ಇರುತ್ತಾರೆ ಆದರೆ ಈ ಪ್ರಯಾಸಗಳಿಂದ ಯಾರಿಗಾದರು ತೃಪ್ತಿ ಸಿಕ್ಕಿತು ಮತ್ತು ನಿರಂತರ ಸುಖ ಪಡೆದರು ಎಂಬುವ ಪ್ರಮಾಣವಿಲ್ಲ. ನಾನು ಹೇಗೆ ಅರಿವಿನಿಂದ ಸುಖವನ್ನು ಪಡೆದೆನೋ ಅದೇ ರೀತಿ ಪ್ರತಿಯೊಬ್ಬ ವ್ಯಕ್ತಿ ಅರಿವುಳ್ಳವವನಾದ ಮೇಲೆ ಸುಖವಾಗಿರಬಹುದೆಂದು ನನ್ನ ಆಲೋಚನೆ. ಸರಿಯಾಗಿರುವುದರಲ್ಲಿ (ಸತ್ಯದಲ್ಲಿ) ಪ್ರತಿಯೊಬ್ಬ ಮಾನವ ಒಂದೇ, ತಪ್ಪಿನಲ್ಲಿ ಅನೇಕ. ಹೀಗಿರುವಾಗ ಪ್ರತಿಯೊಬ್ಬ ಮಾನವನಲ್ಲಿ ಸಮಾನತೆಯ ವಸ್ತುವನ್ನು ಗುರುತಿಸುವ ಆವಶ್ಯಕತೆ ಇತ್ತು. ಈ ಸರಿ ಅಥವಾ ಸತ್ಯದ ಧಾರಕ-ವಾಹಕ ಆಗಿರುವ ವಸ್ತು ನನಗೆ ಅರಿವಾಯಿತು, ಅದು ಸಮಾಧಾನದಿಂದ ಬಾಳುತ್ತಿರುವ "ಜೀವನ".

'ಜೀವನ' ಯಾವಾಗ ಅರಿವು ಸಹಿತ ಬಾಳುತ್ತದೆಯೋ ಅವಾಗ ಪ್ರತಿಯೊಂದು ಸ್ಥಾನದಲ್ಲಿ ಸಮಾಧಾನವನ್ನು ಪ್ರಸ್ತುತ ಪಡಿಸುತ್ತದೆ. ಸಮಾಧಾನದ ಸಹಿತ ಪ್ರತಿಯೊಬ್ಬ ವ್ಯಕ್ತಿ ಸುಖವನ್ನು ಪಡೆಯುತ್ತಾನೆ. ಸಮಸ್ಯೆ ಇದ್ದರೆ ದುಃಖಿತನಾಗುತ್ತಾನೆ. ಮಾನವನ ಶರೀರವನ್ನು ಸಂಚಾಲಿಸುತ್ತಿರುವ 'ಜೀವನ'ವೇ ಅರಿತುಕೊಳ್ಳುವ ವಸ್ತು . ನಾವು ಎಮ್ಮೆಗೆ, ಹಸುವಿಗೆ ಮತ್ತು ಇತರ ಪ್ರಾಣಿಗಳಿಗೆ ಹೇಳಿಕೊಟ್ಟಿರುವುದೆಲ್ಲಾ ಸಂವೇದನಶೀಲತೆಯ ಅರ್ಥದಲ್ಲಿಯೇ ಇದೆ. ಇವಾಗ ಮಾನವ ಒಬ್ಬರೋಬ್ಬರಿಗೆ ಹೇಗೆ ಹೇಳಿಕೊಡುವುದು? ಹೊಡೆತ ಅಥವಾ ದಂಡನೆಯಿಂದೇನೋ ಮತ್ತವರಿಗೆ ಅರಿವುಂಟುಮಾಡಲಾಗಿಲ್ಲ. ಜೀವನೋಪಾಯದ ಭಯದಿಂದ ಮಾನವ ನಿಯಂತ್ರಿತವಾಗಿರುತ್ತಾನೆ, ನಂತರ ಭಯದ ಕವಚವನ್ನು ತೆಗೆದಿಡುತ್ತಾನೆ. ಉದಾಹರಣೆಯಾಗಿ, ಇತಿಹಾಸದಲ್ಲಿ ದಾಸ-ದಾಸಿಯರ ಸಂಪ್ರದಾಯ ಸಮಾಪ್ತಿಯ ರೂಪದಲ್ಲಿ ನೋಡಲಾಗಿದೆ. ಸಂವೇದನಶೀಲತೆಯಲ್ಲಿ ಭಯ ಮತ್ತು ಪ್ರಲೋಭನೆ ಇದ್ದೇಇರುತ್ತದೆ. ಭಯ ಮತ್ತು ಪ್ರಲೋಭನೆಯ ಆಧಾರದ ಮೇಲೆ ಎಲ್ಲಾ ರಾಷ್ಟ್ರ, ಎಲ್ಲಾ ಧರ್ಮ, ಎಲ್ಲಾ ಪ್ರೌಧ್ಯೋಗಿಕಿ ವ್ಯವಸ್ಥೆ, ವ್ಯಾಪಾರ ಸಂಸ್ಥೆ, ವ್ಯವಸ್ಥೆಯ ಭರವಸೆ ನೀಡುತ್ತಾರೆ. ಆದರೆ ಭಯವು ವ್ಯವಸ್ಥೆಯಲ್ಲ, ಪ್ರಲೋಭನೆಯೂ ವ್ಯವಸ್ಥೆಯಲ್ಲ. ಎಕೆಂದರೆ ಮಾನವನಿಗೆ ಭಯವು ಸ್ವೀಕಾರವಾಗುವುದಿಲ್ಲ, ಪ್ರಲೋಭನೆಯೂ ಸ್ವೀಕಾರವಾಗುವುದಿಲ್ಲ. ಹಾಗಾದರೆ ಮಾನವನ ಹತ್ತಿರ ಏನಿರಬೇಕು? ಮೌಲ್ಯ ಮತ್ತು ಮೌಲ್ಯಮಾಪನ. ಮೌಲ್ಯಗಳನ್ನು ಗುರುತಿಸುವ ವಿಧಿಯಿರಬೇಕು. ಮೌಲ್ಯಮಾಪನ ಮಾಡುವ ತಂತ್ರಣವಿರಬೇಕು. ಈ ಎರಡೂ ನಮ್ಮ ಹತ್ತಿರವಿರುವುದರಿಂದ ನಿರಂತರ ಸಮಾಧಾನದ ಪರಂಪರೆಯಿರುತ್ತದೆ. ಮೌಲ್ಯ ಮತ್ತು ಮೌಲ್ಯಮಾಪನವು ಅರಿವಿನ ಪ್ರಕ್ರಿಯೆ ಆಗಿರುತ್ತದೆ. ಇದು ಶರೀರದ ಶಾರೀರಿಕ, ಯಾಂತ್ರಿಕ ಪ್ರಕ್ರಿಯೆ ಅಲ್ಲ. ವಿಜ್ಞಾನದ ಅನುಸಾರವಾಗಿ ಎಲ್ಲಾ ಯಾಂತ್ರಿಕವೇ, ಯಾವುದೂ ಭಾವುಕ ಅಲ್ಲ. ಹಾಗಾದರೆ, ಯಾಂತ್ರಿಕತೆಯಲ್ಲೇ ಭಯ ಮತ್ತು ಪ್ರಲೋಭನೆಯೊಡನೆ ಹೆಣಗಾಡುತ್ತಿರಬೇಕಾಗುತ್ತದೆ. ಮಾನವ, ಕೇವಲ ಯಾಂತ್ರಿಕ ವಿಧಿಯಿಂದ ಯೋಚಿಸುತ್ತಾ, ಕೆಲಸ ಮಾಡುತ್ತಾ, ಈ ಧರಣಿ ಇರುವುದೋ ಇಲ್ಲವೋ ಎಂಬುವ ಸ್ಥಳಕ್ಕೆ ಬಂದಿದ್ದಾನೆ.

ಎಷ್ಟೇ ಸಮಸ್ಯೆ ಏಕತ್ರಿತವಾದರೂ ಸಮಸ್ಯೆಯ ನಿರಾಕರಣೆ ಸಮಸ್ಯೆಯಿಂದೇನೋ ಆಗುವುದಿಲ್ಲ. ಸಮಸ್ಯೆಯ ನಿರಾಕರಣೆ ಸಮಾಧಾನದಿಂದಲೇ ಆಗುತ್ತದೆ. ಸಮಾಧಾನವಿಲ್ಲದೆ ನಮಗೆ ಸಾಂತ್ವನವಿಲ್ಲ. ಸಮಾಧಾನ ಪಡೆಯಲು ಚೇತನ ವಿಕಾಸ, ಮಾನವ ಚೇತನದಿಂದ ಮೌಲ್ಯ ಮತ್ತು ಮೌಲ್ಯಮಾಪನ ವಿಧಿಯಿಂದ ವ್ಯವಸ್ಥೆಯ ಸಮೀಕರಣ ಮಾಡುವ ಪದ್ಧತಿಯನ್ನು ನಾವು ವಿಕಸಿತ ಮಾಡಬೇಕು. ಈ ರೀತಿಯಲ್ಲಿ ಜೀವನ ಸಂಬಂಧ, ಜೀವನ ತೃಪ್ತಿ, ಜೀವನ ಲಕ್ಷ್ಯವನ್ನು ಕೇಂದ್ರದಲ್ಲಿಟ್ಟು ವ್ಯವಸ್ಥೆಯನ್ನು ಸರಿಸಮಾನ ಮಾಡಿದರೆ ನಾವು ಸಫಲವಾಗುತ್ತೇವೆ. ಜೀವನವನ್ನು ನಿರ್ಲಕ್ಷಿಸಿ ಶರೀರದ ಅರ್ಥದಲ್ಲಿ ಮಾಡುವ ವ್ಯವಸ್ಥೆಯಲ್ಲಿ ಅವ್ಯವಸ್ಥೆಯೇ ಆಗುತ್ತದೆ. ಶರೀರಕ್ಕೆ ಚೆನ್ನಾಗನಿಸಿದರೆ, ಸದಾ ಒಳ್ಳೆಯದಾಗುವುದಿಲ್ಲ. ಯಾವುದೇ ಶರೀರದ ಕ್ರಿಯೆ ಸತತವಾಗಿರುವುದಿಲ್ಲ. 'ಶರೀರ' ಕ್ರಿಯೆ ಪುನಃ ಪುನಃ ಪರಿವರ್ತಿತವಾಗುತ್ತದೆ. 'ಜೀವನ' ಸತತವಾಗಿರುತ್ತದೆ. ಆದ್ದರಿಂದ ಜೀವನದ ಆಧಾರದ ಮೇಲೆ ನಿರ್ಣಯಿಸಲು ಸದ್ಬುದ್ಧಿಯ ಆವಶ್ಯಕತೆಯಿದೆ. ಜೀವನ ಎಲ್ಲಾ ಮಾನವರಲ್ಲಿ ಸಮಾನಾವಾಗಿದೆ, ಜೀವನದ ತಾಕತ್ತು ಸಮಾನವಾಗಿದೆ, ಜೀವನದಲ್ಲಿ ಬಲ ಹಾಗು ಶಕ್ತಿ ಅಕ್ಷಯವಾಗಿದೆ. ಇದು ಸಮಾಪ್ತವಾಗುವುದಿಲ್ಲ, ಕ್ಷ್ಯಯವೂ ಆಗುವುದಿಲ್ಲ. ಏಕೆ ಕ್ಷಯವಾಗುವುದಿಲ್ಲ? ಜೀವನ ಪರಮಣುವಿನ ಪರಿಣಾಮದಲ್ಲಿ ಯಾವ ಪರಿವರ್ತನೆಯು ಆಗುವುದಿಲ್ಲ. ಅದರ ಬಲ ಹಾಗು ಶಕ್ತಿ ಅಕ್ಷಯವಾಗಿದೆ. ಸ್ಥಿತಿಯಲ್ಲಿ ಬಲ ಪ್ರಮಾಣಿತವಾಗುತ್ತದೆ ಹಾಗು ಗತಿಯಲ್ಲಿ ಶಕ್ತಿ. ಇದರ ಸಾಕ್ಷಿ, ಮಾನವ ತಾನು ಇರುವುದನ್ನು ಸತತ ಸ್ವೀಕರಿಸುತ್ತಾನೆ. ಇರುವುದೇ ವರ್ತಮಾನ. ವರ್ತಮಾನದಲ್ಲೆ ಪ್ರತಿಯೊಂದು ವಸ್ತುವಿನ ಅಧ್ಯಯನವಾಗುತ್ತದೆ. ಅದೇ ಕ್ರಮದಲ್ಲಿ ವರ್ತಮಾನದಲ್ಲಿ ಎಲ್ಲರಲ್ಲಿಯೂ 'ಜೀವನ' ಸಮಾನವಾಗಿದೆ, ಜೀವನದ ಬಲ, ಜೀವನದ ಶಕ್ತಿಯೂ ಸಮಾನ. ನಾಲಕ್ಕನೆಯ ಮಾತು ಜೀವನದ ಲಕ್ಷ್ಯ, ಇದು ಎಲ್ಲಾ ಮಾನವನಲ್ಲಿ ಸುಖವಾಗಿರುವ ಆಸೆ. ಸುಖವಾಗಿರುವುದೇ ಎಲ್ಲರ ಲಕ್ಷ್ಯ. ಈ ನಾಲಕ್ಕು ಮಾತುಗಳನ್ನು ಧ್ಯಾನದಲ್ಲಿಟ್ಟುಕೊಳ್ಳುವುದು ಅವಶ್ಯಕವಾಗಿದೆ.

ಜೀವನ ಒಂದು ಸಂಘಟನೆ-ಪೂರ್ಣ ಪರಮಾಣು, ಚೈತನ್ಯ ಘಟಕ. ಇದನ್ನು ಯಾರು ಸೃಷ್ಟಿಸಿದ್ದಾರೆ? ಸೃಷ್ಟಿಸುವವನು, ನಾಶಮಾಡುವವನು ಇದ್ದಾನೆ ಎಂಬುವ ನಂಬಿಕೆ ಇಂದಿನವರೆಗೂ ಇದೆ. ಈ ನಂಬಿಕೆಯ ಆಧಾರದ ಮೇಲೆ ಮಾನವ, ನಾನು ಸೃಷ್ಟಿಸಬಹುದು, ನಾಶಮಾಡಬಹುದೆಂದು ಯೋಚಿಸುತ್ತಾನೆ, ಇದು ವಿಜ್ಞಾನದ ಮೂಲ ಆಧಾರವೂ ಆಗಿದೆ. ಇದರಿಂದ ಸಾಕಷ್ಟು ನಿರಾಶೆಗಳಾಗಿವೆ. ಕೆಲವು ದೇಶಗಳು ನಾವು ಎಟಂ ಬಾಂಬು ತಯಾರಿಸಬಹುದೆಂದು, ಕೆಲವು ದೇಶಗಳು ತಯಾರಿಸಲಾರೆಂದು ಹೇಳುತ್ತಾರೆ, ಇದು ಸಮಾನತೆಯ ಆಧಾರವಲ್ಲ, ಏಕೆಂದರೆ ಸಮಾನತೆ ಅಸ್ತಿತ್ವಕ್ಕೆ ಸಹಜ. ಬಾಂಬು ತಯಾರಿಸುವುದು ಅಸ್ತಿತ್ವದ ವಿರೋಧಿಯಾಗಿದೆ. ಅಸ್ತಿತ್ವ ಸಹ-ಅಸ್ತಿತ್ವ ಸಹಜವಾಗಿದೆ. ನಾವು, ಅಸಹಜತೆಯಿಂದ ಏನು ಮಾಡಿದರೂ, ಎಲ್ಲಾದರೊಂದುಕಡೆ ಅದರ ವಿರೋಧವಾಗುತ್ತದೆ. ಇದೇ ರೀತಿಯಲ್ಲಿ ವ್ಯಾಪಾರ ಲಾಭೋನ್ಮಾದಿಯಾಯಿತು. ಇದರ ಕಾರಣ ಹೆಚ್ಚು ಕಡಿಮೆಯ ಪಿಶಾಚಿ ಹಿಂದೆ ಬಿದ್ದಿತು. ಒಬ್ಬ ಮಾನವ ಕಡಿಮೆಯೆಂದು ಯೋಚಿಸುತ್ತಾನೆ. ಇನ್ನೊಬ್ಬ ಮಾನವ ಹೆಚ್ಚೆಂದು ಯೋಚಿಸುತ್ತಾನೆ. ಜಗಳ ನಿರಂತರವಿರುತ್ತದೆ. ಈ ರೀತಿಯಲ್ಲಿ ಮಾನವ ಸ್ವಸ್ಥ ರೂಪದಲ್ಲಿ ಸುಖವಾಗಿ ಬಾಳಲು ಆಗಲಿಲ್ಲ. ಆದ್ದರಿಂದ ಸ್ವಸ್ಥ ರೂಪದಲ್ಲಿ ಬಾಳಲು ಪ್ರತಿಯೊಂದು ಮಾನವನಿಗೆ ಚೇತನ ವಿಕಾಸ ಮೌಲ್ಯ ಮತ್ತು

ಮೌಲ್ಯಮಾಪನ ವಿಧಿಯಿಂದ ಬಾಳಬೇಕಾಗುತ್ತದೆ. ಅದರ ಮೊದಲನೆಯ ಚರಣ ಅರಿವು, ಎರಡನೆಯ ಚರಣ ಪ್ರಾಮಾಣಿಕತೆ, ಮೂರನೆಯ ಚರಣ ಜವಾಬ್ದಾರಿ, ನಲಕ್ಕನೆಯ ಚರಣ ಭಾಗವಹಿಸುವಿಕೆ. ಈ ನಾಲಕ್ಕು ಚರಣದಲ್ಲಿ ಮಾನವನು ತನ್ನ ಅರಿವನ್ನು ಪ್ರಮಾಣ ಪಡಿಸಬೇಕು. ಅರಿವಿನ ವಸ್ತು ಮೂರು - ಜೀವನ ಜ್ಞಾನ, ಸಹ-ಅಸ್ತಿತ್ವದರ್ಶನ ಜ್ಞಾನ, ಮಾನವೀಯತೆಪೂರ್ಣ ನಡತೆಯ ಜ್ಞಾನ.  ಜೀವನದ ಸ್ವರೂಪದ ಬಗ್ಗೆ ನಿಮಗಾಗಲೇ ಹೇಳಿದೆ. ಜೀವನ ನಿತ್ಯವಾಗಿದೆ, ಸುಖಾಕಾಂಕ್ಷಿಯಾಗಿದೆ, ಹಾಗು ಅದು ಸುಖವನ್ನು ಮಾನವ ಪರಂಪರೆಯಲ್ಲಿ ಪ್ರಮಾಣ ಪಡಿಸಬಹುದು. ಇದಕ್ಕೆ ಪ್ರಯತ್ನಿಸುವ ಪ್ರಥಮ ಬಿಂದು ಜೀವನವನ್ನು ಅರಿತುಕೊಳ್ಳುವುದು, ಇದರ ಹೆಸರು ಜೀವನ ವಿದ್ಯೆ. ವಿದ್ಯೆಯ ಧಾರಕ ವಾಹಕ ಜೀವನವೇ. ವಿದ್ಯೆಯ ಸ್ವರೂಪದಲ್ಲಿ ಮೂರು ಭಾಗವಿರುತ್ತದೆ - ವಿದ್ಯೆ, ವಿದ್ವತ್ತು ಮತ್ತು ವಿದ್ವಾಂಸ. ವಿದ್ಯೆ: ಸಂಪೂರ್ಣ ಸಹ-ಅಸ್ತಿತ್ವವೇ ವಿದ್ಯೆ. ಸಹ-ಅಸ್ತಿತ್ವದಲ್ಲೇ ವಿದ್ಯೆಯಿದೆ. ಅಸ್ತಿತ್ವದಲ್ಲಿ ಜೀವನವೋ ಅವಿಭಾಜ್ಯವಾಗಿದೆ. ವಿದ್ವತ್ತು: ಅರಿವು ಜೀವನದಲ್ಲೇ ಆಗುತ್ತದೆ. ವಿದ್ವಾಂಸ: ಮಾನವನಾಗಿರುತ್ತಾನೆ.

ಹಾಗಾದರೆ ಅರಿತುಕೊಳ್ಳುವ ವಸ್ತು ಏನು? ಸಂಪೂರ್ಣ ಸಹ-ಅಸ್ತಿತ್ವ ರೂಪಿ ಅಸ್ತಿತ್ವ. ಇದೇ ವಿದ್ಯೆ, ತಿಳಿದುಕೊಳ್ಳುವ ವಸ್ತು. ವಿದ್ವತ್ತಿನ ಧಾರಕ-ವಾಹಕ ವಸ್ತು ಜೀವನ ಮತ್ತು ಅದನ್ನು ಪ್ರಮಾಣೀಕರಿಸುವವನು ಮಾನವ. ಮಾನವ, ಶರೀರ ಹಾಗು ಜೀವನದ ಸಂಯುಕ್ತ ರೂಪವಾಗಿದ್ದಾನೆ. ಈ ವಿಧಿಯಲ್ಲಿ ಮಾನವನ ಮಹಿಮ ಮತ್ತು ಜೀವನದ ಮಹಿಮ, ಸಹ-ಅಸ್ತಿತ್ವದ ಮಹಿಮ ತಾನಾಗೆ ಸ್ಪಷ್ಟವಾಗುತ್ತದೆ. ಸಹ-ಅಸ್ತಿತ್ವ ಅಸ್ತಿತ್ವ ಸಹಜವಾಗಿದೆ. ವಿಕಾಸ ಸಹ-ಅಸ್ತಿತ್ವ ಸಹಜವಾಗಿದೆ. ಜೀವನ ವಿಕಾಸ ಸಹಜವಾಗಿದೆ. ಜಾಗೃತಿ ಜೀವನ ಸಹಜವಾಗಿದೆ. ಇದಕ್ಕೆ ಸಹ-ಅಸ್ತಿತ್ವ ದೃಶ್ಯವಾಗಿದೆ. ರಾಸಾಯನಿಕ ಭೌತಿಕ ರಚನೆ ವಿರಚನೆಗಳು ಒಂದಕ್ಕೊಂದು ಅಂತರ ಸಂಬಂಧಿತ ಕ್ರಮದಲ್ಲಿವೆ. ಈ ಎಲ್ಲಾ ಘಟನೆಗಳು ನಿತ್ಯ ವರ್ತಮಾನವಾಗಿವೆ. ರಾಸಾಯನಿಕ ಭೌತಿಕ ವಿರಚನೆಗಳು ಆಗದೆ ಇರುವ ಕ್ಷಣ ಸಿಗುವುದಿಲ್ಲ, ದಿನ ಸಿಗುವುದಿಲ್ಲ, ಶತಾಬ್ದಿಯೂ ಸಿಗುವುದಿಲ್ಲ. ಈ ಎಲ್ಲಾ ರಚನೆ-ವಿರಚನೆಗಳ ದೃಷ್ಟವಾಗಿರುತ್ತದೆ ಜೀವನ. ಜೀವನವೇ ನೋಡುವುದು-ಅರಿತುಕೊಳ್ಳುವುದು, ಶರೀರ ಅರಿತುಕೊಳ್ಳುವುದಿಲ್ಲ. ಶರೀರದ ಯಾವ ಭಾಗದಲ್ಲಿ ಜೀವನದ ಜೀವಂತತೆ ಇರುವುದಿಲ್ಲವೋ ಅದನ್ನು ಶೂನ್ಯವೆನ್ನುತ್ತಾರೆ. ಆ ಸ್ಥಳದಲ್ಲಿ ಶೀತ-ಉಷ್ಣವೇನೆಂದರೆ ಅರಿವಾಗುವುದಿಲ್ಲ.

ಎರಡನೆಯ ಮಾತು, ಆಸ್ಪತ್ರೆಯಲ್ಲಿ ಆಪರೇಷನ್ ಮಾಡುವು ಸಮಯ ಮೂರ್ಛೆ ಹೊಗಿಸಿದ ನಂತರ ಏನೇ ಕೊಯ್ದು ಕತ್ತರಿಸಿದರೂ ಏನೂ ತಿಳಿಯುವುದಿಲ್ಲ. ಈ ಆಧಾರದ ಮೇಲೆ ನಮಗೆ ಅರಿವಾಗುತ್ತದೆ, ಎಲ್ಲಿ ಜೀವನ ಜೀವಂತತೆಯನ್ನು  ಕಾಪಾಡುತ್ತದೆಯೋ ಅಲ್ಲೇ ಸಂವೇದನೆಗಳು ಅರಿವಾಗುತ್ತದೆ. ಜೀವನ, ತನ್ನ ತೃಪ್ತಿಗಾಗಿ ಜಿಜ್ಞಾಸು ಆದಾಗಲೇ ಸತ್ಯತೆ, ಯಥಾರ್ಥತೆ, ವಾಸ್ತವಿಕತೆಯನ್ನು ಅರಿತುಕೊಳ್ಳುತದೆ. ಫಲಸ್ವರೂಪ ಜೀವನ ಸುಖ ಆಗುವ ಆಧಾರವಾಗುತ್ತದೆ. ಈ ಕಾರಣದಿಂದ ನಮಗೆ ಜೀವನವನ್ನು ಅರಿತುಕೊಳ್ಳುವ ಅವಶ್ಯಕತೆ ಆಯಿತು. ಈ ಅವಶ್ಯಕತೆ ಧನವಂತರು, ಧನಹೀನರು, ಬಲವಂತರು, ಬಲಹೀನರು, ಹಿರಿಯರು, ಯುವಕರು, ಎಲ್ಲರಿಗೂ ಇದೆ.

ಎರಡನೆಯ ಸೂತ್ರ, ಜೀವನ ವಿದ್ಯೆಯಲ್ಲಿ ಯಾವ ವರ್ಗ-ಸಂಘರ್ಷದ ಆಧಾರವಿಲ್ಲ. ಇದರಲ್ಲಿ ಸರ್ವಶುಭದ ಆಧಾರ ಸಹ-ಅಸ್ತಿತ್ವವೇ. ಎಲ್ಲರು ನಿರಂತರ ಸುಖವಾಗಿರುವ ಸ್ರೋತ. ಸಮಾಧಾನಿತವಾಗಿರುವ ಪ್ರಮಾಣವಿದೆ. ಈ ಎಲ್ಲಾ ವಸ್ತುಗಳು ತಾನಾಗೆ ಉದ್ಗಮಿತವಾಗುತ್ತವೆ. ನಾನು ಅರಿಯಬಲ್ಲೆ ಎಂಬುವುದನ್ನು ಮಾನವ ಬಯಸುತ್ತಾನೆ. ಹೀಗೇ ಬಾಳಲು ಬಯಸುತ್ತಾನೆ. ನಾವು ಎಲ್ಲರೊಂದಿಗೆ ಸುಖದಿಂದ ಬಾಳಬಹುದು. ಏಕಾಂಗಿಯಾಗಿ ಯಾರು ಇರುವುದಿಲ್ಲ, ಈ ಸಿಧಾಂತ ಕಂಡುಬರುತ್ತದೆ. ಯಾವುದೇ ಮಾನವ, ಈ ಧರಣಿಯ ಸಂಬಂಧವನ್ನು ಬಿಟ್ಟು ಸುಖನಾಗಲು ಪ್ರಯತ್ನಿಸಿದರೆ, ಅದಾಗುವುದಿಲ್ಲ. ನೀರಿನ ಸಂಬಂಧವನ್ನು ಬಿಟ್ಟು ಸುಖವಾಗಲು ಸಾಧ್ಯವಿಲ್ಲ. ಯಾವ ವಸ್ತುವಿನ ಸಂಬಂಧವನ್ನೂ ಬಿಟ್ಟು ನಾವು ಸುಖವಾಗಿರಲು ಸಾಧ್ಯವಿಲ್ಲ. ಹೀಗಿರುವಾಗ ಜೀವನ ಸಂಬಂಧವನ್ನು ಬಿಟ್ಟು ಹೇಗೆ ಬಾಳುವುದು. ಯಾಂತ್ರಿಕ ಹೇಗಾಗುವುದು? ಹಾಗು ಭಾವನಾತ್ಮಕ ಪ್ರಪಂಚದಿಂದ ಹೇಗೇ ಮುಕ್ತಿ ಪಡೆಯುವುದು? ನೀವೇ ಯೋಚಿಸಿರಿ ಇದು ಹೇಗಾಗುವುದೆಂದು. ನಾವು ಅಂಗಡಿಗೆ ಹೋಗಿ, ತರಕಾರಿ, ಧಾನ್ಯ, ಬೇಳೆಕಾಳುಗಳು, ಚಿನ್ನ, ಕಬ್ಬಿಣ ಇದೆಲ್ಲರ ಮೌಲ್ಯ (ಬೆಲೆ) ವಿಚಾರಿಸುತ್ತೇವೆ. ಆ ಮೌಲ್ಯದ ದರ್ಶಿ ಯಾರು? ಮಾನವನೇ ಅದರ ದರ್ಶಿ ಆಗಿರುತ್ತಾನೆ. ಎಲ್ಲಾ ವಸ್ತುಗಳಿಗೆ ಮೌಲ್ಯ ಇರುವಾಗ ಮಾನವನಿಗೂ ಮೌಲ್ಯ ಇರುತ್ತದೆ. ಮಾನವನ ಮೌಲ್ಯವನ್ನು ತಿಳಿದುಕೊಳ್ಳುವ ಅವಶ್ಯಕತೆ ಮಾತ್ರ ಉಳಿದಿದೆ, ಅದನ್ನು ಬಿಟ್ಟು ಮತ್ತೆಲ್ಲಾ ವಸ್ತುಗಳ ಮೌಲ್ಯವನ್ನು ಹಿಡಿದಿಟ್ಟುಕೊಂಡಿದ್ದೇವೆ. ಎಲ್ಲೆಲ್ಲಿ ಲಾಭದ ಅವಕಾಶ ಕಾಣಿಸಿಕೊಂಡಿತೋ ಅಲ್ಲಲ್ಲಿ ಮೌಲ್ಯವನ್ನು ಹಿಡಿದಿಟ್ಟುಕೊಂಡಿದ್ದೇವೆ. ಮಾನವನ ಮೌಲ್ಯವನ್ನು ಅರಿತುಕೊಂಡರೆ ಲಾಭ-ಹಾನಿಯಿಂದ ಮುಕ್ತಿ ಪಡೆಯ ಬಹುದು. ಮಾನವ ಮೌಲ್ಯ, ಜೀವನ ಮೌಲ್ಯ, ಸ್ಥಾಪಿತ ಮೌಲ್ಯ, ಶಿಷ್ಟ ಮೌಲ್ಯ, ಇವನ್ನೆಲ್ಲಾ ಅರಿತುಕೊಂಡರೆ ನಮಗೆ ಲಾಭ-ಹಾನಿಯ ಆವಶ್ಯಕತೆ ಶೂನ್ಯವಾಗುತ್ತದೆ. ಪ್ರಪಂಚದ ಎದೆಯಮೇಲಿರುವ ದೊಡ್ಡ ಹೊರೆ ಕಡಿಮೆಯಾಗಬಹುದು. ಲಾಭ ಹಾನಿಯ ಚಕ್ರದಲ್ಲಿ ನಾವು ನಮ್ಮನ್ನೂ ಹಾಗು ಮತವರನ್ನೂ ಕಾಪಾಡಲು ಆಗುವುದಿಲ್ಲ. ಈ ಚಕ್ರದಲ್ಲಿ ಎಲ್ಲರ ಕೊಲೆ, ನಾಶ ಆಗುತ್ತದೆ. ಈ ಜಂಜಾಟದಿಂದ ಮುಕ್ತಿ ಪಡೆಯುವ ಒಂದೇ ವಿಧಿ, ಮಾನವ ಮೌಲ್ಯಗಳನ್ನು ಅರಿತುಕೊಳ್ಳುವುದರಲ್ಲಿ ಸಹಜನಾದರೆ ಮಾತ್ರ. ನಾವು ಬಹಳ ತಲೆಯೋಡೆದುಕೊಂಡಿದ್ದೇವೆ ಆದರೆ ಏನೂ ಆಗಲಿಲ್ಲ. ಇದಕ್ಕೆ ಸಾಕ್ಷಿ - ಸಾಮ್ಯವಾದ ಮತ್ತು ಬಂಡವಾಳಶಾಹಿ. ಸಾಮ್ಯವಾದವೂ ರಾಷ್ಟ್ರೀಯ ಲಾಭಕ್ಕೆ ಹೆಣಗಾಡಿ, ಅಂತಿಮವಾಗಿ ಲಾಭದಿಂದ ಮುಕ್ತವಾಗಿರಲು ಆಗಲಿಲ್ಲ. ಬಂಡವಾಳಶಾಹಿ ಎಂದೆಂದಿಗೂ ಲಾಭವಾದಿ ಎಂದೇ ಘೋಷಣೆ ಮಾಡಲಾಗಿತ್ತು. ಆದ್ದರಿಂದ ಲಾಭ-ಹಾನಿಯಿಂದ ಮುಕ್ತವಾಗಿರಲು ಮಾನವನಿಗೆ ತನ್ನ ಮೌಲ್ಯಗಳನ್ನು ಅರಿತುಕೊಳ್ಳುವ ಅವಶ್ಯಕತೆಯಿದೆ. ಮಾನವ ಮೌಲ್ಯಗಳನ್ನು ನಿರ್ವಹಿಸುವ ಅವಶ್ಯಕತೆಯಿದ. ಇದು ಜೀವನ ವಿದ್ಯ ಅರಿತುಕೊಳ್ಳುವುದರಿಂದ ಅಸ್ತಿತ್ವ ಸಹ-ಅಸ್ತಿತ್ವದ ರೂಪದಲ್ಲಿ ಅರಿವಾದಾಗ ಮತ್ತು ಪೂರ್ಣ ಮಾನವೀಯತೆ ನಡತೆಯಲ್ಲಿ ವಿಶ್ವಾಸ ಆದಾಗ, ಮಾನವ ಮೌಲ್ಯ ಚರಿತಾರ್ಥವಾಗುತ್ತದೆ. ಇದರ ಹೆಸರೇ ಅರಿವು.

ಮಾನವ ಮೌಲ್ಯವನ್ನು ನಾವು ಚರಿತಾರ್ಥ ಮಾಡಲು ಪ್ರಾರಂಭಿಸಿದಾಗಲೇ ಸರಿಯಾದ ನಡತೆಯಲ್ಲಿ (ಸಮರ್ಥ) ನಿಷ್ಣಾತರಾಗುತ್ತೇವೆ, ಪಾರಂಗತರಾಗುತ್ತೇವೆ, ಇಲ್ಲದಿದ್ದರೆ ಯಾವುದಾದರು ಉನ್ಮಾದದಲ್ಲಿ ಸಿಕ್ಕಿದ್ದು, ಸರಿಯಾಗಿರುವ ಯಾವುದೇ ರಸ್ತೆ ಸಿಗುವುದಿಲ್ಲ. ಅರಿವುಳ್ಳವವನಾಗುವುದಕ್ಕೆ ಜೀವನವನ್ನೂ ಅರಿತುಕೊಳ್ಳುವುದು

ಹಾಗು ಸಹ - ಅಸ್ತಿತ್ವದಲ್ಲಿ ಮಾನವ ತನ್ನ ನಡತೆಯನ್ನು ಅರಿತುಕೊಳ್ಳಬೇಕು. ಇದೇ ಜೀವನ ವಿದ್ಯೆ. ವಿದ್ಯೆಗೆ ಎರಡು ಭಾಗವಿದೆ - ಜೀವನ ಜ್ಞಾನ ಮತ್ತು ಸಹ-ಅಸ್ತಿತ್ವ ದರ್ಶನ ಜ್ಞಾನ. ಈ ಎರಡರ ಧಾರಕ ವಾಹಕ ಜೀವನವೇ, ಜೀವನ ಜ್ಞಾನದ ಅರ್ಥ ಜೀವನವೇ ಜೀವನವನ್ನು ಅರಿತುಕೊಳ್ಳುವು ಪ್ರಕ್ರಿಯೆ. ಜೀವನವೇ ಅಸ್ತಿತ್ವವನ್ನು ಅರಿತುಕೊಂಡಾಗ ಈ ಪ್ರಕ್ರಿಯೆಯನ್ನು ಅಸ್ತಿತ್ವ ದರ್ಶನವೆಂದು ಹೇಳಲಾಗುತ್ತದೆ. ಎಲ್ಲಾ ಜೀವನ ಸಮಾನ, ಎಲ್ಲಾ ಮಾನವರಲ್ಲಿ ಜೀವನ ಒಂದೇ ಸಮಾನವಾಗಿದೆ. ಸಮಾನ ಎಂದು ಹೇಗೆ ತಿಳಿಯಿತು? ಎಲ್ಲಾ ಜೀವನ ಸಮಾನವೆಂದು, ಜೀವನ, ಜೀವನವನ್ನು ಅರಿತುಕೊಳ್ಳುವ ವಿಧಿಯಲ್ಲಿ, ಪ್ರಮಾಣೀಕರಿಸುವ ವಿಧಿಯಲ್ಲಿ, ಅಸ್ತಿತ್ವವನ್ನು ಅರಿತುಕೊಳ್ಳುವ ವಿಧಿಯಲ್ಲಿ ಸಹ-ಅಸ್ತಿತ್ವವನ್ನು ಪ್ರಮಾಣೀಕರಿಸುವ ವಿಧಿಯಲ್ಲಿ ತಿಳಿಯಿತು.

ಅರಿತುಕೊಳ್ಳುವ ವ್ಯವಸ್ಥೆ ಶರೀರದಲ್ಲಿ, ಕೈ-ಕಾಲು, ಕಿವಿ-ಮೂಗು, ಚಕ್ಷು, ಮಸ್ತಿಷ್ಕ, ಹೃದಯ, ಯಾವುದರಲ್ಲೂ ಇಲ್ಲ. ಈ ವ್ಯವಸ್ಥೆ ಜೀವನದಲ್ಲೇ ಇರುತ್ತದೆ. ಜೀವನವೇ ಜೀವನವನ್ನು ಮತ್ತು ಸಹ-ಅಸ್ತಿತ್ವವ್ವನ್ನು ಅರಿತುಕೊಳ್ಳುವ ವಸ್ತು ಮತ್ತು ಬೇರೆ ಯಾವ ವಸ್ತುವೂ ಅರಿತುಕೊಳ್ಳಲು ಆಗುವುದಿಲ್ಲ. ಈ ರೀತಿಯಲ್ಲಿ, ಮಾನವ ತನ್ನ ಅರಿವನ್ನು ವ್ಯಕ್ತ ಪಡಿಸಲು (ಪ್ರಮಾಣೀಕರಿಸಲು) ಶರೀರ ಮತ್ತು ಜೀವನದ ಸಂಯುಕ್ತ ರೂಪದಲ್ಲಿರುವುದು ಅನಿವಾರ್ಯ ಎಂಬುವುದನ್ನು ನಿಷ್ಕರ್ಷಿಸುತ್ತೇವೆ. ಇದು ಕೇವಲ ಶರೀರ ಅಥವಾ ಕೇವಲ ಜೀವನ ಇರುವುದರಿಂದಾಗುವುದಿಲ್ಲ. ಪ್ರಮಾಣೀಕರಿಸುವ ಕೇಂದ್ರ ಬಿಂದು ವ್ಯವಸ್ಥೆಯಲ್ಲಿ ಬಾಳುವುದು ಹಾಗು ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವುದು. ಇದೇ ಅರಿವಿನ ಸಾರ್ಥಕತೆ. ಹೀಗಿರವಾಗಲೇ ನಾವು ವ್ಯವಸ್ಥೆಯಲ್ಲಿ ಬಾಳಲು ಆಶಿಸುತ್ತೇವೆ, ಈ ಪ್ರಕ್ರಿಯೆ ಜೀವನ ಸಹಜವಾಗಿರುತ್ತದೆ.

ಸಹ-ಅಸ್ತಿತ್ವವನ್ನು ಅರಿತುಕೊಳ್ಳುವ ಕ್ರಮದಲ್ಲಿ ಅಸ್ತಿತ್ವ ಸ್ವಯಂ ಸಹ-ಅಸ್ತಿತ್ವದಲ್ಲಿದೆ ಎಂದು ಅರಿವಾಗುತ್ತದೆ, ಏಕೆಂದರೆ ಸತ್ವದಲ್ಲಿ (ವ್ಯಾಪಕದಲ್ಲಿ) ಸಂಪೃಕ್ತ (ಮುಳುಗಿ, ನೆನೆದು, ಆವೃತವಾಗಿರುವ) ಪ್ರಕೃತಿಯೇ ಸಂಪೂರ್ಣ ಪ್ರಕೃತಿ. ಪ್ರಕೃತಿ, ಎಣಿಸಬಹುದಾತಂತಹ ವಸ್ತು. ಎಣಿಸುವವನು ಮಾನವ. ಎಣಿಸಬಹುದಾದಂತಹ ವಸ್ತು ಎಲ್ಲಾ ಜಡ ಪ್ರಕೃತಿ ಮತ್ತು ಚೈತನ್ಯ ಪ್ರಕೃತಿ. ಫುಟಾಣಿ ಸೂತ್ರ - ಅರಿವಿನಿಂದ ಸುಖ, ಅರ್ವಿಲ್ಲದಿದ್ದರೆ ದುಃಖ. ಇಂದಿನವರಿಗೆ ಇಡೀ ಪ್ರಪಂಚ ಸುಖಕ್ಕಾಗಿ ಹೆಣಗಾಡುತ್ತಿದೆ. ಮೊದಲು ಯೋಗ, ಪರಿಶ್ರಮ ಮಾಡಿದರೆ, ಅಥವಾ ಸನ್ಯಾಸಿಯಾದರೆ ಸುಖವನ್ನು ಪಡೆಯಬಹುದು ಎಂಬುವ ನಂಬಿಕೆ ಇತ್ತು. ಜನರು ಇದರ ಪ್ರಯೋಗವೂ ಮಾಡಿದರೂ, ಯಾವ ಪ್ರಮಾಣವೂ ಸಿಗಲಿಲ್ಲ, ಪರಂಪರೆಯಾಗಲಿಲ್ಲ. ಎರಡನೆಯದಾಗಿ, ಸಾಕಷ್ಟು ಸಿರಿ ಸಂಪತ್ತು ಶೇಖರಿಸಿದರೆ ಸುಖ ಪಡೆಯಬಹುದು ಎಂಬುವ ಮಾತಿನೊಡನೆ ಹೆಣಗಾಡಿದರು. ಇದರಿಂದಲೂ ಸುಖ ಸಂತೋಷವನ್ನು ಉಳ್ಳವವರಾಗಲಿಲ್ಲ. ಈ ಎರಡು ರೀತಿಯಿಂದಲೂ ಯಾರು ಸುಖವನ್ನು ಹೊಂದಿರುವವರಾಗಲಿಲ್ಲ. ಹಾಗಾಗಿ ಪುನಃ ಯೋಚಿಸುವ, ಪ್ರಯಾಸ ಮಾಡಬೇಕಾಗಿತು. ಅರಿವಿನಿಂದಲೇ ಸಮಾಧಾನ, ಸಮಾಧಾನ ಇದ್ದರೆ ಮಾತ್ರ ಸುಖ ಉಳ್ಳವರು ಆಗಬಹುದು, ಎಂಬುವ ಮಾತು ತಿಳಿಯಿತು. ಅರಿವಿನಿಂದ ಸರಿಯಾದ ಕಾರ್ಯ-

ವ್ಯವಹಾರ ಆಗುತ್ತದೆ. ಸರಿಯಾಗಿರುವುದರಲ್ಲಿ ನಾವು ಎಲ್ಲರು ಒಂದೇ ಆಗಿರುತ್ತೇವೆ, ಆದರೆ ತಪ್ಪಿನಲ್ಲಿ ನಾವು ಅನೇಕ. ನಾನು ತಪ್ಪು ಮಾಡಿದರೆ ನೀವು ಒಪ್ಪುವುದಿಲ್ಲ, ನೀವು ತಪ್ಪು ಮಾಡಿದರೆ ನಾನು ಒಪ್ಪುವುದಿಲ್ಲ.

ತಪ್ಪು, ನನಗೂ ತಪ್ಪೇ, ನಿಮಗೂ ತಪ್ಪೇ. ಸರಿಯಾಗಿದ್ದರೆ, ಅದರಲ್ಲಿ ನಾವು ಒಂದೇ, ಈ ಮಾತು ನನಗೆ ಅರಿವಾಯಿತು. ಅರಿವಿನಿಂದಲೇ ನಮ್ಮ ಕಲ್ಯಾಣ ಪ್ರಶಸ್ತವಾಗುತ್ತದೆ. ಅರಿವಿನಿಂದಲೇ ಸುಖಿ, ಸಮೃದ್ಧರಾಗುತ್ತೇವೆ. ಅರಿವಿದ್ದರೆ ವರ್ತಮಾನದಲ್ಲಿ ವ್ಯವಸ್ಥಿತವಾಗಿ ಬಾಳುತ್ತೇವೆ. ಅರಿವಿನಿಂದಲೇ ಸಹ-ಅಸ್ತಿತ್ವವನ್ನು ಪ್ರಮಾಣೀಕರಿಸುತ್ತವೇ. ಸುಕ್ಕಕ್ಕೆ ನಾಲಕ್ಕು ಹಂತಗಳಿವೆ - ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವದಲ್ಲಿ ಬಾಳುವುದು. ಈ ನಾಲಕ್ಕನ್ನು ನಾವು ಪ್ರಮಾಣೀಕರಿಸಿದರೆ ನಾವು ಸುಖಿಯಾಗುತ್ತೇವೆ. ಈ ನಾಲಕ್ಕು ವಸ್ತು ಸಿಗುವವರೆಗೆ ನಾವು ಪ್ರಯತ್ನ ಮಾಡುತ್ತಲೇ ಇರುತ್ತೇವೆ. ಈ ಪ್ರಯತ್ನದ ಕ್ರಮದಲ್ಲೇ ನಾವು ಹಲವಾರು ಜಪ-ತಪ, ಪೂಜೆ-ಪಾಠ, ಯೋಗ-ಯಜ್ಞವೆಲ್ಲಾ ಮಾಡಿದ್ದೇವೆ. ಹಲವಾರು ವಸ್ತುವನ್ನು ಶೇಖರಿಸಿದ್ದೇವೆ. ಆದರೆ ಇದರಿಂದ ಎಲ್ಲರಿಗೂ ಸುಖ ದೊರಕಲಿಲ್ಲ. ಎಲ್ಲರು ಸುಖಿಯಾಗಲು ಅರಿವುಳ್ಳವವರಾಗಬೇಕು. ಅರಿವು ಎಲ್ಲರಿಗೂ ತಲುಪಿಸಬಹುದು. ಅರಿವಾಗುವುದಕ್ಕಾಗಿ ಮೊದಲನೆಯ ಚರಣ, ಅಸ್ತಿತ್ವವನ್ನು ಅರಿತುಕೊಳ್ಳುವುದು. ಅಸ್ತಿತ್ವ ನಾಲಕ್ಕು ಅವಸ್ಥೆಗಳಲ್ಲಿವೆ. ಮೊದಲು ಪದಾರ್ಥಾವಸ್ಥೆ, ಇದರಲ್ಲಿ ಮಣ್ಣು, ಕಲ್ಲು , ಮಣಿ, ಧಾತು ಇತ್ಯಾದಿಗಳಿವೆ, ಇವೆಲ್ಲ ತಮ್ಮ ನಡತೆಯಲ್ಲಿ ಪ್ರಮಾಣಿತವಾಗಿವೆ. ಎರಡನೆಯದು ಪ್ರಾಣಾವಸ್ಥೆ, ಇದರಲ್ಲಿ ಎಲ್ಲಾ ಮರ-ಗಿಡ, ವನಸ್ಪತಿಗಳು, ಔಷಧಿಗಳಿವೆ, ಇವೆಲ್ಲವೂ ತಮ್ಮ ನಡತೆಯಲ್ಲಿ ಸ್ವಯಂ ಪ್ರಮಾಣಿತವಾಗಿವೆ. ಮೂರನೆಯದು ಜೀವಾವಸ್ಥೆ, ಇದರಲ್ಲಿ ಮಾನವನ್ನನ್ನು ಬಿಟ್ಟು ಎಲ್ಲಾ ಜೀವ, ಪಕ್ಷಿಗಳಿವೆ, ಇವೆಲ್ಲ ತಮ್ಮ ತ್ವ ಸಹಿತ ವ್ಯವಸ್ಥೆಯ ರೂಪದಲ್ಲಿ ಪ್ರಮಾಣಿತವಾಗಿವೆ. ನಾಲಕ್ಕನೆಯದು ಜ್ಞಾನಾವಸ್ಥೆ, ಇದರಲ್ಲಿ ಇರುವುದು ಮಾನವ ಮಾತ್ರ. ಮಾನವನು ಇನ್ನೂ ವ್ಯವ್ವಸ್ಥಿತನಾಗಬೇಕು. ಇದನ್ನು ಪರಿಗಣಿಸಿರಿ, ಸರ್ವೋಚ್ಚ ವಿಕಸಿತ ಅವಸ್ಥೆ ಎಲ್ಲರಗಿಂತಲೂ ಹಿಂದಿದೆ. ಇದರ ಅರ್ಥವೇನು? ದುಖಿಯಾಗದೆ ಇನ್ನೆನಾಗುವುದು?

ನಮ್ಮ ಚಾರಿತ್ರ್ಯ ವಿಕಸಿತ ಆಗುವ ಅವಶ್ಯಕತೆಯಿದೆ. ಪ್ರತಿಯೊಂದು ವಸ್ತು ತನ್ನ ವ್ಯವಸ್ಥೆಯನ್ನು ನಡತೆಯ ರೂಪದಲ್ಲಿ ಪ್ರಮಾಣೀಕರಿಸುತ್ತದೆ. ಮಾನವನೂ ತನ್ನ ನಡತೆಯ ಅನುಗುಣ ಪ್ರಮಾಣೀಕರಿಸುತ್ತಾನೆ. ಇದು ಒಂದು ಸೂತ್ರ ಸಿಗುತ್ತದೆ. ಈ ಸೂತ್ರವನ್ನು ನಾವೆಲ್ಲರೂ ಶೋಧಿಸಬಹುದು. ಶೋಧಿಸಲು ಹೋದರೆ, ನಮ್ಮಲ್ಲಿ ಅರಿತುಕೊಳ್ಳುವ ವಸ್ತು ಯಾವದು, ಎಂಬುವುದನ್ನು ನಾವು ಮೊದಲು ಅರಿತುಕೊಳ್ಳಬೇಕು. ಅರಿತುಕೊಂಡು ನಿರ್ವಹಿಸುವ, ನೆರವೇರಿಸುವ ವಸ್ತು ಯಾವುದು, ಎಂಬುವುದನ್ನು ಅರಿತುಕೊಳ್ಳಬೇಕು. ಅರಿವು ಆದ ನಂತರ ಏನನ್ನು ಪಡೆಯುತ್ತೇವೆ, ಎಂಬುದನ್ನು ಅರಿತುಕೊಳ್ಳಬೇಕು. ಮಾನವ ಇದನ್ನು ಸಾಧಿಸಬಹುದು. ಮಾನವ ಜ್ಞಾನಾವಸ್ಥೆಯಲ್ಲಿ ಗಣ್ಯನಾಗಿದ್ದಾನೆ. ಇದರ ಆಧಾರ ಏನು? ಮಾನವ ಯಾವುದನ್ನು ಅರಿವು ಎಂದು ತಿಳಿಯುತ್ತಾನೋ, ಅದರ ಅನುಗುಣ ಕೆಲಸವನ್ನು ಮಾಡುತ್ತಾನೆ ಹಾಗು ವ್ಯವಹರಿಸುತ್ತಾನೆ. ತಿಳಿವಳಿಕೆ ಇಲದ್ದಿದ್ದರು, ನಂಬಿಕೆ ಎಂಬುವುದು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇರುತ್ತದೆ. ನಂಬಿಕೆಯ ಆಧಾರದ ಮೇಲೆ, "ನಾನು ತಿಳಿದಿದ್ದೇನೆ'

ಎಂದು ಹೇಳುತ್ತೇವೆ. ಭರವಸೆಯಿಂದ ತಿಳಿದಿರುವುದಿಲ್ಲ, ನಂಬಿರುತ್ತೇವೆ, ಆದರೆ ಹೇಳುವಾಗ ತಿಳಿದಿದ್ದೇನೆ ಎಂದು ಹೇಳುತ್ತೇವೆ; ಇದು ನಮ್ಮಲ್ಲಿ ವ್ಯತಿರಿಕ್ತವೇ. ಭ್ರಮಿತ ಮಾನವನಲ್ಲಿ ಈ ವ್ಯತಿರಿಕ್ತತೆ ಇರುತ್ತದೆ. ೯೯% ವ್ಯಕ್ತಿಗಳು ಶರೀರವನ್ನೇ ಜೀವನ ಎಂದು ನಂಬಿರುತ್ತಾರೆ. ಇದರ ಫಲಸ್ವರೂಪವೇ ಹಲವಾರು ತೊಂದರೆಗಳು ಹುಟ್ಟಿವೆ ಮತ್ತು ತೊಂದರೆಗಳಿಂದ ತ್ರಸ್ತರಾಗಿ ತೊಂದರೆಗಳಿಂದ ಮುಕ್ತಿ ಪಡೆಯಲು ಇಷ್ಟಪಡುತ್ತೇವೆ. ಈ ಇಚ್ಛೆಯ ಅನುರೂಪವೇ ಈ ಜೀವನ ವಿದ್ಯೆ ಕಾರ್ಯಕ್ರಮವಿದೆ. ನಾಲಕ್ಕು ಅವಸ್ಥೆಗಳಲ್ಲಿ ಮಾನವನೊಬ್ಬನೇ ಅರಿವಿಲ್ಲದೆ, ಸಮಾಧಾನಿತ ಆಗದೆ ಸುಖ ಉಳ್ಳವವನಾಗಲು ಸಾಧ್ಯವಿಲ್ಲ. ಪದಾರ್ಥಾವಸ್ಥೆ ಪರಿಣಾಮಾನುಷಂಗಿ ವಿಧಿಯಿಂದ ನಿಯಂತ್ರಿತವಾಗಿರುತ್ತದೆ. ಪ್ರಾಣಾವಸ್ಥೆ ಬೀಜಾನುಷಂಗಿ ವಿಧಿಯಿಂದ ನಿಯಂತ್ರಿತವಾಗಿರುತ್ತದೆ. ಜೀವಾವಸ್ಥೆ, ವಂಶಾನುಷಂಗಿ ವಿಧಿಯಿಂದ ನಿಯಂತ್ರಿತವಾಗಿರುತ್ತದೆ. ನಿಯಂತ್ರಿತವಾಗಿರುವುದರ ಪ್ರಮಾಣ ಏನೆಂದರೆ, ಅದು ವ್ಯವಸ್ಥಿತವಾಗಿ ಇರುತ್ತದೆ. ನಿಶ್ಚಿತ ನಡತೆಯನ್ನು ಹೊಂದಿರುತ್ತದೆ. ಮಾನವನನ್ನು ಬಿಟ್ಟು ಅಸ್ತಿತ್ವದ ಪ್ರತಿಯೊಂದು ಘಟಕ ತನ್ನ ನಿಶ್ಚಿತ ನಡವಳಿಕೆ ಹೊಂದಿರುತ್ತದೆ. ಮಾನವನಲ್ಲಿಯು ನಿಶ್ಚಿತ ನಡತೆ ಇರುವುದು ಅಗತ್ಯವಾಗಿದೆ. ಮಾನವ ಸಂಸ್ಕಾರಾನುಷಂಗಿ ವಿಧಿಯಿಂದ ನಿಯಂತ್ರಿತವಾಗಬೇಕು. ಸಂಸ್ಕಾರ ಎಂದರೇನು? ಅರಿವು. ಅರಿವಿನ ಪ್ರಮಾಣವೇ ಮಾನವೀಯತೆ ಪೂರ್ಣ ನಡತೆ. ಮಾನವ ಅರಿವುಳ್ಳವವನಾದರೆ ವ್ಯವಸ್ಥೆಯಲ್ಲಿ ಬಾಳುತ್ತಾನೆ ಫಲಸ್ವರೂಪ ಅವನ ನಡತೆ ಮಾನವೀಯತೆ-ಪೂರ್ಣ ಆಗುತ್ತದೆ. ವ್ಯವಸ್ಥೆಯಲ್ಲಿ ಬಾಳಲು ಆಗದಿದ್ದರೆ ಅದಕ್ಕೆ ಅಮಾನವೀಯ ನಡತೆ ಎಂದು ಹೇಳಲಾಗುತ್ತದೆ. ಇವಾಗ ಮಾನವೀಯ ನಡತೆ ಹಾಗು ಅಮಾನವೀಯ ನಡತೆಯ ಪರಿಭಾಷೆ ತಿಳಿಯಬಹುದು. ಇದಾದನಂತರ ಇದರ ಅವಶ್ಯಕತೆ ಇದೆಯೋ, ಇಲ್ಲವೋ ಎಂಬುವುದು ತಿಳಿಯಬಹುದು. ಯಾವುದರ ಅವಶ್ಯಕತೆಯಿದೆಯೋ ಅದರ ಪ್ರತಿ ಮಾನವನಲ್ಲಿ ಸ್ವಾಭಾವಿಕವಾಗಿ ಪ್ರವೃತ್ತಿ ಇರುತ್ತದೆ. ಈ ರೀತಿ ಮಾನವ ಜಾಗೃತನಾಗಲು ದಾರಿ ತಯಾರಾಗಿದೆ. ಜೀವನ ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ; ಶರೀರ ರಚಿತವಾಗುತ್ತದೆ ಹಾಗು ವಿರಚಿತವಾಗುತ್ತದೆ. ಜೀವನ, ಜೀವನ ಸಹಜ ವಿಧಿಯಿಂದ ಮಾನವ ಶರೀರವನ್ನು ಚಲಿಸಲು ಬಯಸುತ್ತದೆ. ಜೀವನ ಸಹಜ ವಿಧಿ ಎಂದರೆ, ಸುಖಿಯಾಗುವ ಅರಿವು ಮತ್ತು ಕಾರ್ಯಕ್ರಮ. ಪ್ರಾಣಿಗಳು ಕೇವಲ ವಂಶಾನುಷಂಗಿವಿಧಿಯಿಂದ, ಬಾಳಲು ಆಶಿಸುತ್ತವೆ. ಆದರೆ ಮಾನವ ಸುಖಪೂರ್ವಕ ಬಾಳಲು ಬಯಸುತ್ತಾನೆ. ಮಾನವ ವಂಶಾನುಷಂಗಿ ವಿಧಿಯಿಂದ ಬಾಳಲು ಹೊರಟಾಗ ಪೀಡಿತನಾಗುತ್ತಾನೆ.

ಇದನ್ನು ಸ್ಪಷ್ಟವಾಗಿ ಅರಿತುಕೊಳ್ಳುವ ಅವಶ್ಯಕತೆಯಿದೆ, ಸ್ಪಷ್ಟ ರೀತಿಯಲ್ಲಿ ಪ್ರಮಾಣೀಕರಿಸುವ ಅವಶ್ಯಕತೆಯಿದೆ. ಅರಿವೇ ಪ್ರಮಾಣೀಕರಿಸುವ ವಸ್ತು. ನಾನು ಯಾವಾಗ ನಿಮ್ಮಿಂದ ಅರಿತುಕೊಂಡು ಮತ್ತವರಿಗೆ ಅರಿವು ಪಡಿಸುತ್ತೇನೋ ಆವಾಗಲೇ ನೀವು ಪ್ರಾಮಾಣಿಕರಾಗುತ್ತೀರಾ. ಈ ರೀತಿಯಲ್ಲಿ ಅರಿವು ಪರಂಪರೆಯ ರೂಪದಲ್ಲಿ ಪ್ರವಾಹಿತವಾಗುತ್ತದೆ. ತಿಳಿಗೇಡಿತನ ಪರಂಪರೆಯಲ್ಲಿ ಪ್ರವಾಹವಾಗುವುದಿಲ್ಲ. ಅರಿವಿನ ವಸ್ತುವಿನಲ್ಲಿ ವೈವಿಧ್ಯತೆ ಇರುವುದಿಲ್ಲ. ಪ್ರಸ್ತುತಿಯಲ್ಲಿ ವೈವಿಧ್ಯತೆ ಇರುತ್ತದೆ. ಆದ್ದರಿಂದ ಮುಂದಿನ ಪ್ರತಿಯೊಂದು ಪೀಳಿಗೆ ಇನ್ನೂ ಸುದೃಡವಾಗುತ್ತದೆ, ಪ್ರಖರವಾಗುತ್ತದೆ. ಸರಿಯಾಗಿರುವುದನ್ನು ಮಾಡುವ ಸಾರ್ಥಕತೆ ಇನ್ನೂ ಸುಲಭವಾಗುತ್ತದೆ. ಸರ್ವಮಾನವನಿಗೆ ಇದರ ಅವಶ್ಯಕತೆಯಿದೆ. ಆದ್ದರಿಂದ ಅರಿವು ಸಂಪನ್ನ ಮಾನವನೇ ಪರಂಪರೆಯನ್ನು

ಸರಿಯಾದ ರೀತಿಯಲ್ಲಿ ಮುಂದಿನ ಪೀಳಿಗೆಗೆ ಅರ್ಪಿಸಿ ಸ್ವಯಂ ಸಂತುಷ್ಟನಾಗಬಹುದು, ಮುಂದಿನ ಪೀಳಿಗೆ ಸಂತುಷ್ಟವಾಗಬಹುದು.

ಮಾನವ, ಸಂಸ್ಕಾರಾನುಷಂಗಿಕ ಘಟಕ. ಸಂಸ್ಕಾರವೇ ಅರಿವು, ಏಕೆಂದರೆ ತಪ್ಪು ಯಾರಿಗೂ ಸ್ವೀಕಾರವಾಗುವುದಿಲ್ಲ ಆದ್ದರಿಂದ ತಪ್ಪುಗಳು ಸಂಸ್ಕಾರ ಆಗಲು ಸಾಧ್ಯವಿಲ್ಲ. ತಪ್ಪನ್ನು ಯಾರು ಸ್ವೀಕರಿಸುವುದಿಲ್ಲ ಆದರೆ ಅದರಲ್ಲಿ ನಾವು ಸಿಕ್ಕಿಕೊಂಡಿರುತ್ತೇವೆ. ಯಾರೇ ಆಗಲಿ ಸಾವಿರ ತಪ್ಪನ್ನು ಮಾಡಿರಬಹುದು ಆದರೆ ಅವರಿಗೆ ಆ ತಪ್ಪುಗಳು ಸ್ವೀಕೃತವಾಗುವುದಿಲ್ಲ. ತಪ್ಪು ಯಾರಿಗೂ ಸ್ವೀಕೃತವಲ್ಲ, ಆದ್ದರಿಂದ ಅವುಗಳನ್ನು ಯಾರು ಮುಂದಿನ ಪೀಳಿಗೆಗೆ ಅರ್ಪಿಸುವುದೂ ಇಲ್ಲ, ಅತಃ ಅರಿವಿಲ್ಲದಿರುವುದರ (ತಪ್ಪಿನ) ಪರಂಪರೆಯಾಗುವುದಿಲ್ಲ. ಈ ಹಲವಾರು ಸಾಕ್ಷಿಗಳ ಸಹಿತ ಬರುವ ನಿರ್ಣಯ ಏನೆಂದರೆ, ಅರಿವೇ ಪರಂಪರೆಯ ಮೂಲ. ಅರಿವು ಆಗುವುದಕ್ಕಾಗಿ ಆಧಾರ ಮಾನವ ಚೇತನ ರೂಪದಲ್ಲಿರುವ  ಸಮಾನತೆ. ಸಮಾನತೆಯ ಆಧಾರ ಜೀವನ. ಜೀವನದಲ್ಲಿ ಸಂಘಟನೆ-ಪೂರ್ಣತೆ, ಅಕ್ಷಯ ಬಲ, ಅಕ್ಷಯ ಶಕ್ತಿಯೇ ಸಮಾನತೆಯ ಆಧಾರ. ನಾನು ಎಷ್ಟೇ ಆಸೆ, ವಿಚಾರ, ಇಚ್ಛೆ, ಸಂಕಲ್ಪ ಮಾಡುತ್ತೇನೋ, ನನ್ನಲಿ ಇನ್ನಷ್ಟು ಆಸೆ, ವಿಚಾರ, ಇಚ್ಛೆ, ಸಂಕಲ್ಪ ಮಾಡುವ ಶಕ್ತಿ ಇದ್ದೇ ಇರುತ್ತದೆ. ಈ ರೀತಿಯಲ್ಲಿ ಜೀವನದಲ್ಲಿ ಅಕ್ಷಯ ಬಲ ಮತ್ತು ಶಕ್ತಿ ಇರುವುದಕ್ಕಾಗಿ, ಜೀವನ ಪರಿಣಾಮಶೀಲತೆಯಿಂದ ಮುಕ್ತವಾಗಿರಲೇ ಬೇಕು, ಹೀಗಾಗಿ  ತರ್ಕ ವಿಧಿಯಿಂದ ಜೀವನದ ಸಂಘಟನೆ-ಪೂರ್ಣತೆಯನ್ನು ಸ್ವೀಕರಿಸಬಹುದು.

ನನಗೆ ಅರಿವಾಗಿದೆ, ಎಂಬುವುದನ್ನು ಹೇಗೆ ಪರೀಕ್ಷಿಸುವುದು? ಇದನ್ನು ವ್ಯವಹಾರದಲ್ಲಿ, ಕಾರ್ಯದಲ್ಲಿ, ವ್ಯವಸ್ಥೆಯಲ್ಲಿ ಪರೀಕ್ಷಿಸಬಹುದು. ನಾನು ವ್ಯವಹಾರ ಹಾಗು ಕಾರ್ಯದಲ್ಲಿ ಹಲವಾರು ಸಲ ಪರೀಕ್ಷಿಸಿ ನೋಡಿದ್ದೇನೆ, ವ್ಯವಸ್ಥೆಯ ರೂಪದಲ್ಲಿ ನಾನು ಸ್ವತಃ ಬಾಳುತ್ತೇನೆ. ಆದರೆ ಮಾನವ ಪರಂಪರೆಯಲ್ಲಿ ಸಮಗ್ರ ವ್ಯವಸ್ಥೆ ಇನ್ನೂ ಆಗಿಲ್ಲ. ವ್ಯವಸ್ಥೆಯಲ್ಲಿ ಬಾಳಿದ ನಂತರ ನನ್ನ ಅನುಭವಕ್ಕೆ (ಅಸ್ತಿತ್ವದಲ್ಲಿ ಯಾವ ವಸ್ತು ಹೇಗಿದೆಯೋ ಅದನ್ನು ಹಾಗೆ ಅರಿತುಕೊಳ್ಳುವುದಕ್ಕೆ ಹೆಸರು ಅನುಭವ) ಪುನಃ ಪ್ರಮಾಣ ಸಿಕ್ಕಿತು. ನನ್ನ ಅನುಭವ ದೃಢವಾಗುತ್ತಲೇ ಇರುತ್ತದೆ. ಇದೇ ಅನುಭವ ಮೂಲಕ ವಿಧಿಯಿಂದ ಬಾಳುವುದು. ಆದ್ದರಿಂದ ಮಾನವ ಅರಿವಿನಿಂದ, ಅನುಭವ ಮೂಲಕ ವಿಧಿಯಿಂದ ವ್ಯವಸ್ಥೆಯಲ್ಲಿ ಬಾಳುತ್ತಾನೆಂಬುವ ನಿಷ್ಕರ್ಷ ಬಂದಿತು. ಈ ನಿಷ್ಕರ್ಶಕ್ಕೆ ಬಂದ ಮಾನವ ಅರಿವಿನಿಂದ ಅನುಭವಮೂಲಕ ವಿಧಿಯಿಂದ ವ್ಯವಸ್ಥೆಯಲ್ಲಿ ಬಾಳುತ್ತಾನೆ. ಜೀವಾವಸ್ಥೆ ವಂಶಾನುಷಂಗಿ ವಿಧಿಯಿಂದ ಪ್ರಾಣಾವಸ್ಥೆ ಬೀಜಾನುಷಂಗಿ ವಿಧಿಯಿಂದ ಮತ್ತು ಪದಾರ್ಥಾವಸ್ಥೆ ಪರಿಣಾಮಾನುಷಂಗಿ ವಿಧಿಯಿಂದ, ವ್ಯವಸ್ಥೆಯಲ್ಲಿರುತ್ತದೆ.

ಅರಿವು ನಿಶ್ಚಿತವೆಂಬುವ ಬಿಂದುವಿಗೆ ಬಂದು ಸೇರಿದ್ದೇವೆ. ಅರಿವಿನ ಧಾರಕ ವಾಹಕ ನಿಶ್ಚಿತ, ಹಾಗಾಗಿ ಅರಿವಿನ ಪ್ರಮಾಣ ನಿಶ್ಚಿತವಾಗಿದೆ. ಅರಿವುಳ್ಳುವ ವಸ್ತು ಜೀವನವೇ. ಅರಿತುಕೊಳ್ಳುವುದು ಜೀವನವೇ, ಅರಿವಿನ ಪ್ರಮಾಣ ಮಾನವ ಪರಂಪರೆಯಲ್ಲೇ ಸಿಗುತ್ತದೆ, ಏಕೆಂದರೆ ಮಾನವ ಶರೀರದಲ್ಲೇ ಪೂರ್ಣ ಮಸ್ತಿಷ್ಕದ ರಚನೆ ಕಂಡುಬರುತ್ತದೆ, ಬೇರೆ ಯಾವ ಪರಂಪರೆಯಲ್ಲಿಯೂ (ಜೀವ) ಅರಿವಿನ ಪ್ರಮಾಣ ಸಿಗುವುದಿಲ್ಲ. ಸಹ-ಅಸ್ತಿತ್ವದಲ್ಲಿ

ಪೂರಕತೆ, ಉದಾತ್ತೀಕರಣ, ವಿಕಾಸ ಕ್ರಮ, ವಿಕಾಸ ಮತ್ತು ಜಾಗೃತಿ, ಇವೆಲ್ಲಾ ವಸ್ತು ಸೇರಿದೆ. ಈ ಎಲ್ಲಾ ಬಿಂದುಗಳನ್ನು ಅರಿತುಕೊಳ್ಳುವ ವಿಧಿ ಮಾನವನಲ್ಲೇ ಇದೆ, ಕ್ಷಮತೆಯೂ ಮಾನವನಲ್ಲೇ ಇದೆ.

ಅಸ್ತಿತ್ವವನ್ನು ಅರಿತುಕೊಳ್ಳಲು ಇರುವ ಮೂಲ ಬಿಂದು, ಅಸ್ತಿತ್ವವು ಸತ್ತ್ವದಲ್ಲಿ ಸಂಪೃಕ್ತ ಪ್ರಕೃತಿಯ ರೂಪದಲ್ಲಿದೆ. ಇದು ಒಂದು ಇನ್ನೊಂದರಲ್ಲಿ ತೋಯ್ದು ಮತ್ತು ಸದಾ-ಸದಾ ಅವಿಭಾಜ್ಯವಾಗಿರುತ್ತದೆ, ನಿರಂತರ ವಿದ್ಯಮಾನ, ವರ್ತಮಾನವಾಗಿರುತ್ತದೆ. ಪ್ರಕೃತಿಯನ್ನು ವ್ಯಾಪಕ ವಸ್ತುವಿನಿಂದ ಬೇರೆ ಮಾಡುವ ಯಾವ ವಿಧಿಯೂ ಇಲ್ಲ, ಬೇರೆ ಮಾಡಲು ಯಾವ ಪ್ರಯೋಜನವೂ ಇಲ್ಲ, ಬೇರೆಯಾಗಲು ಸಾಧ್ಯವಿಲ್ಲ. ಈ ರೀತಿಯಲ್ಲಿ ಅಸ್ತಿತ್ವದಲ್ಲಿ ಏನಿಲ್ಲವೋ ಅದರ ಕಲ್ಪನೆ ಮಾಡಿ ಏನು ಪ್ರಯೋಜನವಿಲ್ಲ. ಅಸ್ತಿತ್ವದಲ್ಲೇನಿದೆಯೋ ಅದನ್ನು ಅರಿತುಕೊಳ್ಳಬೇಕು ಹಾಗು ಪ್ರಮಾಣೀಕರಿಸಬೇಕು. ಅಸ್ತಿತ್ವವೇ ನಾಲ್ಕು ಅವಸ್ಥೆಯಲ್ಲಿ ವ್ಯಕ್ತವಾಗಿದೆ.

ಅರಿವನ್ನು ನಾವು ಪ್ರಮಾಣೀಕರಿಸಲಾಗದಿದ್ದರೆ ನಾವು ಪರಿವಾರ ವ್ಯವಸ್ಥೆಯಲ್ಲಾಗಲಿ, ಸಮಾಜ ವ್ಯವಸ್ಥೆಯಲ್ಲಾಗಲಿ ಬಾಳಲಾಗುವುದಿಲ್ಲ. ಎಲ್ಲಾ ಸ್ಥಾನದಲ್ಲಿಯೂ ನಾವು ಕಷ್ಟಪಡುತ್ತೇವೆ. ಏಳುನೂರು ಕೋಟಿ ಮಾನವ ಈ ಧರಣಿಯ ಮೇಲೆ ಇರುವಂತಾಯಿತು ಆದರೆ ನಾವು ವ್ಯವಸ್ಥೆಯಲ್ಲಿ ಬಾಳುವುದು ಇನ್ನೂ ಆಗಲಿಲ್ಲ. ಸಂಖ್ಯೆ ಹೆಚ್ಚು ಕಡಿಮೆಯಾಗುವುದರಿಂದ ಮಾನವ ಅರಿತುಕೊಳ್ಳಬಹುದು ಎಂಬುವ ಮಾತು ಇಲ್ಲ. ಮಾನವ ಪರಂಪರೆಯಲ್ಲಿ ಪ್ರಯೋಜನವೇನುಃ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ ಸಹಜ ಪ್ರಮಾಣ. ಸಹ-ಅಸ್ತಿತ್ವ ವಿಧಿಯಿಂದ ನಾವು ಪೂರಕ ವಿಧಿಯಿಂದ ಬಾಳಬಹುದು. ಅಭಯ ವಿಧಿಯಿಂದ ವರ್ತಮಾನ ಕಾಲದಲ್ಲಿ ವಿಶ್ವಾಸ ಇಡುತ್ತೇವೆ, ಸಮೃದ್ಧಿವಿದ್ಧಿಯಿಂದ ನಾವು ಪರಿವಾರದ ಆವಷ್ಯಕತೆಗಿಂತ ಅಧಿಕ ಉತ್ಪಾದನೆ ಮಾಡಬಹುದು. ಸಮಾಧಾನದಿಂದಲೇ ನ್ಯಾಯ ಸಹಿತ ಬಾಳಬಹುದು.

ಮಾನವ ಪರಂಪರೆಯಲ್ಲಿ ಇಂದಿನವರೆಗೂ ನಡೆದಿರುವ ಆದರ್ಶವಾದಿ ವಿಧಿ ಮತ್ತು ಭೌತಿಕವಾದಿ ವಿಧಿಯ ಪ್ರಯತ್ನದಿಂದ ಅರಿವನ್ನು ಪಡೆಯಲಿಲ್ಲ. ಇದಕ್ಕೆ ಮೂಲ ಕಾರಣವೇನೆಂದರೆ, ಅಸ್ತಿತ್ವ ಸಹ-ಅಸ್ತಿತ್ವ ರೂಪದಲ್ಲಿದೆಯೆಂದು ಅರಿವಾಗಲಿಲ್ಲ. ಸಹ ಅಸ್ತಿತ್ವದಲ್ಲಿ ಜೀವನ ಹಾಗು ಜೀವನ ಜಾಗೃತಿಯನ್ನು ಅರಿತುಕೊಳ್ಳುವುದರಲ್ಲಿ ಎಲ್ಲೋ ತಪ್ಪಾಗಿದೆ ಫಲಸ್ವರೂಪ ಜೀವನ ಹಾಗು ಅರಿವಿನ ಪರಂಪರೆಯಾಗಲಿಲ್ಲ. ಪರಂಪರೆಯೇ ಆಗದಿದ್ದಾಗ ವ್ಯವಸ್ಥೆಯಲ್ಲಿ ಬಾಳುವುದು ಹೇಗೆ ಬರುತ್ತದೆ. ಅರಿವಿನ ಅಭಾವದಲ್ಲಿ ಮಾನವ, ಮಾನವನ ಸಹಿತ ನ್ಯಾಯದೊಂದಿಗೆ ಮತ್ತು ಪ್ರಕೃತಿ (ಜೀವ, ವನಸ್ಪತಿ, ಪದಾರ್ಥದ) ಸಹಿತ ನಿಯಮದೊಂದಿಗೆ, ಸಮತೋಲನ ರೂಪದಲ್ಲಿ ಬಾಳುವುದಾಗಲಿಲ್ಲ. ಇದರ ಕಾರಣ ಅನುಪಮ ನೈಸರ್ಗಿಕತೆಯನ್ನು ನಾಶಗೊಳಿಸುತ್ತಾ ಬಂದಿದ್ದಾನೆ.

ಮಾನವನಿಗೆ ನ್ಯಾಯ ಸಿಗಲಿಲ್ಲ. ದೊಡ್ಡ-ದೊಡ್ಡ ನ್ಯಾಯಾಲಯದ ನ್ಯಾಯಾಧೀಶರನ್ನು ಕೇಳಿದರೆ ಅವರು ಹೇಳಿದರು, ನಾವು ತೀರ್ಪು ನೀಡುತ್ತೇವೆ, ನ್ಯಾಯ ಮಾಡುವುದಿಲ್ಲವೆಂದು. ನ್ಯಾಯಾಲಯಗಳು, ನ್ಯಾಯವೆಂದರೇನೆಂದು ತಿಳಿಯದಿರುವ ಸ್ಥಿತಿಯಲ್ಲಿರುವಾಗ, ಅದನ್ನು ನ್ಯಾಯಾಲಯವೆಂದು ಕರೆಯುವುದು ಎಷ್ಟು

ಸತ್ಯ ಮತ್ತು ಈ ನ್ಯಾಯಾಲಯಗಳಲ್ಲಿರಬೇಕಾದ ಸತ್ಯವೆಲ್ಲಿ ಹೇಳಿರಿ. ನ್ಯಾಯಾಲಯದಲ್ಲಿ ಎಷ್ಟು ಸತ್ಯವಿದೆ, ಏನು ಸತ್ಯವಿದೆ ಎನ್ನುವುದನ್ನು ಎಲ್ಲಿ ಹುಡುಕುವುದು. ಈ ರೀತಿಯಲ್ಲಿ ಕಾರ್ಯಾಲಯದಲ್ಲಾಗುವ ಕಾರ್ಯ ವೇನು? ತಪ್ಪನ್ನು ಹುಡುಕುವುದು, ಅಪರಾಧವನ್ನು ಹುಡುಕುವುದು ಮತ್ತು ಅವನ್ನು ತಪ್ಪಿನಿಂದ, ಅಪರಾಧದಿಂದ ತಡೆಯುವುದು. ಇದೇ ಕೆಲಸಕ್ಕಾಗಿ ಎಲ್ಲಾ ಸರಕಾರಿ ತಂತ್ರದಲ್ಲಿ ಸಿಬ್ಬಂಧಿಯರು ನಿಯೋಜಿತರಾಗಿರುತ್ತಾರೆ.

ಮಾನವ ಜಾಗೃತನಾಗಲು ಮೂಲ ವಸ್ತು 'ಅರಿವು". ಮಾನವನಿಗೆ ಅರಿವಾದರೆ ಮಾನವ ನ್ಯಾಯ ಸಹಿತ ಬಾಳಬಹುದು. ನ್ಯಾಯದೊಂದಿಗೆ ಬಾಳುವುದರಿಂದ ಸಮೃದ್ಧಿ, ಅಭಯ ಮತ್ತು ಸಹ-ಅಸ್ತಿತ್ವ  ತಾನಾಗೆ ಬರುತ್ತದೆ. ನ್ಯಾಯದಲ್ಲಿ ಬಾಳದೆಯಿದ್ದರೆ ಇದು ಯಾವುದು ಸಿಗುವುದಿಲ್ಲ. ಇದರಿಂದ ತಿಳಿಯುವುದೇನೆಂದರೆ ಮಾನವೀಯತೆಯ ಬೆನ್ನೆಲುಬೇ ನ್ಯಾಯ. ನ್ಯಾಯ ಸರ್ವಪ್ರಥಮ ಪರಿವಾರದಲ್ಲಿ ಪ್ರಮಾಣಿತವಾಗುತ್ತದೆ, ನಂತರ ಸಮಾಜದಲ್ಲಿ ಮತ್ತು ಸಮಸ್ತ ಧರಣಿಯ ಮೇಲೆ ಸಾರ್ವಭೌಮ ವ್ಯವಸ್ಥೆಯ ರೂಪದಲ್ಲಿ ಪ್ರಮಾಣಿತವಾಗುತ್ತದೆ. ನ್ಯಾಯದಲ್ಲಿ ಬಾಳುತ್ತಾ ಮಾನವ ತೃಪ್ತನಾಗುತ್ತಾನೆ, ಸುಖವುಳ್ಳವನಾಗಿರುತ್ತಾನೆ, ಸಮಾಧಾನಿತನಾಗುತ್ತಾನೆ. ವರ್ತಮಾನದಲ್ಲಿ ವಿಶ್ವಾಸ ಸುದೃಢವಾಗುತ್ತಾ ಬರುತ್ತದೆ ಮತ್ತು ನಮ್ಮ ವ್ಯವಹಾರದಲ್ಲಿ ನಿರಂತರ ಪ್ರಖರತೆ, ಪ್ರಜ್ವಲತೆ ಬರುತ್ತದೆ. ಇವೆಲ್ಲಾ ನ್ಯಾಯದೊಂದಿಗೆ ಬಾಳುತ್ತಾ ಅನಾಯಸ ಲಬ್ಧವಾಗುತ್ತದೆ. ಇವೆಲ್ಲಾ ಬಹಳ ಪುಣ್ಯದಿಂದ ಸಿಗುತ್ತದೆಂದು ಹೇಳುತ್ತಾರೆ. ಆದರೆ, ಅರಿವಾಗುವುದೇ ಪುಣ್ಯವೆಂದು ನನಗೆ ತಿಳಿಯಿತು. ಮಾನವ ಅರಿವುಳ್ಳವನಾಗುವ ಪರಂಪರೆಯಲ್ಲಿ ತನ್ನ ಯೋಗ್ಯತೆ, ಕ್ಷಮತೆ, ಪಾತ್ರತೆಯನ್ನು, ತಾನಾಗೆ ಪ್ರಮಾಣೀಕರಿಸಲು ಆರಂಭಿಸುತ್ತಾನೆ. ಕ್ಷಮತೆಯೆಂದರೆ ವಹಿಸುವ ಕ್ರಿಯೆ. ಏನನ್ನು ವಹಿಸುತ್ತಾನೆ?  ಜಾಗೃತಿಯನ್ನು ಅಥವಾ ಭ್ರಮೆಯನ್ನು. ಮಾನವ ಜಾಗೃತನಾದಾಗ ಭ್ರಮೆ ತಾನಾಗೆ ಬಿಟ್ಟು ಹೋಗುತ್ತದೆ. ಮಾನವ ಸಂಸ್ಕಾರಾನುಷಂಗಿಯ ಘಟಕ. ಅರಿವು ಅಥವಾ ಭ್ರಮೆ ಪರಂಪರೆಯಿಂದಲೇ ಬರುತ್ತದೆ. ಮಾನವ ಸಂತಾನದಲ್ಲಿ ಅದರ ಪರಂಪರೆ ಜನ್ಮದಿಂದಲೇ ವಿದ್ಯಮಾನವಾಗುವ ಕಾರಣ, ಆ ಗುಣಗಳು ಅವನಲ್ಲಿ ಪ್ರಚಲಿತ ಪ್ರೇಷಿತವಾಗುತ್ತದೆ. ಇದಾದನಂತರ ಬರುವುದು ಪುರುಷಾರ್ಥ ಮತ್ತು ಪರಮಾರ್ಥ. ಪುರುಷಾರ್ಥ, ಪರಮಾರ್ಥದ ಆಧಾರದ ಮೇಲೆ ಮಾನವ ಅರಿವು ಪಡೆದು ಭ್ರಮೆಯಿಂದ ಮುಕ್ತನಾಗುತ್ತಾನೆ. ಭ್ರಮೆಯಿಂದ ಮುಕ್ತಿಯ ತಾತ್ಪರ್ಯ, ಜೀವನ ಜಾಗೃತಿಯಿಂದ ಬಾಳುವ ಕ್ರಿಯಾಕಲಾಪ. ಇಂದಿನವರಗೆ ನಮಗೆ ದೊರಕಿರುವ ಶಿಕ್ಷಣ ಶರೀರ ಸಾಪೇಕ್ಷ ಬಾಳುವುದಕ್ಕಾಗಿ, ಇದಕ್ಕೆ ಸಾಕ್ಷಿ ಲಾಭೋನ್ಮಾದ, ಕಾಮೋನ್ಮಾದ, ಭೋಗೊನ್ಮಾದಕ್ಕಾಗಿ ಶಿಕ್ಷಣ ನೀಡುವುದು. ಆದರೆ ಮಾನವ, ಜೀವಿಗಳಿಂದ ಪಶುಗಳಿಂದ ಬಿನ್ನ, ಬಿನ್ನ ಪ್ರಕಾರದ ಪ್ರವೃತ್ತಿವುಳ್ಳವನು. ಜೀವನದ ಕಾರಣ ಮಾನವನಲ್ಲಿ ಬಹುಮುಖಿ ಅಭಿವ್ಯಕ್ತಿಯಿದೆ. ಮಾನವ ಸಮಾಧಾನ ಬಯಸುತ್ತಾನೆ, ಯಾವ ಜೀವಿಯೂ ಸಮಾಧಾನವನ್ನು ಬಯಸುವುದಿಲ್ಲ. ಮಾನವ ಸಮೃದ್ಧಿಯನ್ನು ಬಯಸುತ್ತಾನೆ, ಯಾವುದೇ ಪಶು ಅಥವಾ ಪಕ್ಷಿಯು ಸಮೃದ್ಧಿಯನ್ನು ಬಯಸುವುದಿಲ್ಲ. ಯಾವುದೇ ಪ್ರಾಣಿಯಲ್ಲಿ, ಸಿಂಹ, ಹಸು, ಹಾವು, ಹಂದಿ, ಇತರ ಪ್ರಾಣಿಯಲ್ಲಿ, ಸಂಗ್ರಹ ಪ್ರವೃತ್ತಿಯೂ ಇಲ್ಲ.  ಇರುವೆ ಸಂಗ್ರಹ ಪ್ರವೃತ್ತಿಯಿಂದ ಸಂಗ್ರಹಿಸುವುದಿಲ್ಲ. ಸಿಗುವ ಪದಾರ್ಥಗಳನ್ನು ಕೂಡಿಹಾಕುತ್ತದೆ. ಮಾನವನಲ್ಲಿ ತಿಳಿದ್ದಿದ್ದೂ ಸೌಕರ್ಯಗಳ ಸಂಗ್ರಹ ಪ್ರವೃತ್ತಿ ಇರುತ್ತದೆ, ಇದರ ಕಾರಣ ಭೋಗ ಅತಿಭೋಗದ ವ್ಯಸನ. ಇದರಿಂದ ಸಮಾಧಾನ

ಮತ್ತು ವ್ಯವಸ್ಥೆ ಲಕ್ಷ್ಯವಾಗದೆ ಸಂಗ್ರಹ ಸೌಕರ್ಯ ನಮ್ಮ ಲಕ್ಷ್ಯವಾಯಿತು ಮತ್ತು ಇದಕ್ಕಾಗಿ ಪ್ರಿಯ, ಹಿತ, ಲಾಭದ ದೃಷ್ಟಿಕೋಣವಿದ್ದು ಮತ್ತು ಇದರ ಫಲವಾಗಿ ನಾವು ದುಃಖಿತವಾಗಿ, ಸಂಘರ್ಷಮಾಡುತ್ತಾ, ಪೀಡಿತವಾಗುತ್ತಾ ಬಂದಿದ್ದೇವೆ.

ಈ ಆಪತ್ತಿಯಿಂದ ಬಿಡುಗಡೆ ಪಡೆಯಲು ಒಂದೇ ಉಪಾಯ ಜೀವನ ಮತ್ತು ಸಹ-ಅಸ್ತಿತ್ವವನ್ನು ಅರಿತುಕೊಳ್ಳುವುದು ಮತ್ತು ಮಾನವೀಯತೆಪೂರ್ಣ ನಡವಳಿಕೆಯನ್ನು ಅರಿತುಕೊಳ್ಳುವುದು. ಮಾನವನೇ ಅಸ್ತಿತ್ವದಲ್ಲಿ ಅತ್ಯಂತ ವಿಕಾಸವುಳ್ಳ ಘಟಕ, ಶರೀರದ ರೂಪದಲ್ಲಿ ಮತ್ತು ಜೀವನದ ರೂಪದಲ್ಲಿ. ಶರೀರದ ಮೂಲಕ ಜೀವನದ ಅಸ್ತಿತ್ವ ಮತ್ತು ಜಾಗೃತಿ ಪ್ರಮಾಣಿತವಾಗುತ್ತದೆ. ಪ್ರಯೋಗದ ಸಮಯದಲ್ಲಿ ಜೀವನ ಶರೀರವನ್ನು ಜೀವಂತವಾಗಿ ಇಡುತ್ತದೆ ನಂತರ ಶರೀರವನ್ನೇ ಜೀವನವೆಂದು ನಂಬಿರುತ್ತದೆ ಫಲವಾಗಿ ಭ್ರಮಿತವಾಗುತ್ತದೆ ಮತ್ತು ಪ್ರಮಾಣಿಸಲು ಪುನಃ ಶರೀರವನ್ನು ಸಂಚಾಲಿತ ಮಾಡುತ್ತದೆ. ಈ ರೀತಿಯಲ್ಲಿ ಹಲವು ಬಾರಿ ಶರೀರವನ್ನು ಬಿಡುವ ತೊಂದರೆ ಇದ್ದೇ ಇರುತ್ತದೆ. ಇದರಲ್ಲಿ ಪಾಪ ಪುಣ್ಯವೆಂಬುವದೇನು ಇಲ್ಲ. ಅರಿವು ಅಥವಾ ಅರಿವಿಲ್ಲದಿರುವುದು, ಇವೆರಡೇ ಸಾಧ್ಯ. ಅರಿವು ಪರಂಪರೆಯಿಂದಲೇ ಬರುತ್ತದೆ. ಅರಿವನ್ನು ಪರಂಪರೆಯಲ್ಲಿಯೇ ಪಡೆಯಬೇಕು. ಯಾರೋ ಒಬ್ಬ ವ್ಯಕ್ತಿಗೆ ಅರಿವು ಆಗಿ, ಅವರು ಇಡೀ ಪ್ರಪಂಚವನ್ನೇ ಉದ್ಧಾರ ಮಾಡುತ್ತಾರೆ, ಎಂಬುವುದು ಸಾಧ್ಯವಿಲ್ಲ. ಈ ರೀತಿಯ ಕಲ್ಪನೆಯೇ ನಮ್ಮನ್ನು ಭಯತುಂಬಿ ಹಾಗು ಅಶಕ್ತ ಮಾಡಿದೆ. ಮಾನವೀಯತೆಪೂರ್ಣ ನಡತೆಯಲ್ಲಿ ಪ್ರತಿಯೊಬ್ಬ ಮಾನವ ತನ್ನಲ್ಲಿಯೇ ಸ್ವಧನ, ಸ್ವನಾರಿ / ಸ್ವಪುರುಷ, ದಯೆಪೂರ್ಣ ಕಾರ್ಯ ವ್ಯವಹಾರದ ರೂಪದಲ್ಲಿ ಬಾಳಬಹುದು. ಈ ರೀತಿ ಬಾಳುವುದರಲ್ಲಿ ನಮ್ಮ ತನ, ಮನ, ಧನದ ಸದುಪಯೋಗ ಮಾಡಬಹುದು ಹಾಗೂ ಸುರಕ್ಷಿತಗೊಳಿಸಬಹುದು. ಇವೆರಡೂ ಇರುವ ಸ್ಥಿತಿಯಲ್ಲಿ ಸಂಬಂಧ, ಮೌಲ್ಯ, ಮೌಲೀಕರಣೆ, ಉಭಯ ತೃಪ್ತಿಯು ತಾನಾಗಿಯೇ ಪ್ರಮಾಣಿತವಾಗುತ್ತದೆ. ಈ ರೀತಿಯಲ್ಲಿ ಮೌಲ್ಯ, ಚಾರಿತ್ರ್ಯ, ನೈತಿಕತೆಯ ಸಂಯುಕ್ತ ರೂಪದಲ್ಲಿ ಮಾನವನ ನಡವಳಿಕೆ ವ್ಯಾಖ್ಯಾಯಿತವಾಗುತ್ತದೆ. ಸಂಬಂಧಗಳನ್ನು ಗುರುತಿಸುವ ವಿಧಿಯಿಂದಲೇ ಮೌಲ್ಯಗಳ ನಿರ್ವಹಣೆ ಆಗುತ್ತದೆ. ಉದಾಹರೆಣೆಗೆ, ಯಾವುದೇ ವ್ಯಕ್ತಿ ತನ್ನ ತಂದೆಯೊಡನೆ ಸಂಬಂಧವನ್ನು, ತಾಯಿಯೊಡನೆ ಸಂಬಂಧವನ್ನು, ಗುರು ಸಂಬಂಧವನ್ನು ಗುರುತಿಸಿದರೆ, ಮೌಲ್ಯ (ಭಾವ) ತಾನಾಗೆ ಹರಿಯುತ್ತದೆ, ಮೌಲ್ಯಗಳನ್ನು ನಿರ್ವಹಿಸಬಹುದು. ಎಲ್ಲಿ ಸಂಬಂಧವನ್ನು ಗುರುತಿಸಲಾಗದೋ ಅಲ್ಲಿ ಯಾವುದೇ ಮೌಲ್ಯದ ನಿರ್ವಹಣೆಯಾಗುವುದಿಲ್ಲ. ಉದಾಹರೆಣೆಗೆ, ರೈಲಿನ ಡಬ್ಬಿಯಲ್ಲಿ ಒಬ್ಬ ವ್ಯಕ್ತಿ ಕುಳಿತ್ತಿದ್ದರೆ, ಎದುರಿಗೆ ಒಬ್ಬ ಅಪರಿಚಿತ ವ್ಯಕ್ತಿ ಬಂದರೆ, ಈ ವ್ಯಕ್ತಿಯು ಕೈ, ಕಾಲು ತಾನಾಗಿಯೇ ಚಾಚಿ, ಇಲ್ಲಿ ಯಾರು ಕುಳಿತುಕೊಳ್ಳಬಾರದೆಂಬುವ ಇಚ್ಛೆಯಾಗುತ್ತದೆ. ಆದರೆ, ಸ್ವಲ್ಪ ಸಮಯದ ನಂತರ ಪರಿಚಿತ ವ್ಯಕ್ತಿ ಬಂದರೆ ತಾನಾಗಿಯೇ ನಿಂತು, ಅವರನ್ನು ಕುಳಿತುಕೊಳ್ಳಲು ಜಾಗ ಮಾಡಿಕೊಡುತ್ತಾರೆ. ಹೀಗೇ ಸಂಬಂಧಗಳನ್ನು ಗುರುತಿಸುವುದು ಒಂದು ದೊಡ್ಡ ಕೆಲಸ. ಸಂಬಂಧಗಳ ಬಗ್ಗೆ ಅಧ್ಯಯನ ಪ್ರಯೋಜನೆಯ ಆಧಾರದ ಮೇಲೆ ಆಗುತ್ತದೆ. ತಾಯಿಯ ಸಂಬಂಧ ಪೋಷಣೆ ಪ್ರಧಾನ ರೂಪದಲ್ಲಿರುವ ಪ್ರಯೋಜನದ ಆಧಾರದ ಮೇಲೆ, ತಂದೆಯ ಸಂಬಂಧ ಸಂರಕ್ಷಣೆ ಪ್ರಧಾನ

ರೂಪದಲ್ಲಿರುವ ಪ್ರಯೋಜನೆಯ ಆಧಾರದ ಮೇಲೆ ಅಧ್ಯಯನ ಮಾಡಲಾಗುತ್ತದೆ. ಈ ಎಲ್ಲಾ ಸಂಬಂಧಗಳು ಗುರುತಿಸಲಾದರೆ, ಮಾನವ ತಪ್ಪು ಮಾಡುವುದಿಲ್ಲ. ಸಂಬಂಧದ ಗುರುತಿಲ್ಲದೆ ತಪ್ಪು ಮಾಡುವುದು ಸ್ವಾಭಾವಿಕ.

ವರ್ತಮಾನ ರಾಜಕೀಯ ತಂತ್ರ, ಧರ್ಮ ತಂತ್ರವನ್ನು ನೋಡಿದರೆ ಇವೆಲ್ಲವೂ ಅಪರಾಧಿಗಳಿಗೆ ಮಾಡಲಾಗಿದೆಯೆಂದು ತಿಳಿದುಬರುತ್ತದೆ. ಇವು ಅಪರಾಧಿಗಳನ್ನು ಉದ್ಧಾರ ಮಾಡಲು ತಮ್ಮ ತಮ್ಮ ರೀತಿಯಲ್ಲಿ ಪ್ರಯಾಸಮಾಡುತ್ತಿದ್ದಾರೆ. ಇವೆಲ್ಲಾ ತಂತ್ರಗಳು ಮಾನವನಿಗೆ ಅರಿವು ನೀಡಲಾಗಲಿಲ್ಲ. ಪ್ರತಿಯೊಬ್ಬ ಮಾನವ ಅರಿವುಳ್ಳವವನಾಗಲು ಬಯಸುತ್ತಾನೆ. ಪ್ರಾಮಾಣಿತನಾಗಲು ಬಯಸುತ್ತಾನೆ. ಪ್ರಾಮಾಣಿಕನಾಗುವ ದಾರಿ ತೋರಿಸಲು ಸಾಧ್ಯವಾಗಿಲ್ಲ. ಪ್ರತಿಯೊಬ್ಬ ಮಾನವ ಜವಾಬ್ದಾರಿವುಳ್ಳವವನಾಗಲು ಬಯಸುತ್ತಾನೆ. ಜವಾಬ್ದಾರಿಯ ಪ್ರಯೋಜನೆ ಪರಂಪರೆ ನೀಡಲಿಲ್ಲ. ಎಲ್ಲರೂ, ಶುಭವಾಗಲೆಂದೇ ಬಯಸುತ್ತಾರೆ, ಎಲ್ಲರಿಗೂ ಶುಭವಾಗಲಿ, ಎಲ್ಲರಿಗೂ ಕುಟುಂಬವಿರಲಿ, ಎಲ್ಲರಿಗೆ ಮಂಗಳವಾಗಲಿ, ಈ ರೀತಿಯ ಮಾತನ್ನು ಎಲ್ಲಾರೂ ಪದೇ ಪದೇ ಹೇಳಿದ್ದಾರೆ. ಆದರೆ ಹೇಳಿದಮಾತ್ರಕ್ಕೆ ದಾರಿ ಸಿಗುವುದಿಲ್ಲ. ಯಾವ ಪುಸ್ತಕದಲ್ಲಿ, ಎಲ್ಲರಿಗೂ ಶುಭವಾಗಲಿಯೆಂದು ಬರದಿರುತ್ತದೆಯೋ, ಅದರಲ್ಲೇ, ಪ್ರಪಂಚವೆಲ್ಲಾ ಸುಳ್ಳು ಹಾಗು ಈಶ್ವರನೇ ನಿಜವಾದ ತಾಯಿ ತಂದೆ, ಅವನ ಚರಣಕ್ಕೆ ಸೇರಬೇಕೆಂದು ಬರದಿರುತ್ತದೆ. ಇದರಿಂದ ಕಲ್ಯಾಣವಾಗಲಿಲ್ಲ. ನಿಜವಾದ ತಾಯಿ-ತಂದೆಯ ಹತ್ತಿರ ಹೋದನಂತರ ಮಾನವನೇ ಇಲ್ಲವೆಂದಮೇಲೆ ಯಾರ ಕಲ್ಯಾಣವಾಯಿತು? ಇಂತಹ ಮಾತುಗಳಿಂದ ಯಾವ ಪ್ರಯೋಜನೆಯೂ ಆಗುವುದಿಲ್ಲ. ಅರಿವು ಇರುವುದರಿಂದಲೇ ಮಾನವನ ಪ್ರಯೋಜನೆ ಇರುತ್ತದೆ. ಎಲ್ಲಾ ಸಂಬಂಧಗಳಲ್ಲಿ ಪ್ರಯೋಜನೆ ಅಂತರ್ನಿಹಿತವಾಗಿರುತ್ತದೆ. ಏನು ಪ್ರಯೋಜನೆ? ಎಂದು ಕೇಳಿದರೆ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವವನ್ನು ಸಫಲ ಮಾಡುವ ಅರ್ಥದಲ್ಲಿಯೇ ಪ್ರಯೋಜನೆ. ಎಲ್ಲಾ ಸಂಬಂಧಗಳ ಪ್ರಯೋಜನೆ ಇದಕ್ಕೆ ಸೇರಿರುತ್ತದೆ, ಇದಕ್ಕೆ ಸೇರಿದ್ದು ಪರಂಪರೆಯಾಗುತ್ತದೆ. ಅರಿವಿನ ಪರಂಪರೆಯಾಗುತ್ತದೆ. ಅರಿವಿಲ್ಲದಿರುವುದರ ಪರಂಪರೆಯಾಗುವುದಿಲ್ಲ. ಆದ್ದರಿಂದಲೇ ಸರ್ವ-ಶುಭದ ಅರ್ಥದಲ್ಲಿ ಇಂದಿಗೂ ಯಾವ ಪರಂಪರೆಯೂ ಆಗಿಲ್ಲ. ವರ್ತಮಾನದ ಶಿಕ್ಷಣದಿಂದ ಒಬ್ಬ ವ್ಯಕ್ತಿ ಓದಿ ಪದವಿ ಪಡೆದ ನಂತರ ತಾನು ಸ್ವತಹ ಬುದ್ಧಿವಂತ, ಮತ್ತವರೆಲ್ಲರನ್ನು ಮೂರ್ಖ ಎಂದು ನಂಬುತ್ತಾನೆ. ಪ್ರತಿ ವರ್ಷ ಹೀಗೆ ಒಂದು ಕೋಟಿ ಸ್ನಾತಕರು ತಯಾರಾಗುತ್ತಾರೆ. ಒಬ್ಬಬ್ಬ ಇಂತಹ ಸ್ನಾತಕನನ್ನು ಹೇಗೆ ಅರಿವುಳ್ಳವವನಾಗಿ ಮಾಡುವುದು? ಇವೆಲ್ಲರನ್ನು ಸೆರಿಪಡಿಸಲು ಎಲ್ಲಿಂದ ಡಾಕ್ಟರನ್ನು ಕರೆಯುವುದು?

ನಾವು ಸ್ವಯಂ ಅರಿತುಕೊಳ್ಳದೆ, ಸ್ವೀಕರಿಸುವುದಿಲ್ಲ. ಇದಕ್ಕೆ ನಾನೇ ಸ್ವಯಂ ಸಾಕ್ಷಿ. ನಮ್ಮ ಪರಿವಾರದಲ್ಲಿ ವೇದಮೂರ್ತಿ, ಪಕ್ಕದಲ್ಲಿ ವೇದಮೂರ್ತಿ, ಇಡೀ ಗ್ರಾಮದಲ್ಲಿ ವೇದಮೂರ್ತಿ ಆದರೆ ಪರಿವಾರದ ಜನರು ನನಗೆ ವೇದವನ್ನು ಹೇಳಿಕೊಡಲಾಗಲಿಲ್ಲ ಏಕೆಂದರೆ ನಾನು ಓದಲು, ಅರಿತುಕೊಳ್ಳಲು ಬಯಸಲಿಲ್ಲ. ಆದರೆ, ಈ ಧರಣಿಯ ಮೇಲೆ ಪ್ರತಿಯೊಬ್ಬ ಮಾನವ ಅರಿವುಳ್ಳವವನಾಗಬೇಕೆಂದು ಬಯಸುತ್ತಾನೆ. ಇದರ ಆಧಾರದ ಮೇಲೆ ಪ್ರತಿಯೊಬ್ಬ ಮಾನವ ಅರಿವುಳ್ಳವವನಾಗಲು ಪೂರ್ಣ ಸಂಭವನೀಯತೆ ಇದೆ. ಈ ಪ್ರವೃತ್ತಿಯನ್ನು ನೋಡಿಯೇ ಈ

ಅಭಿಯಾನವನ್ನು ಪ್ರಾರಂಭಿಸಿದೆ. ಪ್ರತಿಯೊಬ್ಬ ಮಾನವನನ್ನು ಅರಿವುಳ್ಳವವನಾಗಿ ಮಾಡುವ ಆಸೆ ಇದೆ, ಈ ಸತ್ಯದ ಸಹಿತ ಪ್ರಾರಂಭಿಸಿದೆ. ಇದರ ಆರಂಭದಿಂದ ಮಾನವನನ್ನು ಅರಿತುಕೊಂಡಿರುವ ಎಲ್ಲರಿಗು  ಪರಿಹಾರ ಸಿಕ್ಕಿತು ಹಾಗು ನಾವು ಮಾನವೀಯತೆ ಪೂರ್ಣ ರೂಪದಲ್ಲಿ ಗುರುತಿಸುವ ಎಲ್ಲಾ ನಡತೆಗಳು ಅವರಲ್ಲಿ ಗುಣವಾಗಿ ಹುಟ್ಟಿವೆ.

ನೈತಿಕತೆಯ ಮೂಲ ತತ್ವ, ತನ ಮನ, ಧನ ರೂಪಿ ಅರ್ಥವನ್ನು, ಪ್ರಯೋಜನೆಯ ಅರ್ಥದಲ್ಲ ನಿಯೋಜಿತ ಮಾಡಬೇಕು. ಇದನ್ನು ಸದುಪಯೋಗವೆಂದು ಹೇಳುತ್ತಾರೆ. ಸದುಪಯೋಗ ಎರಡು ಅರ್ಥದಲ್ಲಿದೆ - ೧. ಸೇವೆ ಮತ್ತು ಉತ್ಪಾದನೆಯಲ್ಲಿ ತನ ಮನ ಧನದ ನಿಯೋಜನೆ. ೨. ಸಂಬಂಧಗಳ ಜೊತೆಗೆ ಪ್ರಯೋಜನೆಯನ್ನು ಸಫಲ ಮಾಡಲು ತನ ಮನ ಧನದ ಸದುಪಯೋಗ.

ಯಾವುದರ ಸದುಪಯೋಗವಾಗುತ್ತದೆಯೋ ಅದರ ರಕ್ಷಣೆ ಆಗುತ್ತದೆ. ಯಾವುದನ್ನು ನಾವು ಸದುಪಯೋಗ ಮಾಡುತ್ತೇವೆಯೋ, ಅರ್ಥದ ಅದರ ರಕ್ಷಣೆ ಆಗುತ್ತದೆ. ಇದೇ ನಮ್ಮ ಸದುಪಯೋಗ ಹಾಗು ಸುರಕ್ಷತೆಯ ಅರ್ಥ. ಸಮಾಧಾನಕ್ಕಾಗಿ, ಸಮೃದ್ಧಿಗಾಗಿ, ವರ್ತಮಾನದಲ್ಲಿ ವಿಶ್ವಾಸವಿರುವ ಅರ್ಥದಲ್ಲಿ ವ್ಯವಸ್ಥೆಗಾಗಿ, ಸಹ-ಅಸ್ತಿತ್ವಕ್ಕಾಗಿ, ತನ-ಮನ-ಧನ ರೂಪಿ ಅರ್ಥವನ್ನು ನಿಯೋಜಿಸಿದರೆ ಅದರ ಸುರಕ್ಷತೆ ಆಗುತ್ತದೆ. ಫಲಸ್ವರೂಪ ನಮ್ಮ ಧನದ ಸುರಕ್ಷತೆ ಆಗುತ್ತದೆ. ಸದುಪಯೋಗವಾಗದೆ ಸುರಕ್ಷತೆ ಮತ್ತು ಸುರಕ್ಷತೆಯಿಲ್ಲದೆ ಸದುಪಯೋಗವಾಗುವುದಿಲ್ಲ. ಸುರಕ್ಷತೆ, ಸದುಪಯೋಗ ಯಾವಾಗಲು ಶುಭವೆ. ಸದ್ಪ್ರವೃತ್ತಿಗಳಲ್ಲಿ ನಮ್ಮ ತನ, ಮನ, ಧನವನ್ನು ನಿಯೋಜಿಸಲು ಆವಶ್ಯಕತೆಯಿರುತ್ತದೆ, ಇದು ನಮ್ಮ ಜಾಗೃತಿಯ ಅರ್ಥದಲ್ಲಿದೆ.

ಅಸ್ತಿತ್ವದಲ್ಲಿ ಅರಿವುಳ್ಳುವ ಘಟಕ ಇದ್ದರೆ, ಅದು ಮಾನವನೇ. ಮಾನವ, ಜೀವನ ಮತ್ತು ಶರೀರದ ಸಂಯುಕ್ತ ರೂಪದಲ್ಲಿ ಪ್ರಮಾಣಿತನಾಗಿದ್ದಾನೆ. ಮಾನವನ ಶರೀರ, ವಂಶ ಪರಂಪರೆಯದು. ಜೀವನ ಸಹ-ಅಸ್ತಿತ್ವ ಸಹಜ ರೂಪದಲ್ಲಿ ಜೀವನ ಸಂಘಟನೆ-ಪೂರ್ಣ ಪರಮಾಣುವಿನ ರೂಪದಲ್ಲಿ ವಿದ್ಯಮಾನವಾಗಿದೆ, ಇದರಲ್ಲಿ ಮಾನವನ ಯಾವುದೇ ಕೊಡುಗೆ ಇಲ್ಲ. ಇದೇ ವ್ಯವಸ್ಥೆ. ಜೀವನ ಮತ್ತು ಶರೀರದ ಸಂಯೋಗದ ಆವಶ್ಯಕತೆ ಕೇವಲ ಜೀವನ ತನ್ನ ಜಾಗೃತಿಯನ್ನು ಪ್ರಮಾಣೀಕರಿಸುವ ಅರ್ಥದಲ್ಲಿದೆ ಮತ್ತು ಶರೀರದಲ್ಲಿ ಅರಿವನ್ನು ಪ್ರಮಾಣೀಕರಿಸುವ ವ್ಯವಸ್ಥೆಯಿಲ್ಲ. ಆದ್ದರಿಂದ ಮಾನವ ಸಂಸ್ಕಾರಾನುಷಂಗೀಯ  ಘಟಕ ರೂಪದಲ್ಲಿ ಅರಿವಾಗುತ್ತದೆ. ಅಸ್ತಿತ್ವದಲ್ಲಿ ಮಾನವನನ್ನು ಬಿಟ್ಟು ಶೇಷ ಮೂರು ಅವಸ್ಥೆಗಳು ಪರಸ್ಪರ ಪೂರಕವಾಗಿವೆ. ಮಾನವನೂ ಪೂರಕವಾಗುವ ಅವಶ್ಯಕತೆಯಾಗಿದೆ. ಪೂರಕ ರೂಪದಲ್ಲಿಯೇ ಮಾನವ ವ್ಯವಸ್ಥೆಯಲ್ಲಿ ಬಾಳಲು ಸಾಧ್ಯವಾಗುತ್ತದೆ. ಇದು ವ್ಯಕ್ತಿವಾದ, ಭೋಗವಾದದ ಆಧಾರದ ಮೇಲೆ ಆಗಲು ಸಾಧ್ಯವಿಲ. ಗತಕಾಲದ ಎರಡೂ ಚಿಂತನಗಳು ಭೌತಿಕವಾದ ಮತ್ತು ವಿರಕ್ತಿವಾದದಿಂದ ಮಾನವ ವ್ಯಕ್ತಿವಾದಿಯಾದನು. ಭೌತಿಕವಾದಿ ವಿಧಿಯಿಂದ ವ್ಯಕ್ತಿ ಭೋಗವಾದಿಯಾಗುತ್ತಾನೆ.  ಫಲಸ್ವರೂಪ ವ್ಯಕ್ತಿವಾದಿಯಾಗುತ್ತಾನೆ. ವಿರಕ್ತಿವಾದಿಯಾದವನು ವ್ಯಕ್ತಿವಾದಿ ಆಗುವುದ ಖಚಿತ. ಈ ರೀತಿಯಲ್ಲಿ ಈ ಎರಡೂ ವಿಚಾರದಿಂದ ಸಮಾಜವಾಗುವ ಸೂತ್ರ ಬರಲಿಲ್ಲ, ಅದರ ಬದಲಾಗಿ ಸಮಾಜ

ವಿರೋಧಿಯೇ ಆಯಿತು. ಆದರೆ, ಮಾನವ ಸಮಾಜದಲ್ಲಿ ಬಾಳಲು ಬಯಸುತ್ತಾನೆ. ಸಹ-ಅಸ್ತಿತ್ವದಲ್ಲಿ ಬಾಳಲು ಬಯಸುತ್ತಾನೆ. ಸಮೃದ್ಧಿಯಿಂದ ಬಾಳಲು ಬಯಸುತ್ತಾನೆ. ಸಮಾಧಾನದಿಂದ ಬಾಳಲು ಬಯಸುತ್ತಾನೆ. ಮೂರೂ ವಿಚಾರಗಳ (ಸಹ-ಅಸ್ತಿತ್ವ, ಸಮೃದ್ಧಿ ಮತ್ತು ಸಮಾಧಾನ) ಪ್ರಯೋಜನೆಗಳನ್ನು ಪೂರೈಸುವ ಜವಾಬ್ದಾರಿ ಮಾನವನದು.

ಅರಿವಿನ ನಂತರ ಜವಾಬ್ದಾರಿ ಬರುವುದು ಸಹಜ. ಯಾವಾಗ ಜವಾಬ್ದಾರಿ ಬಂದಿತೋ, ಸ್ವಾಭಾವಿಕ ರೂಪದಲ್ಲಿ ನಾವು ಪರಿವಾರ ಮಾನವನಾಗುತ್ತೇವೆ, ಸಾಮಾಜಿಕವಾಗುತ್ತೇವೆ. ಫಲಸ್ವರೂಪ ನಾವು ಸಾರ್ವಭೌಮವಾಗುತ್ತಾ ಪ್ರಮಾಣಿತರಾಗುತ್ತೇವೆ. ಇಂತಹ ವೈಭವಶಾಲಿ ಪರಂಪರೆಯ ಆವಶ್ಯಕತೆಯಿದೆ. ಆಸೆಯ ರೂಪದಲ್ಲಿ ಪ್ರತ್ಯೇಕ ಮಾನವ ವ್ಯವಸ್ಥೆಯನ್ನು ಬಯಸುತ್ತಾನೆ. ಆಕಾಂಕ್ಷೆಯ ರೂಪದಲ್ಲಿಯೂ ವ್ಯವಸ್ಥೆ ಬಯಸುತ್ತಾನೆ. ನನ್ನ ಪ್ರಕಾರ ಇಚ್ಚೆಯ ರೂಪದಲ್ಲಿಯೂ ವ್ಯವಸ್ಥೆ ಬಯಸುತ್ತಾನೆ ಆದರೆ ಇಚ್ಛೆಯಲ್ಲಿ ಅದಕ್ಕೆ ಆದ್ಯತೆ ಕ್ರಮ ಕಡಿಮೆಯಾಗಿರುತ್ತದೆ, ಇದಕ್ಕಿಂತ ಅಧಿಕ ಆದ್ಯತೆಯಲ್ಲಿ ಬಹಳ ಇವೆ. ಆದ್ದರಿಂದ ಇಚ್ಛೆ ಇದ್ದೂ ವ್ಯವಸ್ಥೆಗೆ ತೀವ್ರ ಇಚ್ಛೆ ಇರಲು ಕಠಿಣ. ಫಲಸ್ವರೂಪ ವ್ಯಕ್ತಿ ಸಮರ್ಪಿತವಾಗಲು ಅಸಮರ್ಥನಾಗಿರುತ್ತಾನೆ. ಮತ್ತಾವುದಾದರೂ ಮಾತಿನಲ್ಲಿ ಅವನು ವಿವಶನಾಗುತ್ತಾನೆ. ಹೀಗಿರುವಾಗ ಏನುಮಾಡುವುದು? ಯಾರು ತತ್ಕಾಲ ಅರಿತುಕೊಳ್ಳಲು ತಯಾರಾಗಿರುತ್ತಾರೋ ಅವರನ್ನೇ ಪಾರಂಗತ ಮಾಡಬಹುದು. ಅವರಿಂದಲೇ, ಶಿಕ್ಷಣ ಸಂಸ್ಥೆಗಳಿಂದಲೇ, ಮಾನವೀಯ ಶಿಕ್ಷಣವನ್ನು ವ್ಯವಹಾರಾನ್ವಯನ ಮಾಡಬಹುದು, ಮಕ್ಕಳಿಗೆ ಸಂಸ್ಕಾರವನ್ನು ನೀಡಬಹುದು. ಮಕ್ಕಳಿಗೆ ಸಂಸ್ಕಾರವನ್ನು ಕೊಡುವುದರಿಂದ ಮನೆ ಪರಿವಾರದಲ್ಲಿ ಸ್ವಾಭಾವಿಕ ರೂಪದಲ್ಲಿ ಪರಿವರ್ತನೆಯಾಗಲೇ ಬೇಕು. ಈ ರೀತಿಯಲ್ಲಿ ಶಿಕ್ಷಣದ ಮಾನವೀಕರಣದ ಆವಶ್ಯಕತೆಯಿದೆ, ಇದು ಎರಡನೆಯ ಯೋಜನೆ.

ಪದಾರ್ಥಾವಸ್ಥೆ, ಪ್ರಾಣಾವಸ್ಥೆ, ಜೀವಾವಸ್ಥೆಯ ಘಟಕಗಳು ಮಾನವನಿಗೆ ಪೂರಕವಾಗಿವೆ. ಆದರೆ ಮಾನವ ಅವುಗಳಿಗೆ ಪೂರಕವಾಗುವುದು ವಿಚಾರಾಧೀನವಾಗಿದೆ. ಅದನ್ನು ಪೂರೈಸುವ ಅವಶ್ಯಕತೆಯಿದೆ. ಆಗಮಾತ್ರ ಮಾನವ ವ್ಯವಸ್ಥೆಯಲ್ಲಿ ಬಾಳುವ ಪ್ರಮಾಣ ಸಿಗಬಹುದು.

ಜೀವನದ  ಲಕ್ಷ್ಯ ಸುಖ, ಶಾಂತಿ, ಸಂತೋಷ, ಆನಂದ. ಜೀವನ ಸಫಲವಾದರೆ ಮಾನವ ಲಕ್ಷ್ಯ ಸಫಲವಾಗುತ್ತದೆ. ಮಾನವ ಲಕ್ಷ್ಯ ಸಮಾಧಾನ, ಸಮೃದ್ಧಿ, ಅಭಯ ಹಾಗು ಸಹ-ಅಸ್ತಿತ್ವ. ಮಾನವ ಲಕ್ಷ್ಯ ಪೂರೈಸಿದರೆ ಜೀವನ ಲಕ್ಷ್ಯ ಪೂರ್ತಿಯಾಗುತ್ತದೆ. ಸಮಾಧಾನ = ಸುಖ. ಎಲ್ಲೆಲ್ಲಿ ನಾವು ಸಮಾಧಾನಿತರಾಗುತ್ತೇವೋ ಅಲ್ಲಲ್ಲಿ ಸುಖವನ್ನು ಅನುಭವಿಸುತ್ತೇವೆ. ಎಲ್ಲಿ ಸಮಾಧಾನಿತರಾಗುವುದಿಲ್ಲವೋ ಅಲ್ಲಿ ನಾವು ಪೀಡಿತರಾಗುತ್ತೇವೆ. ನಂತರ ಪರಿವಾರದಲ್ಲಿ ನಾವು ಬಾಳುತ್ತೇವೆ ಸಮಾಧಾನ ಸಮೃದ್ಧಿಯಿಂದ ಪ್ರಮಾಣಿತವಾಗುವ ಸ್ಥಿತಿಯಲ್ಲಿ ಶಾಂತಿಯನ್ನು ಅನುಭವಿಸುತ್ತೇವೆ. ವ್ಯವಸ್ಥೆಯಲ್ಲಿ ಬಾಳುವ ಅರ್ಥದಲ್ಲಿ ಸಂತೋಷವನ್ನು ಅನುಭವಿಸುತ್ತೇವೆ. ನಮ್ಮ ಅರಿವನ್ನು ಪ್ರಮಾಣೀಕರಿಸುವ ಅರ್ಥದಲ್ಲಿ ಆನಂದವನ್ನು ಅನುಭವಿಸುತ್ತೇವೆ. ಈ ರೀತಿಯಲ್ಲಿ, ಇದರಲ್ಲಿ ನಾವು

ಪ್ರಮಾಣಿತರಾದರೆ ಪರಂಪರೆಯಲ್ಲಿ ಅರಿವು ಹರಿಯುತ್ತದೆ. ಈ ಕ್ರಮದಲ್ಲಿ ನಾವು ಸುಖ, ಶಾಂತಿ, ಸಂತೋಷ, ಆನಂದವನ್ನು ಅನುಭವಿಸಲು ಯೋಗ್ಯರಾಗಿರುತ್ತೇವೆ.

ಜೀವನ ಅಕ್ಷಯ ಬಲ, ಅಕ್ಷಯ ಶಕ್ತಿ ಸಂಪನ್ನವಾಗಿರುತ್ತದೆ. ಈ ವಿಧಿಯಿಂದ ಸಮಾಧಾನದ ನಂತರ ಸಮಾಧಾನವನ್ನು ಪ್ರಕಾಶಿತ, ಪ್ರಮಾಣಿತ ನಿರಂತರ ಮಾಡುತ್ತಲೇ ಇರುತ್ತದೆ ಮತ್ತು ಜೀವನ ತೃಪ್ತಿಯನ್ನು ಪಡೆದಿರುತ್ತದೆ. 'ಜೀವನ' ಸ್ಥಿತಿಯಲ್ಲಿ ಬಲ ಹಾಗು ಗತಿಯಲ್ಲಿ ಶಕ್ತಿಯಿರುತ್ತದೆ, ಗತಿಯಲ್ಲಿ ಆಗುವ ಕ್ರಿಯೆಗಳು ಒಂದೊಂದರ ಪರಸ್ಪರತೆಯಲ್ಲಿ ಪ್ರಮಾಣಿತವಾಗುತ್ತದೆ. ಸ್ಥಿತಿಯಲ್ಲಿರುವುದರಿಂದ ಕ್ರಿಯೆಗಳ ಅನುಭವವಾಗುತ್ತದೆ. ನಾವು ಎಷ್ಟು ಆಸ್ವಾದಿಸುತ್ತೇವೋ, ಅದರಿಂದ ತೃಪ್ತಿ ಆಯಿತೋ ಇಲ್ಲವೋ ಎಂಬುವುದು ನಮಗೆ ಅರಿವಾಗುತ್ತದೆ. ಎಷ್ಟು ತುಲನ ಮಾಡಿದೆವೋ ಅಷ್ಟು ನಮಗೆ ತಥ್ಯ ಪಡೆದೆವೋ  ಇಲ್ಲವೋ. ಎಷ್ಟು ನಮಗೆ ಸಾಕ್ಷಾತ್ಕಾರ (ಚಿಂತನ) ಆಯಿತೋ, ತಿಳಿವಳಿಕೆ (ಬೋಧ) ಆಯಿತೋ, ಅನುಭವವಾಯಿತೋ, ಇದರಿಂದ ತಥ್ಯ ಪಡೆದೆವೋ  ಇಲ್ಲೆವೋ ಎಂಬುವುದರ ಬಗೆ ನಾವು ನಿರಂತರ ಪರೀಕ್ಷಣೆ ಮಾಡುತ್ತಲೇ ಇರುತ್ತೇವೆ. ಪರೀಕ್ಷಣೆ ಮಾಡಲೇಬೇಕು, ಮಾಡುತ್ತೇವೆ, ಬೇರೆ ದಾರಿಯೇ ಇಲ್ಲ. ಈ ಐದು ಅವಸ್ಥೆಗಳಲ್ಲಿ ತೃಪ್ತಿಯೇ ಒಟ್ಟಿನಲ್ಲಿ ಸತತ ಸುಖಿಯಾಗುವ ರಸ್ತೆಯಾಗುತ್ತದೆ. ಇದಕ್ಕೆ ಸುಖ, ಶಾಂತಿ, ಸಂತೋಷ, ಆನಂದವೆಂದು ಹೆಸರು ಕೊಡುತ್ತೇವೆ. ಈ ಐದು ಅವಸ್ಥೆಗಳಲ್ಲಿ ಪ್ರಮಾಣಿತವಾಗುವುದರಿಂದ ಮಾನವನ ವೈಭವ ಸ್ವಯಂನಲ್ಲಿ ರಾಜ್ಯದ ರೂಪದಲ್ಲಿ ಪ್ರತಿಷ್ಠಿತವಾಗಿರುತ್ತದೆ. ಮಾನವ ಮಾನವೀಯತೆಯಿಂದ ಪರಿಪೂರ್ಣವಾಗಿ ವೈಭವಿತವಾಗುವುದೇ ರಾಜ್ಯದ ಅರ್ಥ. ವ್ಯವಸ್ಥೆಯಲ್ಲಿ ಬಾಳುವುದೇ ರಾಜ್ಯ, ಸ್ವರಾಜ್ಯ. ಸ್ವಯಂ ಪ್ರೇರಿತವಾಗಿ ವ್ಯವಸ್ಥೆಯಲ್ಲಿ ಬಾಳುವುದೇ ಸ್ವರಾಜ್ಯ. ಈ ರೀತಿಯಲ್ಲಿ, ಮಾನವೀಯತೆಪೂರ್ಣ ನಡತೆಯೇ, ಇದರ ವ್ಯಾಖ್ಯೆ. ಪರಿವಾರದಲ್ಲಿ, ಸಮಾಜದಲ್ಲಿ, ಪ್ರಕೃತಿಯಲ್ಲಿ, ವ್ಯವಸ್ಥೆಯಲ್ಲಿ, ಯಾವ ಸಂಬಂಧವಿದೆಯೋ ಅದನ್ನು ಹೇಗೆ ಸಾರ್ಥಕ ಮಾಡುತ್ತಾನೋ, ಅದೇ ಮಾನವನ ಜಾಗೃತಿಯ ವೈಭವ. ಸಂಬಂಧ ಮತ್ತು ಮೌಲ್ಯಗಳನ್ನು ಸಾರ್ಥಕ ಮಾಡುವ ಕ್ರಮದಲ್ಲೇ ನಾವು ವರ್ತಮಾನದಲ್ಲಿ ಬಾಳುವುದಿಲ್ಲ, ಗತಕಾಲಕ್ಕೆ ಹೋಗುತ್ತೇವೆ, ಗತಕಾಲ ವರ್ತಮಾನವಲ್ಲ. (ಕಳೆದುಹೋದಕಾಲದಲ್ಲಿ ಬಾಳಲು ಸಾಧ್ಯವಿಲ್ಲ), ಭವಿಷ್ಯವನ್ನು ಯೋಚಿಸುತ್ತೇವೆ, ಭವಿಷ್ಯವೂ ವರ್ತಮಾನವಲ್ಲ. ಈ ರೀತಿಯಲ್ಲಿ ವ್ಯಕ್ತಿಗೆ ಎಲ್ಲೂ ನಿಲ್ಲಲು ಸ್ಥಳ ಸಿಗುವುದಿಲ್ಲ. ಫಲಸ್ವರೂಪ ಭವಣೆಯಿರುತ್ತದೆ. ಭವಣೆಯನ್ನು ಯಾರು ಬಯಸುವುದಿಲ್ಲ. ಪರಂಪರೆಯಲ್ಲಿ ದಿಕ್ಕು ಮತ್ತು ಲಕ್ಷ್ಯ ಮಾರ್ಗದರ್ಶನದ ವ್ಯವಸ್ಥೆಯೇ ಇಲ್ಲ. ಪ್ರತಿಯೊಬ್ಬ ಮಾನವ ಚೇತನಾ ವಿಕಾಸ ಮೌಲ್ಯ ಶಿಕ್ಷಣದಿಂದಲೇ ಅರಿವುಳ್ಳವನಾಗಿ  ಪ್ರಮಾಣೀಕರಿಸಬಹುದು. ಪ್ರತಿಯೊಬ್ಬ ಮಾನವನ ನಡತೆಯಲ್ಲಿ ಬರಬಹುದು ಮತ್ತು ಮಾನವನ ಮೌಲೀಕರಣೆಯಾಗಬಹುದು. ಮಾನವ, ಅರಿವನ್ನು ಸಫಲ ಮಾಡಬೇಕು, ಇದೇ ಅವನ ವೈಭವ, ಇದೇ ಮಾನವನ ಐಶ್ವರ್ಯ. ಇದೇ ಐಶ್ವರ್ಯದ ಸಹಿತ ಮಾನವ ತನ್ನ ಪರಂಪರೆಯನ್ನು ನಿರಂತರ ಸುಖಮಯ ಮಾಡಬಹುದು. ಎಲ್ಲ ಪಶು ಪ್ರಪಂಚ, ಜೀವಿಪ್ರಪಂಚ, ಗಿಡಮರಗಳ ಪ್ರಪಂಚ, ಪದಾರ್ಥ ಪ್ರಪಂಚದ ಜೊತೆ ಸಮತೋಲನದಿಂದ ವ್ಯವಹಾರ ಮಾಡಬಹುದು, ಅದರಿಂದಾಗುವ ಪೂರಕತೆ, ಅದಕ್ಕಾಗಿ ಸ್ವಯಂ ಕೃತಜ್ಞವಾಗಿ ಅದರ ಉಪಯೋಗ, ಸದುಪಯೋಗ ಮಾಡಬಹುದು. ಪ್ರಯೋಜನಶೀಲವಾಗಬಹುದು.

ಮಾನವನ ಜೊತೆ ಸಂಬಂಧ ಮೌಲ್ಯ, ಮೌಲ್ಯೀಕರಣೆ, ಉಭಯ ತೃಪ್ತಿ ಆಗುತ್ತದೆ. ತೃಪ್ತಿ ನಮ್ಮ ವರ, ಅತೃಪ್ತಿ ನಮ್ಮ ವರ ಅಲ್ಲ. ಪ್ರತಿಯೊಬ್ಬ ವ್ಯಕ್ತಿ ತೃಪ್ತನಾಗುವ ಸಂಭಾವ್ಯತೆಯಲ್ಲಿ ಸಮಾಧಾನ, ಸಮೃದ್ಧಿ, ವರ್ತಮಾನದಲ್ಲಿ ವಿಶ್ವಾಸ ಮತ್ತು ವ್ಯವಸ್ಥೆಯಲ್ಲಿ ಬಾಳುವುದು ಸಹ-ಅಸ್ತಿತ್ವವನ್ನು ಪ್ರಮಾಣೀಕರಿಸುವಂತೆಯೇ. ಸತ್ಯದ ಸ್ವರೂಪ ಈ ರೀತಿಯಲ್ಲಿ ಬಂದಿತು, ಅಸ್ತಿತ್ವವೇ ಪರಮ ಸತ್ಯ, ನಿರಂತರವಾಗಿರುವ ವಸ್ತು ಅಸ್ತಿತ್ವವೇ ಮತ್ತು ಅಸ್ತಿತ್ವ, ಸಹ-ಅಸ್ತಿತ್ವದ ಸ್ವರೂಪದಲ್ಲಿದೆ, ಸಹ-ಅಸ್ತಿತ್ವವೇ ನಿರಂತರ ಪ್ರಭಾವಶೀಲವಾಗಿದೆ. ಫಲಸ್ವರೂಪ ವಿಕಾಸವಾಗುತ್ತದೆ, ವಿಕಾಸ ಕ್ರಮ ಆಗುತ್ತದೆ. ವಿಕಸಿತವಾಗುತ್ತದೆ, ಜೀವಂತವಾಗುತ್ತದೆ. ವಿಕಾಸಕ್ರಮದಲ್ಲಿ ಭೌತಿಕ-ರಾಸಾಯನಿಕ ವಸ್ತುವಿನ ರೂಪದಲ್ಲಿ ನಿರಂತರ ಕಾರ್ಯರತವಾಗಿರುತ್ತದೆ. ಜೀವನ ಎಷ್ಟು ಸಂಖ್ಯೆಯಲ್ಲಿರಬೇಕೆಂಬುವ ನಿಶ್ಚಯನವೂ ಸಹ-ಅಸ್ತಿತ್ವ ಸಹಜ ವಿಧಿಯಿಂದಲಾಗುತ್ತದೆ, ಭ್ರಮಿತ ಮಾನವ ಕ್ರಮದಿಂದ ಆಗುವುದಿಲ್ಲ. ಅಸ್ತಿತ್ವ ತಾನೇ ಸ್ವತಃ ತನ್ನ ವಿಧಿಯಿಂದ ನಾಲ್ಕು ಅವಸ್ಥೆಗಳನ್ನು ಪ್ರಕಾಶಪಡಿಸಿದೆ. ಇದರಲ್ಲಿ ಮಾನವನ ಯಾವುದೇ ಕಾಣಿಕೆಯಿಲ್ಲ. ಮಾನವ ತಾನೇ ಸ್ವತಃ ಅನ್ಯ ಪ್ರಕೃತಿಯ ಜೊತೆ ಪೂರಕವಾಗುವ ಪ್ರಮಾಣ ರೂಪದಲ್ಲಿ ಪ್ರಮಾಣೀಕರಿಸಲು ಸಾಧ್ಯವಾಗಲಿಲ್ಲ, ಬದಲಾಗಿ ಶೋಷಣೆ ಮಾಡುತ್ತಿದ್ದಾನೆ. ಶೋಷಣೆ ಮಾಡುತ್ತಾ ಸುಖಿಯಾಗುವ ಕಾಮನೆ ಹೇಗೆ ಮಾಡಿದೆ, ಇದು ಆಲೋಚಿಸುವ ವಿಚಾರ. ಶೋಷಣೆಯಿಂದ ಸುಖ ಉಳ್ಳವವರು ಆಗುವುದರ ಬಗ್ಗೆ ಎಲ್ಲ ರಾಜ್ಯ, ಎಲ್ಲ ಸಮುದಾಯ, ಎಲ್ಲ ಧರ್ಮ, ಸುಮಾರು ಎಲ್ಲ ಪರಿವಾರಗಳು ಯೋಚಿಸುತ್ತದೆ. ರಾಜ್ಯ ಮತ್ತು ಸಮುದಾಯದ ನಂಬಿಕೆಯನ್ನು ನೋಡಿದರೆ, ಶೋಷಣೆಯಿಂದಲೇ ಸುಖವನ್ನು ಪಡೆಯ ಬಹುದೆಂಬುವ ನಂಬಿಕೆಯಿದೆ. ಇಂದಿಗೂ ಇದೇ ಕಡೆಯ ಮಾತು ಮತ್ತು ವಿಜ್ಞಾನವೂ ಇದರ ಸಮರ್ಥಕವಾಗಿದೆ ಸಂಘರ್ಷ ಮತ್ತು ಶೋಷಣೆಯಿಂದಲೇ ಮಾನವ ತನ್ನ ಅಸ್ತಿತ್ವವನ್ನು ಕಾಪಾಡಬಹುದು. ಅಸ್ತಿತ್ವವೆಂದರೆ ಇಲ್ಲಿ ಅರ್ಥ ತಮ್ಮ ಜಾತಿ, ಸಮುದಾಯ. ಸಂಘರ್ಷದ ಅರ್ಥ ಅಧಿಕ ಬಲಶಾಲಿಯಾದವನೆ ವಿಜಯಿಯಾಗುತ್ತಾನೆ. ಸಂಗರ್ಷ ಮಾಡುವುದನ್ನೇ ವಿಕಾಸವೆಂದು ನಂಬಲಾಗಿದೆ. ಯಾವ ದೇಶ ಹೆಚ್ಚು ಯುದ್ಧಮಾಡಲು ಸಾಧ್ಯವೋ, ಹೆಚ್ಚು ವ್ಯಾಪಾರ-ಬುದ್ಧಿವಂತಿಕೆಯ ಉಪಯೋಗ ಮಾಡಲು ಸಾಧ್ಯವೋ, ಹೆಚ್ಚು ಶೋಷಣೆ ಮಾಡಲು ಸಾಧ್ಯವೋ ಅದನ್ನು ವಿಕಸಿತ ದೇಶವೆಂದು ನಂಬಲಾಗುತ್ತದೆ. ಆದರೆ ವಿಕಸಿತ ದೇಶವೆಂದರೆ ಜಾಗೃತವಾಗಿರುವ, ವ್ಯವಸ್ಥೆಯಲ್ಲಿರುವ, ಸಮಾಧಾನಿತವಾಗಿರುವ, ಸಮೃದ್ಧಿಯಾಗಿರುವ, ತನ್ನಲ್ಲಿ ವಿಶ್ವಾಸವಿರುವ, ಸಹ-ಅಸ್ತಿತ್ವವನ್ನು ಅರಿತುಕೊಂಡಿರುವ ದೇಶ. ಜೀವನ, ಜೀವನವನ್ನು ಅರಿತುಕೊಳ್ಳುವ ಮತ್ತು ಜೀವನ ಅಸ್ತಿತ್ವವನ್ನು ಅರಿತುಕೊಳ್ಳುವ ರೀತಿ ಬಿನ್ನವಾಗಿದೆ. ಭೌತಿಕ ರಾಸಾಯನಿಕ ವಸ್ತುಗಳನ್ನು ನಾವು ಪ್ರಯೋಗದಿಂದ ಅದರ ಉಪಯುಕ್ತತೆಯ ಆಧಾರದ ಮೇಲೆ ಗುರುತಿಸುತ್ತೇವೆ. ಉಪಯುಕ್ತತೆಯನ್ನು ನಾವು ಸಾಮಾನ್ಯ ಆಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆಯ ರೂಪದಲ್ಲಿ ಗುರುತಿಸುತ್ತೇವೆ. ಸಾಮಾನ್ಯ ಆಕಾಂಕ್ಷೆಗಳು, ಆಹಾರ, ಆವಾಸ, ಮತ್ತು ಅಲಂಕಾರದ ವಸ್ತುಗಳು. (ಸಾಧನ). ಮಹತ್ವಾಕಾಂಕ್ಷೆಗಳು, ದೂರಗಮನ, ದೂರಶ್ರವಣ, ದೂರದರ್ಷನ ವಸ್ತುಗಳು. ಇದರ ಗರಿಷ್ಠ ಭಾಗವನ್ನೇನೋ ಗುರುತಿಸಲಾಗಿದೆ ಉತ್ಪಾದನೆಯೂ ಆಗಿದೆ. ಇದನ್ನು ಸರ್ವರಿಗೆ ಸುಲಭ ಮಾಡುವ ಪ್ರಯತ್ನವೂ ವ್ಯಾಪಾರ ವಿಧಿಯಿಂದ ಮಾಡಲಾಗಿದೆ. ವ್ಯಾಪಾರ ವಿಧಿಯಲ್ಲಿ ಲಾಭದ ಪ್ರತೀಕ್ಷೆ ಇದ್ದೇ ಇರುತ್ತದೆ.

ಜೀವನದ ವಿಶ್ಲೇಷಣೆ ಕ್ರಿಯೆಯ ಆಧಾರದ ಮೇಲೆ ನಾವು ನಮಗೆ ಯಾವ-ಯಾವ ವಸ್ತುಗಳ ಅವಶ್ಯಕತೆಯಿದೆ ಎಂಬುವುದನ್ನು ಗುರುತಿಸಬಹುದು. ಮತ್ತು ಅಂತಹ ಅವಶ್ಯಕತೆಗಳನ್ನು ಗುರುತಿಸಿ ನಾವು ಉತ್ಪಾದನೆ ಮಾಡುತ್ತೇವೆ ಮತ್ತು ಸಮೃದ್ಧಿಯನ್ನು ಅನುಭವಿಸುತ್ತೇವೆ. ಸಮೃದ್ಧಿಯ ಅನುಭವ ಮಾಡಿದನೊಡನೆ ನಾವು ವ್ಯವಸ್ಥೆಯಲ್ಲಿ ಬಾಳಲು ಆರಂಭಿಸುತ್ತೇವೆ ಆದ್ದರಿಂದ ನಮ್ಮ ವಿಧ್ಯಾರ್ಥಿಗಳಿಗೆ ಸರ್ವಪ್ರಥಮ ಸ್ವಾಯತ್ತರಾಗಿ ಮಾಡುವ ಅವಶ್ಯಕತೆ ಇದೆ ಮತ್ತು ನಂತರ ಪರಿವಾರದಲ್ಲಿ ಪ್ರಮಾಣೀಕರಿಸುವಂತಹ ಯೋಗ್ಯ ಪ್ರವೃತ್ತಿ ಮತ್ತು ಸಮಗ್ರ ವ್ಯವಸ್ಥೆಯಲ್ಲಿ ಬಾಳುವ ಅವಶ್ಯಕತೆಯಿದೆ. ಈ ಮೂರು ಸ್ಥಿತಿಗಳಲ್ಲಿ ಪ್ರಮಾಣಿತವಾಗುವುದು ಮಾನವನ ಸೌಭಾಗ್ಯವಾಗಿದೆ. ಈ ರೀತಿಯಲ್ಲಿ ಸೌಭಾಗ್ಯಶಾಲಿ ಆಗಲು ಇರುವ ಒಂದೇ ಒಂದು ಆಧಾರ, ಮಾನವನ ಸ್ವಯಂಸ್ಫೂರ್ತ ಅವಶ್ಯಕತೆ. ಇಂತಹ ಅವಶ್ಯಕತೆಯಾದರೆ ಈ ಪ್ರಸ್ತಾವವನ್ನು ಮನೋಯೋಗಪೂರ್ವಕ, ಅಧ್ಯಯನಪೂರ್ವಕ ತನನ್ನು ಪ್ರಮಾಣೀಕರಿಸುವುದು ಸಹಜ.

ಅರಿವು ಎಂದರೇನು? ಎಂಬುವುದನ್ನು ಅರಿತುಕೋಳ್ಳಲು ನಾನು ಪ್ರಯತ್ನಿಸಿದೆ. ಅರಿತುಕೊಳ್ಳುವವನು ಯಾರು ಅರಿತುಕೊಳ್ಳಲು ಇರುವ ವಸ್ತು ಯಾವುದು? ಅರಿತುಕೊಳ್ಳುವ ವಸ್ತು 'ಜೀವನ'. ಅರಿತುಕೊಳ್ಳಲು ಇರುವ ವಸ್ತು 'ಅಸ್ತಿತ್ವ', 'ಜೀವನ' ಹಾಗು 'ಮಾನವೀಯತೆಪೂರ್ಣ ನಡತೆ. ಅಸ್ತಿತ್ವವನ್ನು ಅರಿತುಕೊಳ್ಳುವ ಕ್ರಮದಲ್ಲಿ ಅಸ್ತಿತ್ವದಲ್ಲಿ ವಿಕಾಸವನ್ನು ಅರಿತುಕೊಳ್ಳಬೇಕು. ರಾಸಾಯನಿಕ ಮತ್ತು ಭೌತಿಕ ರಚನೆ, ವಿರಚನೆಯನ್ನು ಅರಿತುಕೊಳ್ಳಬೇಕು. ರಾಸಾಯನಿಕ ಮತ್ತು ಭೌತಿಕ ರಚನೆ ಹಾಗು ವಿರಚನೆ, ಪದಾರ್ಥಾವಸ್ಥೆ ಮತ್ತು ಪ್ರಾಣಾವಸ್ಥೆಯ ರೂಪದಲ್ಲಿ ಅಸ್ತಿತ್ವದಲ್ಲಿ ವಿದ್ಯಮಾನವಾಗಿವೆ. ಈ ಎಲ್ಲ ವಸ್ತುಗಳು ಒಂದು ಸ್ವರೂಪದಿಂದ ಇನ್ನೊಂದು ಸ್ವರೂಪಕ್ಕೆ ಪರಿವರ್ತಿತವಾಗುತ್ತಿರುತ್ತದೆ, ಗಿಡ ಮರಗಳು ಸ್ವಲ್ಪ ಕಾಲದ ನಂತರ ತಾನೇ ಒಣಗಿ ಮಣ್ಣಾಗುತ್ತವೆ. ಇದರ ಹೆಸರೇ ಪರಿವರ್ತನಶೀಲತೆ. ಈ ಪರಿವರ್ತನೆ, ಭೌತಿಕ ರಾಸಾಯನಿಕ ಪದಾರ್ಥಗಳಲ್ಲಿ ನಿರಂತರ ನಡೆಯುವ ಪ್ರಕ್ರಿಯೆ. ಇದೇ ರೀತಿಯಲ್ಲಿ ಮಾನವ ಹಾಗು ಪಶು ಶರೀರ ರಚನೆ ಗರ್ಭಾಶಯದಲ್ಲಿ ರಚಿತವಾಗುತ್ತದೆ ಹಾಗು ಸ್ವಲ್ಪ ಕಾಲದ ನಂತರ ವಿರಚಿತವಾಗಿ ಮಣ್ಣು, ನೀರು, ಗಾಳಿಗೆ ಪರಿವರ್ತಿತವಾಗುತ್ತದೆ.

ಅರಿತುಕೊಳ್ಳುವ ವಸ್ತು ಜೀವನ, ಇದು ನಿರಂತರ ಒಂದೇ ರೀತಿಯಲ್ಲಿರುತ್ತದೆ. ಮಾನವ ಶರೀರದಲ್ಲಿ ಅರಿತುಕೊಳ್ಳುವ ವಸ್ತು ಕೇವಲ ಜೀವನವೇ. ಅರಿತುಕೊಳ್ಳುವ ರೂಪದಲ್ಲಿ ಅಸ್ತಿತ್ವವನ್ನು ಸಹ-ಅಸ್ತಿತ್ವದ ರೂಪದಲ್ಲಿಯೇ ಅರಿವಾಗಿದೆ. ಸಹ-ಅಸ್ತಿತ್ವದ ದೃಷ್ಟಿಯಿಂದಲೇ ಸಂಪೂರ್ಣ ಪರಿಸ್ಥಿತಿಯಲ್ಲಿ ನಾವು ವ್ಯವಸ್ಥೆಪೂರ್ವಕ ಬಾಳಬಹುದು. ವ್ಯವಸ್ಥೆಯಲ್ಲಿ ಬಾಳುವುದೇ ಮಾನವನ ಲಕ್ಷ್ಯವಾಗಿದೆ, ವ್ಯವಸ್ಥೆಯಲ್ಲಿ ಬಾಳುವುದೇ ಮಾನವನಲ್ಲಿ ಸುಖ. ಅವ್ಯವಸ್ಥೆಯಲ್ಲಿ ಬಾಳುತ್ತಾ 'ಜೀವನ' ಸಮಸ್ಯೆಯಿಂದ ಪೀಡಿತವಾಗುತ್ತದೆ. ಫಲಸ್ವರೂಪ ಸಮಾಧಾನದ ಶೋಧ ಸ್ವಾಭಾವಿಕ, ಜೀವನದಲ್ಲಿ ನಿರಂತರ ಅನುಸಂಧಾನವಾಗುತ್ತದೆ. ಜೀವನದಲ್ಲಿಯೇ ಅಲ್ಲ, ಪರಮಾಣುವಿನಲ್ಲಿಯೂ ಅನುಸಂಧಾನವಾಗುತ್ತಿರುತ್ತದೆ. ಇದೆ ಪರಿವರ್ತನೆಗಾಗಿ ಕಾರಣ ತತ್ವ. ಪ್ರತಿಯೊಂದು ಜಾಗದಲ್ಲಿ ಸಹ-ಅಸ್ತಿತ್ವದಲ್ಲಿರುವ ಪ್ರವೃತ್ತಿಯಿದೆ. ಪರಮಾಣು ಅಂಶವೂ ಸಹ-ಅಸ್ತಿತ್ವದಲ್ಲಿರುವ ಪ್ರವೃತ್ತಿವಶವೇ

ಪರಮಾಣುವಿನ ರೂಪದಲ್ಲಿ ಮತ್ತು ಪರಮಾಣು ಅಣುವಿನ ರೂಪದಲ್ಲಿ ಘಟಿತವಾಗುತ್ತಿರುತ್ತದೆ. ಅಣುವೂ ಇದೇ ಪ್ರವೃತ್ತಿವಶ ಅಣುಪಿಂಡಗಳ ರೂಪದಲ್ಲಿ ಘಟಿತವಾಗುತ್ತಿರುತ್ತದೆ. ಈ ರೀತಿಯಲ್ಲಿ ಅನಂತ ಗ್ರಹ ಗೋಲ ಅಸ್ತಿತ್ವದಲ್ಲಿರುವು ಮಾನವನಿಗೆ ಅರಿವಾಗುತ್ತದೆ. ಪ್ರಕೃತಿಯಲ್ಲಿ ವಿಭಿನ್ನತೆಯ ಮೂಲ ರೂಪ ಪರಮಾಣುವಿನಲ್ಲಿ ನಿಹಿತ ಪರಮಾಣು ಅಂಶಗಳ ಸಂಖ್ಯೆಯ ಭೇದ. ಇಂತಹ ವಿವಿಧ ವಸ್ತುಗಳ ವಿವಿಧತೆಯ ಆಧಾರದ ಮೇಲೆ, ಸ್ಥಾಪನೆಯ ಆಧಾರದ ಮೇಲೆಯೇ ಇದರಿಂದ ರಚಿತ ರಚನೆಗಳಲ್ಲಿ ವಿವಿಧತೆ ಕಂಡುಬರುತ್ತದೆ. ಉದಾಹರಣೆಗೆ ವನಸ್ಪತಿಗಳಲ್ಲಿ ಅನೇಕ ಪ್ರಕಾರದ ರಚನೆಗಳಿವೆ. ಯಾವ-ಯಾವ ರಚನೆಗಳಿಂದ ರಚಿತ ವಸ್ತುಗಳಿವೆಯೋ ಅವು ತಮ್ಮ ಸ್ವಾಭಾವಿಕ ರೂಪದಲ್ಲಿ ತಮ್ಮ ಸ್ವರೂಪದಲ್ಲಿ ವೈಭವಿತವಾಗಿವೆ. ಅದರ ಒಂದು ಭೌತಿಕ ಪ್ರಯೋಜನವೇನೆಂದರೆ ಸಹ-ಅಸ್ತಿತ್ವದಲ್ಲಿ ಅದರ ಭಾಗವಹಿಸುವಿಕೆ. ರಚನೆಗಳ ಮೂಲದಲ್ಲಿರುವ ದ್ರವ್ಯವೂ ಸಹ-ಅಸ್ತಿತ್ವದಲ್ಲಿರುವುದರ ಮಹಿಮೆಯೇ. ಈ ಮಹಿಮೆಯ ಆಧಾರದ ಮೇಲೆ ಸಂಪೂರ್ಣ ಅಸ್ತಿತ್ವ ವಿದ್ಯಮಾನವಾಗಿದೆ, ಪ್ರಮಾಣಿತವಾಗಿದೆ, ಪ್ರಕಾಶಿತವಾಗಿದೆ. ಮಾನವನೂ ಕೂಡ ಈ ಅಸ್ತಿತ್ವದ ಒಂದು ಭಾಗ. ಸಹ-ಅಸ್ತಿತ್ವದಲ್ಲಿ ಮಾನವ ಅವಿಭಾಜ್ಯನಾಗಿದ್ದಾನೆ. ಸಹ-ಅಸ್ತಿತ್ವವನ್ನು ಬಿಟ್ಟು ಮಾನವ ಎಲ್ಲೂ ಓಡಲಾರ. ಓಡಲು ಎಷ್ಟು ಪ್ರಯಾಸ ಮಾಡಿದನೋ ಅಷ್ಟೇ ಪೀಡಿತನಾದನು. ಪ್ರತಿಯೊಬ್ಬ ಮಾನವ ತನ್ನಲ್ಲಿಯೇ ಸಮಾಧಾನ ಬಯಸುತ್ತಾನೆ. ಅದಕ್ಕೆ ಪ್ರತಿಯೊಬ್ಬ ಮಾನವ ಶೋಧಿಸುತ್ತಾನೆ. ಪ್ರತಿಯೊಬ್ಬ ವ್ಯಕ್ತಿ ವ್ಯವಸ್ಥೆಯನ್ನು ಶೋಧಿಸಲು ಅಧಿಕಾರಿಯಾಗಿದ್ದಾನೆ. ಪ್ರತಿಯೊಬ್ಬ ವ್ಯಕ್ತಿ ಶೋಧಪೂರ್ವಕ ಬಾಳಿದಾಗ ಕರ್ಮಸ್ವತಂತ್ರತೆ ತಾನಾಗಿಯೇ ಅರಿವಾಗುತ್ತದೆ. ಶೋಧದ ಉದ್ದೇಶ ಸ್ಪಷವಾಗಿದೆ, ಬಾಳುವ ಉದ್ದೇಶ ಸ್ಪಷ್ಟವಾಗಿದೆ. ಬಾಳುವ ಉದ್ದೇಶ ಒಂದೇ ಸ್ಥಳದಲ್ಲಿ ದೃಢೀಕೃತವಾಗುತ್ತದೆ, ಮಾನವ ಸುಖ ಉಳ್ಳವವನಾಗಿ ಬಾಳಲು ಬಯಸುತ್ತಾನೆ. ಸುಖ ಉಳ್ಳವವನಾಗಲು ಒಂದೇ ಪ್ರಕ್ರಿಯೆ, ಜೀವನದ ಉದ್ದೇಶ, ಮಾನವನ ಉದ್ದೇಶ ಸಂಪನ್ನವಾಗಬೇಕು. ಅರಿವಿನಿಂದ ಜೀವನದ ಉದ್ದೇಶ ಸಂಪನ್ನವಾಗಬೇಕು. ಅರಿವಿನಿಂದ ಜೀವನದ ಉದ್ದೇಶ ಪೂರ್ಣವಾಗುತ್ತದೆ. ಜೀವನ ತೃಪ್ತ ಆಗಿ, ಮಾನವನ ಉದ್ದೇಶ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವವನ್ನು ಕಾಪಾಡಲು ಸಮರ್ಥವಾಗುತ್ತದೆ. ಇದೇ, ವ್ಯವಸ್ಥೆಯಲ್ಲಿ ಬಾಳುವ ಪ್ರಮಾಣ. ವ್ಯವಸ್ಥೆಯಲ್ಲಿ ಬಾಳಿದರೆ ಈ ನಾಲ್ಕು ಲಕ್ಷ್ಯ ಉಪಲಬ್ಧಿಯ ರೂಪದಲ್ಲಿ ಪಡೆಯುತ್ತವೆ. ಇಂತಹ ಮಾನವ ಪರಂಪರೆ ಒಬ್ಬರಿಂದ ಇನ್ನೊಬ್ಬರಿಗೆ ಉಪಕಾರವಾಗುತ್ತದೆ ಫಲಸ್ವರೂಪ ಸಹ-ಅಸ್ತಿತ್ವದ ಅರ್ಥ ಸಾರ್ಥಕವಾಗುತ್ತಾದೆ. ಸಹ-ಅಸ್ತಿತ್ವವನ್ನು ಕಾಪಾಡುವುದೇ ವ್ಯವಸ್ಥೆ. ಸಹ-ಅಸ್ತಿತ್ವದ ವಿಪರೀತವೇನಾದರೂ ಆದಾಗಲೆಲ್ಲ ವ್ಯವಸ್ಥೆಯಲ್ಲಿ ಗಡಿಬಿಡಿಯಾಗುತ್ತದೆ. ಮಾನವ ಕರ್ಮಸ್ವತಂತ್ರತೆ ಹಾಗು ಕಲ್ಪನಾಶೀಲತೆ ವಶ ಏನಾದರು ಗಡಿಬಿಡಿ ಮಾಡುತ್ತಾನೆ. ನಮ್ಮ ಧರಣಿಯನ್ನು ಬಹಳ ಕಾಡಿರುವುದು ಒಂದು ಉದಾಹರಣೆ. ಇಂತಹ ಗಡಿಬಿಡಿಯಿಂದಾಗುವ ತೊಂದರೆಯ ತಿಳಿವಳಿಕೆ ಇರಲಿಲ್ಲ, ಇದನ್ನು ತಿಳಿದಾಗ ಅದಕ್ಕೆ ಯಾವ ಉಪಾಯವೂ ಇರಲಿಲ್ಲ. ಕಲ್ಪನಾಶೀಲತೆ ಮತ್ತು ಕರ್ಮಸ್ವತಂತ್ರತೆ ವಶವೇ ಮಾನವ ಯಾವಾಗಲು ಅನುಸಂಧಾನರತನಾಗಿರುತ್ತಾನೆ. ವ್ಯವಸ್ಥೆಯ ಅರ್ಥದಲ್ಲಿ, ಹಾಗು ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವದ ಅರ್ಥದಲ್ಲಿ ಮಾಡುವ ಶೋಧ ಮತ್ತು ಅನುಸಂಧಾನವೇ ಸಾರ್ಥಕವಾಗುತ್ತದೆ. ಅರಿವಿನಿಂದ ಮಾನವ

೧. ಸ್ವಯಂನಲ್ಲಿ ವಿಶ್ವಾಸ

೨. ಶ್ರೇಷ್ಠತೆಯ ಸಮ್ಮಾನ

೩. ಪ್ರತಿಭೆ ಮತ್ತು ವ್ಯಕ್ತಿತ್ವದಲ್ಲಿ ಸಮತೋಲನ

೪. ವ್ಯವಹಾರದಲ್ಲಿ ಸಾಮಾಜಿಕ

೫. ವ್ಯವಸಾಯದಲಿ ಸ್ವಾವಲಂಬಿಯಾಗುತ್ತಾನೆ.

ಇವನ್ನು ಸದ್ಗುಣವೆಂದು ಹೇಳಬಹುದು. ಈ ಸದ್ಗುಣಗಳ ಜೊತೆ ಮಾನವ ಸಾಮಾಜಿಕನಾಗುತ್ತಾನೆ. ಅರಿವನ್ನು ಪ್ರಮಾಣೀಕರಿಸುವುದೇ ವಿದ್ವತೆ. ವಿದ್ವಾನ ಏನಿದ್ದರೂ ಅಸ್ತಿತ್ವ ಸಹಜ (ವರ್ತಮಾನ) ವಿದ್ಯಮಾನ ಮಾನವನೇ ಆಗಿರುತ್ತಾನೆ. ಪ್ರತಿಯೊಂದು ಘಟಕದಲ್ಲಿ ತನ್ನಲ್ಲಿಯೇ ಶೋಧವಾಗುತ್ತಲಿರುತ್ತದೆ ಆದರೆ ವಿದ್ವತೆಯ ಮಾತು ಕೇವಲ ಮಾನವನಲ್ಲೇ ಆಗುತ್ತದೆ.

ಈಗ ಮಾನವನಲ್ಲಿ ನಾಲ್ಕು ಕ್ರಿಯೆಗಳ ಬಗ್ಗೆ ಹೇಳಲಾಗಿದೆ, ತಿಳಿವಳಿಕೆ, ನಂಬಿಕೆ, ಗುರುತಿಸುವುದು, ನಿರ್ವಹಿಸುವುದು. ಇವಲ್ಲಿ ಗುರುತಿಸುವುದು ಮತ್ತು ನಿರ್ವಹಿಸುವುದು ಪ್ರತಿಯೊಂದು ವಸ್ತುವಿನಲ್ಲಿ ಒಳಗೊಂಡಿದೆ. ಪ್ರತಿಯೊಂದು ವಸ್ತು ಇನ್ನೊಂದು ವಸ್ತುವನ್ನು ಗುರುತಿಸುತ್ತಿದೆ. ಹೀಗಾಗಿ ನಿರ್ವಹಿಸುತ್ತಿದೆ. ಒಂದು ಪರಮಾಣು ಅಂಶವೂ ಇನ್ನೊಂದು ಪರಮಾಣು ಅಂಶವನ್ನು ಗುರುತಿಸುತ್ತಿದೆ ಫಲಸ್ವರೂಪ ಅದು ವ್ಯವಸ್ಥೆಯಲ್ಲಿರುತ್ತದೆ. ಒಂದು ಇನ್ನೊಂದರ ಜೊತೆಗೆ ಇರಲು ಸಾಧ್ಯವಾಗುತ್ತದೆ, ಕಾರ್ಯವನ್ನೂ ಮಾಡಲು ಸಾಧ್ಯವಾಗುತ್ತದೆ. ಫಲಸ್ವರೂಪ ಸಹ-ಅಸ್ತಿತ್ವದಲ್ಲಿ ಪ್ರಕಾಶಿತವಾಗಲು ಸಾಧ್ಯವಾಗುತ್ತದೆ. ಇದೇ ರೀತಿಯಲ್ಲಿ ಅಣುವಿನಿಂದ ಗ್ರಹ ಗೋಲದ ತನಕ ಒಂದು ಇನ್ನೊಂದನ್ನು ಗುರುತಿಸುತ್ತದೆ ಮತ್ತು ನಿರವಹಿಸುತ್ತದೆ. ಈ ರೀತಿಯಲ್ಲಿ ಎಲ್ಲ ಪದಾರ್ಥಾವಸ್ಥೆ, ಪ್ರಾಣಾವಸ್ಥೆ, ಜೀವಾವಸ್ಥೆಯೂ ಒಂದು ಇನ್ನೊಂದನ್ನು ಗುರುತಿಸಿ ಮತ್ತು ನಿರ್ವಹಿಸುತ್ತದೆ ಇದರ ಪ್ರಮಾಣವೂ ಪ್ರಕೃತಿಯಲ್ಲಿ ಪೂರಕತೆ ವಿಧಿಯಿಂದ ಸ್ಪಷ್ಟವಾಗುತ್ತದೆ. ಮಾನವ ಕೇವಲ ಗುರುತಿಸುವುದರಲ್ಲಿ ಹಾಗು ನಿರ್ವಹಿಸುವುದರಲ್ಲಿ ತೃಪ್ತನಾಗಲಿಲ್ಲ ಹಾಗು ಇದರಲ್ಲಿ ಸಂಶಯ ಹುಟ್ಟಿತು. ಮಾನವನ ಜೋತೆ ಇನ್ನೂ ಎರಡು ಕ್ರಿಯೆಗಳು ಸೇರಿದವು, ತಿಳಿವಳಿಕೆ ಮತ್ತು ನಂಬಿಕೆ. ಮಾನವ ತಿಳಿವಳಿಕೆ, ನಂಬಿಕೆಯ ಕ್ರಿಯೆಯ ಆಧಾರದ ಮೇಲೆಯೇ ಗುರುತಿಸಿ, ನಿರ್ವಹಿಸುವುದರಲ್ಲಿ ಆಶ್ವಸ್ತನಾಗುತ್ತಾನೆ. ಪ್ರಯೋಜನೆಗಳ ಸಾರ್ಥಕತೆಯ ತಿಳಿವಳಿಕೆ ಹಾಗು ನಂಬಿಕೆಯಾಗುತ್ತದೆ. ಪ್ರಯೋಜನೆಯನ್ನು ತಿಳಿದುಕೊಳ್ಳುವ ಹಾಗು ನಂಬುವ ಕ್ರಮದಲ್ಲಿಯೇ ಮಾನವ ಸಾಮಾಜಿಕನಾಗುತ್ತಾನೆ. ತಿಳಿದುಕೊಳ್ಳದೆ, ನಂಬಿಕೆಯಿಲ್ಲದೆ ಸಾಮಾಜಿಕನಾಗಲು ಸಾಧ್ಯವಿಲ್ಲ ಸಹ-ಅಸ್ತಿತ್ವ ಪ್ರಮಾಣಿತವಾಗುವುದಿಲ್ಲ. ಮಾನವನ ಬಹಳ ದೊಡ್ಡ ದರಿದ್ರತೆಯ ಕಾರಣ, ತಿಳಿದುಕೊಳ್ಳುವ, ನಂಬುವ ಅವಕಾಶ ವಿದ್ದೂ ತಿಳಿವಳಿಕೆ, ನಂಬಿಕೆಯಾಗಲಿಲ್ಲಾ. ಮಾನವ ಈ ಸ್ಥಿತಿಯಲ್ಲಿ ಸ್ವಯಂ ದರಿದ್ರನಾಗಿರುತ್ತಾನೆ ಹಾಗು ಮತ್ತವರನ್ನು ದರಿದ್ರ ಮಾಡುತ್ತಾನೆ.  ಮಾನವ ಸ್ವಯಂ ತನ್ನ ದರಿದ್ರತೆಯಿಂದ ಧರಣಿಯನ್ನು ದರಿದ್ರ ಮಾಡಿದ್ದಾನೆ. ತಿಳಿವಳಿಕೆ ಹಾಗು

ನಂಬಿಕೆಯ ಭಾಗವನ್ನು ಪ್ರಖರ ಮಾಡಬೇಕೆಂದು ನಾನು ಅರಿತುಕೊಂಡಿದ್ದೇನೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಈ ಪ್ರಖರತೆಯ ಸಂಭವನೀಯತೆಯಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಈ ಪ್ರಖರತೆಯ ಆವಶ್ಯಕತೆಯಿದೆ ಇದು ಸಮಯೋಚಿತವಾಗಿದೆ. ಅರಿವನ್ನು ಪ್ರಮಾಣೀಕರಿಸಲು ಮತ್ತು ಪರಂಪರೆಯ ರೂಪದಲ್ಲಿ ಪ್ರವಾಹಿತ ಮಾಡುವುದರ ಅರ್ಥವೇ ವಿದ್ಯೆ.

ಜೀವನದ ಕ್ರಿಯೆಗಳನ್ನು ಮೂಲತಃ ಐದು ಭಾಗದಲ್ಲಿ ನೋಡಬಹುದು. ಪ್ರತಿಯೊಂದು ಭಾಗದಲ್ಲಿ ಎರಡು ಕ್ರಿಯೆಗಳಿರುತ್ತದೆ, ಸ್ಥಿತಿ ಮತ್ತು ಗತಿಯರೂಪದಲ್ಲಿ. ಉದಾಹರಣೆಗೆ, ಪ್ರತಿಯೊಂದು ಜೀವನದಲ್ಲಿ 'ಆಸೆ' ಎಂದು ಹೆಸರಿನ ಕ್ರಿಯೆ ಇರುತ್ತದೆ, ಇದರಲ್ಲಿ ಎರಡು ಕ್ರಿಯೆಗಳಿರುತ್ತವೆ ಆಯ್ಕೆ ಮತ್ತು ಆಸ್ವಾದ. ಆಸ್ವಾದಕ್ಕಾಗಿ ನಾವು ಏನನ್ನು ಆರಿಸುಕೊಳ್ಳುತ್ತೆವೋ ಇದು ಒಂದು 'ಆಯ್ಕೆ' ಕ್ರಿಯೆ. ಆಸ್ವಾದ ಮಾಡುವುದೂ ಒಂದು ಕ್ರಿಯ. ಇವೆರಡು ಕ್ರಿಯೆ ಆಗುವ ಭಾಗದ ಹೆಸರು ಮನ. ಆಯ್ಕೆ ಕ್ರಿಯೆಯಲ್ಲಿ ನಮ್ಮ ಆಸ್ವಾದಕ್ಕಾಗಿ ಬೇಕಾಗಿರುವ ಹಲವಾರು ಪ್ರಕಾರದ ವಸ್ತುಗಳ ಪರಿಕಲ್ಪನೆ ಮಾಡಿದ್ದೇವೆ ಮತ್ತು ಹಲವಾರು ಪ್ರಕಾರದ ವಸ್ತುಗಳ ಶೇಖರಣೆ ಮಾಡಿದ್ದೇವೆ ಹಾಗು ಶೇಖರಿಸುವುದರಲ್ಲಿ ನಿರತರಾಗಿದ್ದೇವೆ.  ಇಂದಿನವರಗೆ ನಾವು ಸೌಕರ್ಯಗಳ ಸಂಗ್ರಹಕ್ಕಾಗಿ ಶೇಖರಣೆ ಮಾಡಿದ್ದೇವೆ.  ಇದರ ಕಾರಣ, ನಾವು ಸೌರ್ಕರ್ಯ ಸಂಗ್ರಹದ ಪ್ರಯೋಜನೆಯನ್ನು ತಿಳಿದುಕೊಳ್ಳುವುದರಲ್ಲಿ-ನಂಬುವುದರಲ್ಲಿ ಎಷ್ಟು ಹಿಂದೆ ಬೀಳುತ್ತೇವೋ ಅಷ್ಟೇ ಅದರ (ಸೌಕರ್ಯಗಳ ಸಂಗ್ರಹದ) ವಿವಶವಾಗುತ್ತಿದ್ದೇವೆ. ಸೌಕರ್ಯಗಳ ಸಂಗ್ರಹ ಮಾಡುವುದರಲ್ಲಿ ತೃಪ್ತಿಯ ಶಿಖರ ಪಡೆಯಲಿಲ್ಲ. ಆದರೆ ಇದರ ವ್ಯವಹಾರಿಕ ಪ್ರಯೋಜನೆಯನ್ನು ಅರಿತುಕೊಂಡಾಗ, ಇದು ಶರೀರದ ಪೋಷಣೆ-ಸಂರಕ್ಷಣೆಗೆ ಆವಾಸ, ಆಹಾರ, ಅಲಂಕಾರದ (ಸಾಧನದ) ಅವಶ್ಯಕತೆಯ ರೂಪದಲ್ಲಿದೆಯೆಂದು ಅರಿವಾಗುತ್ತದೆ. ಸಮಾಜದ ಗತಿಗಾಗಿ ದೂರದರ್ಶನ, ದೂರಶ್ರವಣ, ದೂರಗಮನದ ರೂಪದಲ್ಲಿ ಸ್ಪಷ್ಟವಾಗುತ್ತದೆ. ಈ ಎಲ್ಲಾ ವಸ್ತುಗಳು ಉಪಲಬ್ಧವಾಗಿವೆ ಮತ್ತು ಸೌಕರ್ಯ-ಸಂಗ್ರಹದ ಆಧಾರದ ಮೇಲೆ ಮಾನವ ತೃಪ್ತನಾಗಲಿಲ್ಲ. ಇದೊಂದು ಭಾರಿ ವಿಡಂಬನೆಯ ಮಾತು .

ಜೀವನದ ಇನ್ನೆರಡು ಕ್ರಿಯೆಗಳು 'ವಿಶ್ಲೇಷಣೆ' ಮತ್ತು 'ತುಲನ'. ವಿಶ್ಲೇಷಣೆ ಕ್ರಿಯೆ ಜೀವನದಲ್ಲಿ ನಿರಂತರ ವಿರುತ್ತದೆ. ಹಲವಾರು ವಿಶ್ಲೇಷಣೆಗಳ ಮೂಲಕ ಪ್ರಯೋಜನೆಗಳನ್ನು ಗುರುತಿಸುತ್ತೇವೆ ಪ್ರಯೋಜನೆ ಮೂಲತಃ: ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವಪೂರ್ವಕ ಬಾಳುತ್ತಾ ಪ್ರಮಾಣೀಕರಿಸಬೇಕು. ಇದರ ವಿಪರೀತ ನೋಡಿದರೆ, ಭೋಗ, ಅತಿಭೋಗ - ಇದರಲ್ಲಿ ಮಾನವನಿಗ ಸ್ಥಿರವಾಗುವ ಸ್ಥಾನ ಸಿಗುವುದಿಲ್ಲ.

ಈವಾಗ ವಿಜ್ಞಾನ, ಸರ್ವ ಮಾನವನ ಮೃತ್ಯು ಸ್ವಲ್ಪ ಸಮಯದಲ್ಲೇ ಆಗುತ್ತದೆ ಹಾಗು ಧರಣಿಯೂ ನಷ್ಟವಾಗುತ್ತದೆ ಎಂಬುವ ನಿಷ್ಕರ್ಷಕ್ಕೆ ಬಂದಿದೆ. ಇದು ಆಗಲೇ ಬೇಕು. ಧರಣಿಯ ವಿಧಿಯಿಂದ ಯೋಚಿಸಿದರೆ, ಧರಣಿಯು ಸರ್ವ ಸಮೃದ್ಧವಾದನಂತರವೇ, ಮಾನವನ ಆವಾಸಕ್ಕೆ ಲಾಯಕ್ಕಾದನಂತರವೇ ಧರಣಿಯ ಮೇಲೆ ಮಾನವನ ಅವತರಣವಾಯಿತು. ಮಾನವನಿಗೆ ಸಮಯ-ಸಮಯಕ್ಕೆ ಜಾಗೃತನಾಗಲು ಅವಸರ ಪ್ರದಾನವಾಯಿತು. ಮಾನವ ಜಾಗೃತನಾಗದೆ ಭೋಗ-ಅತಿಭೋಗದ ದಿಕ್ಕಿನಲ್ಲಿ ಮುಂದುವರೆದ. ಭೋಗ ಅತಿಭೋಗವನ್ನು ಮಾರ್ಗವಾಗಿ ನಿಶ್ಚಿತ

ಮಾಡಿದ ಕಾರಣ ಮಾನವ ಸೌಕರ್ಯಗಳ ಸಂಗ್ರಹವನ್ನು ಮಿತಿಯಿಲ್ಲದ ದಿಕ್ಕಿನಲ್ಲಿ ಮುಂದುವರೆದ. ಎಲ್ಲರಲ್ಲಿರುವ ಸೌಕರ್ಯಗಳ ಸಂಗ್ರಹದ ದುರಾಸೆಯನ್ನು ಪೂರೈಸುವ ಸಾಮಗ್ರಿ ಈ ಧರಣಿಯ ಮೇಲಿಲ್ಲ. ಹೀಗಾಗಿ ಮಾನವನ ಈ ದುರಾಸೆ ಅವನನ್ನು ಮುಳುಗಿಸುತ್ತದೆ. ಆದ್ದರಿಂದ ಎಲ್ಲಾ ಸೌಕರ್ಯ ಸಂಗ್ರಹವನ್ನು ಪ್ರಯೋಜನೆಯ ಸಮ್ಮತಿ ಆಗವುದು ಅವಶ್ಯಕವಾಗಿದೆ. ಪ್ರಯೋಜನೆಯ ಸಮ್ಮತಿ  ಆದರೆ ಶರೀರ ಪೋಷಣೆ-ಸಂರಕ್ಷಣೆ ಮತ್ತು ಸಮಾಜ ಗತಿಯನ್ನೇ ಪಡೆಯುತ್ತೇವೆ. ಸಮಾಜ ಗತಿಯ ದಿಕ್ಕಿನಲ್ಲಿ ಹೊರಟರೆ, ಅಖಂಡ ಸಮಾಜದಲ್ಲಿ ಭಾಗವಹಿಸುವುದು ಹಾಗು ಸಾರ್ವಭೌಮ ವ್ಯವಸ್ಥೆಯಲ್ಲಿ ಭಾಗವಹಿಸುವುದೇ ಆಗುತ್ತದೆ. ಈ ಪ್ರವರ್ತನೆಗಳಲ್ಲಿ ಮಾನವ ಬಾಳಲು ಆರಂಭಿಸಿದಾಗ ಸಮಾಧಾನದಿಂದ ಸುಖ ಉಳ್ಳವವನಾಗಿ ಬಾಳಬಹುದು. ಈ ವಿಧಿಯಿಂದ ಅಸ್ತಿತ್ವದಲ್ಲಿ ಜಾಗೃತಿಯನ್ನು ಪ್ರಮಾಣೀಕರಿಸುವುದೇ ಜೀವನದ ಉದ್ದೇಶ. ಇದರಲ್ಲಿ ಅದ್ಭುತ ಸ್ರೋತ, ಸಫಲತೆಯ ಆಧಾರವೇನೆಂದರೆ ವ್ಯಕ್ತಿ ವ್ಯವಸ್ಥೆಯಲ್ಲಿ ಬಾಳಲು ಬಯಸುತ್ತೇನ. ಶ್ರಮ ಕಾಲದಲ್ಲಿ ವ್ಯವ್ಯವಸ್ಥೆಯ ಮೂಲ ತತ್ವ ಭಯ ಮತ್ತು ಪ್ರಲೋಭನೆಯೇ ಆಗಿದೆ.  ಜಾಗೃತಿಯ ನಂತರ ಮೌಲ್ಯ, ಮೌಲ್ಯಮಾಪನ ಮತ್ತು ಉಭಯ ತೃಪ್ತಿಯ ಗುರುತಿಸುವುದಕ್ಕಾಗಿ ಅರಿವನ್ನು ವಿಕಸಿತ ಮಾಡುವ ಆವಶ್ಯಕತೆ ಇದೆ.

## ಜೀವನದ ಸ್ವರೂಪ

ಮನ, ವೃತ್ತಿ, ಚಿತ್ತ, ಬುದ್ಧಿ, ಆತ್ಮದ ಅವಿಭಾಜ್ಯ ಸ್ವರೂಪ 'ಜೀವನ' ಆಗಿದೆ, ಇವು ಎಂದಿಗೂ ಬೇರೆ-ಬೇರೆ ಆಗುವುದಿಲ್ಲ.

ಮನದ ಎರಡು ಕಾರ್ಯರೂಪಗಳಿವೆ - ಆಯ್ಕೆ, ಆಸ್ವಾದ. ವೃತ್ತಿಯ ಎರಡು ಕಾರ್ಯರೂಪಗಳಿವೆ - ವಿಶ್ಲೇಷಣೆ, ತುಲನ. ಚಿತ್ತದ ಎರಡು ಕಾರ್ಯರೂಪಗಳಿವೆ - ಚಿತ್ರಣ, ಚಿಂತನ. ಬುದ್ಧಿಯ ಎರಡು ಕಾರ್ಯರೂಪಗಳಿವೆ - ಋತಂಭರ (ಸಂಕಲ್ಪ), ಬೋಧ. ಆತ್ಮದ ಎರಡು ಕಾರ್ಯರೂಪಗಳಿವೆ - ಪ್ರಾಮಾಣಿಕತೆ, ಅನುಭವ.

ಈ ಹತ್ತು ಕ್ರಿಯೆಗಳ ರೂಪದಲ್ಲಿ ಪ್ರತಿಯೊಂದು ಜೀವನ ಸತತ ಕಾರ್ಯರತವಾಗಿದೆ. ಈ ಹತ್ತು ಕ್ರಿಯೆಗಳನ್ನು ಮಾಡುತ್ತಾ ಜೀವನ ಭ್ರಮೆ ಅಥವಾ ಜಾಗೃತಿಯ ರೂಪದಲ್ಲಿ ಪ್ರಮಾಣೀಕರಿಸುತ್ತಾ ಕಂಡುಬರುತ್ತದೆ. ಭ್ರಮಿತ ಅವಸ್ಥೆಯಲ್ಲಿ ಸಂವೇದನೆಶೀಲತೆಯಿಂದ ಪ್ರೇರಿತವಾಗಿರುತ್ತೆ ಮತ್ತು ಹತ್ತು ಕ್ರಿಯೆಗಳಲ್ಲಿ ನಾಲ್ಕುವರೆ ಕ್ರಿಯೆಗಳೇ ಕಾರ್ಯರತವಾಗಿರುತ್ತವೆ. ಬಾಕಿ ಕ್ರಿಯೆಗಳಲ್ಲಿ ಅರಿತುಕೊಳ್ಳುವ ವಸ್ತುವಿರುವುದಿಲ್ಲ ಆದ್ದರಿಂದ ಜೀವನದಲ್ಲಿ ವಿರೋಧಾಭಾಸವಿರುತ್ತದೆ. ಈ ನಾಲ್ಕು ಕ್ರಿಯೆಗಳು ಯಾವುದೆಂದರೆ - ಆಯ್ಕೆ, ಆಸ್ವಾದ, ವಿಶ್ಲೇಷಣೆ, ಚಿತ್ರಣ ಹಾಗ ಅರ್ಧ ತುಲನ. ಆಯ್ಕೆ, ಆಸ್ವಾದ, ಸಂವೇದನಶೀಲತೆಯ ಆಧಾರದ ಮೇಲೆ ಆಗುತ್ತದೆ. ಕೈ, ಕಾಲು, ಮೂಗು, ಕಿವಿ, ಕಣ್ಣು, ನಾಲಿಗೆ ಇತ್ಯಾದಿಗಳಿಗೆ ಚನ್ನಾಗನಿಸುವ ವಸ್ತುಗಳನ್ನು ಅಂಗೀಕರಿಸುತ್ತೇವೆ ಹಾಗು ಕೆಟ್ಟದಾಗನಿಸುವ ವಸ್ತುಗಳನ್ನು ತಿರಸ್ಕರಿಸುತ್ತೇವೆ. ಸಂವೆದನಶೀಲತೆಯ ಪಕ್ಷದಲ್ಲಿಯೇ ತುಲನ ನಾಮದ ಕ್ರಿಯೆ, ಪ್ರಿಯ, ಹಿತ, ಲಾಭದ ರೂಪದಲ್ಲಿ ಕಾರ್ಯ ಮಾಡುತ್ತದೆ. ಇದರ ಅರ್ಥದಲ್ಲಿಯೇ ವಿಶ್ಲೇಷಣೆ ಮಾಡುತ್ತದೆ ಮತ್ತು ಇದಕ್ಕೆ ಚಿತ್ರಣ

ಕ್ರಿಯೆಯನ್ನು ಸಂಪಾದಿಸುತ್ತದೆ. ಒಟ್ಟಿನಲ್ಲಿ ಇಂದ್ರಿಯ-ಸಂವೇದನೆಯನ್ನೇ ಜೀವನವೆಂದು ನಂಬುತ್ತಾ, ಬಾಳಲು ತತ್ಪರರಾಗಿದ್ದೇವೆ. ಇದರ ನಾಮವೇ 'ಭ್ರಮಿತ ಜೀವನ'. ಇದರಲ್ಲಿ ವಿರೋಧಾಭಾಸ ಆಗುತ್ತಲೇ ಇರುತ್ತದೆ. ಇದು ಸರಿಯೋ ತಪ್ಪೋ ಅಥವಾ ಹೆಚ್ಚೋ ಕಡಿಮೆಯೋ, ಈ ರೀತಿಯ ಎಲ್ಲ ಸಂಕಟ ಮಾನವನ ಸಮ್ಮುಖ ಇದ್ದೇ ಇರುತ್ತದೆ. ಮಾನಸಿಕತೆ ಆದಿಮಾನವನಂತೆಯೇ ಇರುತ್ತದೆ. ವಸ್ತುಗಳು ಬಹಳ ಹೆಚ್ಚಾಗಿವೆ. ಮಾನವ ಮಾನಸಿಕತೆಗಾಗಿ ಮತ್ತು ಐದುವರೆ ಕ್ರಿಯೆಗಳ ಜಾಗೃತಿಯಾಗುವುದು ಆವಷ್ಯಕತೆಯಾಗಿದೆ. ಅವು ಅರಿವಿನಿಂದ ಜಾಗೃತವಾಗುತ್ತವೆ.

ಐದು ಸಂವೇದನೆಗಳು ಹಾಗು ನಾಲ್ಕು ವಿಷಯಗಳನ್ನು ಗುರುತಿಸಲು ನಿರ್ವಹಿಸಲು ನಾಲ್ಕುವರೆ ಕ್ರಿಯೆಗಳು ಸಾಕು, ಇವುಗಳಲ್ಲೇ ಮಾನವ ಪಶುವತ್ವ, ರಾಕ್ಷಸತ್ವದ ಜೊತೆ ಬಾಳುತ್ತಾನೆ. ಮಾನವನಂತೆ ಬಾಳುವುದು ಕೇವಲ ನಾಲ್ಕುವರೆ ಕ್ರಿಯೆಗಳಿಂದ ಆಗುವುದಿಲ್ಲ. ಅದರಿಂದ ಸಂತುಷ್ಟರಾಗುವುದಿಲ್ಲ. ಇವಾಗ ಮೂಲ ಬಿಂದುವೇನೆಂದರೆ ಜೀವನದ ಎಲ್ಲ ಹತ್ತು ಕ್ರಿಯೆಗಳನ್ನು ವ್ಯವಹಾರದಲ್ಲಿ ಪ್ರಮಾಣೀಕರಿಸುವುದೇ ಜಾಗೃತಿ. ಸ್ವಲ್ಪ ಭಾಗವನ್ನು ಪ್ರಮಾಣೀಕರಿಸುವುದರಿಂದ ಜಾಗೃತಿಯಾಗುವುದಿಲ್ಲ. ಹೇಗೆಂದರೆ ಶರೀರ ಸ್ವಸ್ಥವಾಗಿದ್ದರೆ ಐದು ಜ್ಞಾನೇಂದ್ರಿಯ ಮತ್ತು ಐದು ಕರ್ಮೇಂದ್ರಿಯಗಳು ಸ್ಪಷ್ಟವಾಗಿ ಒಂದಕ್ಕೊಂದರ ಸಂಯೋಗದಲ್ಲಿ ಕಾರ್ಯರತರಾಗಿರುತ್ತದೆ. ಆದರೆ ಇದರಲ್ಲಿ ಕೈ ಕೆಲಸಮಾಡದಿದ್ದರೆ, ಕಾಲು ಕೆಲಸಮಾಡದಿದ್ದರೆ, ಅಂಗವಿಕಲವೆಂದೇ ಹೇಳುತ್ತೇವೆ. ಇಂತವರನ್ನು ಸ್ವಸ್ಥ ಮಾನವನೆಂದು ಕರೆಯುವುದಿಲ್ಲ.

ತಿಳಿವಳಿಕೆ, ನಂಬಿಕೆಯ ಕ್ರಿಯೆಯನ್ನು ನಾವು ಗುರುತಿಸುವ, ನಿರ್ವಹಿಸುವ ಕ್ರಿಯೆಯ ಸಹಿತ ಜೋಡಿಸುವವರೆಗೂ ಜಾಗೃತಿಯಾಗುವುದಿಲ್ಲ. ಇಂದಿನವರೆಗು ನಾವು ಸಂವೇದನೆಗಳನ್ನು ಗುರುತಿಸುವ ನಿರ್ವಹಿಸುವ ಕ್ರಿಯೆ ವಿಧಿಯ ಸಹಿತ ಈ ನಾಲ್ಕುವರೆ ಕ್ರಿಯೆಗಳನ್ನು ನಾವೆಲ್ಲರೂ ಪ್ರಮಾಣೀಕರಿಸಿದ್ದೇವೆ, ಮುಂದಿನ ಕ್ರಿಯೆಗಳು ವ್ಯವಹಾರದಲ್ಲಿ ಪ್ರಮಾಣೀಕರಿಸಬೇಕು, ಇದೇ ಜಾಗೃತಿಯ ಆಧಾರ. ಇದು ತಿಳಿವಳಿಕೆ ನಂಬಿಕೆಯ ವಿಧಿಯಿಂದಲೇ ಆಗುತ್ತದೆ. ಮಾನವೇತ್ತರ ಪ್ರಪಂಚ ಗುರುತಿಸುವುದರಲ್ಲಿ ನಿರ್ವಹಿಸುವುದರಲ್ಲಿ ನಿಯಮಿತವಾಗಿರುತ್ತದೆ, ನಿಯಮದ ಅನುಸಾರ ಕಾರ್ಯರತವಾಗಿರುತ್ತದೆ, ಈ ವಿಧಿಯಿಂದಲೇ ವ್ಯವಸ್ಥೆ ಇರುತ್ತದೆ.

ಸಂವೇದನಶೀಲತೆ ಅನುಸಾರ ಬಾಳುವ ಪರಾಕಾಷ್ಠ ಜೀವಿಪ್ರಪಂಚದಲ್ಲೇ ಪೂರೈಸುತ್ತದೆ. ಸಂವೇದನಶೀಲತೆಯಲ್ಲೇ ಅಂತಿಮ ಹಂತವಿದ್ದಿದ್ದರೆ ಮಾನವನಿರುವ ಅವಶ್ಯಕತೆಯೇ ಇರಲಿಲ್ಲ. ಅಸ್ತಿತ್ವದಲ್ಲಿ ನಿಷ್ಪ್ರಯೋಜನೆಯ ಯಾವ ಸ್ಥಿತಿಯೂ ಇಲ್ಲ. ಸಂಪೂರ್ಣ ಅಸ್ತಿತ್ವದಲ್ಲಿ, ಸಂಪೂರ್ಣತೆಯಲ್ಲಿ ಏಕಸೂತ್ರತೆ, ಒಂದು ಸಂಗೀತಮಯ ವ್ಯವಸ್ಥೆಯ ಸ್ವರೂಪವಿದೆ. ಪ್ರತಿಯೊಂದು ಗತಿ, ಪ್ರತಿಯೊಂದು ಸ್ಥಿತಿ, ಪ್ರತಿಯೊಂದು ಅವಸ್ಥೆ ಒಂದು ಸಾರ್ಥಕ ಸೂತ್ರಕ್ಕಾಗಿ ಸೇರಿದೆ. ವ್ಯವಸ್ಥೆಯಲ್ಲಿರುವುದು ಮತ್ತು ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವುದೇ ಸಾರ್ಥಕತೆ. ಜೀವನ ಜಾಗೃತವಾದಾಗ ಅನುಭವ ಹಾಗು ಪ್ರಾಮಾಣಿಕತೆ ಮೂಲಕ ನಮ್ಮ ಬೋಧ ಸಂಕಲ್ಪವಾಗುತ್ತದೆ ಮತ್ತು ಅದರ ಅನುರೂಪದಲ್ಲಿ ಚಿಂತನ, ಚಿತ್ರಣ ಸಂಪಾದಿತವಾಗಲು ಪ್ರಾರಂಭವಾಗುತ್ತದೆ. ಇದರ ಆಧಾರದ ಮೇಲೆಯೇ ತುಲನ

ವಿಶ್ಲೇಷಣೆ ಮತ್ತು ಆಯ್ಕೆ ಆಸ್ವಾದ ಆಗುತ್ತದೆ. ಇವಾಗ ನಾವು ಸಂವೇದನಶೀಲತೆಯನ್ನು ಸರ್ವೋತ್ಕೃಷ್ಟ ಮೌಲ್ಯವಾದುದೆಂದು ನಂಬಿ ಪ್ರತಿಯೊಂದು ವಿಚಾರ ಪ್ರತಿಯೊಂದು ಯೋಜನೆಯನ್ನು ತೈಯಾರು ಮಾಡುತ್ತೇವೆ. ಆದರೆ ಮೌಲ್ಯ ಮತ್ತು ಮೌಲ್ಯಮಾಪನ ಜಾಗೃತಿಯಲ್ಲೇ ಬರುತ್ತದೆ. ಇದೇ ಜಾಗೃತಿಯ ವ್ಯವಹಾರಿಕ ಸ್ವರೂಪ. ಸಂವೇದನ-ಶೀಲತೆ ಮೂಲಕ ವಿಧಿಯಿಂದ ನಾವು ಬಾಳುವ ಕಲೆಯನ್ನು ರೂಪಗೊಳಿಸುವ ಕಾರ್ಯ ಪೂರೈಸಿದ್ದೇವೆ. ಈ ವಿಧಿಯಿಂದ ಬಾಳಲು ಇರುವ ಎಲ್ಲ ಅವಶ್ಯಕತೆಗಳು, ಮಾನವನನ್ನು ಬಿಟ್ಟು ಬಾಕಿ ಪ್ರಪಂಚದಲ್ಲಿದೆ. ಇದರಲ್ಲಿ ಜೀವಿ, ಗಿಡಮರಗಳು, ಪದಾರ್ಥದ ಪ್ರಪಂಚ ಒಳಗೊಂಡಿವೆ. ಈ ಮೂರನ್ನು ಮಾನವನು ಹೇಗೆ ಉಪಯೋಗಿಸಿದ ಎಂಬುವುದು ನಿಮಗೆಲ್ಲಾ ತಿಳಿದಿದೆ. ಇದರಲ್ಲಿ ಹೇಗೆ ಸಫಲವಾಗಿದ್ದೇವೆ ಎಂಬುವುದೂ ತಿಳಿದಿದೆ. ನಾವು ಈ ಎಲ್ಲಾ ಸಫಲತೆಗಾಗಿ ಮತ್ತವರ ವಿಫಲತೆಯ ಮಾತಾಡಿದರೆ ಅಸಂತುಲನವಾಗುತ್ತದೆ. ನಾವು ಇಂದಿನವರೆಗೆ ಮಾಡಿರುವ ಸೌಕರ್ಯ ಸಂಗ್ರಹದ ಕಾರ್ಯದಲ್ಲಿ ಧರಣಿ ತ್ರಸ್ತವಾಗಿದೆ. ಧರಣಿಯನ್ನು ಕಾಪಾಡಲು ಸಾಧ್ಯವೋ ಇಲ್ಲವೋ, ಇದೂ ಒಂದು ಪ್ರಶ್ನೆ ಚಿನ್ಹೆ. ಈ ಕ್ರಮದಲ್ಲಿ ಧರಣಿಯ ಮೇಲೆ ಮಾಡಿರುವ ಅಪರಾಧವನ್ನು ತಡೆಯಲೇ ಬೇಕು ಮತ್ತು ಅಪರಾಧ ವಿಹೀನ ವಿಧಿಯನ್ನು ಅರಿತುಕೊಳ್ಳ ಬೇಕು. ಅದಕ್ಕಾಗಿ ಎಷ್ಟೇ ವಿಜ್ಞಾನದಿಂದ ಅಥವಾ ಕಲೆ ಮತ್ತು ಶಿಕ್ಷಣದಲ್ಲಿ ಪ್ರವೇಶವಾಗಿದೆಯೋ ಇದರಿಂದ ಅಪರಾಧ ಮುಕ್ತಿಯಾಗುವುದು ಸಾಧ್ಯವಿಲ್ಲ. ಇದರಲ್ಲಿ ಮುಳುಗುವ ಸಂಭವನೀಯತೆಯಿದೆ. ಇದರಲ್ಲಿ ಧರಣಿಯನ್ನು ನಾಶಮಾಡುವ ಸಂಭವನೀಯತೆಯಿದೆ, ಮಾನವ ಒಬ್ಬರಿನ್ನೊಬ್ಬರನ್ನು ಕಾಡುವ ಸಂಭವನೀಯತೆ ಇದೆ. ಇಂದಿನವರಗೆ ನಾವು ದೊಡ್ಡ-ದೊಡ್ಡ ರಾಜ್ಯಗಳನ್ನು ಸೇರಿಸಿ, ಸಂಯುಕ್ತ ರಾಷ್ಟ್ರ ಸಂಘ, ಸಭೆಯನ್ನು ಮಾಡಿದ್ದೇವೆ. ಇದರಲ್ಲಿ ಹಲವಾರು ಸಮ್ಮೇಳನಗಳು ನಡೆದವು ಆದರೆ ಇವತ್ತಿಗೂ, ಸೈನಿಕ ಶಕ್ತಿಯ ಅಧಿಕಾರ ಈ ಸಂಘದಲ್ಲಿರಬೇಕ ಅಥವಾ ರಾಷ್ಟ್ರದಲ್ಲಿರಬೇಕ ಅಥವಾ ಇರಲೇಬಾರದ, ಎಂಬುವ ನಿರ್ಣಯ ಆಗಿಲ್ಲ. ಯುದ್ಧ ಆಗಬೇಕ, ಆಗಬಾರದ? ಇದೆ ರೀತಿಯಲ್ಲಿ, ಶಿಕ್ಷಣಕ್ಕಾಗಿ ಪ್ರತಿ ವರ್ಷದಲ್ಲಿ ನಾಲ್ಕು ಸಲ ಸಮೀಕ್ಷೆಯಾಗುತ್ತದೆ. ಪುನಃ ವಿಚಾರ, ಪುನಃ ಸಮೀಕ್ಷೆ, ಆದರೆ, ಮಾನವನಿಗೆ ಅನುಗುಣವಾದ ಶಿಕ್ಷಣ ಏನಿರಬೇಕು ಎಂಬುವುದು ಇಂದಿಗೂ ನಿರ್ಣಯ ಆಗಿಲ್ಲ.

ಪ್ರತಿಯೊಬ್ಬ ಮಾನವ ಸಂತಾನ, ಸರಿಯಾದುದನ್ನು ಮಾಡುವ ಇಚ್ಛುಕನಾಗಿರುತ್ತಾನೆ ಎಂಬುವುದನ್ನು ಚಿಕ್ಕನಿಂದಲೇ ನಾನು ವೇದ ವಿಚಾರಗಳಲ್ಲಿ ಅಧ್ಯಯನ ಮಾಡಿದ್ದೇನೆ. ಮಕ್ಕಳು ದೊಡ್ಡರಾಗುತ್ತಾ ಸುಳ್ಳು ಹೇಳಲು ಪ್ರಾರಂಭಿಸುತ್ತಾರೆ, ನಾವು ಮಾಡಿರುವ ವಾತಾವರಣೆಯಲ್ಲಿ ಸುಳ್ಳು ಹೇಳಲಾಗದೆ ನಡೆಯುವುದಿಲ್ಲ. ವ್ಯಾಪಾರದಲ್ಲಿ ಸುಳ್ಳು ಒಳಗೊಂಡಿದೆ. ರಾಜ್ಯ ಶಾಸನದಲ್ಲಿ ಸುಳ್ಳು ಇದೆ, ಶಿಕ್ಷಣದಲ್ಲಿ ಸತ್ಯ ಕಂಡುಬರುವುದಿಲ್ಲ. ಮಾನವ ಎಲ್ಲಿ ಹೋಗಬೇಕು? ಈ ರೀತಿಯಲ್ಲಿ ಮಾನವ ಪರಿಸ್ಥಿತಿಗಳಲ್ಲಿ ಬಾಧ್ಯನಾಗಿ, ತದನುಸಾರ ವ್ಯವಹಾರ ಹಾಗು ದಿನಚರಿಯನ್ನು ನಡಿಸುತ್ತಾನೆ. ಈ ತರಹ ಮಾನವ ಯಾವುದೇ ಲಕ್ಷ್ಯದ ವರೆಗೆ ಮುಟ್ಟಿಲ್ಲ ಹಾಗು ಮುಟ್ಟುವುದಿಲ್ಲ, ಎಲ್ಲ ದೊಡ್ಡ-ದೊಡ್ಡ ಸಂಸ್ಥೆಗಳು, ರಾಜ್ಯ ಸಂಸ್ಥೆಗಳು, ಇವೆಲ್ಲರಲ್ಲಿ ದೊಡ್ಡ-ದೊಡ್ಡ ಪ್ರೋಜೆಕ್ಟುಗಳಿವೆ ಆದರೆ ನಾವು ಸಂಕಟದಿಂದ ಮುಕ್ತರಾಗಿಲ್ಲ.

ಈ ಸಂಕಟದಿಂದ ಮುಕ್ತರಾಗಬೇಕೆಂಬುವ ಅವಶ್ಯಕತೆಯೇನೂ ಇದೆ ಆದರೆ ಮಾನವ ಅರಿವುಳ್ಳವನಾದಾಗ ಕೇವಲ ಇದು ಸಧ್ಯ, ಇದು ಯಾವಾಗ ಆಗುತ್ತದೆಯೋ, ಒಂದೇ ವಿಧಿಯಿಂದ ಆಗಲು ಸಾಧ್ಯ, ಅದು ಮಾನವೀಯತೆಪೂರ್ಣ ನಡತೆ. ಮೌಲ್ಯ, ಮೌಲ್ಯಮಾಪನ, ಇದರ ಸಂಬಂಧ ಸಹ-ಅಸ್ತಿತ್ವ ಸಹಜ ವಿಧಿಯಿಂದಿದೆ. ಇದಕ್ಕಾಗಿ ನಮಗೆ ಯಾವ ಪ್ರಯೋಗಶಾಲೆಯನ್ನು ಮಾಡಬೇಕಾಗಿಲ್ಲ. ಅಥವಾ ಯಾವ ಯುದ್ದವೂ ಮಾಡಬೇಕಾಗಿಲ್ಲ. ಸಂಬಧಕ್ಕಾಗಿ ಪ್ರಯೋಜನೆಯನ್ನು ತಿಳಿದುಕೊಳ್ಳುವುದು - ನಂಬುವುದು ಅವಶ್ಯಕ, ಇದರಿಂದ ಗುರುತಿಸುವುದು-ನಿರ್ವಹಿಸುವುದಾಗುತ್ತದೆ. ಪ್ರಯೋಜನೆಯದರ ತಿಳಿವಳಿಕೆ - ನಂಬಿಕೆಯಾಗುತ್ತದೆ. ತಿಳಿವಳಿಕೆ-ನಂಬಿಕೆಯಿಲ್ಲದೆ, ಗುರುತಿಸುವುದರಲ್ಲಿ-ನಿರ್ವಹಿಸುವುದರಲ್ಲಿ ಅಲೆದಾಟವಾಗುತ್ತ; ಉದಾಹರಣೆಗೆ, ನಾವು ಧರಣಿಯ ಸಂಬಂಧವನ್ನು, ಪ್ರಯೋಜನೆಯನ್ನು ತಿಳಿದುಕೊಳ್ಳುವುದರಲ್ಲಿ ತಪ್ಪುಮಾಡಿದ್ದೇವೆ. ಈ ಧರಣಿಯ ಮೇಲೆ ಮಾನವ ಪರಂಪರೆಯಿರಬೇಕಾದರೆ ಅದಕ್ಕಾಗಿ ಹೇಗೆ ಪರಿವರ್ತನೆ ತರುವುದು ಎಂಬುವುದಕ್ಕಾಗಿ ಹಲವಾರು ಪ್ರಕಾರದಿಂದ ಅರಿತುಕೊಳ್ಳುವ ಅವಶ್ಯಕತೆಯಿದೆ, ಅದಕ್ಕಾಗಿ ಈ ಪ್ರಸ್ತಾವವಿದೆ.

ಭ್ರಮಿತರಾಗಿರುವ ಕಾರಣ ಸಂವೇದನೆ-ಶೀಲತೆಯಲ್ಲಿ ಮಾನವರು ಬಾಳಿದ್ದಾರೆ. ಇದರಿಂದ ಮಾನವನಿಗೆ ತೃಪ್ತಿ ಸಿಗಲಿಲ್ಲ. ಅತೃಪ್ತ ವ್ಯಕ್ತಿ ಏನೇನು ಮಾಡಬೇಕು ಅದನ್ನೆಲ್ಲ ಮಾಡುತ್ತಾನೆ. ಅತೃಪ್ತಿಯನ್ನು ತೃಪ್ತಿಗೆ ತರುವದಷ್ಟೇ ಒಟ್ಟು ಕೆಲಸ, ಇದನ್ನು ನಾವು ಇನ್ನೊಂದು ಭಾಷೆಯಲ್ಲಿ 'ಜಾಗೃತಿ' ಎಂದು ಕರೆಯುತ್ತೇವೆ. ತೃಪ್ತಿ ಅರಿವಿನಿಂದ ಬರುತ್ತದೆ. ಇದೇ ತೃಪ್ತಿಯ ನಿತ್ಯ ಸ್ರೋತ. ಜೀವನ ಎಂದಿಗೂ ಸಾಯುವುದಿಲ್ಲ. ಜೀವನದಲ್ಲಿ ಅರಿವು ಬಂದರೆ, ತೃಪ್ತಿ ಬರುತ್ತದೆ, ಅದು ನಿರಂತರವೇ ಇರುತ್ತದೆ. ಇದನ್ನೆಲ್ಲಾ ನಾನು ನೋಡಿದ್ದೇನೆ. ಈ ಆಧಾರದ ಮೇಲೆ ಈ ಪ್ರಸ್ತಾವವಿದೆ, ಅರಿವು ಸರ್ವಮಾನವನ ಅಧಿಕಾರವಾಗಿದೆ. ಪ್ರತಿಯೊಬ್ಬ ವ್ಯಕ್ತಿ ಇದರ ಶೋಧ ಮಾಡಬಹುದು. ನನ್ನ ವಿಚಾರ ಹೀಗಿದೆ. ಮಾನವ ಜಾತಿ ತನ್ನ ಭಾವಿ ಕ್ಷಣಗಳನ್ನು ನಿರ್ಮಿತಮಾಡುವವನು. ಇದು ಸಮಾಧಾನ ಪೂರ್ಣ ವಿಧಿಯಿಂದ ವೈಭವಿತವಾಗಬಹುದು.

ಪ್ರಾಣಕೋಶಗಳು ಮಣ್ಣಿನಲ್ಲಿ ಸೇರಿದಾಗ ಫಲವತ್ತಾಗುತ್ತದೆ. ಆಹಾರಕ್ಕಾಗಿ ಈ ವ್ಯವಸ್ಥೆ ಪ್ರಕೃತಿ ಸಹಜವಾಗಿದೆ. ಪ್ರಾಕೃತಿಕ ರೂಪದಲ್ಲಿ ಇದೆ ಫಲವತ್ತ ವಸ್ತು. ಪ್ರಾಣಕೋಶಗಳು ರಚಿತವಾಗುತ್ತದೆ ಹಾಗು ಪ್ರಾಣಕೋಶಗಳು ರಚಿತ ರಚನೆಗಳು ಪುನಃ ವಿರಚಿತವಾಗಿ ಮಣ್ಣಿನಲ್ಲಿ ಸೇರುತ್ತವೆ, ಇದನ್ನು ಫಲವತ್ತವೆಂದು ಹೇಳುತ್ತೇವೆ. ಧರಣಿಯಲ್ಲಿ ಫಲಪ್ರದ ಇರುವ ಎಲ್ಲ ಅವಶ್ಯಕತೆ ಸ್ಥಾಪಿತವಾದ ನಂತರವೇ ಮಾನವನಿಗೆ ಈ ಧರಣಿಯ ಮೇಲೆ ಅವತರಿತವಾಗುವ ಅವಸರ ಸಿಕ್ಕಿತು. ಮಾನವ ಜನ್ಮಿಸಿದ ತಕ್ಷಣವೇ ಅರಣ್ಯದ ಮೇಲೆ ಆಕ್ರಮಿಸಿದ. ಅರಣ್ಯಗಳ ಮೇಲೆ ಆಕ್ರಮಣ ಮಾಡುತ್ತಾ ಮಾಡುತ್ತಾ ವಿಜ್ಞಾನ ಯುಗ ಬಂದಿತು, ಬಂದೊಂಡನೆ ಖನಿಜದ ಮೇಲೆ ಆಕ್ರಮಿಸಿದ. ಖನಿಜ ಹಾಗು ವನಸ್ಪತಿ, ಎರಡೂ ತಮ್ಮ ಅನುಪಾತಗಿಂತ ಅಧಿಕ ಶೋಷಣೆಯಾದ ಫಲಸ್ವರೂಪ ಧರಣಿಯಲ್ಲಿದ್ದ ಫಲವತ್ತಾದ ಸ್ರೋತ ಕಡಿಮೆಯಾಯಿತು. ಇವಾಗ ವೈಜ್ಞಾನಿಕರು ರಾಸಾಯನಿಕ ಗೊಬ್ಬರವನ್ನು ಮಾಡಿ ನಾವು ಪ್ರಪಂಚವನ್ನು ಉದ್ದಾರ ಮಾಡಿದ್ದೇವೆ ಎಂದು ಯೋಚಿಸುತ್ತಾರೆ. ಇದರ ಮೇಲೆ ನನ್ನ ವಿಚಾರವೇನೆಂದರೆ ಪ್ರಾಕೃತಿಕ

ರೂಪದಲ್ಲಿರುವ ವ್ಯವಸ್ಥೆ, ಫಲಪ್ರದವನ್ನು ಹೆಚ್ಚಿಸುವ ವ್ಯವಸ್ಥೆ, ಇದರಿಂದಲೇ ಧರಣಿಯ ಫಲವತ್ತಾ ಸುರಕ್ಷಿತವಾಗಿರಬಹುದು. ಧರಣಿಯ ಮೇಲೆ ಯಾವ ವಸ್ತುವಿನ ಅವಶ್ಯಕತೆ ಇಲ್ಲವೋ ನದಿಗಳು ಅವನ್ನು ಸಮುದ್ರಕ್ಕೆ ಕೊಂಡುಹೋಗಿ ಬಿಡುತ್ತದೆ. ಇವಾಗ ಸಮತೋಲನ ಹೇಗಾಯಿತು? ಗಿಡ ಮರಗಳು ಧರಣಿಯ ಮೇಲೆ ಗಹನ ರೂಪದಲ್ಲಿರುವ ಸ್ಥಿತಿಯಲ್ಲಿ ಇವೆಲ್ಲ ಸಮತೋಲನದಲ್ಲಿರುತ್ತದೆ. ನಾವು ಏನು ಮಾಡುತ್ತೇವೆಂದರೆ ಒಂದು ಸಮಸ್ಯೆಗೆ ಇನ್ನೊಂದು ಸಮಸ್ಯೆಯನ್ನುಂಟು ಮಾಡುತ್ತೇವೆ. ಹೀಗೆ ಸಮಸ್ಯೆಯಿಂದ ಸಮಸ್ಯೆ ಮುಚ್ಚುಹೊಗುವುದಿಲ್ಲ. ಯಾವುದೇ ಸಣ್ಣ ಸಮಸ್ಯೆಯನ್ನು ಎಷ್ಟೇ ದೊಡ್ಡ ಸಮಸ್ಯೆಯಿಂದ ಮುಚ್ಚಿಡಲು ಪ್ರಯತ್ನ ಮಾಡಿದರೂ ಅದು ಮುಚ್ಚಿರುವುದಿಲ್ಲ. ಇದೇನು ಆಕ್ಷೇಪಣೆ ಅಥವಾ ದೋಷಿಸುವ ಮಾತಲ್ಲ. ನಡೆದಿರುವ ಘಟನೆಗಳ ಸಹಿತ ಪುನರ್ವಿಚಾರ ಮಾಡುವ ಪ್ರಸ್ತಾಪ ಹೊರತು ಬೇರೆ ಯಾವ ಕಾರಣವೂ ಇಲ್ಲ. ಈ ಪ್ರಾಸ್ತಾಪದಲ್ಲಿ ಜೀವನದ ಹತ್ತು ಕ್ರಿಯೆಗಳನ್ನು ಪರಂಪರೆಯಲ್ಲಿ ಪ್ರಮಾಣೀಕರಿಸ ಬೇಕಷ್ಟೆ. ಹತ್ತು ಕ್ರಿಯೆಗಳಿಗಾಗಿ ಅರಿವನ್ನು ಚೇತನ ವಿಕಾಸ ಮೌಲ್ಯ ಶಿಕ್ಷಣಪೂರ್ವಕ ಪ್ರಮಾಣೀಕರಿಸ ಬೇಕು. ತಿಳಿದುಕೊಂಡು, ನಂಬಿದ್ದು, ಗುರುತಿಸಿ, ನಿರ್ವಾಹ ಮಾಡಬೇಕು. ತಿಳಿವಳಿಕೆ ಮತ್ತು ನಂಬಿಕೆಯ ತೃಪ್ತಿ ಬಿಂದು ಜಾಗೃತಿ ಮತ್ತು ಸಮಾಧಾನ. ಇದೇ ಅನುಭವ ಸಹಜ ಪ್ರಮಾಣ. ಆದ್ದರಿಂದ ಪ್ರತಿಯೊಬ್ಬ ಮಾನವ ಅನುಭವ ಮೂಲಕ ವಿಧಿಯಿಂದ ತನ್ನನ್ನು ಸಾರ್ಥಕಗೋಳಿಸಬಹುದು. ಇದರಲ್ಲಿ ಇನ್ನೊಂದು ಉಪಕಾರವೇನೆಂದರೆ ಈ ಪ್ರಸ್ತಾಪದಲ್ಲಿ ಪುರೋಹಿತವಾದಕ್ಕೆ ಯಾವ ಸ್ಥಾನವೂ ಇಲ್ಲ. ನಾನೇ ಎಲ್ಲರನ್ನು ಪಾರುಮಾಡುತ್ತೇನೆಂಬುವ ಮಾತಿನಿಂದ ಮುಕ್ತವಾಗಿದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಅರಿವಿನಿಂದ ಭ್ರಮೆ-ಮುಕ್ತನಾಗಬಹುದು. ಒಬ್ಬ ವ್ಯಕ್ತಿ ಸಫಲತೆ ಪಡೆದರೆ ಪ್ರಪಂಚ ಸಫಲವಾತ್ತದೆ ಎಂಬ ಮಾತು ಸಾಲದು, ಇದು ನೋಡಲಾಗಿದೆ. ಈ ಪ್ರಸ್ತಾಪದಲ್ಲಿ ಯಾರು ಅರಿತುಕೊಳ್ಳುತ್ತಾನೋ ಅವನು ಸಫಲತೆ ಪಡೆಯುತ್ತಾನೆ. ಇದುವರಗೆ ಎಲ್ಲಾ ಸದ್ಗ್ರಂಥಗಳಲ್ಲಿ ಆಶ್ವಾಸನೆಗಳೇನೋ ಬಹಳವಿದೆ ಆದರೆ ಪ್ರಮಾಣದ ರೂಪದಲ್ಲಿ ಧರಣಿಯ ಮೇಲೆ ಒಬ್ಬ ಮನುಷ್ಯನೂ ಹೊರಬಂದಿಲ್ಲ. ಇದಕ್ಕಾಗಿ ನಾವೇನುಮಾಡುವುದು, ಪರಂಪರೆಯಲ್ಲಿ ಬರದೆಯಿರುವು ವಸ್ತುಗೆ ಯಾವ ಸ್ಥಾನವೂ ಇಲ್ಲ. ಹಿಂದೊಬ್ಬ ಮಾನವ ಬೇಕಾದಷ್ಟನ್ನು ಪಡೆದಿದ್ದಾ ಅಥವಾ ಕಳೆದುಕೊಂಡಿದ್ದಾ ಎಂಬುವುದನ್ನು ನಾವು ಹೇಗೆ ಸತ್ಯಾಪನ ಮಾಡುವುದು, ಆದರೆ ಬಗೆಹರಿಸುವ ವಿಧಾನವಿದ್ದರೆ ಅದು ಪರಂಪರೆಯಲ್ಲಿ ಬಂದೇಬರುತ್ತದೆ. ಇದನ್ನು ಇನ್ನೊಂದು ರೀತಿಯಲ್ಲಿ ನೋಡ ಬಹುದು, ಮಾನವ ಇದುವರಗೆ ಹಲವಾರು ತಪ್ಪು ಹಾಗು ಅಪರಾಧಗಳನ್ನು ಮಾಡಿದ್ದಾನೆ ಆದರೆ ಇದರ ಪರಂಪರೆಯಾಗುವುದಿಲ್ಲ. ಪರಂಪರೆಯಾದಾಗಲೆಲ್ಲಾ ಅದು ಕೇವಲ ಅರಿವಿನದೇ ಆಗುತ್ತದೆ. ಮಾನವ ಮಾನವೀಯತೆಯಿಂದ ಬಾಳುವುದರ, ಕಲೆಯ, ಪರಂಪರೆಯಾಗುತ್ತದೆ. ಅರಿವಿನ ಪರಂಪರೆ ಅಧ್ಯವಸಾಯ ವಿಧಿಯಿಂದಲೇ ಆಗುತ್ತದೆ. ಬಾಳುವ ಕಲೆ ಪರಿವಾರ ವಿಧಿಯಿಂದ, ಸಮಾಜ ವಿಧಿಯಿಂದ, ವ್ಯವಸ್ಥೆ ವಿಧಿಯಿಂದ ಆಗುತ್ತದೆ. ಇದೇ ರೀತಿಯಲ್ಲಿ ನನ್ನ ಬಾಳುವ ಕಲೆಯನ್ನು ಅರಿವಿನ ಆಧಾರದ ಮೇಲೆಯೇ ಪಡೆದೆನು. ಅರಿವಿನಿಂದ ಬರುವ ಬಾಳುವ ಕಲೆ ನಿಶ್ಚಿತ ರೂಪದಿಂದ ವ್ಯವಸ್ಥೆಯಲ್ಲಿ ಬಾಳುವುದು.

ನ್ಯಾಯದಲ್ಲಿ ಪ್ರಮಾಣೀಕರಿಸದೆ ಮನುಷ್ಯ ಸಾಮಾಜಿಕವಾಗುವುದಿಲ್ಲ ಮತ್ತು ನ್ಯಾಯವಿಹೀನ ಮನುಷ್ಯ ಸಮುದಾಯದಲ್ಲಿದ್ದು ವಾದ-ವಿವಾದ ವಿಹೀನವಾಗಲು ಸಾಧ್ಯವಿಲ್ಲ. ಇಂತಹ ಸಮುದಾಯದಲ್ಲಿ ದ್ರೋಹ -

ವಿದ್ರೋಹ, ಸಂಘರ್ಷ ಮತ್ತು ಯುದ್ಧ ಆಗೇ ಆಗುತ್ತದೆ. ಶೋಷಣೆ ಆಗೇ ಆಗುತ್ತದೆ ಮತ್ತು ವಾದ-ವಿವಾದ, ದ್ರೋಹ-ವಿದ್ರೋಹ, ಸಂಘರ್ಷ, ಶೋಷಣೆ ಆಗುತ್ತಾ ಮನುಷ್ಯ ಸಾಮಾಜಿಕವಾಗಿಬಿಟ್ಟನು ಎಂಬುವುದನ್ನು ಹೇಗೆ ನಂಬುವುದು. ಸಮುದಾಯದ ಸಂಗರ್ಷವನ್ನು ಸರಿಯೆಂದು ನಂಬಿದರೆ ಪ್ರತಿಯೊಬ್ಬ ವ್ಯಕ್ತಿ ಯುದ್ದ ಮಾಡಬಹುದು, ಹೊಡೆದಾಡಬಹುದು. ಹಾಗಾದರೆ ಇದಕ್ಕಾಗಿ ಅವಕಾಶವಿರಬೇಕು, ಇದಕ್ಕೇಕೆ ಕಡಿವಾಣ. ಇದರ ಮೇಲೆ ಪುರ್ನರ್ವಿಚಾರ ಮಾಡುವ ಅವಶ್ಯಕತೆ ಇದೆ. ಇದನ್ನು ನಾವು ಸೆರಿಯಾಗಿ ಆಂತರೀಕಗೊಳಿಸಿದರೆ, ನಾವು ಇದುವರಗೆ ಏನು ಮಾಡಿದೆವೋ ಅದರಿಂದ ನಾವು ಸಫಲತೆ ಪಡೆಯಲಿಲ್ಲ ಎಂಬುವುದನ್ನು ನೋಡಬಹುದು, ಮತ್ತು ಯೋಚಿಸಲು ತಯಾರಾಗಬಹುದು. ಇದು ಮಾನವನ ಸ್ವಭಾವ ಸಹಜವೇ, ಪ್ರತಿಯೊಬ್ಬ ಮಾನವ ಯೋಚಿಸುತ್ತಾನೆ. ಪ್ರತಿಯೊಬ್ಬ ವ್ಯಕ್ತಿ ಯೋಚಿಸಬಲ್ಲ, ಶೋಧ ಮಾಡಬಲ್ಲ. ತನ್ನ ಶೋಧನೆಯಿಂದ ಸ್ವಯಂ ತೃಪ್ತನಾಗುವುದೂ ಆವಶ್ಯಕ, ಇನ್ನೊಬ್ಬರ ತೃಪ್ತಿಯ ಸ್ರೋತನಾಗುವುದೂ ಅವಶ್ಯಕ.

ಇಲ್ಲಿಂದ ಪ್ರಾರಂಭ ಮಾಡುವುದಕ್ಕಾಗಿ ಏನು ಮಾಡುವುದು? ಮೊದಲಿನ ಬಿಂದು ಅರಿವು, ಶಿಕ್ಷಣ-ಸಂಸ್ಕಾರ ವಿಧಿಯಿಂದ ಸರ್ವಸುಲಭವಾಗಲಿ. ಅರಿವಿನ ನಂತರ ಬಾಳುವ ಕಲೆಯನ್ನು ಸ್ವೀಕರಿಸಲಾಗಲಿ. ಬಾಳುವ ಕಲೆಯಲ್ಲಿ, ಧರಣಿಯ ಸಹಿತ ಹೇಗೆ ಬಾಳುವುದು, ಗಿಡಮರಗಳ ಸಹಿತ ಹೇಗೆ ಬಾಳುವುದು, ಪಶು ಪ್ರಪಂಚದ ಸಹಿತ ಹೇಗೆ ಬಾಳುವುದು ಮತ್ತು ಮಾನವನ ಜೊತೆ ಹೇಗೆ ಬಾಳುವುದು, ಇವೆಲ್ಲಾ ಒಳಗೊಂಡಿದೆ. ಇವುಗಳಲ್ಲಿ ಯಾವುದನ್ನು ನಾವು ಬಿಡಲಾಗುವುದಿಲ್ಲ, ಎಲ್ಲರಿನೊಡನೆ ಬಾಳಲೇ ಬೇಕು. ಪ್ರತ್ಯೊಬ್ಬ ವ್ಯಕ್ತಿ ಅನುಭವ ಮಾಡಬಲ್ಲ, ಮೌಲೀಕರಣೆ ಮಾಡಬಲ್ಲ. ಪ್ರತ್ಯೊಬ್ಬ ಮಾನವ ಇದರ ಹಕ್ಕು ಇರುವಂತೆಯೇ ಮಾತನಾಡುತ್ತಾನೆ ಇದರ ಹಕ್ಕಿನ ಬಗ್ಗೆ ಮಾತನಾಡುವ ಪ್ರವೃತ್ತಿ ಸಹಜ, ಬಲವಂತವೇನಿಲ್ಲಾ, ಪ್ರತ್ಯೊಬ್ಬ ವ್ಯಕ್ತಿಯಲ್ಲಿ ಇದು ಮೂಲ ರೂಪದಲ್ಲಿದೆ, ಉತ್ಸವವಾಗಿದೆ, ಸ್ವಯಂಸ್ಪೂರ್ತವಾಗಿದೆ. ಪ್ರತ್ಯೊಬ್ಬ ಮಾನವನ ಇದು ಅವಶ್ಯಕತೆ. ಇಷ್ಟು ಸಹಜ ಸ್ರೋತವಿರುವಾಗ, ನಾವು ಮತ್ತವರನ್ನು ಸಫಲ ಮಾಡಬಹುದೆಂದು, ನಾನು ಹೀಗೆ ಯೋಚಿಸಬಹುದು. ಇದು ಒಂದು ಆಶ್ಚರ್ಯಜನಕ ಘಟನೆ ಮತ್ತು ಇದರಲ್ಲಿ ನಾವೆಲ್ಲರೂ ಭರವಸೆಯನ್ನಿಟ್ಟಿಕೊಂಡುಬಂದಿದ್ದೇವೆ. ಆದ್ದರಿಂದ, ಇವಾಗ ಆಶ್ವಾಸನೆಯ ಮೇಲೆ ಭರವಸೆ ಇಡಬೇಕೆ ಅಥವಾ ಪ್ರಮಾಣಗಳ ಮೇಲೆ ವಿಶ್ವಾಸ ಇಡಬೇಕೆಯೆಂದು ಯೋಚಿಸಬೇಕು. ನನಗೆ, ಪ್ರಾರಂಭದಿಂದಲೇ ಆದ ಪ್ರವೃತ್ತಿ, ಪ್ರಮಾಣಗಳ ಆಧಾರದ ಮೇಲೆ ವಿಶ್ವಾಸ ಮಾಡುವುದಕ್ಕಾಗಿ ನನ್ನ ವಿಚಾರಗಳಾದವು. ನನ್ನ ಉತ್ಸಾಹ ಸ್ವಾಭಾವಿಕ ರೂಪದಲ್ಲಿ ಹೆಚ್ಚಿತು. ಪ್ರಮಾಣಗಳನ್ನು ಹುಡುಕುವ ಆಧಾರದ ಮೇಲೆಯೇ ಇವೆಲ್ಲ ಪುನರ್ವಿಚಾರ ಮಾಡುವ ಪ್ರವೃತ್ತಿ ಶುರುವಾಯಿತು, ಇದರ ಪರಿಣಾಮ ಸ್ವರೂಪ ಏನಾಯಿತೋ ಅದನ್ನು ಮಾನವ ಸಮ್ಮುಖ ಇಡುವುದಕ್ಕಾಗಿ ನಾನು ಪ್ರವೃತ್ತನಾದೆ. ಹೇಗೆ ಏಳುನೂರು ಕೋಟಿ ಮನುಷ್ಯರ ಸಮ್ಮುಖ ರಸ್ತೆ ಮುಚ್ಚುಹೋಗಿದೆಯೋ ಅದೇ ರೀತಿ ನನ್ನ ಜೊತೆಯೂ ಆಗಿತ್ತೇನೋ. ಇದರ ಅಂದಾಜು ನೀವು ಮಾಡಬಹುದು.

ಎಲ್ಲ ಮಾನವರ ಸ್ಥಿತಿಯಲ್ಲೇ ನಾನೂ ಇದ್ದೆ. ಪ್ರಪಂಚದಲ್ಲಿ ಪ್ರಚಲಿತ ಶಿಕ್ಷಣ ಸಂಸ್ಕಾರ, ಕರ್ಮಕಾಂಡ ಸಂಸ್ಕಾರ, ಇದೇ ಕಾಡಿನಿಂದ ನಾನು ನಡೆದುಬಂದೆ. ಹೀಗೆ ನಡೆದುಬಂದ ನಂತರವೂ ನನ್ನ ಸ್ವೀಕೃತಿ ಮೆಕಾಲೆ ಶಿಕ್ಷಣಕ್ಕೂ ಇರಲಿಲ್ಲ, ಪರಂಪರೆಯ ಸಂಸ್ಕಾರಕ್ಕೂ ಇರಲಿಲ್ಲ. ಇದರಲ್ಲಿ ನನ್ನ ಭರವಸೆ ಸ್ಥಿರವಾಗಲಿಲ್ಲ. ಇದು, ನನ್ನ ಸಂಪೂರ್ಣ ಉದ್ದೇಶಗಳ ದಿಕ್ಕಿನಲ್ಲಿ ಓಡುವ ಆಧಾರ ಮತ್ತು ಕಾರಣವಾಯಿತು. ನನ್ನ ಭರವಸೆ ಶಿಷಣ ಪರಂಪರೆಯಲ್ಲಿಯೂ, ಸಂಸ್ಕಾರ ಪರಂಪರೆಯಲ್ಲಿಯೂ ಇಲ್ಲದಿದ್ದರಿಂದ ಒಂದುವೇಳೆ ರಿಕ್ತ ನಾಗಿ, ನನ್ನ ರೀತಿಯಲ್ಲೇ ಓಡುವ ಆಧಾರವಾಯಿತು. ಎರಡು ಘಟನೆಗಳು ನಡೆದುಹೋದವು. ಇದರಲ್ಲಿ ಒಂದು ಘಟನೆ ಜೀವನವನ್ನು ಅರಿತುಕೊಳ್ಳುವುದು ಮಹತ್ವಪೂರ್ಣವಾಗಿತ್ತು. ಜೀವನದಲ್ಲೇ ಅರಿವು ಸೇರಿದೆ ಹಾಗು ಅರಿವು ಪೂರ್ಣ ವಿಧಿ ನನ್ನಗೆ ದೊರಕಿತು. ಮಾನ್ಯತೆಗಳು, ಭರವಸೆಗಳ ಆಧಾರದ ಮೇಲೆ ನಾವು ನಾಲ್ಕುವರೆ ಕ್ರಿಯೆಗಳಲ್ಲಿ ಬಾಳುತ್ತೇವೆ. ಭರವಸೆಯೆಂದರೆ ಅರಿವು ಇಲ್ಲದೆ, ತಿಳಿವಳಿಕೆಯಿಲ್ಲದೆ, ನಂಬುವುದು. ಯಾವುದನ್ನು ತಿಳಿವಳಿಕೆ ನಂತರ ನಂಬುತ್ತೇವೋ ಅದರ ಹೆಸರು ವಿಶ್ವಾಸ. ವಿಶ್ವಾಸದಿಂದ ಬಾಳುವುದರಲ್ಲಿ ಹತ್ತು ಕ್ರಿಯೆಗಳು ಪ್ರಮಾಣಿತವಾಗುತ್ತವೆ. ನಾನು ಹತ್ತು ಕ್ರಿಯೆಗಳನ್ನು ಪ್ರಮಾಣೀಕರಿಸುತ್ತೇನೆ, ನೀವು ಮಾಡಬಹುದು. ಸಹ-ಅಸ್ತಿತ್ವವನ್ನು ಪ್ರಮಾಣಿಕರಿಸಲೇ ಬೇಕು. ಇದೇ ಕ್ರಮದಲ್ಲಿ ಈ ಅಣು, ಪರಮಾಣು, ಒಂದು ಇನ್ನೊಂದನ್ನು ಗುರುತಿಸುತ್ತಾ ವ್ಯವಸ್ಥೆಯ ರೂಪದಲ್ಲಿರುತ್ತದೆ. ಗ್ರಹ, ಗೋಲ, ಗಿಡಮರಗಳು, ಪದಾರ್ಥ ಇವೆಲ್ಲ ಸಹ-ಅಸ್ತಿತ್ವವನ್ನು ಪ್ರಮಾಣೀಕರಿಸುತ್ತಾ ವ್ಯವಸ್ಥೆಯಲ್ಲಿವೆ. ಸಹ-ಅಸ್ತಿತ್ವ ಪ್ರಮಾಣೀಕರಿಸುವ ಕ್ರಮದಲ್ಲಿಯೇ ಮತ್ತು ಇದೇ ಶುದ್ಧ ರೂಪ, ಎಲ್ಲಾ ಘಟಕಗಳು ತಮ್ಮಲ್ಲಿಯೇ ಊರ್ಜಸ್ವಿತವಾಗಿವೆ. ಊರ್ಜಸ್ವಿತವಾಗಿರುವುದೇ ಈ ಅಸ್ತಿತ್ವದ ಅನುಪಮ ಅಭಿವ್ಯಕ್ತಿ. ಸಮಸ್ತ ಪರಮಾಣು ಅಂಶ, ಸಮಸ್ತ ಪರಮಾಣು, ಸಮಸ್ತ ಅಣು ತಮ್ಮಲ್ಲಿಯೇ ವ್ಯವಸ್ಥೆಯ ದಿಕ್ಕಿನಲ್ಲಿ ಉನ್ಮುಖವಾಗಿವೆ. ಮಾನವನ್ನು ಪ್ರೇರಿತ ಮಾಡುವುದಕ್ಕಾಗಿ ಮುಖ್ಯ ಬಿಂದು ಇದೇ. ಈ ಬಿಂದುವಿನ ಮೇಲೆ ನನ್ನ ಅನುಮಾನ ಹೀಗಿದೆ, ಪ್ರತ್ಯೊಬ್ಬ ಜ್ಞಾನಿ, ವಿಜ್ಞಾನಿ, ಅಜ್ಞಾನಿಗೆ ಸಹ-ಅಸ್ತಿತ್ವ ಮನೋಧರ್ಮದ ಅವಶ್ಯಕತೆಯಿದೆ. ಇದೇ ಮನೋಧರ್ಮದ ಜೊತೆ ನಾವು ಮಾನವರಾಗಬಹುದು.  ಮಾನವನಿಗಿಂತ ಕಡಿಮೆಯಾಗಿ, ನಮ್ಮ ಯಾವುದೇ ಐಶ್ವರ್ಯ ಉದಯವಾಗುವಂತಿಲ್ಲ. ನಮ್ಮ ಸಮ್ಮುಖ ಸ್ಥಿತವಿರುವ ಕಾಡು, ಬೆಟ್ಟ, ಖನಿಜ, ಜೀವ, ಸಹ-ಅಸ್ತಿತ್ವದ ಆಧಾರದ ಮೇಲೆಯೇ ತಮ್ಮ ವೈಭವಗಳನ್ನು ಪ್ರಕಾಶಿಸಿವೆ. ಸಹ-ಅಸ್ತಿತ್ವ ವಿಧಿಯಿಂದ ಇವೆಲ್ಲ ಸಮೃದ್ಧವಾಗಿವೆ. ಸಹ-ಅಸ್ತಿತ್ವವಿಲ್ಲದಿದ್ದರೆ ಯಾವುದಕ್ಕೂ ಸಂರಕ್ಷಣೆ ಸಿಗುವಂತೆಯೇಯಿಲ್ಲ. ಆದ್ದರಿಂದ ಇದರ ಮೂಲ ತತ್ವವೇನೆಂದರೆ ಸತ್ವದಲ್ಲಿ (ವ್ಯಾಪಕ ವಸ್ತು) ಒಂದೊಂದು ವಸ್ತು (ಘಟಕಗಳು) ಸಂರಕ್ಷಿತ ನಿಯಂತ್ರಿತ ಮತ್ತು ಊರ್ಜಸ್ವಿತವಾಗಿವೆ. ಪ್ರಾಣಕೋಶಗಳ ರೂಪದಲ್ಲಿ ಕಾರ್ಯರತವಾಗಿರುವ ವಸ್ತುಗಳ ಸೀಮೆಯೂ ಇಷ್ಟೇ. ಇವಲ್ಲಿಯೂ ಸಹ-ಅಸ್ತಿತ್ವ ವೈಭವಿತವಾಗಿವೆ. ಒಂದು ಕೋಶದ ಸಹಿತ ಇನ್ನೊಂದು ಕೋಶದ ಸಹ-ಅಸ್ತಿತ್ವವಿರುವ ಕಾರಣ ನಿಶ್ಚಿತ ರಚನೆ ರಚಿತ ಮಾಡಬಹುದು. ಈ ರಚನೆ ಮಾಡುವ ವಿಧಿ ಕೋಶಗಳಲ್ಲಿ ಸ್ಥಿತ ಪ್ರಾಣ ಸೂತ್ರದಲ್ಲಿ ಒಳಗೊಂಡಿವೆ. ಇದರ ಹೆಸರು ರಚನೆ ವಿಧಿ. ಇದರಲ್ಲಿ ನಿರಂತರ ಶೋಧವಾಗುತ್ತಲಿರುತ್ತದೆ. ಇದರ ಸಾಕ್ಷ್ಯವಾಗಿಯೇ ನಾವು ಆಶ್ವಸ್ತರಾಗುತ್ತೇವೆ; ಪ್ರಾಣಸೂತ್ರದಲ್ಲಿಯೂ ಮತ್ತು ಪರಮಾಣು ಅಂಶಗಳಲ್ಲಿಯೂ ಶೋಧ ಕಾರ್ಯಕ್ರಮವಿದೆ.

ಮಾನವನ ಶೋಧ ಕಾರ್ಯದ ಸ್ರೋತ ಕಲ್ಪನಶೀಲತೆ ಕರ್ಮ-ಸ್ವತಂತ್ರತೆ. ಇದರ ನಂತರ ವಿಚಾರ ಶಕ್ತಿ, ಇಚ್ಛೆ ಶಕ್ತಿ, ಸಂಕಲ್ಪ ಅನುಭವ ಪ್ರಮಾಣ ಶಕ್ತಿ ಇವೆಲ್ಲಾ ಶಕ್ತಿಗಳು ತಾನಾಗಿಯೇ ಅನುಸಂಧಾನ ಮಾಡಲು, ಶೋಧ ಮಾಡಲು ತತ್ಪರವಾಗಿರುತ್ತವೆ. ಈ ತತ್ಪರತೆಯ ಜೊತೆಯಲ್ಲಿಯೇ ಈ ಹತ್ತು ಕ್ರಿಯೆಗಳ ಜೊತೆ ಬಾಳುವ ಕ್ರಿಯೆ, ಬಾಳುವ ವೈಭವ ಪ್ರಮಾಣಿತವಾಗುತ್ತದೆ. ಈ ಹತ್ತು ಕ್ರಿಯೆಗಳಲ್ಲಿ ಮುಖ್ಯ ಬಿಂದು, ಅನುಭವವಾಗುವುದು ಮತ್ತು ಅನುಭವಮೂಲಕ ವಿಧಿಯಿಂದ ಬಾಳುವುದು. ಅನುಭವ ಮೂಲಕ ಪದ್ಧತಿಯಿಂದ ಬಾಳುವುದಕ್ಕಾಗಿ ಸ್ವಾಭಾವಿಕ ರೂಪದಿಂದ ಸ್ರೋತವಿದೆ. ಜೀವನ ಅನುಭವ ಮಾಡಲು ಬಯಸುತ್ತಾನೆ. ಅರಿವುಳ್ಳವವನಾಗಲು ಬಯಸುತ್ತಾನೆ, ತನ್ನನ್ನು ಅರಿವುಳ್ಳವ, ಅನುಭವಶೀಲ, ನ್ಯಾಯವಿದ್ವಾಂಸ, ಚಿಂತನಶೀಲವೆಂದು ನಂಬುತ್ತಾನೆ. ಅಸ್ತಿತ್ವದಲ್ಲಿ ಸಂಬಂಧ ನಾಲ್ಕು ದಿಕಿನಲ್ಲಿ ಹರಡಿರುತ್ತದೆ ಅದನ್ನು ತಿಳಿದುಕೊಂಡು-ನಂಬಿ-ಗುರುತಿಸಿ ಮತ್ತು ನಿರ್ವಹಿಸಿ ಫಲಸ್ವರೂಪ ಉಭಯ ತ್ರುಪ್ತನಾಗುವುದೇ ನ್ಯಾಯವಿದ್ವಾಂಸನ ಪ್ರಮಾಣ.

ಮಾನವ ಅರಿವುಳ್ಳವವನಾಗಬೇಕೇ ಇಲ್ಲವೇ ಎಂಬುವ ನಿರ್ಣಯದಲ್ಲಿ ಸ್ವತಂತ್ರನಾಗಿದ್ದಾನೆ. ಅರಿವುಳ್ಳವವನಾಗ ಬೇಕೆಂದರೆ ಸಹ-ಅಸ್ತಿತ್ವದಲ್ಲಿ ಅರಿವುಳ್ಳವವನಾಗುವ ಪರಿಸ್ಥಿತಿಗಳು ಸಮೀಚೀನವಾಗಿವೆ. ಅರಿವುಳ್ಳವವನಾಗುವ ಸಂಪೂರ್ಣ ಸಾಮಗ್ರಿಯಿದೆ ಹಾಗು ಅರಿವುಳ್ಳವವನಾಗಬಾರದು ಎಂದು ಬಯಸಿದರೆ ಅದಕ್ಕೂ ಸಾಮಗ್ರಿಯಿದೆ ಆದರೆ ಎರಡರ ಪರಿಣಾಮವೂ ಬಿನ್ನ. ಅರಿವಿಲ್ಲದೇಯಿರುವ ಸ್ಥಿತಿಯಲ್ಲಿ ಶುಭ, ಸುಖ ಘಟಿತವಾಗುವುದಿಲ್ಲ. ನನ್ನ ಅನುಭವದ ಅನುಸಾರ ನಾನು ಯಾರಿಂದಲೂ ಬಂಧಿತವಾಗಿ, ಯಾರಮೇಲೆಯೂ ಹೊರೆಯಾಗಿ ಮತ್ತು ಯಾರ ಜೊತೆಯೂ ಜಗಳವಾಡಿ ಬಾಳಲು ಬಯಸಲಿಲ್ಲ ಹಾಗೆಯೇ ನೀವೂ ಯಾವುದೇ ವಸ್ತುವಿನಿಂದ ಬಂಧಿತವಾಗಿ, ಹೊರೆಯಾಗಿ ಮತ್ತು ಜಗಳವಾಡಿ ಬಾಳಲು ಬಯಸುವುದಿಲ್ಲ ಮತ್ತು ಯಾರೇ ಸಿಕ್ಕಿಕೊಂಡು ಬಾಳುವುದಕ್ಕೆ ಬಯಸುವುದಿಲ್ಲ. ಈ ರೀತಿಯಲ್ಲಿ ಪ್ರತ್ಯೊಬ್ಬ ವ್ಯಕ್ತಿ ಅರಿವುಳ್ಳವವನಾಗಲು ಬಯಸುತ್ತಾನೆ. ಏಕಸೂತ್ರತೆಯಿಂದ ಬಾಳಲು ಬಯಸುತ್ತಾನೆ.

ಸಂಬಧವೆನ್ನುವುದು ಎಲ್ಲಾ ದಿಶೆಯಿಂದಲೂ ಸೇರಿದ್ದೀಯಿದೆ ಇದನ್ನು ನಾವು ಭ್ರಮೆವಶ ಗುರುತಿಸುವುದಿಲ್ಲ, ಇದೇ ಇದರ ಸಂಕಟದ ನೆಲೆ. ಯಾವ ಕ್ಷಣದಿಂದ ನಾವು ಸಂಬಂಧಗಳನ್ನು ಗುರುತಿಸಲು ಪ್ರಾರಂಭಿಸುತ್ತೆವೋ ಅದೇ ಮುಹೂರ್ತದಿಂದ ನಮ್ಮಲಿ ತಾನಾಗಿಯೆ ಜೀವನ ಸಹಜ ಮೌಲ್ಯಗಳ ನಿಷ್ಪತ್ತಿಯಾಗುತ್ತದೆ. ಯಾವಾಗ ನಮ್ಮಿಂದ ಸಂಬಂಧಗಳನ್ನು ಗುರುತಿಸಲಾಗುತ್ತದೆಯೋ ಅವಾಗಲೇ ಮೌಲ್ಯಗಳು ತಾನಾಗೆಯೇ ದ್ರವಿಸುತ್ತದೆ ಫಲಸ್ವರೂಪ ನಿರ್ವಹಣೆ ಆಗುತ್ತದೆ, ಇದರ ಮೌಲೀಕರಣೆಯಾದಾಗ ಉಭಯ ತೃಪ್ತಿ ಆಗುತ್ತದೆ. ಈ ರೀತಿಯಲ್ಲಿ ನ್ಯಾಯ ಪ್ರಮಾಣಿತವಾಗುತ್ತದೆ. ಸಂಬಂಧವನ್ನು ಗುರುತಿಸುವ ಸ್ಥಿತಿ, ಗುರುತಿಸುವ ವಿಧಿ ಪ್ರಯೋಜನೆಯ ಆಧಾರದ ಮೇಲಾಗುತ್ತದೆ. 'ಅಮ್ಮ' ಗುರುತಿಸುವುದು ಪೋಷಣೆಯ ಅರ್ಥದಲ್ಲಿ. ಸಂರಕ್ಷಣೆಯ ಸ್ರೋತ 'ತಂದೆ' ಎನ್ನುತ್ತೇವೆ. ಪ್ರಮಾಣ ಸ್ರೋತ 'ಗುರು', ಜಿಜ್ಞಾಸ ಸ್ರೋತ 'ಶಿಷ್ಯ' ಎನ್ನುತ್ತೇವೆ. ಪ್ರಚಲಿತ ರೂಪದಲ್ಲಿ, ನಾವು ಯಂತ್ರವತವಾಗಿರಬೇಕು, ಯಾಂತ್ರಿಕತೆಯಲ್ಲಿ ಪ್ರವೀಣರಾಗಿರಬೇಕು ಎನ್ನುತ್ತಾರೆ. ಮಾನವ ಒಂದು ಯಂತ್ರವೇ?

ಇದಕ್ಕೆ ಉತ್ತರ ನೀಡುವವರು ಇದ್ದಾರೆಯೇ? ನಾನು ಹೇಳುವುದೇನೆಂದರೆ ಮಾನವ ಯಂತ್ರವಲ್ಲ. ಸರ್ವತ್ರ ಯಂತ್ರಗಳ ರಚನಕಾರ ಮಾನವನೇ. ಇಂದಿನ ವರಗೂ ರಚಿತವಾಗಿರುವ ಎಲ್ಲ ಯಂತ್ರಗಳ ಜನಕ ಮಾನವನೇ. ಆದ್ದರಿಂದ ಯಂತ್ರ ಮಾನವನ್ನನ್ನು ಕಂಡುಹಿಡಿಯಲು ಆಗುವುದಿಲ್ಲ. ಯಂತ್ರಗಳು ಮಾನವನಿಗಿಂತ ಕಡಿಮೆ ಆದ್ದರಿಂದ ಮಾನವನ ಅಧ್ಯಯನ ಯಂತ್ರಗಳಿಂದಾಗುವುದಿಲ್ಲ. ಯರಡನೆಯದಾಗಿ, ಸಮಸ್ತ ಯಂತ್ರ ಜಡ ಪ್ರಕೃತಿಯಿಂದ ಮಾಡಲಾಗುತ್ತದೆ. ಇಂದಿನವರಗೂ ನಿರ್ಮಿಸಲಾಗಿರುವ ಎಲ್ಲಾ ಯಂತ್ರಗಳೂ ಪದಾರ್ಥಾವಸ್ಥೆಯ ವಸ್ತುಗಳಿಂದಲೇ. ಪ್ರಾಣಾವಸ್ಥೆಯ ವಸ್ತುಗಳಿಂದ ಯಾವ ಯಂತ್ರವೂ ರಚಿಸಿಲ್ಲ. ಇದು ನೆನಪಿಟ್ಟುಕೊಳ್ಳುವ ಮಾತು. ಪ್ರಾಣಕೋಶಗಳಿಂದ ಯಾವುದೇ ಯಂತ್ರವನ್ನು ಮಾಡಲಾಗಿಲ್ಲ, ಮಾನವ ಒಂದು ಯಂತ್ರವೆಂದು ಸ್ವಪ್ರಶಂಸೆ ಮಾಡುತ್ತೇವೆ. ಇದು ಮಾನವ ಪರಂಪರೆಗೆ ಎಲ್ಲಿವರಗೆ ಉಚಿತ. ಅಭ್ಯುದಯದ ಅರ್ಥವನ್ನು ಹೇಗೆ ಪೂರೈಸುವುದು. ಎಷ್ಟು ಅಗಾಧವಾಗಿ ಈ ಮಾತು ನಮ್ಮಲ್ಲಿದೆ, ಮಾನವನು ಒಂದು ಯಂತ್ರವೆಂದು, ಭೋಗಕ್ಕಾಗಿ ವಸ್ತುವೆಂದು. ಇಂದಿಗೂ ನಮ್ಮ ವಿಚಾರ ಹೀಗೆಯೇ ಇದೆ, ಆದರೆ ಇದು ನಿಜವಲ್ಲ. ನಾವು ನಮ್ಮ ಮಕ್ಕಳ ಜೊತೆ ಬಾಳುತ್ತಲು ನಾನು ಯಂತ್ರಧರ್ಮಿ ಅಲ್ಲ, ಎಂಬುವುದು ನಮಗನಿಸುತ್ತದೆ.

ನನಗೆ ಮಾನವ ಸಂಚೇತನ  ಸಹಿತವೆ ಗುರುತಿಸಿದೆ. ಸಂಜ್ಞಾನಶೀಲತೆ ಮತ್ತು ಸಂವೇದನಶೀಲತೆಯ ಸಂಯುಕ್ತ ರೂಪವೇ ಸಂಚೇತನ. ಸಂವೇದನೆಗಳನ್ನು ಗುರುತಿಸಲಾಗದಿದ್ದರೆ ಯಂತ್ರನಾಗುತ್ತೇನೆ. ಯಾಂತ್ರಿಕತೆಯಲ್ಲಿ ನಮಗೆ ತೃಪ್ತಿಯಂತೂ ಸಿಕ್ಕಿಲ್ಲ. ನಾವು ಯಂತ್ರವತ ಕಾರ್ಯವನ್ನು ಮಾಡಿ ತೃಪ್ತಿ ಸಿಗುವಂತಹ ಯಾವ ರಸ್ತೆಯು ಪಡೆದಿಲ್ಲ. ಹೀಗೆ ಯಾರಾದರೂ ಗುರು ಇದ್ದರೆ ನಾನು ಅವರನ್ನು ಆಮಂತ್ರಿಸುತ್ತೇನೆ. ವಂಶಾನುಷಂಗಿ ವಿಧಿಯಿಂದ ಅರಿವು ಪಡಿಸುವವರ ಮಾತನ್ನು ನಾನು ಕೇಳಿದ್ದೀನಿ ಅವರೂ ನನಗೆ ಅರಿವುಪಡಿಸುವುದರಲ್ಲಿ ಸಫಲವಾಗಲಿಲ್ಲ. ಇದೇ ರೀತಿಯಲ್ಲಿ ಭೌತಿಕವಾದಿ ಹಾಗು ಸಾಪೇಕ್ಷವಾದಿ ಸಿದ್ಧಾಂತವೂ ಮಾನವನಿಗೆ ಪರಿಭಾಷಿತ ಮಾಡುವುದರಲ್ಲಿ ಅಸಫಲವಾಗಿದ್ದಾರೆ. ಈ ಮೂರು ಸಿದ್ಧಾಂತಗಳಿಂದ ಮಾನವ ವಿಶ್ಲೇಷಿತವಾದರೆ ಅದನ್ನು ಸ್ವೀಕರಿಸಬಹುದು. ಅನ್ಯಥಾ ಮಾನವನನ್ನು ಮಾನವನ ಅರ್ಥದಲ್ಲಿ ಗುರುತಿಸಬೇಕು. ಮಾನವನನ್ನು ಮಾನವನ ರೂಪದಲ್ಲಿ ಗುರುತಿಸುವುದಕ್ಕಾಗಿ ಈ ಪ್ರಸ್ತಾಪ ಪ್ರಸ್ತುತವಾಗಿದೆ.

ಇದಕ್ಕೆ ಮುನ್ನ ಆದರ್ಶವಾದೀ ವಿಧಿಯ ಮಾತಾಯಿತು, ಈಶ್ವರನು ಸಫಲತೆಯನ್ನು ನೀಡುವವನ ರೂಪದಲ್ಲಿ ಪ್ರಸ್ತುತ ಪಡಿಸಲಾಗಿದೆ. ಈಶ್ವರನನ್ನು ನಾನು ನೋಡಿದ್ದೇನೆ, ಅವನ ಹತ್ತಿರ ಯಾವುದೇ ಫ್ಯಾಕ್ಟ್ರಿ ಇಲ್ಲ ಮತ್ತವರಿಗೆ ಸಫಲತೆಯನ್ನು ನೀಡಲು. ಈಶ್ವರನನ್ನು ಯಾವ ರೂಪದಲ್ಲಿ ನೋಡಿದೆ? ಈಶ್ವರನನ್ನು ವ್ಯಾಪಕದ ರೂಪದಲ್ಲಿ ನೋಡಿದ್ದೇನೆ. ಸಮಾನ ಊರ್ಜೆ ರೂಪದಲ್ಲಿ ನೋಡಿದ್ದೇನೆ ಇದರಿಂದ ಪ್ರತ್ಯೇಕ ಘಟಕ ಊರ್ಜಸ್ವಿತವಾಗಿದೆ. ವ್ಯಾಪಕದಲ್ಲಿ ಪ್ರತ್ಯೇಕ ಘಟಕ ಸಹ-ಅತಿತ್ವದಲ್ಲಿದೆ, ಇದನ್ನು ನೋಡಿದ್ದೇನೆ. ಈಶ್ವರನಲ್ಲಿ ನೋಡಲು ಇನ್ನೇನು ಬಾಕಿಯಿದೆ? ಬಾಕಿ ಏನಾದರು ಇದ್ದರೆ ನೀವು ಅದನ್ನು ನೋಡಿ ಪ್ರಪಂಚಕ್ಕೆ ತಿಳಿಸಿರಿ. ನೀವ ಅನುಸಂಧಾನ ಮಾಡುವುದಕ್ಕೆ ಸ್ವತಂತ್ರರಾಗಿದ್ದೇರೆ. ನಾನು ನೋಡಿರುವುದು ಅರಿತುಕೊಂಡಿರುವುದು ನಿಮ್ಮ ಮುಂದೆ

ಪ್ರಸ್ತುತವಾಗಿದೆ. ನನಗೆ ಸಂವೇದನೆಶೀಲ ವಿಧಿಯಿಂದ ಪೂರ್ಣವಾಗಲಿಲ್ಲ, ಯಾಂತ್ರಿಕ ವಿಧಿಯಿಂದಲೂ ಪೂರ್ಣವಾಗಲಿಲ್ಲ. ಸಂವೇದನಾಶೀಲ ವಿಧಿಯಿಂದ ಇಂದ್ರಿಯ-ಸನ್ನಿಕರ್ಷವನ್ನು ಕೇಂದ್ರದಲ್ಲಿಟ್ಟು ಫಲಸ್ವರೂಪ ನಮ್ಮ ಇಂದ್ರಿಯ-ಸನ್ನಿಕರ್ಷದ ಸಾಮರ್ಥ್ಯ ಮತ್ತು ಅಪೇಕ್ಷೆ ಹಾಗು ನನ್ನ ಸಹೋದರನ ಸಾಮರ್ಥ್ಯ ಮತ್ತು ಅಪೇಕ್ಷೆಯ ನಡುವೆ ಅಂತರವಿದೆ. ಈ ರೀತಿಯಲ್ಲಿ ಮಾನವನನ್ನು ವಿವಿಧತೆಯಲ್ಲಿ ಭಾಗಿಸುವ ಆವಶ್ಯಕತೆಯಾಗುತ್ತೆ, ಇದರ ಅನುಸಾರ ಸಂವೇದನಶೀಲ ವಿಧಿಯಿಂದ ಮಾನವ ವ್ಯಕ್ತಿವಾದಿ ಆಗೇ ಆಗುತ್ತಾನೆ. ಎರಡನೆಯ ವಿಧಿ, ಭೋಗವಾದಿ ವಿಧಿಯಿಂದ ವ್ಯಕ್ತಿ, ವ್ಯಕ್ತಿವಾದಿಯಾಗುತ್ತಾನೆ ಅದನ್ನು ನಾವು ಅನುಭವಿಸಿ ಕುಳಿತುಕೊಂಡಿದ್ದೇವೆ. ಮೂರನೆಯ ವಿಧಿ, ಪೂರ್ವಜರು ಹೇಳಿದಂತೆ ಭಕ್ತಿವಾದಿ - ವಿರಕ್ತಿವಾದಿ, ಇವರಲ್ಲೂ ವ್ಯಕ್ತಿವಾದಿತೆಯ ಅಂತ್ಯವಾಗುವುದಿಲ್ಲ. ಈ ರೀತಿಯಲ್ಲಿ ಮಾನವ ಇಂದಿನವರೆಗೂ ಮಾಡಿರುವ ಘೋರ ಪರಿಶ್ರಮ, ಸತತವಾದ ಪ್ರಯಾಸ, ಘೋರ ಆಸೆಯಿಂದ ತುಂಬಿದ ಪ್ರಯತ್ನ, ಎಲ್ಲ ಪ್ರಯತ್ನಗಳ ವಿಫಲವಾಗುವ ಆಧಾರ ವ್ಯಕ್ತಿವಾದಿಯೇ ಸಿದ್ಧವಾಗಿದೆ. ವ್ಯಕ್ತಿವಾದಿಯೇ ಸಹ-ಅಸ್ತಿತ್ವದ ವಿರೋಧಿ. ಇದೇ ಸಮಸ್ತ ಮಾನವರ ಖಂಡನದ ಆಧಾರವಾಯಿತ. ವ್ಯಕ್ತಿ ಎಲ್ಲಿ ಬಾಳಬೇಕು? ಸಹ-ಅಸ್ತಿತ್ವದಲ್ಲಿ. ಸಹ-ಅಸ್ತಿತ್ವದಲ್ಲಿ ಬಾಳುವ ಸರಳ ಉಪಾಯ, ಮಾನವನ ಸಹಿತ ಸಹ-ಅಸ್ತಿತ್ವವನ್ನು ತಿಳಿದುಕೊಂಡು - ನಂಬಿದ್ದು - ಗುರುತಿಸಬೇಕು. ಇದನ್ನು ಗುರುತಿಸಿದರೆ ವ್ಯವಸ್ಥೆಯಲ್ಲಿ ಬಾಳಬಹುದು. ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸಲಾಗುತ್ತದೆ, ಇದನ್ನು ಮುಂದೆ ಅಧ್ಯಯನಮಾಡುತ್ತೇವೆ. ಇದೇ ರೀತಿಯಲ್ಲಿ ನಾವು ಪಶು-ಗಿಡಮರಗಳ ಪ್ರಪಂಚದ ಸಹಿತವೂ ಸಹ-ಅಸ್ತಿತ್ವದಲ್ಲಿ ಬಾಳುತ್ತೇವೆ. ಗಿಡಮರಗಳ ಪ್ರಪಂಚದಿಂದ ನಾವು ಯಥೇಷ್ಟವಾಗಿ ಉಪಯೋಗಿಸಿಕೊಳ್ಳುತ್ತೇವೆ, ಹಿಂತಿರುಗಿ ಕೊಡುವುದಕ್ಕಾಗಿ ಏನಾದರು ಇರಬೇಕಲ್ಲವೇ. ಏನೂ ಕೊಡದೆ ಕೇವಲ ಉಪಯೋಗಿಸಿಕೊಳ್ಳುವುದಕ್ಕೆ "ಶೇಖಚಿಲ್ಲಿ" ಎನ್ನುತ್ತಾರೆ. ಈ "ಶೇಖಚಿಲ್ಲಿ" ವಿಧಿಯಿಂದ ವ್ಯಥೆ, ದುಖವಲ್ಲದೆ ಬೇರೇನೂ ಆಗುವುದಿಲ್ಲ. ಇದರ ಅಂತಿಮ ಚರಣ ವ್ಯಥೆಯಲ್ಲಿ, ದುಖದಲ್ಲಿ ಕೊನೆಯಾಗುತ್ತದೆ.

ವರ್ತಮಾನದಲ್ಲಾಗುತ್ತಿರುವ ಘಟನೆಗಳು ಇದನ್ನೇ ಘೋಷಿತ ಮಾಡುತ್ತಿವೆ. ಸಹ-ಅಸ್ತಿತ್ವದಲ್ಲಿ ಬಾಳುವುದಕ್ಕಾಗಿ ಗಿಡಮರಗಳ ಪ್ರಪಂಚ ಮತ್ತು ಪದಾರ್ಥ ಪ್ರಪಂಚದ ಜೊತೆ ನಮ್ಮ ಸಹ-ಅಸ್ತಿತ್ವವನ್ನು ನಿಶ್ಚಯನ ಮಾಡುವುದು ಆವಶ್ಯಕ. ಇವುಗಳ ಸಹಿತ ನಮ್ಮ ಸಹ-ಅಸ್ತಿತ್ವವನ್ನು ನಿಶ್ಚಯ ಮಾಡುವುದರಲ್ಲಿ ಅಸಮರ್ಥರಾದರೆ ನಾವು ಜ್ಞಾನಿಗಳಲ್ಲ, ನಾವು ವಿಜ್ಞಾನಿಗಳಲ್ಲ, ನಾವು ವಿವೇಕಿಗಳಲ್ಲ. ಅರ್ಥಾತ್, ನಮ್ಮ ಜ್ಞಾನವೂ ಪೂರ್ಣವಲ್ಲ, ನಮ್ಮ ವಿಜ್ಞಾನವೂ ಪೂರ್ಣವಲ್ಲ, ನಮ್ಮ ವಿವೇಕವೂ ಪೂರ್ಣವಲ್ಲ. ಗಿಡ-ಮರಗಳನ್ನು ಬಿಟ್ಟು ನಾವು ಎಲ್ಲಿ ಹೋಗುವುದು. ಪೃಥ್ವಿ, ಬೆಟ್ಟ, ಖನಿಜ, ಜೈವಿಕ ಪ್ರಪಂಚವನ್ನು ಬಿಟ್ಟು ಎಲ್ಲಿ ಹೋಗುವುದು. ಇವುಗಳ ಜೊತೆ ನಾವು ಬಾಳಲೇ ಬೇಕು, ಇವು ನಮ್ಮ ಜೊತೆ ಇರುವ ದ್ರವ್ಯ, ಸಂಪದ, ಐಶ್ವರ್ಯ. ನಾವು ಇವುಗಳ ಜೊತೆ ಬಾಳಬೇಕು. ಈ ನಿಶ್ಚಯದಲ್ಲಿ ಮಾನವನೇ ಪ್ರಮುಖ ಬಿಂದು. ಮಾನವನೇ ಭ್ರಮಿತನಾಗಿ, ವ್ಯಥೆಪಡೆದು, ದುಃಖಿತನಾಗಿ ಬಾಳಿದ್ದಾನೆ. ಇವಾಗ ಬದಲಾಗುವ ಅವಶ್ಯಕತೆಯಿದೆ. ಜಾಗೃತನಾಗುವ ಅವಶ್ಯಕತೆಯಿದೆ. ಸಹ-ಅಸ್ತಿತ್ವವನ್ನು ಗುರುತಿಸುವ ವಿಧಿಯಲ್ಲಿ, ಇವೆಲ್ಲಾ ಸತ್ತದಲ್ಲಿ (ವ್ಯಾಪಕ ವಸ್ತು) ಇವೆ ಎಂದು ಪಡೆದನು, ಇದು ಸಹ-ಅಸ್ತಿತ್ವದ ಮೊದಲನೆಯ ಸಾಕ್ಷಿ. ಕ್ರಮವಾಗಿ ಪದಾರ್ಥಾವಸ್ಥೆಯಿಂದಲೇ ಪ್ರಾಣಾವಸ್ಥೆ ಉದ್ಗಮಿತ, ಪ್ರಭಾವಿತ ಮತ್ತು ನಿರಂತರ ವೈಭವಿತವಾಗಿದೆ. ಪ್ರಾಣಾವಸ್ಥೆ

ತನ್ನಲ್ಲಿಯೇ ವ್ಯವಸ್ಥೆಯ ರೂಪದಲ್ಲಿ ಪ್ರಭಾವಿತವಾಗಿದೆ, ಪ್ರಮಾಣಿತವಾಗಿದೆ, ವೈಭವಿತವಾಗಿದೆ. ಜೀವಿಪ್ರಪಂಚವೂ ತನ್ನ 'ತ್ವ' ಸಹಿತ ವ್ಯವಸ್ಥೆಯಲ್ಲಿ ಸಾಕ್ಷಿಯಾಗಿದೆ. ಮಾನವ ತನ್ನ ತ್ವ-ವನ್ನು ಹೇಗೆ ಅರಿತುಕೊಳ್ಳುವುದು, 'ಸ್ವ'-ವನ್ನು ಹೇಗೆ ಅರಿತುಕೊಳ್ಳುವುದು. 'ಸ್ವ' ಕೂಡ ಇದ್ದು 'ತ್ವ' ಕೊಡವಿರುವುದು ಮುಖ್ಯ ಬಿಂದು.

ಜೀವನ ವಿಧ್ಯೆಯಿಂದ 'ಸ್ವ', 'ತ್ವ' ಅರಿವಾಗುತ್ತದೆ. ಜೀವನವನ್ನು ನಾನು 'ಸ್ವ' ರೂಪದಲ್ಲಿ ಗುರುತಿಸುತ್ತೇನೆ, ನೀವು ಗುರುತಿಸಬಹುದು. ಶರೀರವನ್ನು 'ಸ್ವರೂಪ' ಎಂದು ಗುರುತಿಸುವ ತನಕ ಭ್ರಮಿತವಾಗಿರುತ್ತೇವೆ. ಜೀವನವನ್ನು 'ಸ್ವ' ರೂಪದಲ್ಲಿ ಗುರುತಿಸುವ ಕ್ಷಣದಿಂದಲೇ ನಾವು ವ್ಯವಸ್ಥೆಯಲ್ಲಿ ಬಾಳುತ್ತೇವೆ. ನೀವೂ ಹಾಗೆಯೇ ಬಾಳಬಹುದು. ಇದಕ್ಕಿಂತ ಮುನ್ನ ವ್ಯವಸ್ಥೆಯಾಗುವುದಿಲ್ಲ. ಇದು ಎಷ್ಟು ಪ್ರಕೃತಿ ಸಹಜ, ಸಹ-ಅಸ್ತಿತ್ವ ಸಹಜ ಪರಿಪೂರ್ಣ ಪ್ರಕ್ರಿಯೆ! ಅರಿತುಕೊಳ್ಳ ಬೇಕಾದ ವಸ್ತುವೂ ಜೀವನ, ಅರಿತುಕೊಳ್ಳವವನೂ ಜೀವನ. ಆದರ್ಶವಾದಿಗಳ ಅನುಸಾರ ದೃಶ್ಯ, ದರ್ಶನ, ದೃಷ್ಟ ಮೂರೂ ಒಂದಾಗುವುದರಿಂದಲೇ ಮುಕ್ತಿಯಾಗುತ್ತದೆ. ಅವರ ಅನುಸಾರ ಈಶ್ವರನೇ ದೃಶ್ಯ, ಈಶ್ವರನೇ ನೋಡುವವನು, ಈಶ್ವರನೇ ದರ್ಶನ. ಇದರ ಆಧಾರದ ಮೇಲೆ ಹಲವಾರು ವಾಙ್ಮಯ ರಚಿತವಾಗಿವೆ. ಹೀಗಾದ ನಂತರವೂ ಈಶ್ವರ ಹೇಗಿದ್ದಾನೆ? ಎಲ್ಲಿದ್ದಾನೆ? ಯಾಕಿದ್ದಾನೆ? ಇದು ಅರಿವಾಗಲಿಲ್ಲ. ಇದರ ನಂತರವೂ ಈಶ್ವರ ಆಧಾರಿತ ಮಾತು ಮಾನವ ಕೇಳುತ್ತಾನೆ, ಚನ್ನಾಗನಿಸುತ್ತದೆ. ಚನ್ನಾಗನಿಸುವುದು ಮತ್ತು ಒಳ್ಳೆಯದಾಗುವುದು, ಇವೆರಡರ ಮಧ್ಯೆ ಇರುವ ಅಂತರ ಯಥಾ ಸ್ಥಿತಿಯಲ್ಲಿದೆ. ಇದರ ನಂತರ ಮಾನವನನ್ನು ಯಂತ್ರವೆಂದು ಹೇಳಲಾರಂಭಿಸಿದರೂ, ಅದೂ ಆಗಲಿಲ್ಲ, ಆದರೆ ಹೇಳಲು ನಿಲ್ಲಿಸಲಿಲ್ಲ. ಹೀಗೆ ಈಶ್ವರನ ಬಗ್ಗೆ ಸ್ಪಷ್ಟ ಮಾಡಲಾಗಲಿಲ್ಲ ಆದರೂ ಹೇಳಲು ನಿಲ್ಲಿಸಲಿಲ್ಲ. ಈ ರೀತಿಯಲ್ಲಿ ನಾವು ಸಿಕ್ಕಿಕೊಂಡಿದ್ದೇವೆ, ಇದನ್ನು ಬಿಟ್ಟು ಬೇರೆ ಯೋಚನೆ ಮಾಡಲಾಗಲಿಲ್ಲ. ಇದರಿಂದ ಬಿಡುಗಡೆ ಪಡೆಯುವ ವಿಧಿ, ಜೀವನ ನಿತ್ಯ. ಶರೀರ, ಜೀವನಕ್ಕಾಗಿ ಪದೇ ಪದೇ ಆಗುವ ಘಟನೆ. ಶರೀರ ರಚನೆ ಗರ್ಭಾಶಯದಲ್ಲಾಗುತ್ತದೆ. ಅಸ್ತಿತ್ವ ಸಹಜ ವಿಧಿಯಿಂದ ಪರಮಾಣು ವಿಕಸಿತವಾಗಿ ಜೀವನ ಪದಕ್ಕೆ ಬರುತ್ತದೆ. ಶರೀರ ಪದೇ ಪದೇ ರಚಿತ ಹಾಗು ವಿರಚಿತವಾಗುತ್ತದೆ. ಪ್ರಾಣಾವಸ್ಥೆಯ ಒಂದು ಸೀಮೆಯಿದೆ, ಆನಂತರ ಅದು ವಿರಚಿತವಾಗುತ್ತದೆ. ಶರೀರವೂ ಪ್ರಾಣಕೊಶಗಳಿಂದ ರಚಿತ ಘಟಕ. ಶರೀರ ರಚನೆಯಲ್ಲಿ ಎಷ್ಟು ಸಂಪನ್ನ ಮಸ್ತಿಷ್ಕವಾಗಬಹುದೋ, ಅಷ್ಟು ಸಂಪನ್ನವಾದ ಮಸ್ತಿಷ್ಕ ಮಾನವ ಶರೀರದಲ್ಲಿ ಒಳಗೊಂಡಿದೆ. ಮಾನವ ಸಂಪೂರ್ಣ ಅಸ್ತಿತ್ವವನ್ನು ಮತ್ತವರಿಗೆ ಸಂಪ್ರೇಷಿತ ಮಾಡಬಹುದು ಎಂಬುವುದರ ಆಧಾರದ ಮೇಲೆ ನಾನು ಈ ಮಾತನ್ನು ಸತ್ಯಾಪನ ಮಾಡುತ್ತಿದ್ದೇನೆ. ಇದಕ್ಕಿಂತ ಅಧಿಕವಾಗಿ ಮಸ್ತಿಷ್ಕದ ಯಾವ ಪ್ರಯೋಜನೆಯೂ ಇಲ್ಲ. ಇದರ ಆಧಾರದ ಮೇಲೆ ಮಾನವನ ಶರೀರ ರಚನೆ (ಪ್ರಾಣಸೂತ್ರ ರಚನೆ ವಿಧಿಯ ಆಧಾರದ ಮೇಲೆ ಅನುಸಂಧಾನವಾಗುತ್ತ ಬಂದಿದೆ) ಸರ್ವ ಶ್ರೇಷ್ಠ ಆಗಿದೆ, ಇನ್ನೂ ಏನಾದರು ಶ್ರೇಷ್ಠವಿದ್ದರೆ ಅದೂ ಭವಿಷ್ಯದಲ್ಲಿ ಪೂರ್ಣವಾಗುತ್ತದೆ. ಈ ನಡುವೆ ಶರೀರ ಯಾತ್ರೆಯಲ್ಲಿ ನಾವು ಏನುಮಾಡಬೇಕು? ಜೀವನ ಜಾಗೃತಿಯನ್ನು ಪ್ರಮಾಣೀಕರಿಸಬೇಕು. ಈ ಕ್ರಮದಲ್ಲಿ ನಾವು ಪ್ರಾರಂಭ ಮಾಡಿದಾಗ, ಸಂವೇದನಗಳನ್ನು ಅಡಗಿಸುವ ಕೆಲಸವಾಗಲಿಲ್ಲ, ವಿಜ್ಞಾನ ವಿಧಿಯಿಂದ ಅಥವಾ ಆದರ್ಶವಾದಿ ವಿಧಿಯಿಂದ. ಸಂವೇದನಗಳ ವಿರೋಧದಲ್ಲಿ ಹಲವಾರು ಸಾಧನೆಗಳನ್ನು ಹೇಳಲಾಗಿದೆ. ಈ ಧರಣಿಯ ಮೇಲೆ ಹಲವಾರು ತಪಸ್ವಿಗಳಾಗಿದ್ದಾರೆ

ಆದರೆ, ತಪಸ್ಸಿನ ಪರಿಣಾಮದಲ್ಲಿ ಒಂದು ನಿಶ್ಚಿತ ಅರಿವು, ಯಾವುದಕ್ಕಾಗಿ ಮಾನವ ಹಾತೊರಿಸುತ್ತಿದ್ದಾನೋ, ಅದು ವ್ಯವಹಾರದಲ್ಲಿ, ಪರಂಪರೆಯಲ್ಲಿ ಬರಲಿಲ್ಲ. ತಪಸ್ವಿಯರು ಏನು ಪಡೆದರೋ ಏನು ಕಳೆದುಕೊಂಡರೋ, ಅದನ್ನು ಅವರೇ ಸತ್ಯಾಪನ ಮಾಡುತ್ತಾರೆ. ಸಾಮಾನ್ಯ ಜನರು ಇಂತಹ ತಪಸ್ವಿಯರಿಂದ ಸಿದ್ಧಿ ಚಮತ್ಕಾರವನ್ನು ಅಪೇಕ್ಷಿಸಿದ್ದಾರೆ ಹಾಗು ಅವುಗಳ ಬಗ್ಗೆ ಮೋಹಾಂಧರಾಗಿದ್ದಾರೆ. ಅಸ್ತಿತ್ವದಲ್ಲಿ ಯಾವ ಸಿದ್ಧಿಯೂ ಇಲ್ಲ, ಯಾವ ಚಮತ್ಕಾರವೂ ಇಲ್ಲ, ಅಸ್ತಿತ್ವದಲ್ಲಿ ನಿಶ್ಚಿತ ವ್ಯವಸ್ಥೆಯಿದೆ. ನಿಶ್ಚಿತ ಪರಿಣಾಮವಿದೆ, ನಿಶ್ಚಿತ ಉಪಲಬ್ಧಿ ಇದೆ, ನಿಶ್ಚಿತ ಧ್ಯೇಯವಿದೆ, ಅದರ ನಿರಂತರತೆ ಇದೆ, ಇದನ್ನು ನಾನು ನೋಡಿದ್ದೇನೆ, ಅರಿತುಕೊಂಡಿದ್ದೇನೆ. ಇಂತಹ ನಿಶ್ಚಿತ ಧ್ಯೇಯಕ್ಕಾಗಿ ನಾವು ನೀವು ಪ್ರತ್ಯಾಷಿತರಾಗಿದ್ದೀವೆ. ನಿಶ್ಚಿತ ವಿಧಿಯಿಂದಲೇ ಆ ನಿಶ್ಚಿತ ಧ್ಯೇಯ ಸಿಗುತ್ತದೆ. ಮಾನವನ ಅಧ್ಯಯನವನ್ನು ಬಿಟ್ಟು, ಜಿರಳೆಯನ್ನು ಸರ್ವಾಧಿಕ ವಿಕಸಿತ ಪ್ರಾಣಿಯೆಂದು ಹೇಳಿ, ರಾಸಾಯನಿಕ ಗೊಬ್ಬರವನ್ನು ತಯ್ಯಾರಿಸಿ, ಕೀಟನಾಶಾಕವನ್ನು ತಯ್ಯಾರಿಸಿ ನಾವು ಮಾನವನ ಧ್ಯೇಯವನ್ನು ಪಡೆಯುವುದಿಲ್ಲ. ಮಾನವನ ಮನಸ್ಥಿತಿಯನ್ನು ಧನದ ರೂಪದಲಿ, ಶೋಷಣೆಯ ರೂಪದಲ್ಲಿ ಪ್ರಯೋಗಿಸಿಯೂ ಮಾನವ ತನ್ನ ಧ್ಯೇಯವನ್ನು ಪಡೆಯುವುದಿಲ್ಲ. ಇದಕ್ಕೆ ಹೆಸರು 'ಇಂಟೆಲೆಕ್ಚುಯೆಲ್ ಪ್ರಾಪರ್ಟಿ ರೈಟ್'. ವಿಶ್ವದ ಪ್ರಮುಖ ಸಂಸ್ಥೆಗಳು ಮತ್ತು ನ್ಯಾಯಾಲಯಗಳೂ ಇದನ್ನು ಸ್ವೀಕರಿಸಲು ಬಯಸುತ್ತಿದ್ದಾರೆ. ಜೀವನದಲ್ಲಿರುವ ಅಕ್ಷಯ ಶಕ್ತಿಯನ್ನು ಎಲ್ಲಿ ಜೋಡಿಸುವುದು. ಅದನ್ನು ಭೋಗದ್ರವ್ಯದ ರೂಪದಲ್ಲಿ ಹೇಗೆ ಉಪಯೋಗಿಸುವುದು, ಇದರ ಉತ್ತರ ಯಾರಾದರು ನೀಡುತ್ತಾರೆಯೇ? ಜೀವನವನ್ನು ಅರಿತುಕೊಂಡು ಈ ಪ್ರಸ್ತಾಪವನ್ನು ನೀಡಿದ್ದಾರೆಯೇ? ಇದು ಮಾನವ ಜಾತಿಗೆ ಹೇಗೆ ಉಪಕಾರಿ? ನನ್ನ ಅನುಭವ ಏನೆನ್ನುತ್ತದೆ ಅಂದರೆ ಮಾನವನ ಜೀವನ ಶಕ್ತಿಯನ್ನು ಎಷ್ಟೇ ಉಪಯೋಗಿಸಿದರೂ ಅದು ಕಡಿಮೆಯಾಗುವುದಿಲ್ಲ. ಇದನ್ನು ನೀವು ಅನುಭವಿಸಿ ನೋಡಿ, ಕೋಟಿ ಜನರೂ ಅನುಭವಿಸಿ ನೋಡಬಹುದು. ಜೀವನ ಶಕ್ತಿಗಳನ್ನು ಎಷ್ಟೇ ಉಪಯೋಗ ಮಾಡಿದರೂ ಅದೂ ಇನ್ನೂ ಪ್ರಖರವಾಗುತ್ತವೆ. ಈ ವಿಧಿಯಿಂದ ಜೀವನ ಶಕ್ತಿಗಳನ್ನು ಎಷ್ಟೇ ಉಪಯೋಗ ಮಾಡಿದರೂ ಅವು ಸಮಾಪ್ತವಾಗುವುದಿಲ್ಲ. ಅವುಗಳನ್ನು ಸಂಖ್ಯೆಗಳಲ್ಲಿ ಬಂಧಿಸಲಾಗುವುದಿಲ್ಲ. ಬಂಧಿಸಲು ಹೋದರೆ ಬಂಧಿಸುವವನೇ ವಿಕೃತನಾಗುತ್ತಾನೆ. ಈ ರೀತಿಯಲ್ಲಿ ಬುದ್ಧಿವಾದ ಸಹಿತವೂ ನಾವು ಹೇಗೆ ಅಡವು ಇಡುತ್ತೇವೆ, ದಾಸರಾಗುತ್ತೇವೆ, ಶೋಷಣೆಯ ಆಧಾರರಾಗುತ್ತೇವೆ ಎಂಬುದರ ಮಾದರಿಯಿದು. ಇದು ಮಾನವನ ವಿರೋಧಿ, ಸಹ-ಅಸ್ತಿತ್ವ ವಿರೋಧಿ, ಬುದ್ಧಿಯನ್ನು ಶೋಷಣೆಯ ಆಧಾರ ಮಾಡಿ, ದ್ರೋಹ-ವಿದ್ರೋಹದ ಆಧಾರ ಮಾಡಿ, ಪಿತ್ರಾರ್ಜಿತ ಮಾಡಿ, ನಮ್ಮ ಬುದ್ಧಿಗೆ ನೀವು ಟ್ಯಾಕ್ಸ್ ಕೊಡಬೇಕೆಂದು ಹೇಳಿ ನಾವು ಸಮಾಜ ನಿರ್ಮಾಣ ಮಾಡುವ ಘೋಷಣೆ ಮಾಡುತ್ತೇವೆ. ಇದು ನಿಜವಾಗುವುದು ಸಾಧ್ಯವೇ? ಇದು ಯೋಚಿಸುವ ಬಿಂದು. ನನ್ನ ಪ್ರಕಾರ ಇದು ಸರ್ವಥಾ ಮಿಥ್ಯ, ಬುದ್ಧಿಯನ್ನು ಯಾರಿಂದಲೂ ಸೀಮಿತ ಮಾಡಲು ಸಾಧ್ಯವಿಲ್ಲ ಮತ್ತು ಸರ್ವ ಮಾನವರ ಬುದ್ಧಿ ಅಕ್ಷಯ, ಆದ್ದರಿಂದ ಅದನ್ನು ಸೀಮೆಯಲ್ಲಿ, ಪುಸ್ತಕಗಳಲ್ಲಿ ಬಂಧಿಸಲಾಗುವುದಿಲ್ಲ. ನಾನು ಎಷ್ಟು ವಾಙ್ಮಯವನ್ನು ಬರದಿದ್ದೀನೋ ಅದಕ್ಕಿಂತ ಹೆಚ್ಚಾಗಿ ನಾನು ಸ್ವಯಂವಿನ ಅನುಭವ ಮಾಡಿದ್ದೇನೆ. ನಿರ್ಮಿಸಿರುವ ಎಲ್ಲ ಯಂತ್ರಗಳಿಗಿಂತ ನಾನು ಹೆಚ್ಚು. ಮಾನವ ಜಾತಿಯೇ ಎಲ್ಲಗಿಂತಲೂ ಹೆಚ್ಚು. ಮಾನವನೇ ಎಲ್ಲಾ ಪುಸ್ತಕಗಳನ್ನು

ಬರೆದಿದ್ದಾನೆ ಮತ್ತು ಎಲ್ಲಾ ಪುಸ್ತಕಗಳಿಗಿಂತ ಹೆಚ್ಚು ಮಾನವ. ಈ ಬಿಂದುವಿಗೆ ಬರದೆ ನಾವು ನಮ್ಮ ಸದ್ಬುದ್ಧಿಯ ಪ್ರಯೋಗ ಮಾಡುತ್ತೇವೆ ಎಂಬುವುದು ನನಗನಿಸುವುದಿಲ್ಲ. ಈ ಎಲ್ಲಾ ಚರ್ಚೆಗಳನ್ನು ಬಹುಶಃ ಯೋಚಿಸಿದಾಗ ಎಲ್ಲರು ತಮ್ಮಲ್ಲಿ ಔಚಿತ್ಯತೆಯನ್ನು ಸ್ವೀಕರಿಸಬಹುದು. ಇದನ್ನು ಸ್ವೀಕರಿಸುವ ಕ್ರಮದಲ್ಲಿ ಬರುವ ಅಂತಿಮ ಮಾತೇನೆಂದರೆ ನಾವೂ ಅರಿವುಳ್ಳವವರಾಗಲೇಬೇಕು. ಅರಿವುಳ್ಳವವರಾಗುವುದರಲ್ಲಿ ಯಾವುದೇ ತೊಂದರೆಯಿಲ್ಲ. ಅರಿವಿಲ್ಲದಿರುವ ಪ್ರಯೋಗದಲ್ಲೇ ತೊಂದರೆಯಿರುವುದು. ನೋಡಿ, ಈ ಧರಣಿ ಒಂದು. ಇದನ್ನು ನಾವು ಖಂಡ - ಖಂಡದಲ್ಲಿ ಹಂಚಿಸಿ ರಾಷ್ಟ್ರದ ರೂಪದಲ್ಲಿ ನೋಡುತ್ತೇವೆ. ಅಷ್ಟೇ ಅಲ್ಲದೆ ಪ್ರತ್ಯೊಂದು ಖಂಡದ ನಾಲ್ಕು ದಿಶೆಯಲ್ಲಿ ಸೈನ್ಯವನ್ನು ನಿಲ್ಲಿಸುತ್ತೇವೆ, ಬೇಕಾದಾಗ ಹೋರಾಡುತ್ತೇವೆ, ಕಿತ್ತದುತ್ತೇವೆ. ಈ ಧರಣಿ ತುಂಡು-ತುಂಡು ಆಗಲು ಸಾಧ್ಯವಿಲ್ಲ, ತುಂಡಾದರೂ ಯಾರು ಉಳಿಯಲು ಸಾಧ್ಯವಿಲ್ಲ. ಅದನ್ನು ತುಂಡು ಎಂದು ನಂಬಿ (ಅದು ತುಂಡಾಗಿಲ್ಲದಿರುವಾಗ) ನಾವು ಸೆರಿಯಾಗಿ ನಡೆದುಕೊಳ್ಳುತ್ತಿದ್ದೇವೆಯೇ? ಇದು ಆಲೋಚನೆಗೆ ಒಂದು ಬಿಂದು. ನಮ್ಮ ಸುಳ್ಳು ಹೇಗೆ ನೆಲೆಸಿದೆ ಎಂಬುವುದಕ್ಕಾಗಿ ಇದು ಒಂದು ಉದಾಹರಣೆ. ಇನ್ನೊಂದು ನಿದರ್ಶನ ಏನೆಂದರೆ ಮಾನವನನ್ನು, ಪ್ರಾಣಿಗಳ ಬಗೆ ಯೋಚಿಸುವಂತೆ, ಬೇರೆ-ಬೇರೆ ಮಾಡುವುದಕ್ಕಾಗಿ ಬಣ್ಣ ಮತ್ತು ವಂಶದ ಆಧಾರದ ಮೇಲೆ ನಾವು ಯೋಚಿಸುತ್ತೇವೆ. ಇದೆಂತಹ ಬುದ್ಧಿಮತ್ತ? ಮಾನವನ ಮೌಲೀಕರಣೆ ಅರಿವಿನ ಆಧಾರದ ಮೇಲಾಗುತ್ತದೆ, ಬಣ್ಣ ಮತ್ತು ವಂಶದ ಆಧಾರದ ಮೇಲಲ್ಲ. ಇದನ್ನು ನಾವು ಪೋರ್ವದಲ್ಲಿಯೂ ಒಳ್ಳೆ-ಒಳ್ಳೆ ಘಟಣೆಗಳ ರೂಪದಲ್ಲಿ ನೋಡಿದ್ದೇವೆ. ಉದಾಹರಣೆಗೆ - ದಾಸ ಯುಗದ ವಿರೋಧ, ರಾಜಯುಗದ ವಿರೋಧ. ರಾಜಯುಗದಿಂದ ಪ್ರಜಾ ತಂತ್ರಕ್ಕಾಗಿ ಮಾನವ ಸಂಕ್ರಮಿತನಾಗಿದ್ದಾನೆ ಆದರೆ ಅರಿವುವಾದ ಅಥವಾ ಮಾನವವಾದ ವ್ಯವ್ವಸ್ಥೆಯ ಆಧಾರದ ಮೇಲೆ ವ್ಯವಸ್ಥೆ ಮಾಡುವುದಕ್ಕಾಗಿ ಇನ್ನೂ ನಾವು ನಿಷ್ಣಾತರಾಗಲು ಸಧ್ಯವಾಗಿಲ್ಲ. ಏನು ಪಡೆದೆವು? ಸೌಲಭ್ಯಗಳನ್ನು ಪಡೆದೆವು. ಯುದ್ಧ, ದ್ರೋಹ, ಶೋಷಣೆ ಇವೆಲ್ಲ ಇದ್ದೇ ಇದೆ, ಸುಳ್ಳಿನ ಸ್ರೋತಗಳು ಯಾವು - ಯಾವು? ರಾಷ್ಟ್ರದ ವಿಚಾರ (ಧರಣಿ ಖಂಡ-ಖಂಡವಾಗಿದೆ ಎಂದು ಯೋಚಿಸುವುದು), ಸಂವಿಧಾನ, ಶಕ್ತಿ ಕೇಂದ್ರಿತ ಶಾಸನ. ರಾಷ್ಟ್ರ ಸರ್ವೋಪರಿ, ಸಂವಿಧಾನ ಸರ್ವೋಪರಿ ಎಂದು ನಂಬಲಾಗಿದೆ. ಸಂವಿಧಾನದ ಮರ್ಮವೇನೆಂದರೆ ಶಕ್ತಿ ಕೇಂದ್ರಿತ ಶಾಸನ. ಶಕ್ತಿ ಕೇಂದ್ರಿತ ಶಾನನವೇನು? ತಪ್ಪನ್ನು ತಪ್ಪಿನಿಂದ ತಡೆಯುವುದು, ಅಪರಾಧವನ್ನು ಅಪರಾಧದಿಂದ ತಡೆಯುವುದು, ಯುದ್ಧವನ್ನು ಯುದ್ಧದಿಂದ ತಡೆಯುವುದು. ಸಾಮಾನ್ಯ ಸೌಲಭ್ಯಗಳ ಉಪಕ್ರಮವನ್ನು ಕೆಲವು ಸಂವಿಧಾನಗಳಲ್ಲಿ ಮಾಡಲಾಗಿದೆ, ಇವಲ್ಲಿರುವು ಯೋಚನೆ ಏನೆಂದರೆ, ಎಲ್ಲರ ಬಳಿ ಹಣವಿದ್ದರೆ ಅವರು ಬಾಳ ಬಲ್ಲರು, ಯುದ್ಧ ಮಾಡ ಬಲ್ಲರು.

ಸಂಘರ್ಷಪೂರ್ವಕವೇ ಬಾಳಬೇಕು, ಸಂಘರ್ಷದಿಂದಲೇ ಗರ್ವವಿರುತ್ತದೆಯೆಂದು ಘೋಷಣೆ ಮಾಡುತ್ತಾರೆ. ಈ ಘೋಷಣೆಯಲ್ಲಿ ಏನಾದರು ಸತ್ಯವಿದೆಯೇ? ಎಲ್ಲಾ ಸುಳ್ಳಿನ ಜಡ ಈ ಘೋಷಣೆಗಳಲ್ಲಿಯೇ ಇದೆ. ಇದರ ಮೇಲೆ ಆಧಾರಿತ ಪರಿವಾರ, ವ್ಯಾಪಾರ, ಶಿಕ್ಷಣ ಇತ್ಯಾದಿ ಸುಳ್ಳಿನ ಕಂತೆಯ ಕೆಳಗೆ ಅಣಗಿದೆ. ಕೆಲವರು ಇದರಿಂದ ಬಿಡುಗಡೆ ಪಡೆಯಲು ಪ್ರಯತ್ನಿಸುತ್ತಾರೆ ಇನ್ನು ಕೆಲವರು ಇದರಿಂದ ಅಣಗಿದ್ದಾರೆ. ನನ್ನ ಇಚ್ಛೆ ಶಿಕ್ಷಣದಲ್ಲಿ ಪರಿವರ್ತನೆ ಮಾಡುವುದು.

ಇವಾಗ ನಾನು ಜೀವನ ಸಹಜ ಹತ್ತು ಕ್ರಿಯೆಗಳನ್ನು ಪ್ರಮಾಣೀಕರಿಸಲು ತತ್ಪರನಾಗಿದ್ದೇನೆ. ಜೀವನವಿರುವ ಸ್ವೀಕೃತಿ ಪ್ರತ್ಯೇಕ ಮಾನವನಲ್ಲಿದ್ದೇಯಿದೆ. ಪ್ರತ್ಯೇಕ ವ್ಯಕ್ತಿ ತನ್ನ ಮನಸ್ಸಿನಿಂದ, ನಾನು ಜೀವಿತನಾಗಿದ್ದೇನೆ, ಜೀವಂತನಾಗಿದ್ದೇನೆಂದು ಹೇಳುತ್ತಾನೆ. ಆದರೆ ಜೀವನವೇನು? ಜೀವನದ ಪ್ರಯೋಜನವೇನು? ಜೀವನದ ಅಧ್ಯಯನವನ್ನು ಮಾಡುವವನು ಯಾರು? ಜೀವನದ ಹತ್ತು ಕ್ರಿಯೆಗಳನ್ನು ನಾನು ಅರಿತುಕೊಂಡಿದ್ದೇನೆ, ಬಾಳಿ ನೋಡಿದ್ದೇನೆ, ಇವು ನನ್ನಲ್ಲಿ ಪ್ರಮಾಣಿತವಾಗಿವೆ. ಜೀವನದ ಹತ್ತು ಕ್ರಿಯೆಗಳ ಹೆಸರನ್ನು ಮೊದಲು ಅರಿತುಕೊಳ್ಳೋಣ -

೧. ಆತ್ಮ - ಜೀವನದ ಇದು ಒಂದು ಭಾಗ ಸಹ-ಅಸ್ತಿತ್ವದಲ್ಲಿ ಅನುಭವ ಮಾಡುವ ಕ್ರಿಯೆ. ಇದನ್ನು ಮಧ್ಯಾಂಶದ ರೂಪದಲ್ಲಿ ನಾನು ನೋಡಿದ್ದೇನೆ. ಸಂಘಟನೆ-ಪೂರ್ಣ ಪರಮಾಣುವಿನ ಮಧ್ಯಾಂಶದ ರೂಪದಲ್ಲಿ ಇದು ತನ್ನಲ್ಲಿಯೇ ಕ್ರಿಯಾಶೀಲವಾಗಿರುತ್ತದೆ. ಇದರ ಪ್ರಥಮ ಪರಿವೇಷ, ದ್ವಿತೀಯ, ತೃತೀಯ, ಚತುರ್ಥ ಪರಿವೇಷದ ರೂಪದಲ್ಲಿ ಇತರ ಎಲ್ಲ ಕ್ರಿಯೆಗಳು ಸಂಪಾದಿತವಾಗುತ್ತದೆ. ಜೀವನ ಪರಮಾಣುವಿನ ಮಧ್ಯದಲ್ಲಿ (ಆತ್ಮ) ಎರಡೇ ಕ್ರಿಯೆಗಳಿವೆ. ಅನುಭವ ಮತ್ತು ಪ್ರಾಮಾಣಿಕತೆ.

೨. ಬುದ್ಧಿ - ಪ್ರಥಮ ಪರಿವೇಷದಲ್ಲಿ ಬೋಧ ಮತ್ತು ಋತಂಭರ (ಸಂಕಲ್ಪ) ಎರಡು ಕ್ರಿಯೆಗಲಿರಿವುದು ನೋಡಿದ್ದೇನ.

೩. ಚಿತ್ತ - ದ್ವಿತೀಯ ಪರಿವೇಷದಲ್ಲಿ ಚಿಂತನ ಮತ್ತು ಚಿತ್ರಣ ಎರಡು ಕ್ರಿಯೆಗಳಿರುತ್ತವೆ.

೪. ತೃತೀಯ ಪರಿವೇಷದಲ್ಲಿ ತುಲನ ಮತ್ತು ವಿಶ್ಲೇಷಣೆ ಎರಡು ಕ್ರಿಯೆಗಳುಗಳಿರುತ್ತವೆ.

೫. ಮನ - ಚತುರ್ಥ ಪರಿವೇಷದಲ್ಲಿ ಆಯ್ಕೆ ಮತ್ತು ಆಸ್ವಾದ ಎರಡು ಕ್ರಿಯೆಗಳಿರುತ್ತವೆ. ಇದೇ ಜೀವನದಲ್ಲಿ ಸಂಪೂರ್ಣತೆಯಲ್ಲಿ ಹತ್ತು ಕ್ರಿಯೆಗಳಿವೆ.

ಇಂದಿನವರೆಗೂ ಮಾನವ ನಾಲ್ಕು ವರೆ ಕ್ರಿಯೆಗಳಲ್ಲಿ ಪ್ರಮಾಣೀಕರಿಸಿದ್ದಾನೆ. ತುಲನದಲ್ಲಿ ಪ್ರಿಯ, ಹಿತ, ಲಾಭವಿದೆ. ಪ್ರಿಯ, ಹಿತ, ಲಾಭದ ಆಧಾರದ ಮೇಲೆ ಸಂವೇದನೆಶೀಲತೆ ಆಧಾರಿತ ಕಾರ್ಯ ಮಾಡುವುದಾಗುತ್ತದೆ. ಸಂವೇದನೆಶೀಲತೆ ಇಂದ್ರಿಯ ಮೂಲಕ, ಶರೀರ ಮೂಲಕವಾಗುತ್ತದೆ. ಆದರೆ ಇಂದ್ರಿಯಗಳನ್ನು ಜೀವಂತ ಮಾಡುವ ಕೆಲಸ ಜೀವನವೇ ಮಾಡುತ್ತದೆ. ಶರೀರವನ್ನು ಜೀವನವೆಂದು ನಂಬುವುದೇ ಮೂಲ ಭ್ರಮೆ. ಶರೀರವನ್ನು ಜೀವನವೆಂದು ನಂಬಿದ ಮೇಲೆ ಶರೀರದ ಅನುಸಾರ ನಡೆಯುವುದಾಗುತ್ತದೆ, ಇದೇ ಮಾನ್ಯತೆಯ ಆಧಾರ, ತಿಳಿವಳಿಕೆಯಾಗುವುದಿಲ್ಲ. ಆಗಬೇಕಾಗಿರುವುದೇನೆಂದರೆ ಜೀವನವನ್ನು ಜೀವನ, ಶರೀರವನ್ನು ಶರೀರವೆಂದು ನಂಬುವುದು. ಜೀವನ ಹಾಗು ಶರೀರದ ಪ್ರಯೋಜನೆಗಳ ಆಧಾರದ ಮೇಲೆ ಮೌಲೀಕರಣೆಯಾಗಬೇಕು. ಹೀಗಾದರೆ ಮಾನವ ಚೇತನಪೂರ್ವಕ ಬಾಳುವುದಾಗುತ್ತದೆ. ವ್ಯವಸ್ಥೆಯಲ್ಲಿ ಬಾಳುವುದಾಗುತ್ತದೆ. ಇದರ ಮೌಲೀಕರಣೆಯಾಗದಿದ್ದರೆ ಅವ್ಯವಸ್ಥೆ ಆಗೇ ಆಗುತ್ತದೆ. ವ್ಯವಸ್ಥೆಯಲ್ಲಿ ಬಾಳುವುದಕ್ಕಾಗಿ, ಜೀವನದ ಮೌಲೀಕರಣೆ ಪ್ರಾಯೋಜನೆಯ ಆಧಾರದ ಮೇಲೆ ಹಾಗು ಶರೀರದ ಮೌಲೀಕರಣೆ ಉಪಯುಕ್ತತೆಯ ಆಧಾರದ ಮೇಲೆ,

ಆವಶ್ಯಕವಾಗಿದೆ. ಶರೀರದ ಉಪಯುಕ್ತತೆ, ಜೀವನ ತನ್ನ ಜಾಗೃತಿಯನ್ನು ಮಾನವ ಪರಂಪರೆಯಲ್ಲಿ ಪ್ರಮಾಣೀಕರಿಸುವುದಕ್ಕಾಗಿ. ಮಾನವ ಶರೀರದ ವಿನ್ಯಾಸ, ಮಾದರಿ ಮಾನವ ಮಾಡಿಲ್ಲ. ಮಾನವ ಶರೀರ ರಚನೆಯಾದ ಮೇಲೆ, ಶಿಶು ಜನ್ಮಿಸಿದಾಗ ಅದು ಜೀವಂತವಾಗಿರುತ್ತದೆ. ಜೀವಂತ ಶಿಶುವಿನ ಶರೀರವೇ ಜೀವನವೆಂದು ನಾವು ನಂಬುತ್ತೇವೆ. ಸ್ವಲ್ಪ ದಿನಗಳ ನಂತರ ಆ ಶಿಶುವೂ ಇದನ್ನೇ ನಂಬುತ್ತದೆ. ಈ ರೀತಿಯಲ್ಲಿ ಪರಂಪರೆ ತನ್ನಲ್ಲಿಯೇ ಸಿಕ್ಕಿ ಬಂಧಿತವಾಗಿದೆ ಹಾಗು ಈ ಬಲೆಯಿಂದ ತಪ್ಪಿಸಿಕೊಳ್ಳಲು ಅಭಿಭಾವಕರು ಅರಿತುಕೊಳ್ಳಲೇ ಬೇಕು.

ಶಿಶುವಿನ ಶರೀರ ಗರ್ಭದಲ್ಲಿಯೇ ರಚಿತವಾಗುತ್ತದೆ ಅದನ್ನು ಯಾವುದಾದರು 'ಜೀವನ' ನಡೆಸುತ್ತದೆ. 'ಜೀವನ' ಪ್ರಕೃತಿಯಲ್ಲಿ ಇದ್ದೇ ಇದೆ. ಶರೀರವನ್ನು 'ಜೀವನ' ನಾಲ್ಕನೇ-ಐದನೇ ತಿಂಗಳಿನಲ್ಲೆ ನಡೆಸಲು ಪ್ರಾರಂಭಿಸುತ್ತದೆ. ಈ ರೀತಿಯಲ್ಲಿ ಶರೀರ ಮತ್ತು ಜೀವನದ ಸಂಯೋಜನೆ ಗರ್ಭಾಶಯದಲ್ಲಿಯೇ ಆಗುತ್ತದೆ. 'ಜೀವನ' ಶರೀರವಲ್ಲ. ಇದನ್ನು ಗುರುತಿಸುವ ರೀತಿ ಈ ಪ್ರಕಾರ. ಶರೀರದ ಯಾವುದೇ ಅಂಗ ಅವಯವದಲ್ಲಿ ನ್ಯಾಯದ, ಧರ್ಮದ, ಸತ್ಯದ ಪ್ರತೀಕ್ಷೆ, ಅಪೇಕ್ಷೆಯಿಲ್ಲ. ಆದರೆ ನಾವು ಪ್ರತ್ಯೇಕ ಮಾನವರಿಂದ ನ್ಯಾಯದ, ವ್ಯವಸ್ಥೆಯ, ಸತ್ಯದ, ಅಪೇಕ್ಷೆ ಪ್ರತೀಕ್ಷೆ ಮಾಡೇಮಾಡುತ್ತೇವೆ. ಈ ಅಪೇಕ್ಷೆಗಳು ಪೂರೈಸುವುದೇ ಜೀವನದ ಹತ್ತು ಕ್ರಿಯೆಗಳನ್ನು ಪ್ರಮಾಣೀಕರಿಸುವುದು. ಶರೀರ ಜೀವಂತವಾಗಿರುವುದಕ್ಕಾಗಿ ಶರೀರದಲ್ಲಿ ಜೀವನವಿರುವುದು ಅವಶ್ಯಕ.

'ಜೀವನ' ತನ್ನಿಂದಲೇ, ಎಂದಿಗೂ, ಶಿಶು ಕಾಲದಿಂದಲೇ ಮನದ ಎರಡು ಕ್ರಿಯೆಗಳನ್ನು ಆಯ್ಕೆ, ಆಸ್ವಾದವನ್ನು ಪ್ರಾರಂಭಿಸುತ್ತದೆ. ವಿಶ್ಲೇಷಣೆ ಹಾಗು ತುಲನದಲ್ಲಿ, ವಿಶ್ಲೇಷಣೆ ಮಾಡುತ್ತದೆ, ತುಲನದಲ್ಲಿ ಪ್ರಿಯ, ಹಿತ, ಲಾಭದ ಆಧಾರದ ಮೇಲೆಯೇ ಮಾಡುತ್ತದೆ. ಚಿತ್ತದ ಒಂದೇ ಕ್ರಿಯೆ ಚಿತ್ರಣವನ್ನು ನಾವು ಮಾಡುತ್ತೇವೆ. ಚಿತ್ರಣ ಕ್ರಿಯೆಯ ಕಾರಣ ಮಾನವ ತನ್ನ ಸಾಮಾನ್ಯ ಆಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆಯ ಸಮಸ್ತ ವಸ್ತುಗಳನ್ನು ಚಿತ್ರಿತ ಮಾಡಲಾಗಿದೆ ಮತ್ತು ಅದನ್ನು ಪ್ರಾಪ್ತಿಸಿದ್ದಾನೆ. ಪ್ರಾಪ್ತಿಸಿದ ಮೇಲೆಯೂ ನಾವು ವ್ಯವಸ್ಥೆಯ ತನಕ ತಲಪಲಿಲ್ಲ. ಈ ಉಪಲಬ್ಧಿಗಳನ್ನು ನಾವು ಶ್ರೇಷ್ಠತೆಯ ಉಪಲಬ್ಧಿ, ಮಾನವೀಯತೆಯ ಉಪಲಬ್ಧಿ ಎಂದು ನಂಬಿದ್ದೇವೆ. ಮಾನವನ ಅಧಿಕಾರಗಳ ಉಪಲಬ್ಧಿಗಳಾಗಿವೆ, ಶೋಷಣೆ, ಸಂಘರ್ಷದ ಉಪಲಬ್ಧಿಗಳಾಗಿವೆ. ಈ ಮಾತುಗಳನ್ನೂ ಕೇಳಿ ನಗುವಂತಾಗುತ್ತದೆ. ವಿಷಾದವೂ ಆಗುತ್ತದೆ. ನಾವು, ಮಾನವರು ಎಲ್ಲವನ್ನು ಪಡೆದಾಯಿತು, ಮಾನವನ ಅಧ್ಯಯನವೂ ಮಾಡಿದಾಯಿತು, ಎಂದು ನಾವು ಹೇಗೆ ನಂಬಿದ್ದೇವೆ? ಇದು ಯೋಚಿಸುಲು, ಪುನರ್ವಿಚಾರಿಸಲು ಬಿಂದು. **ಶರೀರ ಶಾಸ್ತ್ರದ ನಾಮದಿಂದ ಹೇಳಲಾಗುವ ಶಾಸ್ತ್ರದಲ್ಲಿ ಕೇವಲ ಶರೀರ ರಚನೆ ಹಾಗು ಪ್ರಕ್ರಿಯೆಯ ಅಧ್ಯಯನ ಮಾಡಲಾಗುತ್ತದೆ, ಆದರೆ ಮಾನವನ ಅಧ್ಯಯನ ಮಾಡಿಸುತ್ತೇವೆ ಎಂದು ಹೇಳಲಾಗುತ್ತದೆ.** ನೀವೇ ಯೋಚಿಸಿ ಶರೀರವನ್ನು ಕತ್ತರಿಸಿ, ಮಾಂಸ-ನರಗಳ, ಮೂಳೆಗಳ, ಗಣನೆಮಾಡಿ ಮಾನವನ ಅಧ್ಯಯನ ಮಾಡಲಾಗುತ್ತದೆಯೇ? ಜೀವಂತ ಮಾನವನಲ್ಲಿಯೇ ಶರೀರದಲ್ಲಿ ಕಣ್ಣು, ಕಿವಿ ಇತ್ಯಾದಿಯ ಅಧ್ಯಯನ ಮಾಡಿ ಮಾನವನ ಅಧ್ಯಯನ ಹೇಗಾಗುತ್ತದೆ. ಈ ರೀತಿಯಲ್ಲಿ ಪರಂಪರೆಯಲ್ಲಿ ಮಾನವನ ಮೇಲೆ ಸುಳ್ಳಿನ ಕಂತೆಯನ್ನು

ಹೇರಲಾಗುತ್ತದೆ, ನಾವು ಮಾನವನ ಅಧ್ಯಯನ ಮಾಡಿಲ್ಲ ಆದರೆ ಅಧ್ಯಯನ ಮಾಡಿದ್ದೇವೆ ಎಂದು ಜಂಬಕೊಚ್ಚಿಕೋಳ್ಳುತ್ತೇವೆ. ಅಸ್ತಿತ್ವದ ಅಧ್ಯಯನವನ್ನು ಮಾಡದೆ, ಇದರ ಮೇಲೆ ಶಾಸನೆ ಮಾಡುತ್ತೇವೆಂದು ಜಂಬಕೊಚ್ಚಿಕೊಳ್ಳುತ್ತೇವೆ. ಈ ರೀತಿಯಲ್ಲಿ ಮಾನವ ಪರಂಪರೆ ಈ ಭಾರದ ಕೆಳಗೆ ಹೂತುಹೋಗಿದೆ. ಇವಾಗಿರುವುದು ಎರಡೇ ವಿಕಲ್ಪ, ಇದರಿಂದ ತಪ್ಪಿಸಿಕೊಳ್ಳುವುದು ಅಥವಾ ಹೂತಿದ್ದು ನಾಶವಾಗುವುದು. ನಿಯತಿಯೇ ನಮ್ಮನ್ನು ಸಂತುಲಿತ ಮಾಡುತ್ತದೆ, ಏನು ನಮಗೆ ಹೇಳಿಕೊಡಲಾಗುತ್ತದೆ. ಮಾನವ ಜಾತಿ ಎಷ್ಟು ಅತಿ ಮಾಡಲಾಗುತ್ತದೆಯೋ, ಅಷ್ಟೂ ಮಾಡಿದ ನಂತರ ಪ್ರಕೃತಿ ಎಂತಹ ಪರಿಸ್ಥಿತಿ ಹುಟ್ಟಿಸುತ್ತದೆ ಎಂದರೆ ಮಾನವ ಈ ಧರಣಿಯ ಮೇಲೆ ಇರುವುದಿಲ್ಲ. ಪರಿಸರದ ಬಗೆಯಾಗುತ್ತಿರುವ ಕೋಲಾಹಲ ನಾವು ಕೇಳುತ್ತಾ ಬರುತ್ತಿದ್ದೇವೆ, ಎಷ್ಟು ಮಾನವರು ಉಳಿಯುತ್ತಾರೆ, ಎಷ್ಟು ಮಾನವರು ನಾಶವಾಗುತ್ತಾರೆ, ಇದಕ್ಕೆ ಉಪಾಯ ಯೋಚಿಸಲಾಗುತ್ತಿದೆ. ಕೆಲವು ದೇಶದ ನಿವಾಸಿಯರು, ನಮ್ಮ ದೇಶ ಉಳಿದರೆ ಸಾಕು ಎಂದು ಯೋಚಿಸುತ್ತಾರೆ, ಕೆಲವು ಧರ್ಮದವರು ನಮ್ಮ ಧರ್ಮದವರು ಉಳಿದರೆ ಸಾಕು ಎಂದು ಯೋಚಿಸುತ್ತಾರೆ. ಯಾವುದಾದರು ಒಂದು ಮತ ಉಳಿದು ಬೇರೆ ಎಲ್ಲಾ ನಾಶವಾಗುತ್ತದೆ ಎಂದು ಹೇಳುತ್ತಾರೆ. ಇವೆಲ್ಲಾ ಮಾತಿನಿಂದ ಎಲ್ಲಿ ತಲುಪಲು ಬಯಸುತ್ತಿದ್ದೇವೆ? ಹೀಗೆ ಯೋಚಿಸಿ ಏನು ಪ್ರಯೋಜನ? ಈ ಬಿಂದುವಿನ ಮೇಲೆ ನನ್ನ ಯೋಚನೆ ಏನೆಂದರೆ, ಧರ್ಮ ಮತ್ತು ರಾಜ್ಯ, ಶಿಕ್ಷಣದ ಹೆಸರಿನಲ್ಲಿ ಎಲ್ಲರು ಹಾದಿ ಬಿಟ್ಟು ಹೋಗಿದ್ದಾರೆ. ಧರ್ಮ ಗದ್ದಿಯಲ್ಲಿ ಧರ್ಮದ ಸಾರ್ವಭೌಮತೆಯಿಲ್ಲ. ಧರ್ಮಗದ್ದಿಯ ಹೆಸರಿನಲ್ಲಿರುವ ಎಲ್ಲಾ ಧರ್ಮಗಳಲ್ಲಿ ಯಾವುದೇ ಸಾರ್ವಭೌಮ ಧರ್ಮದ ಆಕಾರದಲ್ಲಿಲ್ಲ. ಯಾವ ಶಿಕ್ಷಣವೂ ಇಲ್ಲ. ಯಾವ ಪ್ರಮಾಣವೂ ಇಲ್ಲ. ಧರ್ಮವನ್ನು ಎಲ್ಲಿಂದ ತರುವುದು? ರಾಜ್ಯ ಗದ್ದಿಯಲ್ಲಿ ರಾಜ್ಯದ ಯಾವುದೇ ಅವಧಾರಣವೂ ಇಲ್ಲ.

ರಾಜ್ಯವನ್ನು ಕಾಪಾಡಲು ನಾವು ಕೆಲಸ ಮಾಡಬೇಕು. ಏನು ಮಾಡುವುದು? ಸಂಘರ್ಷ ಮಾಡುತ್ತೇವೆ. ಸಂಘರ್ಷದ ಒಟ್ಟು ಮಸಾಲೆ, ವಿದ್ರೋಹ-ದ್ರೋಹ, ಶೋಷಣೆ ಮತ್ತು ಯುದ್ಧ. ಈ ನಾಲ್ಕು ಮಾಸಾಲೆ ಯಾರು ತಯಾರಿಸುತ್ತಾರೆ. ಪ್ರಕೃತಿ ಅಥವಾ ಮಾನವ. ಇದನ್ನು ನೋಡಲಾಗಿದೆ, ಅಧ್ಯಯನ ಮಾಡಲಾಗಿದೆ, ಈ ಮಾಸಾಲೆ ಮಾನವನೇ ತಯಾರಿಸುವುದು, ಭ್ರಮೆವಶ ತಯಾರಿಸುತ್ತಾನೆ. ಆಖ್ಯಾನ ಸಂಸ್ಥೆಗಳು ಎರಡೇ - ಧರ್ಮಗದ್ದಿ, ರಾಜ್ಯಗದ್ದಿ. ಅತ್ಯಂತ ಶಕ್ತಿಯುಳ್ಳ, ಅತ್ಯಂತ ತಾಕತ್ತಿರುವ, ಎಲ್ಲಾ ಸಾಧನಗಳಿರುವ ಸಂಸ್ಥೆ ಇವೆರಡು. ಇಂತಹ ಎರಡು ಗದ್ದಿ ಈ ರೀತಿಯಲ್ಲಿ ರಿಕ್ತವಾಗಿವೆ. ವ್ಯಾಪಾರ ಗದ್ಧಿಯಂತೂ ಕೇಳಲೇಬೇಡಿ. ಅದು ಮೊದಲಿಂದಲೇ ಶೋಷಣೆಗಾಗಿ ತಯಾರಾಗಿದೆ. ಶಿಕ್ಷಣ ಗದ್ಧಿಯನ್ನು ವಿಚಾರಿಸಿದರೆ, ಅವರ ಹತ್ತಿರ ಯಾವುದೇ ಮಾರ್ಗದರ್ಶನ, ದಿಶೆ ದರ್ಶನದ ನಿಶ್ಚಿತವಾದ ಲಕ್ಷ್ಯವನ್ನು ಗುರುತಿಸುವ ಯಾವ ವ್ಯವಸ್ಥೆಯೂ ಇಲ್ಲ. ನೀವೇ ಹೇಳಿ ಸಾಮಾನ್ಯ ಮಾನವ ಮಾಡುವುದೇನು? ಈ ನಾಲ್ಕು ಪರಂಪರೆಗಳಿಂದ (ಧರ್ಮ, ರಾಜ್ಯ, ವ್ಯಾಪಾರ, ಶಿಕ್ಷಣ) ಯಾವ ರಸ್ತೆ ಸಿಗುವಂತಿಲ್ಲ. ಹೀಗಿರುವಾಗ ರಸ್ತೆಯನ್ನು ಪತ್ತೆಹಚ್ಚಿ, ರಸ್ತೆ ತಯಾರಿಸುವುದೇ ಸಾಹಸಿಕತೆ. ಈ ರಸ್ತೆ ಅರಿವಿನ, ಪ್ರಾಮಾಣಿಕತೆಯ, ಜವಾಬ್ದಾರಿಯ, ಭಾಗವಹಿಸುವಿಕೆಯದಾಗಿರುತ್ತದೆ. ಹೊಡೆದಾಟದ ರಸ್ತೆಯಿಂದ ಯಾವ ಲಕ್ಷ್ಯವೂ ಸಿಗುವುದಿಲ್ಲ. ಹೊಡೆದಾಟದಿಂದ ಆವಶ್ಯಕತೆಗಳು ಪೂರೈಸುವುದಿಲ್ಲ. ಇದರ ನಂತರವೂ ಹೊಡೆದಾಟದ ಪರಂಪರೆಯಿದೆ. ಇದೂ

ಒಂದು ದೊಡ್ಡ ಭ್ರಮೆಯಾಯಿತಲ್ಲವೇ. ಇವಾಗ, ಬುದ್ಧಿಯ ಮಾತೆನೆಂದರೆ ನಾವು ಅರಿವುಳ್ಳವವರಾಗ ಬೇಕು. ಅರಿವಿನ ಶೋಧ ಸ್ವಯಂನಲ್ಲಿದೆ. ನನ್ನನ್ನು ಶೋಧಿಸಿ ನೀವು ಅರಿವುಳ್ಳವವರಾಗಲು ಸಾಧ್ಯವಿಲ್ಲ. ನೀವು ತಮ್ಮನ್ನು ಸ್ವಯಂ ಶೋಧ ಮಾಡಿದರೆ ಅರಿವುಳ್ಳವವರಾಗುತ್ತೀರ. ನಾನು ಪ್ರಪಂಚವನ್ನು ಶೋಧಿಸಿ ಮೂವತ್ತು ವರ್ಷ ಹೆಣಗಾಡಿದೆ. ನನಗೆ ಎಲ್ಲೂ ಅರಿವಿನ ಯಾವುದೇ ಅಂಶವೂ ಸಿಗಲಿಲ್ಲ. ಯಾವಾಗ ನಾನು ಇಪ್ಪತ್ತೈದು ವರ್ಷ ಪ್ರಯತ್ನ ಮಾಡಿ ನನ್ನನ್ನು ಸ್ವಯಂ ಶೋಧಿಸಿ ನೋಡಿದೆನೋ ಅವಾಗ ನನಗೆ ಅರಿವಿನ ಎಡೆ ಸಿಕ್ಕಿತು. ಗತಕಾಲದ ಪ್ರಯಾಸದಿಂದ ನಾನು ಏನನ್ನು ಪಡೆದನೋ ಅದನ್ನು ಸತತ ನಿಷ್ಠೆಯ ವಿಧಿಯಿಂದ ಮಾನವನಿಗೆ ಒಪ್ಪಿಸಲು ಬಯಸಿದೆನು. ಈ ಕ್ರಮದಲ್ಲಿ ಇದು ಒಂದು ಪ್ರಯಾಸ.

ಇದುವರಗೆ ನಿಮಗೆ ಇಂಗಿತವಾಗಿರಬೇಕು, ಸಹ-ಅಸ್ತಿತ್ವವೇ ಪರಮ ಸತ್ಯ. ಸಹ-ಅಸ್ತಿತ್ವದಲ್ಲಿ ಬಾಳುವುದೇ ನಮ್ಮ ಪರಮ ಧರ್ಮ, ಇದು ಅರಿವಾದರೆ ಅದಕ್ಕಾಗಿ ಎಲ್ಲ ಅರಿವು ಸಮೀಚೀನವಾಗಿದೆ. ಇದು ಬಹಳ ಸುಲಭ. ನನ್ನ ಪ್ರಕಾರ ಸುಳ್ಳು ಅಧಿಕ ಕಠಿಣ, ಸತ್ಯದಲ್ಲಿ ಬಾಳುವುದು ಅಧಿಕ ಸುಲಭ. ಅಧಿಕ ಸುಗಮ, ನಾನು ಬಾಳಿ ನೋಡಿದ್ದೇನೆ. ಮೊದಲು ಪ್ರಶ್ನೆಗಳಿಂದ ಆವರಿಸಿದ್ದಾಗ ಬಾಳಲು ಎಷ್ಟು ಕಷ್ಟವೆನಿಸಿತು. ಸಮಾಧಾನ ಸಿಕ್ಕಿದಾಗ, ಪ್ರಶ್ನೆಗಳಿಂದ ಮುಕ್ತನಾದೆನು ಮತ್ತು ಬಾಳುವುದು ಸುಗಮವಾಯಿತು. ಈ ಮಾತು ನಿಮಗೂ ಸೇರಿ ಅನಿಸಿದರೆ ನನ್ನ ವಿಶ್ವಾಸ ಹೆಚ್ಚುತ್ತದೆ. ಈ ಮಾತನ್ನು ಸಂಗಡಿಗರು ನೋಡಿದ್ದಾರೆ, ನೀವೂ ಬಯಸಿದರೆ ಶೋಧಿಸಬಹುದು. ಶೋಧ ಚಿಂತನೆಯಿಂದ ಪ್ರಾರಂಭವಾಗುತ್ತದೆ. ನ್ಯಾಯ ವ್ಯವಹಾರದಿಂದ ಪ್ರಾರಂಭವಾಗುತ್ತದೆ. ನಾವು ಸಂಬಂಧಗಳನ್ನು ಅರಿತುಕೊಂಡಿದ್ದೇವೆಯೇ ಅಥವಾ ಸಂಬಂಧಗಳ ನಿರ್ವಹಣೆ ಮಾಡುತ್ತೇವೆಯೇ, ಸಂಬಂಧಗಳಲ್ಲಿ ಒಳಗೊಂಡಿರುವ ಮೌಲ್ಯಗಳ ಮೌಲೀಕರಣೆ ಮಾಡಲಾಗುತ್ತದೆಯೇ, ಉಭಯ ತೃಪ್ತಿಯ ಜಾಗಕ್ಕೆ ಬರಲಾಗುತ್ತಿದೆಯೇ ಅಥವಾ ಬರಲಾಗುತ್ತಿಲ್ಲವೇ, ಇವೆಲ್ಲಾ ಶೋಧಿಸುವ ಬಿಂದುಗಳು. ಇದನ್ನು ಶೋಧ ಮಾಡಲು ಪ್ರಾರಂಭ ಮಾಡಿದರೆ ಪ್ರಿಯ, ಹಿತ, ಲಾಭದಲ್ಲಿ ನಿಶ್ಚಿತತೆ ಸಿಗುವುದಿಲ್ಲ. ನಮಗೆ ಯಾವುದು ಪ್ರಿಯವೆನಿಸುತ್ತದೆಯೋ, ನಿಮಗೆ ಅದು ಸೇರಿ ಅನಿಸುವುದಿಲ್ಲ. ನಮಗೆ ಯಾವುದು ಹಿತಕರವೆಂದು ಅನಿಸುತ್ತದೆಯೋ ನಿಮಗೆ ಅದು ಅನಿಸುವುದಿಲ್ಲ, ಎಷ್ಟು ಲಾಭದಿಂದ ನೀವು ಸಂತುಷ್ಟರಾದರೋ ಅಷ್ಟೇ ಲಾಭದಿಂದ ನಾನು ಸಂತುಷ್ಟವಾಗುವುದಿಲ್ಲ. ಇದರಲ್ಲೇ ಸಮಸ್ತ ಮಾನವರು ಸಿಕ್ಕಿಬಿದ್ದಿದ್ದಾರೆ. ಈ ರೀತಿಯಲ್ಲಿ ಪ್ರಿಯದಲ್ಲಿ, ಹಿತದಲ್ಲಿ, ಲಾಭದಲ್ಲಿ ಸಮಾನತೆಯ ಆಧಾರವಾಗಲು ಸಧ್ಯವಿಲ್ಲ. ಇದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಏನು ಮಾಡುವುದು, ಈ ಮೂರು ತುಲನದ (ಪ್ರಿಯ, ಹಿತ, ಲಾಭ) ಬದಲು ಇನ್ನೊಂದು ತುಲನವಿದೆ (ನ್ಯಾಯ, ಧರ್ಮ, ಸತ್ಯ) ಇದೆ. ನ್ಯಾಯ ದೃಷ್ಟಿಯಿಂದ ನಾವು ಯಾವಾಗ ತುಲನ ಮಾಡಲಾರಂಭಿಸುತ್ತೇವೋ ಅದಕ್ಕೆ ಚಿಂತನವೆಂದು ಹೇಳುತ್ತೇವೆ. ನ್ಯಾಯ ನಮಗೆ ಸಂಬಂಧವನ್ನು ಗುರುತಿಸಿದ ಮೇಲೆಯೇ ಅರಿವಾಗುತ್ತದೆ. ಸಂಬಂಧವನ್ನು ಗುರುತಿಸಿ, ಫಲಸ್ವರೂಪ ಮೌಲ್ಯಗಳ ನಿರ್ವಾಹವಾದಾಗ, ಅದರ ಫಲಸ್ವರೂಪ ಮೌಲೀಕರಣೆಯಾಗಿ ಮತ್ತು ಉಭಯ ತೃಪ್ತಿಯಾದಾಗ ಅದರ ಹೆಸರು ನ್ಯಾಯ. ಎರಡೂ ಪಕ್ಷಗಳನ್ನು ಸಂತುಲಿತ ರೂಪದಲ್ಲಿ ಸಂತುಷ್ಟ ಮಾಡುವಂತಹ ವಸ್ತುವೇ ನ್ಯಾಯ. ಎರಡೂ ಪಕ್ಷಗಳು ಸಂತುಷ್ಟವಾಗಲಿಲ್ಲವೆಂದರೆ ನ್ಯಾಯ ವಿಲ್ಲ. ಈ ಸಂಬಂಧದಲ್ಲಿ, ನನ್ನನ್ನು ಯಾರೋ ಕೇಳಿದರು, ಯಾರಾದರು

ಅಪರಾಧ ಅಥವಾ ತಪ್ಪನ್ನು ಮಾಡಿದರೆ ಅದಕ್ಕೇನು ಮಾಡುವುದು? ಯಾರಾದರು ಅಪರಾಧ / ತಪ್ಪು ಏಕೆ ಮಾಡುತ್ತರೆಂದರೆ ಅವರನ್ನು ನಾವು ಅರಿವುಳ್ಳವವರಾಗಿ ಮಾಡಲಿಲ್ಲ. ನೀವು ಅಪರಾಧಿಗಳ ಸಂಘವೇಕೆ ಇದನ್ನು ನೋಡುತ್ತೀರ, ಸರಿಯಾದ ವ್ಯಕ್ತಿಯ ಸಂಘದಲ್ಲಿ ಯಾಕೆ ನೋಡಬಾರದು. ಅಪರಾಧ ಮಾಡದೇಯಿರುವಂತಹ ಹಲವಾರು ವ್ಯಕ್ತಿಗಳ ಸಹಿತ ನಮಗೇನು ಸಮಸ್ಯೆಯಿಲ್ಲ. ಪರಸ್ಪರ ಮೌಲೀಕರಣೆ ಮಾಡಿ ಉಭಯ ತೃಪ್ತಿ ಪಡೆಯುತ್ತೇವೆ. ಇದನ್ನು ಹೇಗೆ ಮರೆಯುವುದು. ಇದೊಂದು ಪ್ರಮಾಣ ನಿಮ್ಮ ಮುಂದಿದೆ, ನಿಮಗೆ ಇದರ ಅವಶ್ಯಕತೆಯಿದೆಯೇ ಇಲ್ಲವೆ? ನನ್ನಲ್ಲಿ ಮತ್ತು ನಿಮ್ಮಲ್ಲಿ ಇಷ್ಟೇ ಅಂತರ, ನಾನು ವೇದನೆ ವಶ ಒಂದು ಹೆಜ್ಜೆ ಮುಂದೆ ಹೋದೆನು. ನನಗೆ ಈ ವಸ್ತು ದೊರಕಿತು ಎಂದು ನಾನು ಸತ್ಯಾಪಿನ ಮಾಡಬಹುದು. ಅರಿತುಕೊಂಡ ನಂತರ ನೀವೂ ಇದೆ ಸತ್ಯಾಪನ ಮಾಡುತ್ತೀರಾ. ಇದರಲ್ಲಿ ಬಹಳ ಸುಖವಿದೆ, ತೃಪ್ತಿಯಿದೆ. ಈ ರೀತಿಯಲ್ಲಿ ಸರ್ವ ಮಾನವ ಸತ್ಯಾಪನ ಮಾಡಲು ಯೋಗ್ಯರಾಗುತ್ತಾರೆ ಅರಿವಾದನಂತರ. ಅರಿವು ಎಲ್ಲಿ ಸಿಗುತ್ತದೆ? ಶಿಕ್ಷಣ ಸಂಸ್ಥೆಗಳಲ್ಲಿ ಸತತ ನಿಷ್ಠೆಯ ಅಧ್ಯಾಪನೆಯಿಂದ. ಶಿಕ್ಷಣ ಸಂಸ್ಥೆ ಎಂದರೇನು? ಎಲ್ಲಾ ಅಭಿಭಾವಕರ ಸಮ್ಮಿಲಿತ ಅಭಿವ್ಯಕ್ತಿ.

ಅರಿವು, ಬೋಧ ಪೂರ್ವಕ ಪ್ರಮಾಣೀಕರಿಸುವುದಕ್ಕಾಗಿರುವ ಕಾರ್ಯದ ಹೆಸರು ಶಿಕ್ಷಣ. ಅರಿವು, ಪ್ರಮಾಣ ಬೋಧವಾಗದೆ ಶಿಕ್ಷಣ ಕಾರ್ಯವಾಗುವುದಿಲ್ಲ. ಅರಿವಿಗಾಗಿ, ಶಿಕ್ಷಣ ಸಂಸ್ಥೆಗಳು ಜವಾಬ್ದಾರರು, ಪ್ರತ್ಯೇಕ ಅಭಿಭಾವಕ ಜವಾಬ್ದಾರರು. ಪ್ರತ್ಯೊಂದು ಪರಿವಾರ ಶಿಕ್ಷಣಕ್ಕಾಗಿ ಸೂತ್ರ. ಆದ್ದರಿಂದ ಶಿಕ್ಷಣ ಸಂಸ್ಥೆಗಾಗಿ ಏಕೀಕರಣ, ಖಾಸಗೀಕರಣ, ಸರ್ಕಾರೀಕರಣ, ಇವೆಲ್ಲಾ ಯೋಚಿಸುವುದರಿಂದ ಪ್ರಯೋಜನವಿಲ್ಲ, ಪ್ರಯೋಜನವಾಗಿಲ್ಲ. ಅಭಿಭಾವಕರನ್ನು ನೇರವಾಗಿ ಶಿಕ್ಷಣ ಸಂಸ್ಥೆಯ ರೂಪದಲ್ಲಿ ನೋಡಬೇಕು. ಇದರಲ್ಲೇ ಮಾನವನ ಕಲ್ಯಾಣವಾಗುತ್ತದೆ. ಅರಿವಿನಿಂದ ಇದೇ ಸ್ವರೂಪ  ತೋರುತ್ತದೆ. ನಾವು ನ್ಯಾಯನೀಡುವ ಕ್ಷಮತೆಯಿಂದ ನಿಷ್ಣಾತವಾಗಬೇಕಾಗುತ್ತದೆ. ನ್ಯಾಯನೀಡುವ ಕ್ಷಮತೆ ಸ್ವಯಂನಲ್ಲಿ ಪ್ರಮಾಣಿತವಾಗಬೇಕಾಗುತ್ತದೆ . ಈ ಎರಡೂ ವಸ್ತುಗಳಿಂದ ಸಂಪನ್ನವಾದರೆ ನಾವು ನ್ಯಾಯ ಮಾಡಬಹುದು. ಎರಡೂ ವಸ್ತುಗಳಿಂದ ಸಂಪನ್ನವಾದರೆ ನಾವು ಅರಿತುಕೊಳ್ಳುತ್ತೇವೆ. ಅರಿತುಕೊಳ್ಳದೆ ನ್ಯಾಯ ಹೇಗೆ ಮಾಡುವುದು. ದೊಡ್ಡ-ದೊಡ್ಡ ನ್ಯಾಯಾಲಯಗಳಲ್ಲಿ ನ್ಯಾಯವನ್ನು ಅರಿತುಕೊಂಡಿರುವ ನ್ಯಾಯಮೂರ್ತಿ ಸಿಗುವುದಿಲ್ಲ, ಮತ್ತವರು ಏನುಮಾಡುವುದು? ಬಾಳುವುದರಲ್ಲಿ ಕನಿಷ್ಠ ನ್ಯಾಯವಾದರೂ ಇರಬೇಕು. ಇದರ ಪ್ರಮಾಣ ಮಾನವೀಯತೆಪೂರ್ಣ ನಡತೆ. ಮಾನವೀಯತೆಪೂರ್ಣ ನಡತೆಗಿಂತ ಕಡಿಮೆಯಲ್ಲಿ ನ್ಯಾಯವಾಗುವುದಿಲ್ಲ. ಇದಕ್ಕಿಂತ ಹೆಚ್ಚಿನ ಅವಶ್ಯಕತೆಯಿಲ್ಲ. ಚಿಂತನದ ಸಹಿತ ಜೀವನದ ಆರು (೬) ಕ್ರಿಯೆಗಳು ಪೂರ್ಣವಾಗುತ್ತದೆ. ವಿಶ್ಲೇಷಣೆ ಪ್ರಿಯ, ಹಿತ, ಲಾಭದ ಅರ್ಥದಲ್ಲಿ ಬಹಳಷ್ಟು ಮಾಡಾಗಿದೆ. ಶರೀರದ ಆವಶ್ಯಕತೆಗಳಿಗಾಗಿ ಸಾಮಾನ್ಯ ಆಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆ ಸಂಬಂಧಿ ವಸ್ತುಗಳ ಉತ್ಪಾದನೆ ಬಹಳಷ್ಟು ಮಾಡಲಾಗಿದೆ. ಇದಲ್ಲದೆ ಇರುವ ವಸ್ತುಗಳು, ಬಾಂಬು ಮಾಡುವುದು, ಮಿಸೈಲ್ ಮಾಡುವುದು, ಯುದ್ಧನೌಕೆ ಇತ್ಯಾದಿ ಮಾಡುವುದು ಮಾನವ ಉಪಯೋಗಿ ಅಲ್ಲ. ಇವು ನಿರರ್ಥಕ ಮತ್ತು ನಾಶದ ಕಾರಣ. ತರ್ಕ ವಿಧಿಯಿಂದ ಮತ್ತು ಘಟನೆ ವಿಧಿಯಿಂದ ಇದು ಸಿದ್ಧವಾಗುತ್ತದೆ. ತಾತ್ವಿಕ ವಿಧಿಯಿಂದ, ತರ್ಕ ವಿಧಿಯಿಂದ, ವ್ಯವಹಾರ ವಿಧಿಯಿಂದ ಮಾನವನಿಗಾಗಿ ವಸ್ತುಗಳ ಉಪಯೋಗ ಸಿದ್ಧವಾಗುತ್ತದೆ. ತಾತ್ವಿಕ ವಿಧಿಯಿಂದ ನಾವು ಸುಖ

ಉಳ್ಳವರಾಗಲು ಬಯಸುತ್ತೇವೆ. ನಾವು ಸುಖ ಉಳ್ಳವವರಾದರೆ ತಾತ್ವಿಕ ವಿಧಿ ರೂಪದಲ್ಲಿ ನಾವು ವ್ಯವಹಾರಿಕವಾಗುತ್ತೇವೆ. ಅದನ್ನು ಪ್ರಮಾಣೀಕರಿಸುವುದಕ್ಕಾಗಿ ನಾವು ವ್ಯವಹಾರಿಕವಾಗುತ್ತೇವೆ, ಇದೇ ತರ್ಕ ವಿಧಿ. ಈ ರೀತಿಯಲ್ಲಿ ತರ್ಕ, ತಾತ್ವಿಕ ಮತ್ತು ವ್ಯವಹಾರಿಕ ವಿಧಿಯಿಂದ ಮಾನವ ಪ್ರಮಾಣಿತವಾಗುವ ಮಾತು ಬರುತ್ತದೆ. ನಾವು ಏನು ಮಾತನಾಡುತ್ತೇವೆಯೋ, ಓದುತ್ತೇವೆಯೋ, ಬರೆಯುತ್ತೇವೆಯೋ ತರ್ಕ ವಿಧಿಯ ಆಧಾರದ ಮೇಲೆ ಮಾಡುತ್ತೇವೆ. ತರ್ಕ, ತಾತ್ವಿಕತೆಯ ಅರ್ಥವನ್ನು ಮುಟ್ಟುತ್ತದೆ ಇದೇ ಸಂಪ್ರೇಷಣೆಯ ಮಹಿಮೆ.

ನಮ್ಮ ಸಂಪ್ರೇಷಣೆಯಲ್ಲಿ ಮುಂದೆಯಿರುವ ವ್ಯಕ್ತಿಗೆ ತಾತ್ವಿಕತೆ ಸಂದರ್ಶಿಸಿದರೆ ನಮ್ಮ ಸಂಪ್ರೇಷಣೆ ಸಾರ್ಥಕವಾಯಿತು. ಅದೇ ತತ್ವ ವ್ಯವಹಾರದ ಸಾರ್ಥಕತೆಯನ್ನು ಇಂಗಿತ ಮಾಡಿದರೆ, (ವ್ಯವಹಾರದಲ್ಲಿ ಸಾರ್ಥಕತೆ, ಮಾನವನ ಪ್ರಯೋಜನೆ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ, ಈ ನಾಲ್ಕನ್ನು ಇಂಗಿತ ಮಾಡುವುದು) ಮತ್ತು ಬೋಧ ಮಾಡಿದರೆ ವ್ಯವಹಾರ ಜ್ಞಾನ ಅನುಭವವಾಗುತ್ತದೆ. ಇದರಲ್ಲಿ ತಾತ್ವಿಕ ಜ್ಞಾನವಾಯಿತು. ತಾತ್ವಿಕ ಜ್ಞಾನಕ್ಕಾಗಿಯೂ ತರ್ಕ ಬೇಕು, ವ್ಯವಹಾರ ಜ್ಞಾನಕ್ಕಾಗಿಯೂ ತರ್ಕ ಬೇಕು. ಮೊದಲನೆಯ ಉಪಲಬ್ಧಿ ಇದೆ, ತನ್ನ ಮೌಲೀಕರಣೆ, ಪರಿವಾರ ಜನರ ಮೌಲೀಕರಣೆ ಯಾವ ಆಧಾರದಮೇಲಾಗುತ್ತದೆ. ಮೌಲ್ಯಗಳ ಆಧಾರದ ಮೇಲೆ, ಸಂಬಂಧಗಳ ಆಧಾರದ ಮೇಲೆ, ಉಭಯ ತೃಪ್ತಿಯ ಆಧಾರದ ಮೇಲೆ. ವ್ಯವಹಾರದಲ್ಲಿ ನಾವು ನ್ಯಾಯಿಕರಾದೆವು ಎಂಬುದನ್ನು ಪ್ರಮಾಣೀಕರಿಸಬಹುದು. ಅವಾಗ ಮನುಷ್ಯ ಮಾನವನಾದನು. ಮಾನವನಾದ ಮೇಲೆ ಅರಿವಿನ ಆಧಾರದ ಮೇಲೆ ಸ್ವಾಯತ್ತನಾಗಿ ಮತ್ತು ಆರು ಗುಣಗಳಾಗುತ್ತದೆ:-

1. ಸ್ವಯಂನಲ್ಲಿ ವಿಶ್ವಾಸ
2. ಶ್ರೇಷ್ಠತೆಯ ಸಮ್ಮಾನ
3. ಪ್ರತಿಭೆಯಲ್ಲಿ ಸಮತೋಲನ.
4. ವ್ಯಕ್ತಿತ್ವದಲ್ಲಿ ಸಮತೋಲನ
5. ವ್ಯವಹಾರದಲ್ಲಿ ಸಾಮಾಜಿಕ
6. ವ್ಯವಸಾಯದಲ್ಲಿ ಸ್ವಾವಲಂಬಿ

ಈ ಆರು ಅರ್ಹತೆಗಳು ನನ್ನ ಅರಿವಿನಲ್ಲಿ ಬಂದಾಗ ನಾನು ಸ್ವಯಂನನ್ನು ಸ್ವಾಯತ್ತನಾಗಿ ಅನುಭವಿಸಿದ್ದೇನೆ. ಹಾಗೆಯೇ ನಾನು ಪರಿವಾರದಲ್ಲಿ ನಮ್ಮ ಅರಿವು, ಸಮೃದ್ಧಿಯನ್ನು ಪ್ರಮಾಣೀಕರಿಸುವುದರಲ್ಲಿ ಸಮರ್ಥನಾಗಿದ್ದೇನೆ. ಇದೇ ಸತ್ಯತೆ ನಿಮ್ಮ ಸಮ್ಮುಖ ಪ್ರಸ್ತುತನಾದೆ. ಪ್ರತ್ಯೇಕ ವ್ಯಕ್ತಿ ಸಜ್ಜನರನ್ನು ತಯಾರಿಸಲು ಬಯಸುತ್ತಾರೆ, ಸಜ್ಜನತೆಗಾಗಿ ಕನಿಷ್ಠ ಅರ್ಹತೆ ನ್ಯಾಯ. ನ್ಯಾಯವನ್ನು ನಾನು, ಸಂಬಂಧ, ಮೌಲ್ಯ, ಮೌಲೀಕರಣೆ ಮತ್ತು ಉಭಯತೃಪ್ತಿಯಾಗಿ ನಾನು ನೋಡುತ್ತೇನೆ. ಇದರ ನಂತರ, ಪ್ರತ್ಯೇಕ ವ್ಯಕ್ತಿ ಜನ್ಮದಿಂದಲೇ ನ್ಯಾಯದ ಯಾಚಕ, ಎಂಬುವುದು ನನ್ನ ಅರಿವಿಗೆ ಬಂದಿತು. ಸರಿಯಾದ ಕಾರ್ಯ-ವ್ಯವಹಾರ ಮಾಡಲು ಬಯಸುತ್ತಾನೆ. ಸತ್ಯವಕ್ತನಾಗಿ

ಇರುತ್ತಾನೆ, ಈ ಆಧಾರದ ಮೇಲೆ ಶಿಕ್ಷಣದಲ್ಲಿ ಏನಿರಬೇಕು? ಪ್ರತ್ಯೇಕ ಮಾನವ ಸಂತಾನಕ್ಕೆ ಸತ್ಯ ಬೋಧವಾಗಬೇಕು. ಸರಿಯಾದ ಕಾರ್ಯ - ವ್ಯವಹಾರ ಮಾಡುವುದಕ್ಕಾಗಿ ಅಭ್ಯಾಸವಿರಬೇಕು, ವಿಧಿಯಿರಬೇಕು, ನ್ಯಾಯ ನೀಡುವ ಕ್ಷಮತೆ ಸ್ಥಾಪಿತವಾಗಬೇಕು. ಈ ಮೂರು ವಸ್ತುಗಳು ಶಿಕ್ಷಣ-ಸಂಸ್ಥೆಯಲ್ಲಿರಬಹುದು ಮತ್ತು ಇದ್ದರೆ ಮಾನವ ಪರಂಪರೆ ತಾನಾಗಿಯೇ ಆಗುತ್ತದೆ. ಇದಕ್ಕಿಂತ ಮುನ್ನ ಮಾನವ ಪರಂಪರೆಯಾಗುವುದಿಲ್ಲ. ಮಾನವ ಪರಂಪರೆಯ ಪ್ರಾರಂಭ ನ್ಯಾಯದಿಂದಲೇ ಮಾಡಬೇಕಾಗುತ್ತದೆ. ನ್ಯಾಯಕ್ಕಾಗಿ ಮುಖ್ಯ ಬಿಂದು ನೈಸರ್ಗಿಕ ಸಂಬಂಧ, ಇದು ಶಾಶ್ವತ ಮತ್ತು ಮಾನವ ಸಂಬಂಧ, ಇದು ನಿರಂತರ. ಮಾನವ ಯಾವುದಾದರು ತಪ್ಪನ್ನು ಮಾಡಿದಾಗ ಮಾರ್ಗದರ್ಶನಕ್ಕಾಗಿ ಎಲ್ಲಿ ಹೋಗುತ್ತಾನೆ? ನಾನು ನೋಡಿರುವಹಾಗೆ ಪರಿವಾರದಲ್ಲಿ ನ್ಯಾಯವನ್ನು ಸತ್ಯಾಪನ ಮಾಡಿರುವ ವ್ಯಕ್ತಿ ಮಾರ್ಗದರ್ಶನ ಮಾಡುತ್ತಾರೆ. ಪರಿವಾರದಲ್ಲಿಲ್ಲವೆಂದರೆ ಗ್ರಾಮದಲ್ಲಿ ಮಾರ್ಗದರ್ಶನ ನೀಡುವ ವ್ಯಕ್ತಿಯಿರುತ್ತಾರೆ. ಗ್ರಾಮದಲ್ಲಿಯೂ ಇಲ್ಲವೆಂದರೆ ದೇಶದಲ್ಲಿ ಧರಣಿಯಮೇಲೆ ಪ್ರಯಾಸ ಮಾಡುತ್ತಾನೆ, ಇದು ಸಹಜ ಪ್ರವೃತ್ತಿ. ಪ್ರತ್ಯೇಕ ಮಾನವನಲ್ಲಿ ಸುಧಾರಣೆಯ ಪ್ರವೃತ್ತಿಯಿರುವುದು ಸ್ವಭಾವಿಕ. ಪ್ರಪಂಚದಲ್ಲಿ ಪರಿವರ್ತನೆ ಬಯಸುತ್ತಿದ್ದಾರೆ ಎಂಬ ಸಾಕ್ಷ್ಯ ಇದೇ. ಪರಿವರ್ತನೆ ಏನಾಗಬೇಕೆಂಬುವುದು ದೊರಕಲಿಲ್ಲ, ಅದಕ್ಕಾಗಿ ಈ ಪ್ರಸ್ತಾಪ. ಶಿಕ್ಷಣ-ಸಂಸ್ಕಾರದಿಂದಲೇ ಲೋಕ ವ್ಯಾಪೀಕರಣವಾಗುತ್ತದೆ. ಶಿಕ್ಷಣದಲ್ಲಿಯೂ ಮಾನವೀಯ ಶಿಕ್ಷಣವನ್ನು ಒದಗಿಸಬೇಕು. ಪ್ರತ್ಯೇಕ ವ್ಯಕ್ತಿ ನ್ಯಾಯಪೂರ್ವಕ ಬಾಳಿದ್ದು ಪ್ರಮಾಣಿತವಾಗುವುದಕ್ಕಾಗಿ ನಾವು ಅರಿವನ್ನು ನೀಡಲೇಬೇಕು. ಇದಕ್ಕಾಗಿ ಶಿಕ್ಷಣದಲ್ಲಿ ವಿಜ್ಞಾನದ ಸಹಿತ ಚೈತನ್ಯದ ಅಧ್ಯಯನ ಮಾಡಿಸಬೇಕು. ಚೈತನ್ಯವನ್ನು ಅರಿತುಕೊಳ್ಳದೆ, ಅಸ್ತಿತ್ವ ನಮಗೆ ಅರಿವಾಗದು ಮತ್ತು ಅಸ್ತಿತ್ವವನ್ನು ಅರಿತುಕೊಳ್ಳದೆ ವ್ಯವಸ್ಥೆ ಹೇಗೆ ಅರಿವಾಗುತ್ತದೆ? ಅಸ್ತಿತ್ವವನ್ನು ಅರಿತುಕೊಳ್ಳುವುದು ಜೀವನವೇ (ಚೈತನ್ಯ). ಆದ್ದರಿಂದ ಚೈತನ್ಯ ವಸ್ತುವಿನ ಅಧ್ಯಯನ ಶಿಕ್ಷಣದಲ್ಲಿ ಒಳಗೊಳಿಸುವುದು ಅಗತ್ಯ.

ಮನೋವಿಜ್ಞಾನದಲ್ಲಿ ಸಂಸ್ಕಾರ ಪಕ್ಷದ (ಅರಿವು) ಒಳಗೊಳುವಿಕೆ ಆಗಬೇಕು, ಮಾನವ ಸಂಚೇತನದ ಒಳಗೊಳುವಿಕೆ, ಗುರುತಾಗಬೇಕು. ಮಾನವ ಸಂಚೇತನದಲ್ಲಿ ಸಂವೇದನಶೀಲತೆ, ಸಂಜ್ಞಾನಶೀಲತೆ ಎರಡೂ ವೈಭವಿತವಾಗಿದೆ. ದರ್ಶನಶಾಸ್ತ್ರವನ್ನು ಪ್ರಮಾಣೀಕರಣೆಯ ಜೊತೆಗೆ ಶಿಕ್ಷಣ ನೀಡಬೇಕು. ಪ್ರಮಾಣೀಕರಣೆಯ ಜೊತೆ ಶಿಕ್ಷಣ ನೀಡಿದಾಗ ಮಾನವತೆ ವಿಧಿಯೇ ಬರುತ್ತದೆ, ಭೌತಿಕ ಮತ್ತು ಅಧ್ಯಾತ್ಮಿಕ ವಿಧಿ ಬರುವುದಿಲ್ಲ. ಅತಃ ಮಾನವ ಅರಿವುಳ್ಳವವನಾಗಬಹುದು, ಅರಿವಿಗಾಗಿ ಅಸ್ತಿತ್ವ ಸಹಜ ಸಮೀಚೀನವಾಗಿದೆ. ಪ್ರಮಾಣಗಳ ಬಗೆ ನನಗಾಗಿರುವ ಅನುಭವವೇನೆಂದರೆ ನಾನು ಅರಿತುಕೊಂಡಿರುವುದನ್ನು, ಕಲಿತಿರುವುದನ್ನು, ಮಾಡಿರುವುದನ್ನು, ಅರಿವು ಪಡಿಸುವುದರಲ್ಲಿ, ಹೇಳಿಕೋಡುವುದರಲ್ಲಿ ಮತ್ತು ಮಾಡಿಸುವುದರಲ್ಲಿ ನಾನು ಪ್ರಮಾಣಿತನಾಗುತ್ತೇನೆ. ಈ ಮೂರ ವಿಧದಲ್ಲಿ ಪ್ರಮಾಣಿತವಾಗುವುದು ಅಗತ್ಯ. ನಾಲ್ಕನೆಯ ಪ್ರಕಾರವಿಲ್ಲ. ಅರಿತುಕೊಳ್ಳುವುದರಲ್ಲಿ ಪರಿಪೂರ್ಣವಾಗುವುದು ಅಗತ್ಯ. ಕಲಿತುಕೊಳ್ಳುವುದರಲ್ಲಿ, ಮಾಡುವುದರಲ್ಲಿ ಸ್ವಲ್ಪ ಕೊರತೆ ನಡೆಯುತ್ತದೆ. ಇದುವರಗೆ ನಾವು ಕಲಿತುಕೊಳ್ಳುವ, ಮಾಡುವ-ಮಾಡಿಸುವ ಕೆಲಸ ಬಹಳ ಒಳ್ಳೆಯದಾಗಿ ಮಾಡಿದ್ದೇವೆ ಆದರೆ ಅರಿತುಕೊಳ್ಳುವ ಕ್ರಮದಲ್ಲಿ ಶೂನ್ಯ. ಕಲಿತುಕೊಳ್ಳುವುದು-ಕಲಿಸುವುದು, ಮಾಡುವುದು, ಮಾಡಿಸುವುದು, ಇದನ್ನೇ

ನಾವು ಪ್ರಮುಖ ಮೌಲ್ಯವೆಂದು ಹೇಳುತ್ತೇವೆ. ಇದರಿಂದ ಸಮಾಧಾನವೂ ಸಿಗಲಿಲ್ಲ, ಮಾನವನಿಗೆ ನೆಮ್ಮದಿಯೂ ಸಿಗಲಿಲ್ಲ, ಎಲ್ಲಾದರೊಂದು ಕಡೆ ಸಿಕ್ಕಿಕೊಂಡೆ ಇದ್ದೆವು.

ಇವಾಗ ಮಾನವನ ಅಧ್ಯಯನದ ಅವಶ್ಯಕತೆ  ಬಂದಿದೆ. ಮಾನವನ ಅಧ್ಯಯನದ ನಂತರವೇ ಅರಿವಿನಲ್ಲಿ ಪ್ರಮಾಣೀಕರಿಸುವುದಾಗುತ್ತದೆ. ಆದರ್ಶವಾದಿ ವಿಧಿ ಮತ್ತು ಭೌತಿಕವಾದಿ ವಿಧಿಯಲ್ಲಿ ಮಾನವ ಹಿಂದುಳಿದದ್ದಿದ್ದಾನೆ. ಆದರ್ಶವಾದಿ ವಿಧಿಯಲ್ಲಿ ದೇವಿ-ದೇವತೆ, ಈಶ್ವರನನ್ನು ಪ್ರಮುಖವೆಂದು ನಂಬಿ ಮಾನವನು ಹಿಂದುಳಿದನು. ದೇವಿ-ದೇವತೆ, ಈಶ್ವರವನ್ನು ಅರಿತುಕೊಳ್ಳುವುದರಲ್ಲಿ ಮಾನವನ ಅಧ್ಯಯನವನ್ನು ವಿಸರ್ಜಿಸಲಾಯಿತು. ಭೌತಿಕವಾದಿ ವಿಧಿಯಲ್ಲಿಯೂ ಮಾನವನನ್ನು ತ್ಯಜಿಸಿ, ಯಂತ್ರವನ್ನು ಹಿಡಿದುಕೊಂಡರೆ, ಅಂದರೆ ಯಂತ್ರವೇ ಪ್ರಮಾಣವಾಯಿತು. ಆದರ್ಶವಾದದಲ್ಲಿ ಗ್ರಂಥ, ಪುಸ್ತಕ, ವಾಙ್ಗಮಯ ಪ್ರಮಾಣವಾಯಿತು ಮತ್ತು ಭೌತಿಕವಾದದಲ್ಲಿ ಯಂತ್ರಪ್ರಮಾಣವಾಯಿತು. ಈ ರೀತಿಯಲ್ಲಿ ಮನುಷ್ಯನ ಅವಮೌಲೀಕರಣೆಯಾಗಿ ಮತ್ತು ಭ್ರಮೆಯ ಹೊಡೆತದಲ್ಲಿ ಸಿಕ್ಕಿಕೊಂಡು ಭ್ರಮೆಯ ಪೂರಕನಾಗಿಬಿಟ್ಟ. ಈ ರೀತಿಯಲ್ಲಿ ಮಾನವ ಭ್ರಮೆಯಲ್ಲಿ ಸಿಕ್ಕಿಕೊಂಡು ಕುಂಠಿತನಾದನು, ಪೀಡಿತನಾದನು, ಭವಣೆಪಟ್ಟನು. ಇವಾಗ, ಮಾನವನ ಉದ್ದಾರ ಹೇಗಾಗುವುದು? ಉದ್ದಾರದ ಆಶ್ವಾಸನೆ ಏನೋ ಮೊದಲೇ ಎಲ್ಲಾ ಗದ್ದಿಯವರು ನೀಡುತ್ತ ಬಂದಿದ್ದಾರೆ ಆದರೆ ಉದ್ಧಾರದ  ಪ್ರಮಾಣ ಪ್ರಮಾಣವಿಲ್ಲದೆ ಇನ್ನೆಷ್ಟು ದಿನ ನಡೆಯುವುದು.

ವಿಕಲ್ಪದ ರೂಪದಲ್ಲಿ, ಇಲ್ಲಿ ಮಾನವನ ಉದ್ಧಾರದ ಮೂಲ ಸ್ರೋತವೇ ಅರಿವು. ಎಲ್ಲಗಿಂತಲೂ ದೊಡ್ಡ ಪೀಠ ಶಿಕ್ಷಣ ಸಂಸ್ಥೆ. ಅದರಲ್ಲಿ ವಿಜ್ಞಾನದ ಸಹಿತ ಚೈತನ್ಯದ ಅಧ್ಯಯನ ಇರಬೇಕು. ಚೈತನ್ಯದ ಅಧ್ಯಯನ ಇಲ್ಲದೆ ಸಹ-ಅಸ್ತಿತ್ವದ ಅಧ್ಯಯನ ಹೇಗಾಗುತ್ತದೆ? ಈ ಎರಡೂ ಭಾಗ ಶಿಕ್ಷಣ ಸಂಸ್ಥೆಗಳಲ್ಲಿ, ಶಿಕ್ಷಣ ವಾಙ್ಗಮಯದಲ್ಲಿ, ಶಿಕ್ಷಣ ಪ್ರಕ್ರಿಯೆಯಲ್ಲಿ ನಾಪತ್ತೆಯಾಗಿದೆ. ಎರಡನೆಯದಾಗಿ, ಮನೋವಿಜ್ಞಾನದಲ್ಲಿ ಮಾನವನ ಅಧ್ಯಯನಕ್ಕಾಗಿ ಮಾನವ ಸಂಚೇತನ ಅರಿವಾಗುತ್ತದೆ, ಪ್ರಮಾಣಿತವಾಗುತ್ತದೆ, ಆವಶ್ಯಕತೆಯೂ ಅರಿವಾಗುತ್ತದೆ. ಆದ್ದರಿಂದ, ಸಂಸ್ಕಾರ ಪಕ್ಷದ ಅಧ್ಯಯನ ಮನೋವಿಜ್ಞಾನದಲ್ಲಿರಬೇಕು. ಮೂರನೆಯದಾಗಿ, ದರ್ಶನ ಶತ್ರದ ಸಹಿತ ಪ್ರಾಮಾಣಿಕತೆಯಿರಬೇಕು. ಇದುವರೆಗೂ ನಾವು, ಮಾನವನು ಓದಿ, ಮತ್ತವರಿಗೆ ಹೇಳಿಕೊಟ್ಟರೆ ವಿದ್ವಾಂಸ ಆದನೆಂದು ನಂಬಿದ್ದೇವೆ. ಆದರೆ ಅವನು ವಿದ್ವಾಂಸ ಆಗಿರುವುದಿಲ್ಲ. ವಿದ್ವಾಂಸ, ಎಂದರೆ ಅರಿವಿನ ಸ್ವರೂಪ ಮತ್ತು ವಿದ್ಯೆ ಎನ್ನುವುದು ತನ್ನಲ್ಲಿಯೇ ಅಸ್ತಿತ್ವ ಸಹಜ. ಅಸ್ತಿತ್ವವನ್ನು ಅರಿತುಕೊಳ್ಳದೆ, ಜೀವನವನ್ನು ಅರಿತುಕೊಳ್ಳದೆ, ಮಾನವೀಯತೆಪೂರ್ಣ ನಡತೆ ಇಲ್ಲದೆ ವಿದ್ವಾಂಸ ಆಗಲು ಸಾಧ್ಯವಿಲ್ಲ. ಇದು ಅರಿವಾಗುತ್ತದೆ, ವಿಚಾರ ಶೈಲಿಯೂ ಆಗುತ್ತದೆ, ಯೋಜನೆಗಳೂ ಆಗುತ್ತವೆ, ಕಾರ್ಯಯೋಜನೆಗಳೂ ಆಗುತ್ತವೆ ಫಲಸ್ವಾರೂಪ ಪ್ರಮಾಣೀಕರಿಸಲ್ಲು ಆಗುತ್ತದೆ. ನಾವು ಅರಿತುಕೊಳ್ಳದಿದ್ದರೆ ವಿಚಾರ ಶೈಲಿಯನ್ನು ಎಲ್ಲಿಂದ ತರುವುದು. ಅರಿತುಕೊಳ್ಳದೆ ನಮ್ಮಲ್ಲಾಗಿರುವ ವಿಚಾರ ಶೈಲಿ, ಸೌಕರ್ಯ ಸಂಗ್ರಹಕ್ಕಾಗಿ ಮತ್ತು ಎರಡನೆಯದು ತ್ಯಾಗ, ಅಪರಿಗ್ರಹ, ವಿರಕ್ತಿ, ಭಕ್ತಿ. ಇದರಲ್ಲಿಯೂ ಕೋಟಿ ಜನರು ತಮ್ಮನ್ನು ತೊಡಗಿಸಿ ತಮ್ಮ ಧೈರ್ಯ, ಸಾಹಸ, ನಿಷ್ಠೆಯ ಪರಿಚಯ ನೀಡಿದರು. ಇವೆರಡರಿಂದಲೂ ಅಖಂಡ ಸಮಾಜದ

ಯಾವುದೇ ಸಾರಾಂಶ ಸಿಗಲಿಲ್ಲ. ಮಾನವ ಯಂದಿಗೂ ಅವಿರತ ಪರಿಶ್ರಮ ಮಾಡುತ್ತಾ ಬರುತ್ತಿದ್ದಾನೆ ಆದರೆ ಮಾನವ ಲಕ್ಷ್ಯ ಹಾಗು ದಿಶೆ ವಿಹೀನನಾಗಿ. ನಾನು ಮಾಡಿದ ಪ್ರಯಾಸ ಕೇವಲ ನನ್ನ ಪ್ರಶ್ನೆಗಳ ಉತ್ತರಕ್ಕಾಗಿ. ನನಗೆ ಸ್ವರ್ಗ ಸಿಗುತ್ತದೆ, ಹಣ ಸಿಗುತ್ತದೆ, ಸಂಗ್ರಹ ಸಿಗುತ್ತದೆ, ಇಂತಹ ಯಾವುದೇ ಲಕ್ಷ್ಯವಿರಲಿಲ್ಲ. ಒಂದೇ ಮಾತಿತ್ತು, ನನ್ನಲ್ಲಿ ಶಂಕವಿದ್ದರೆ ಅದಕ್ಕೆ ಖಂಡಿತ ಉತ್ತರ ದೋರಕುತ್ತದೆ. ಯೋಗ ಮತ್ತು ಸಂಯೋಗ ಶಬ್ದದ ಅರ್ಥ ಹೇಳುತ್ತೇನೆ. ಯೋಗದ ಅರ್ಥ - ಮಿಲನ. ಉದಾಹರಣೆಗೆ, ನಾವು ನಡೆಯುತ್ತಿರುವಾಗ, ರಸ್ತೆಯಲ್ಲೊಂದು ಕಲ್ಲು, ಮನುಷ್ಯ ಸಿಕ್ಕಿದರೆ ಯೋಗವೆಂದು ಹೇಳುತ್ತೇವೆ. ಸಂಯೋಗದ ಅರ್ಥ ಸಂಪೂರ್ಣತೆಯ ಅರ್ಥದಲ್ಲಿ ಮಿಲನ. ಪೂರ್ಣತೆಯ ಅರ್ಥ, ಮಾನವನು, ವ್ಯವಸ್ಥೆಯಲ್ಲಿ ಬಾಳುವುದು. ಪರಮ ಪೂರ್ಣತೆಯ ಅರ್ಥ ಮಾನವನು ಪ್ರಮಾಣೀಕರಿಸುವುದು. ವ್ಯವಸ್ಥೆಯಲ್ಲಿ ಬಾಳುವುದು, ಪ್ರಾಮಾಣಿಕವಾಗುವುದು ಮಾನವನ ಬಯಕೆ. ಆದರೆ ಇದು ಸಿಗದೇಯಿರುವ ಅಶಕ್ತತೆಯ ಸ್ಥಿತಿಯಲ್ಲಿಯೇಯಿದ್ದು, ಇದರ ಅನುಸಾರವೇ ನಡೆಯುತ್ತಾನೆ. ಯೋಗ-ಸಂಯೋಗ ಸದಾ-ಸದಾ ಇದ್ದೇ ಇರುತ್ತದೆ. ಪೂರ್ಣತೆಗಾಗಿ ಹಲವಾರು ಪ್ರಯಾಸಗಳಾಗಿವೆ (ಸಫಲತೆ ಬೇರೆ ಮಾತು). ಮಾವನು ಪೂರ್ಣತೆಗಾಗಿ ಬಹಳವನ್ನು ಬಲಿ ಕೊಟ್ಟಿದ್ದಾನೆ. ಬಲಿ ಕೊಡುವು ಪರಿಣಾಮ ಆಗೆ ಆಗುತ್ತದೆ. ಯಾವುದೇ ವಸ್ತುವನ್ನು ಒಡೆಯುವಾಗ ಸಫಲತೆ ಕೊನೆಯ ಸುತ್ತಿಗೆಯ ಏಟು  ಬಿದ್ದಾಗ ಒಡೆಯುತ್ತದೆ ಆದರೆ ಅದರ ಮೊದಲು ಬಿದ್ದಿರುವ ಎಲ್ಲ ಸುತ್ತಿಗೆಯ ಏಟುಗಳು ಬೀಳದಿದ್ದರೆ ಆ ಕೊನೆಯ ಸುತ್ತಿಗೆಯ ಏಟಿನಿಂದ ಸಫಲತೆ ಸಿಗುತ್ತಿರಲಿಲ್ಲ. ಸಮಸ್ತ ಎಟುಗಳ ಸಫಲತೆಯಲ್ಲಿ ಕೈಯಿದೆ. ನನಗೆ ಯಾವುದಾದರು ಸಫಲತೆ ಸಿಕ್ಕಿದ್ದರೆ ಅದರಲ್ಲಿ ಮೊದಲಿನ ಪ್ರಯಾಸದ ಕೊಡುಗೆ ಇದೆ. ಈ ರೀತಿಯಲ್ಲಿ ಸಂಪೂರ್ಣ ಮಾನವನ ಕೊಡುಗೆ ಫಲಸ್ವರೂಪ ಈ ಘಟನೆ - ಘಟಿತವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇದರಿಂದಾದ ದೊಡ್ಡ ಲಾಭ ಅಹಂ (ನಾನು ಎಂಬ ಭಾವ) ನನ್ನಲ್ಲಾಗಲಿಲ್ಲ. ನನ್ನ ಹತ್ತಿರ ಅಹಂ ಜೊತೆ ಪ್ರಸ್ತುತವಾಗುವ ಜನರು ಬಹಳ ಕಡಿಮೆ ಬಂದರು. ಎಷ್ಟೇ ಅಹುಂ ಇರುವ ಜನರು ಎರಡು-ಮೂರು ಹಂತಗಳನಂತರ ಅಹಂವಿನ ಶಮನವಾಗುವುದನ್ನ ನೋಡಲಾಯಿತು. ನನ್ನ ಜೊತೆ ಸಮಸ್ತ ಮಿಲನ ಸಜ್ಜನತೆಯ ಸಹಿತ ನಮ್ರತೆಯ ಸಹಿತ ಸ್ವಾಭಾವಿಕ ರೂಪದಿಂದಾಯಿತು. ಆದರೆ, ನನ್ನನ್ನು ಸಂದರ್ಶಿಸಿದ ಪ್ರತ್ಯೇಕ ಸಜ್ಜನರು ನನ್ನ ಮಾತನ್ನು ಸ್ವೀಕರಿಸಿದರೆಂದು ಅಗತ್ಯವಿಲ್ಲ. ಹಲವಾರು ಜನರು ಸ್ವೀಕರಿಸಲಿಲ್ಲ, ಇವರಿಗೂ ನನ್ನ ಮನ್ನಣೆ ಇದೆ. ಇದರಲ್ಲಿ ಅವರ ತಪ್ಪೇನಿಲ್ಲ, ಅವರ ಮೇಲೆ ಪರಂಪರೆಯನ್ನು ಹೇರಲಾಗಿದೆ. ಆದ್ದರಿಂದ ಯಾರು ಸ್ವೀಕರಿಸಲಿ ಅಥವಾ ಸ್ವೀಕರಿಸದೆಯಿರಲಿ ನಾನು ಸಂತೋಷವಾಗಿರುತ್ತೇನೆ. ಕಾಲಕ್ರಮ ಸಂಯೋಗ ಪ್ರತ್ಯೇಕ ವ್ಯಕ್ತಿಗಾಗಿ ಸದ್ಬುದ್ಧಿಯ ಅಂಕುರವಿದ್ದೇ ಇದೆ. ಅದು ಯಾವಾಗ ಫಲವತಿಯಾಗುತ್ತದೆಯೋ, ಪುಷ್ಪಿತವಾಗುತ್ತದೆಯೋ ಇದನ್ನು ನಾವು ಹೇಳಲಾಗದು. ಪ್ರತ್ಯೇಕ ಮನುಷ್ಯ ಶುಭವನ್ನು ಬಯಸುತ್ತಾನೆ. ಶುಭವನ್ನು ಬಯಸುವ ಮೂಲದಲ್ಲಿ ಸಂಭವನೀಯತೆಗಳನ್ನು ಇನ್ನಷ್ಟು ಸಮೀಚೀನ ಮಾಡುವುದಕ್ಕೆ ನಾನು ಬಯಸುತ್ತೇನೆ. ಸಂಯೋಗವಾದಾಗ ಮಾನವರು ಸಮಾಧಾನದ ಅರ್ಥದಲ್ಲಿ, ವ್ಯವಸ್ಥೆಯ ಅರ್ಥದಲ್ಲಿ, ಅಖಂಡ ಸಮಾಜದ ಅರ್ಥದಲ್ಲಿ ಸೇರುತ್ತಾರೆ. ಒಂದೇ ವಿಚಾರ ಒಂದೇ ಅಪೇಕ್ಷೆಯ ಜನರು ಸೇರುವುದರಿಂದಲೇ ಸಂಯೋಗವಾಗುವುದಿಲ್ಲ. ಇಬ್ಬರು ಕಳ್ಳರು,

ಇಬ್ಬರು ದರೋಡೆಗಾರರು, ಇಬ್ಬರು ಅಪರಾಧಿಗಳು ಸೇರುವುದು ಸಮಾಧಾನ, ವ್ಯವಸ್ಥೆಯ ಅರ್ಥದಲ್ಲಿಲ್ಲ, ಆದ್ದರಿಂದ ಇದು ಸಂಯೋಗವಲ್ಲ.

ನ್ಯಾಯಪೂರ್ವಕ ನಮ್ಮಿಂದ ಬಾಳಲಾದರೆ ನಮ್ಮ ಪರಿವಾರ ನಮ್ಮ ಪ್ರಾಮಾಣಿಕತೆಯ ಸ್ಥಾನವಾಗುತ್ತದೆ. ಪರಿವಾರ ಜನರ ಕಣ್ಣಿನಲ್ಲಿ ನಾವು ಸೆರಿಯಾಗಿ ನಡೆದುಕೊಳ್ಳುತ್ತೀದೇವೆ ಎಂಬುವುದಿರುತ್ತದೆ. ಪರಿವಾರದಲ್ಲಿ ನ್ಯಾಯಪೂರ್ವಕ ನಡೆಯುವ ನಂತರ ನಮ್ಮ ಎಲ್ಲಾ ಮಿತ್ರ ಪರಿವಾರಗಳ ನಡುವೆ ನಮ್ಮ ಗುರುತನ್ನು ನಿಷ್ಕ್ರುಷ್ಟತೆಯಿಂದ ನೋಡಬಹುದು. ನಂತರ ನ್ಯಾಯಪೂರ್ವಕ ಬಾಳುವುದು ನಮ್ಮ ಅಧಿಕಾರದಲ್ಲಿ ಬಂದರೆ ಆಗಂತುಕರು ಬಂದಾಗ, ಅವರಲ್ಲಿಯೂ ನಮ್ಮ ಗುರುತನ್ನು ಸಪ್ರಮಾಣಿಸುವುದರಲ್ಲಿ ಸಮರ್ಥರಾಗಬಹುದು.

ಪ್ರತ್ಯೇಕ ಮಾನವ ತನ್ನ ಸಾರ್ಥಕತೆ ಮತ್ತು ಸಫಲತೆಯನ್ನು ತನ್ನ ಬಯಕೆಯಾಗಿ ಕಾಪಾಡುತ್ತಾನೆ. ನಮ್ಮ ಅರಿವೇ ನಮ್ಮ ಸೆರಿಯಾದ ಬಯಕೆಯ ಸ್ರೋತ. ಈ ಸ್ರೋತವನ್ನು ನಾವು ಯಾವತ್ತು ಮರಿಯಲಾಗುವುದಿಲ್ಲ. ಶುಭ ಪ್ರತ್ಯೇಕ ವ್ಯಕ್ತಿಗೆ ಸ್ವೀಕಾರ, ಪ್ರತ್ಯೇಕ ವ್ಯಕ್ತಿಯ ಬಯಕೆ ಮತ್ತು ಶುಭ ಘಟಿತವಾಗುವುದಕ್ಕಾಗಿ ನಾವೆಲ್ಲರೂ ನಿರೀಕ್ಷಿಸುತ್ತಿದ್ದೇವೆ.  ನಿರೀಕ್ಷಿಸುವ ಸಮಯ ಸಂಬಂಧದ ಬಿಂದು ಬರುತ್ತದೆ. ಸಂಬಂಧಗಳ ಗುರುತು ಅದರಲ್ಲಿ ಒಳಗೊಂಡಿರುವ ಪ್ರಯೋಜನೆಯ (ಮೌಲ್ಯ) ಗುರುತೇ. ಇದೇ ಅಧ್ಯಯನ. ಪ್ರಯೋಜನೆಯನ್ನು ಗುರುತಿಸಿದ ನಂತರ ಮಾನವ ಸ್ವಾಭಾವಿಕ ರೂಪದಲ್ಲಿ ನಿಷ್ಠಾನ್ವಿತನಾಗುತ್ತಾನೆ ಮತ್ತು ಪಾರಂಗತನಾಗುತ್ತಾನೆ. ಪಾರಂಗತನಾದ ನಂದರ ಫಲಿತ ಆಗೇ ಆಗುತ್ತದೆ. ಇದೇ ಸಫಲತೆಯ ವಿಧಿ, ಸಾಕಷ್ಟು ಸರಳ. ಅಭ್ಯುದಯ ಎಲ್ಲಾ ಸಂಬಂಧಗಳ ಸಹಿತ ಸೇರಿರುತ್ತದೆ. ಸಂಬಂಧಗಳ ಪ್ರಾಯೋಜನೆ ಅಭ್ಯುದಯ ಅರ್ಥಾತ್ ಸಮಾಧಾನ ಮತ್ತು ಸುಖದ ಅರ್ಥದಲ್ಲಿದೆ. ಸಮಾಧಾನದ ಅರ್ಥದಲ್ಲಿಯೇ ನಾವು ಪ್ರೆಮಿಸುತ್ತೇವೆ, ಸಮಾಧಾನದ ಅರ್ಥದಲ್ಲಿಯೇ ನಾವು ಕೃತಜ್ಞರಾಗುತೇವೆ, ಮೈತ್ರಿ ಪಡುತ್ತೇವೆ, ವಿಶ್ವಾಸ ಪಡುತ್ತೇವೆ, ಮಾನವ ವ್ಯವಹಾರದಲ್ಲಿ ಪ್ರಶಸ್ತವಾಗಿರುತ್ತೇವೆ ಮತ್ತು ಸುಖವನ್ನು ಅನುಭವಿಸುತ್ತೇವೆ. ಮೌಲ್ಯಗಳ ಸ್ವರೂಪ ಮಮತೆ, ವಾತ್ಸಲ್ಯ, ವಿಶ್ವಾಸ, ಸ್ನೇಹ, ಕೃತಜ್ಞತೆ, ಗೌರವ, ಪ್ರೇಮ, ಶ್ರದ್ಧೆ, ಮನ್ನಣೆ. ನಮ್ಮ ಅಭ್ಯುದಯಕ್ಕಾಗಿ ಎಲ್ಲಿಂದಲೇ ಸಹಾಯತೆ ದೊರುಕ್ಕುತದೆಯೋ, ಯಾರಿಂದ ಸಿಗುತ್ತದೆಯೋ, ಇವೆಲ್ಲರ ಸ್ವೀಕೃತಿಯ ನಾಮವೇ "ಕೃತಜ್ಞತೆ". ಕೃತಜ್ಞತೆಯ ಸಹಿತ ಅನ್ಯ ಮೌಲ್ಯ ತಾನಾಗಿಯೇ ಸಾರ್ಥವಾಗುತ್ತದೆ. ಕೃತಜ್ಞತೆಯ ನಂತರ ಸ್ನೇಹ, ಪ್ರೇಮ, ವಿಶ್ವಾಸ ಸಾರ್ಥಕವಾಗುತ್ತದೆ. ಯಾರಿಂದ ನಮಗೆ ಎಲ್ಲಾದರು, ಯಾವ ರೂಪದಲ್ಲಾದರೂ ಸಹಾಯತೆ ಸಿಕ್ಕಿಲ್ಲದಿರುವಂತಹ ಯಾವ ಮನುಷ್ಯನೂ ನಾವು ಸಂದರ್ಶಿಸುವುದಿಲ್ಲ. ಎಲ್ಲರ ಸಹಾಯತೆಯ ಸಹಿತವೇ ಮನುಷ್ಯ ದೊಡ್ಡವನಾಗುತ್ತಾನೆ, ಸಮರ್ಥನಾಗುತ್ತಾನೆ ಮತ್ತು ಪ್ರಾಮಾಣಿಕನಾಗುತ್ತಾನೆ. ಈ ಕ್ರಮದಲ್ಲಿರುವ ಎಷ್ಟೇ ಸಂಬಂಧಗಳಲ್ಲಿ (ಏಳು ಸಂಬಂಧ) ಮೌಲ್ಯವೇ ಮೌಲ್ಯಾಂಕಿತವಾದನಂತರ ಸಂಬಂಧಗಳ ನಿರಂತರತೆಯಾಗುತ್ತದೆ. ಸಂಬಂಧಗಳಲ್ಲಿ ಮೌಲ್ಯ ಮೌಲ್ಯಾಂಕಿತವಾಗದಿದ್ದರೆ ಸಂಭಂಧಗಳ ನಿರಂತರತೆಯಾಗುವುದಿಲ್ಲ. ಸಾಮಾನ್ಯ ಕ್ರಮದಲ್ಲಿಯೂ ಯಾರನ್ನು ನಾವು ನಮ್ಮ ಸಂಬಂಧಿ ಎಂದು ನಂಬುತ್ತೇವೋ ಅವರ ಜೊತೆ ಒಳ್ಳೆ ರೀತಿಯಲ್ಲಿ ಪ್ರಸ್ತುತ ಆಗೇ ಆಗುತ್ತೇವೆ.

ಪರಂಪರೆಗತ ರೀತಿಯಲ್ಲಿ ನಾವು ಸಂಬಂಧಗಳನ್ನು ಬಲ, ಧನ, ಬುದ್ಧಿ, ವಯಸ್ಸಿನ ಆಧಾರದ ಮೇಲೆ ಗುರುತಿಸುತ್ತೇವೆ. ಆದರೆ ಸಂಬಂಧ ಮೊದಲು ಅಭ್ಯುದಯದ ಅರ್ಥದಲ್ಲಿ, ಎರಡನೆಯದಾಗಿ ಪೋಷಣೆಯ ಅರ್ಥದಲ್ಲಿ, ಮೂರನೆಯದಾಗಿ ಸಂರಕ್ಷಣೆಯ ಅರ್ಥದಲ್ಲಿ, ನಾಲ್ಕನೆಯದಾಗಿ ಉಪಯುಕ್ತತೆ ಪೂರಕತೆಯ ಅರ್ಥದಲ್ಲಿ, ಐದನೇಯದಾಗಿ ಸದುಪಯೋಗಿತೆಯ ಅರ್ಥದಲ್ಲಿ, ಆರನೆಯದಾಗಿ ಪ್ರಾಯೋಜನೆಯ ಅರ್ಥದಲ್ಲಿ. ಸಂಬಂಧಗಳಿಗಾಗಿ ಪ್ರಮುಖ ಆದ್ಯತೆ ಪ್ರಾಮಾಣಿಕತೆಯ ಅರ್ಥದಲ್ಲಿದೆ. ಪ್ರಮಾಣದ ಆಧಾರದ ಮೇಲೆ ಎಲ್ಲರು ಸಂತುಷ್ಟರಾಗುತ್ತಾರೆ. ಮೌಲ್ಯ ಜೀವನ ಸಹಜ ರೂಪದಲ್ಲಿ ಉದ್ಗಮಿತವಾಗುತ್ತದೆ. ಉದಾಹರಣೆಗೆ: ನಾವು ನೀವು ಸಂದರ್ಶಿಸಿದಾಗ ಸ್ವಾಭಾವಿಕ ರೂಪದಿಂದ ಮೌಲ್ಯಗಳು ದ್ರವಿಸುವುದರಿಂದ ನಮ್ಮ ನಿಮ್ಮ ನಡುವೆ ವಿಶ್ವಾಸ ಮೌಲ್ಯ ಪ್ರಾರಂಭವಾಗುತ್ತದೆ. ಈ ವಿಧಿಯಿಂದ ನಮ್ಮ ಸಂಬಂಧಗಳಲ್ಲಿ ಮೌಲ್ಯಗಳ ಗುರುತು, ಮೌಲೀಕರಣೆ ಮಾಡುವುದು ಮತ್ತು ಉಭಯತೃಪ್ತಿ ಪಡೆಯುವುದರಿಂದ ಸಕ್ಷಮರಾಗುತ್ತೇವೆ. ಇದರಿಂದಾದ ದೊಡ್ಡ ಲಾಭವೇನು? ಇದುವರೆಗೂ ಭಯ ಹಾಗು ಪ್ರಲೋಭನೆಯ ಆಧಾರದ ಮೇಲೆ ಸಂಬಂಧಗಳನ್ನು ಗುರುತಿಸುತ್ತಾ ಬಂದಿದ್ದೇವೆ; ಅದರ ಸ್ಥಾನದಲ್ಲಿ ಮೌಲ್ಯ ಮತ್ತು ಮೌಲೀಕರಣೆ ಸಮಾಧಾನ ಸಮೃದ್ಧಿಯ ಸ್ಥಿತಿಯಲ್ಲಿ ಬರುತ್ತೇವೆ. ಭಯ ಮತ್ತು ಪ್ರಲೋಭನೆ ಯಾವ ಮೌಲ್ಯವೂ ಅಲ್ಲ, ಮತ್ತು ಮೌಲೀಕರಣೆ ಹೇಗಾಗುತ್ತದೆ? ಭಯದ ಜೊತೆ ಪ್ರಲೋಭನೆ, ಪ್ರಲೋಭನೆಯ ಜೊತೆ ಭಯ, ಸ್ವಲ್ಪ ಸಮಯಕ್ಕಾಗಿ ಮೌನವಾಗಿರುವ ಮಾತುಗಳು. ರೋಗವೇನೋ ಹಾಗೆಯೇ ಇರುತ್ತದೆ. ನ್ಯಾಯಾಲಯಗಳಲ್ಲಿಯೂ ನ್ಯಾಯದ ಮಾತು ಪೂರೈಕೆಯಾಗುವುದಿಲ್ಲ, ಏಕೆಂದರೆ ಭಯ ಮತ್ತು ಪ್ರಲೋಭನೆ ನ್ಯಾಯದ ಆಧಾರವಾಗಲು ಸಾಧ್ಯವಿಲ್ಲ. ಶತಾಬ್ಧಿಗಳಿಂದ ಭಯ ಮತ್ತು ಪ್ರಲೋಭನೆಯ ಆಧಾರದ ಮೇಲೆ ಒಬ್ಬರಿನೊಬ್ಬರ ಮೇಲೆ ರಾಜ್ಯ ನಡೆಸುತ್ತಾ ಬಂದಿದ್ದೇವೆ. ಆದರೆ ಇನ್ನೂ ಯಾವ ವ್ಯವಸ್ಥೆಯನ್ನು ನೀಡಲಾಗಿಲ್ಲ. ಹಾಗಾದರೆ ನಾವು ಈ ಮಾತಿನ ಮೇಲೆ ಒಪ್ಪಿಕೊಳ್ಳಬಹುದು, ಭಯ ಮತ್ತು ಪ್ರಲೋಬನೆ ಯಾವು ಮೌಲ್ಯವೂ ಅಲ್ಲ ಮತ್ತು ಸಂಬಂಧಗಳಲ್ಲಿ ಮೌಲ್ಯಾಂಕಿತ  ವಾಗುವುದೂ ಇಲ್ಲ.

ಮಾನವ ಇದುವರೆಗೂ ಮೌಲ್ಯಗಳ ಹತ್ತಿರ ಹೋಗಿಲ್ಲ. ಮೌಲ್ಯಗಳ ಹತ್ತಿರ ಹೋಗಿದ್ದಾರೆ ಅಭಿವ್ಯಕ್ತನಾಗುತ್ತಿದ್ದ, ಮೌಲ್ಯ ಪ್ರಮಾಣೀಕರಿಸುತ್ತಿದ್ದ. ಮೌಲ್ಯಾಂಕಿತವಾಗುತ್ತಿತ್ತು ಮತ್ತು ಸ್ವಾಭಾವಿಕ ರೂಪದಲ್ಲಿ ನ್ಯಾಯವಾಗುತ್ತಿತ್ತು. ನ್ಯಾಯಾಲಯಗಳಲ್ಲಿ ತೀರ್ಪು ನೀಡಲಾಗುತದೆ, ನ್ಯಾಯವಲ್ಲ. ಈ ತೀರ್ಪುಗಳಿಂದ ಒಂದು ಪಕ್ಷ ಭಯವಶ ಒಂದು ಪಕ್ಷ ಪ್ರಲೋಭನೆವಶ ಸಮ್ಮತಿಯಾಗುತ್ತದೆ. ಉಭಯತೃಪ್ತಿ ಯಂದಿಗೂ ಆಗಲಿಲ್ಲ, ಆಗಲು ಸಾಧ್ಯವಿಲ್ಲ. ನ್ಯಾಯವನ್ನು ಪಡೆಯಲು ನಾವು ಸರ್ವಥ ಅಸಮರ್ಥರಾಗಿದ್ದೇವೆ. ಹೀಗಿರುವ ನಂತರವೂ ವಿಕಾಸದ ಹಕ್ಕು ಘೋಷಿಸುತ್ತೇವೆ. ವಿಕಾಸದ ಅರ್ಥವೇನಿರಬಹುದೆಂದು ನೀವೇ ಯೋಚಿಸಿ. ಭಯ ಮತ್ತು ಪ್ರಲೋಭನೆಯಿಂದ ಪ್ರತ್ಯೇಕ ಮಾನವ ತಪ್ಪಿಸಿಕೊಳ್ಳಲು ಬಯಸುತ್ತಾನೆ, ಇದು ನಿಯತಿ ಸಹಜ. ಇದರಿಂದ ಮಾನವನ ಕಲ್ಯಾಣವೂ ಆಗುತ್ತದೆ. ನೈಸರ್ಗಿಕತೆಯ ಕಲ್ಯಾಣವೂ ಆಗುತ್ತದೆ. ಈ ರೀತಿಯಲ್ಲಿ ಪ್ರಾಯೋಜನೆಯ ಆಧಾರದ ಮೇಲೆ ಸಂಬಂಧವಿದೆ. ಪ್ರಾಯೋಜನೆ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ, ಇದಕ್ಕೆ ಪ್ರಕ್ರಿಯೆ ವ್ಯವಸ್ಥೆಯಲ್ಲಿ ಬಾಳುವುದು.

ವ್ಯವಸ್ಥೆಯಲ್ಲಿ ಬಾಳುವುದರ ಅರ್ಥ ಐದು ಆಯಾಮಗಳಲ್ಲಿ ಭಾಗವಹಿಸುವುದು. ಐದು ಆಯಾಮಗಳು: ೧. ಶಿಷಣ-ಸಂಸ್ಕಾರ, ೨. ನ್ಯಾಯ-ರಕ್ಷಣೆ, ೩. ಸ್ವಾಸ್ಥ್ಯ - ಸಂಯಮ, ೪. ಉತ್ಪಾದನೆ-ಕಾರ್ಯ, ೫. ವಿನಿಮಯ-ಕೋಶ.

ಈ ರೀತಿಯಲ್ಲಿ ನಾವು ಪರಿವಾರದಲ್ಲಿ, ವ್ಯವಸ್ಥೆಯಲ್ಲಿ ಬಾಳುವುದರಿಂದ ಐದು ಆಯಾಮಗಳಲ್ಲಿ ಭಾಗವಹಿಸುವುದರಿಂದ ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವುದಾಗುತ್ತದೆ. ಈ ರೀತಿಯಲ್ಲಿ ಮಾನವನಿಗಾಗಿ ನಿರಂತರ ಉತ್ಸಾಹ, ಉತ್ಸವ, ನಿರಂತರ ಸಾಹಸವಾಗುತ್ತದೆ. ನ್ಯಾಯದ ನಂತರ, ಧರ್ಮ. ಧರ್ಮದ ಅರ್ಥ ಅನುಭವ ಪ್ರಮಾಣ ಬೋಧ, ಇದು ಬುದ್ಧಿಯಲ್ಲಾಗುತ್ತದೆ ಅರ್ಥಾತ್ ಸಮಾಧಾನ. ಸಮಾಧಾನದ ಅರ್ಥವೇ ಮಾನವ ಧರ್ಮ, ವ್ಯವಸ್ಥೆಯಲ್ಲಿ ಬಾಳುವುದೇ ಮಾನವ ಧರ್ಮ, ಇದೇ ಅಭ್ಯುದಯ. ಅವ್ಯವಸ್ಥೆಯಲ್ಲಿ ಮಾನವ ಬಾಳಿದರೆ ಸಮಸ್ಯೆಗಳಿಂದ ಗ್ರಸ್ತನಾಗುತ್ತಾನೆ, ವ್ಯವಸ್ಥೆಯಲ್ಲಿ ಬಾಳಿದಾಗ ಸಮಾಧಾನಿತವಾಗಿರುತ್ತಾನೆ. ಮನುಷ್ಯ ಸಮಸ್ಯಾಗ್ರಸ್ತನಾಗಲು ಬಯಸುವುದಿಲ್ಲ. ಅತಃ ಮನುಷ್ಯ ಸಮಾಧಾನಿತನಾಗಿರಲು ಬಯಸುತ್ತಾನೆ. ಸಮಾಧಾನ = ಸುಖ, ಮಾನವ ಸುಖಧರ್ಮಿ. ಸಮಸ್ಯೆ = ದುಃಖ, ಸಮಸ್ಯೆಯನ್ನು ಮಾನವ ಬಯಸುವುದಿಲ್ಲ. ಭಯ ಮತ್ತು ಪ್ರಲೋಭನೆಯ ಆಧಾರದ ಮೇಲೆ ಸಮಾಧನವಾಗುವುದಿಲ್ಲ ಮತ್ತು ಸಮಸ್ತ ಪ್ರಪಂಚ, ಭಯ ಮತ್ತು ಪ್ರಲೋಭನೆಯ ಆಧಾರದ ಮೇಲೆ ಸಮಾಧಾನವಾಗಲಿ ಎಂದು ಇಡೀ ಪ್ರಪಂಚವೇ ತೂಗಿದೆ. ಭಯ ಮತ್ತು ಪ್ರಲೋಭನೆಯ ಆಧಾರದ ಮೇಲೆ ವ್ಯವಸ್ಥೆಯ ಸಮೀಕರಣ ಮಾಡುವುದಕ್ಕಾಗಿ ನಾವು ಇವತ್ತಿಗೂ ಶಿಕ್ಷಣ ತರಬೇತಿ ನಡೆಸುತ್ತೇವೆ ಆದರೆ ಇದರಿಂದ ವ್ಯವಸ್ಥೆಯಾಗಲು ಸಾಧ್ಯವಿಲ್ಲ. ಭಯ ಮತ್ತು ಪ್ರಲೋಭನೆಯ ಆಧಾರದ ಮೇಲೆನಾದರು ನಿರ್ಮಿತವಾದರೆ ಅದೇ ಕ್ಷಣದಿಂದ ಅದರ ವಿಘಟನೆ ಕಾರ್ಯಕ್ರಮ ಪ್ರಾರಂಭವಾಗುತದೆ. ಅತಃ ಮೌಲ್ಯ ಮತ್ತು ಮೌಲೀಕರಣೆಯ ಆಧಾರದ ಮೇಲೆಯೇ ವ್ಯವಸ್ಥೆ ಆಗುತ್ತದೆ. ಪರಿವಾರ ವ್ಯವಸ್ಥೆ, ತಂತ್ರಜ್ಞಾನ, ಆಡಳಿತ, ರಾಜ್ಯ, ವ್ಯವಸ್ಥೆ ಎಲ್ಲ ಸ್ತರದಲ್ಲಿ ವ್ಯವಸ್ಥೆ ಇದೆ ವಿಧಿಯಲ್ಲಾಗುತ್ತದೆ. ವ್ಯವಸ್ಥೆಯ ಅರ್ಥ ಮಾನವ ತನ್ನ ಪ್ರಾಮಾಣಿಕತೆಯನ್ನು ಪ್ರಸ್ತುತ ಮಾಡಬಲ್ಲ, ನ್ಯಾಯದ ನಿರ್ವಹಣೆ ಮಾಡಬಲ್ಲ ಮತ್ತು ವ್ಯವಸ್ಥೆಯಲ್ಲಿ ಭಾಗವಹಿಸಬಲ್ಲ.

ಪರಿವಾರದಲ್ಲಿ, ಪ್ರತ್ಯೇಕ ಮನುಷ್ಯನಲ್ಲಿ, ಪ್ರತ್ಯೇಕ ಮಗುವಿನಲ್ಲಿ ಅರಿವಿನ ಸೂತ್ರ ನೀಡುವುದೇ ಶಿಕ್ಷಣ-ಸಂಸ್ಕಾರ ವ್ಯವಸ್ಥೆ. ಇದನ್ನು ಅರಿವಿನ ಲೋಕವ್ಯಾಪೀಕರಣ ಮಾಡುವುದೆಂದೂ ಹೇಳಬಹುದು. ಮೊದಲೇ ನಾನು ನಿಮಗೆ ಹೇಳಿದೆನು ದರ್ಶನ; ದರ್ಶನದ ನಂತರ ವಿಚಾರ; ವಿಚಾರದ ನಂತರ ಶಾಸ್ತ್ರ; ಶಾಸ್ತ್ರದ ನಂತರ ಯೋಜನೆ. ಯೋಜನೆಯಲ್ಲಿ ಒಂದು, ಜೀವನ ವಿದ್ಯೆ ಯೋಜನೆ, ಇದರಲ್ಲಿ ಮಾನವ ಪರಿವಾರ ಮಾನವ ಚೇತನ ಸಂಪನ್ನವಾಗುವುದಕ್ಕಾಗಿ ಪೂರ್ಣ ಅವಕಾಶವಿದೆ. ಈ ಅರಿವಿನಿಂದ ಮನುಷ್ಯ ಪರಿವಾರದಲ್ಲಿ ವ್ಯವಸ್ಥೆಯ ರೂಪದಲ್ಲಿ ಬಾಳಬಹುದು. ಎರಡನೆಯ ಯೋಜನೆ, ಮಾನವೀಯ ಶಿಕ್ಷಣ-ಸಂಸ್ಕಾರದ ಮಾನವೀಕರಣ. ಇದರಲ್ಲಿ ಮಕ್ಕಳಿಗಾಗಿ ಶಿಕ್ಷಣ ವ್ಯವಸ್ಥೆಯಿದೆ. ಇಂತಹ ಶಿಕ್ಷಣವನ್ನು ನಾವು ಒಂದು ಶಾಲೆಯಲ್ಲಿ (ಬಿಜನೌರ್, ಉ.ಪ.) ಪ್ರಯೋಗ ಮಾಡಿದೆವು. ಇದು ಐದು ವರ್ಷದ ಅನುಭವ. ಜೀವನ ವಿದ್ಯೆಯ ಆಧಾರದ ಮೇಲೆ ಶಿಕ್ಷಣದ ಮಾನವೀಕರಣ ಮಾಡಿದಾಗ ಅದರ ಪ್ರಭಾವವೇನು ಎಂದು ಅಲ್ಲಿ ನೋಡಿದೆವು. ವಿಧ್ಯಾರ್ಥಿಗಳ ಮೇಲೆ ವಾತಾವರಣದ ಪ್ರಭಾವ

ಬೀಳುತ್ತದೆ ಎಂದು ಜನರು ಹೇಳುತ್ತಿದ್ದರು, ಇದನ್ನು ನಾವು ತಿರಸ್ಕರಿಸಿದೆವು. ವಾತಾವರಣದ ಪ್ರಭಾವ ಬಿದ್ದರೆ ನಾನು ಅನುಸಂಧಾನ ಹೇಗೆ ಮಾಡಬಹುದಾಗಿತ್ತು? ಈ ಶಾಲೆಯಿಂದ ಪ್ರಮಾಣ ಸಿಕ್ಕಿತು, ಮಕ್ಕಳ ಪ್ರಭಾವ ಪರಿವಾರದ ಮೇಲೆ ಹಾಗು ಅವರ ಪರಿವಾರ ಜನರ ಪ್ರಭಾವ ವಾತಾವರಣದ ಮೇಲೆ ಬೀಳಲು ಆರಂಭಿಸಿತು. ಮಕ್ಕಳು ಜೀವನದ ರೂಪದಲ್ಲಿ ತಮ್ಮನ್ನು ಗುರುತಿಸಲಾರಂಭಿಸಿದರು ಮತ್ತು ವ್ಯವಸ್ಥೆಯಲ್ಲಿ ಬಾಳುವುದು ಅತಿ ಆವಶ್ಯಕವೆಂದು ಸ್ವೀಕರಿಸಲು ಪ್ರಾರಂಭಿಸಿದರು. ಇದರ ಫಲಸ್ವರೂಪ ಹಲವಾರು ಮಕ್ಕಳು ಟಿ.ವಿ., ವ್ಯರ್ಥದ ವಾರ್ತಾಲಾಪ ಇತ್ಯಾದಿಯಲ್ಲಿ ಅರುಚಿ, ವಸ್ತುಗಳಲ ಮೌಲೀಕರಣೆ ಮಾಡಲಾರಂಭಿಸಿದರು ಮತ್ತು ಇವೆಲ್ಲ ನಿಸ್ಸಾರವೆಂದು ಅರಿತುಕೊಂಡರು. ಜೊತೆಗೆ ಗ್ರಾಮದಲ್ಲಿ ಒಂದು ಪರಿವಾರದಲ್ಲಿ ಇನ್ನೊಂದು ಪರಿವಾರದ ಮೇಲೆ ವಿರೋಧ-ಭಾವವಿತ್ತು, ಜಗಳ, ಮೊಕದ್ದಮೆಯಾಗುತ್ತಿತ್ತು. ಇವೆಲ್ಲವೂ ಮೆಲ್ಲಗೆ ಶಮನವಾದವೂ. ಇವಾಗ ಆ ಗ್ರಾಮಗಳಲ್ಲಿ ನನ್ನ ಮಾಹಿತಿಯ ಅನುಸಾರ ಜಗಳ-ತೊಂದರೆ ಕಡಿಮೆಯಾಗಿದೆ. ಇದನ್ನು ನೋಡಿಯೇ ನಾನು ಹೇಳುವುದು, ಮಕ್ಕಳ ಪ್ರಭಾವ ವಾತಾವರಣದ ಮೇಲೆ ಇದ್ದಿತು ಮತ್ತು ಇದರ ಅನುಸಾರವೆ ನಾನು ಹೇಳುತ್ತೇನೆ, ಈ ಶಿಕ್ಷಣದಲ್ಲಿ ತಾಕತ್ತು ಇದೆ ಎಂದು.

ಶಿಕ್ಷಣದ ಮಾನವೀಕರಣದಲ್ಲಿ ನಾವು ವಿಜ್ಞಾನದ ಸಹಿತ ಚೈತನ್ಯ ಪಕ್ಷದ ಅಧ್ಯಯನ ಮಾಡಿಸುತ್ತೇವೆ. ಚೈತನ್ಯ ಪಕ್ಷದ ಅಧ್ಯಯನದ ಅರ್ಥ ಜೀವನ. ಜೀವನದ, ಜೀವನ ಜಾಗೃತಿಯ ಅಧ್ಯಯನ ಮಾಡಿಸುತ್ತೇವೆ. ರಾಸಾಯನಿಕ-ಭೌತಿಕ ರಚನೆ-ವಿರಚನೆಯ ಅಧ್ಯಯನ ಮಾಡಿಸುತ್ತೇವೆ. ಮಾನವನಿಗಾಗಿ ರಚನೆ-ವಿರಚನೆಯ ಪೂರಕತೆ ಹಾಗು ಮಾನವ ಈ ಪ್ರಪಂಚಕ್ಕಾಗಿ ಹೇಗೆ ಪೂರಕ, ಹೇಗೆ ಉಪಯೋಗಿಯಾಗಬಲ್ಲ, ಇವೆಲ್ಲಾ ಅಧ್ಯಯನ ಮಾಡಿಸುತ್ತೇವೆ. ಇದರ ನಂತರ ವಿಕಲ್ಪಾತ್ಮಕ ದರ್ಶನ ಶಾಸ್ತ್ರದಲ್ಲಿ ಕ್ರಿಯೆ ಪಕ್ಷದ ಅಧ್ಯಯನ ಮಾಡಿಸುತ್ತೇವೆ. ಕ್ರಿಯೆ ಪಕ್ಷದ ಅರ್ಥ ಮಾನವನ ಅರಿವಿಗಾಗಿ ದರ್ಶನ. ಅರಿವಿನ ಪ್ರಮಾಣವಿರಬೇಕು. ಅರಿವಿನ ಸಹಿತ ನಾವು ನಮ್ಮ ಗುರುತನ್ನು ಮಾಡುತ್ತೇವೆ. ಹೀಗಾಗಿ ಸಹ-ಅಸ್ತಿತ್ವವೇ ಗುರುತಿಸುತ್ತೇವೆ ಮೌಲ್ಯಗಳ ನಿರ್ವಹಣೆ ಮಾಡುವುದಾಗುತ್ತದೆ ಮತ್ತು ಮೌಲೀಕರಣದಲ್ಲಿ ಉಭಯ ತೃಪ್ತಿಯೇ ಸ್ವಾಭಾವಿಕ ರೂಪದಲ್ಲಾಗುತ್ತದೆ. ವ್ಯವಸ್ಥೆ ಸಹ-ಅಸ್ತಿತ್ವದಲ್ಲಿ ಒಂದು ಶಾಶ್ವತ ಸತ್ಯ. ಶಾಶ್ವತ ಸತ್ಯ ಯಾವ ಅರ್ಥದಲ್ಲಿ? - ಅಸ್ತಿತ್ವದಲ್ಲಿ ಪ್ರತ್ಯಕೆ ಏಕ ತನ್ನ 'ತ್ವ' ಸಹಿತ ವ್ಯವಸ್ಥೆಯಲ್ಲಿದೆ: ಉದಾಹರಣೆಗೆ ಬಿಲ್ವದ ಗಿಡದಲ್ಲಿ ಬಿಲ್ವತ್ವ ಒಳಗೊಂಡಿದೆ. ಅರಳಿಯ ಗಿಡದಲ್ಲಿ ತನ್ನ ನಡತೆ ಕಾಪಡಿರುತ್ತದೆ. ಅರಳಿಯ ಮರದಲ್ಲಿ ಅರಳಿಯ ಹಣ್ಣು ಮತ್ತು ಅರಳಿಯ ಬೀಜವಿರುತ್ತದೆ, ಅದರ ಗುಣ, ಧರ್ಮವಿರುತ್ತದೆ, ಇದೇ ಅದರ ನಡತೆ. ಇದೇ ರೀತಿಯಲ್ಲಿ ಸಮಸ್ತ ಗಿಡಮರಗಳ ಪ್ರಪಂಚ, ಜೀವಿಪ್ರಪಂಚದ ನಡತೆ ನಿಶ್ಚಿತವಾಗಿದೆ ಮತ್ತು ಇವು ತಮ್ಮ-ತಮ್ಮ ನಡತೆಯಲ್ಲಿ ಪ್ರಕಾಶಿತವಾಗಿವೆ. ಇದನ್ನೇ 'ತ್ವ' ಸಹಿತ ವ್ಯವಸ್ಥೆ ಎಂದು ಹೇಳುತ್ತೇವೆ. ಮಾನವನ ನಡತೆ ಇದುವರೆಗೆ ನಿಶ್ಚಿತ ಆಗಿಲ್ಲ, ಏಕೆಂದರೆ ಮಾನವ ಇದುವರೆಗೂ ವ್ಯವಸ್ಥೆಯಲ್ಲಿ ಬಾಳಲಾಗಿಲ್ಲ. ಇದುವರೆಗೂ ನಾವು ವ್ಯವಸ್ಥೆಯನ್ನು ಪಡೆದಿಲ್ಲ ಆದರೆ ವ್ಯವಸ್ಥೆಯ ಅವಶ್ಯಕತೆಯಿದೆ, ಇಲ್ಲಿವರಗೆ ಬಂದಿದ್ದೇವೆ. ವ್ಯವಸ್ಥೆ ಪಡೆಯುವುದಕ್ಕಾಗಿ ನಮಗೆ ನಮ್ಮ 'ತ್ವ' ಸಹಿತ ವ್ಯವಸ್ಥೆಯಲ್ಲಿ ಬಾಳಬೇಕು. ತ್ವ ಎಂದರೇನು? ಮಾನವೀಯತೆ ಪೂರ್ಣ ನಡತೆ. ಮಾನವೀಯತೆಯಲ್ಲಿ ಮೌಲ್ಯ, ಚಾರಿತ್ರ್ಯ ಮತ್ತು ನೈತಿಕತೆ. ಮೌಲ್ಯದ ಪ್ರಮಾಣವೇ ಸಂಬಂಧ,

ಮೌಲ್ಯ, ಮೌಲೀಕರಣೆ ಮತ್ತು ಉಭಯ ತೃಪ್ತಿ. ಇದು ಪರಿವಾರದಲ್ಲೇ ಆಗಬೇಕು. ಉಭಯ ತೃಪ್ತಿಗಿಂತ ಕಡಿಮಿಯಾಗಿ ಯಾವ ಪರಿವಾರವಿಲ್ಲ ಇದಕ್ಕಿಂಗ ಹೆಚ್ಚಿನ ಅವಶ್ಯಕತೆಯಿಲ್ಲ, ಇದೇ ಮಾನವತ್ವ. ಇದು ಘಟಿತವಾಗುವುದಕ್ಕಾಗಿ ಸ್ವಯಂ ಸ್ಫೂರ್ತ ವಿಧಿಯಿಂದ ಮನುಷ್ಯ ಮೌಲ್ಯಗಳಲ್ಲಿ ಬಾಳುತ್ತಾನೆ. ವ್ಯವಸ್ಥೆಯಲ್ಲಿ ಬಾಳುವುದರಿಂದ ಸಚ್ಚಾರಿತ್ರ್ಯದ ಮಾತು ಬರುತ್ತದೆ. ಸಚ್ಚಾರಿತ್ರ್ಯವನ್ನು ಸ್ವದನ, ಸ್ವನಾರಿ / ಸ್ವಪುರುಷ, ದಯಾಪೂರ್ಣ ಕಾರ್ಯ ವ್ಯವಹಾರದ ರೂಪದಲ್ಲಿ ಗುರುತಿಸಲಾಗಿದೆ. ನೈತಿಕತೆಯಿಂದ (ತನ, ಮನ, ಧನ ರೂಪದ ಅರ್ಥದ ಸದುಪಯೋಗ ಮತ್ತು ರಕ್ಷಣೆ) ಅಭಯತೆ ಆಗುತ್ತದೆ. ಈ ರೀತಿಯಲ್ಲಿ ಇದು ಮಾನವೀಯತೆ ಪೂರ್ಣ ನಡತೆ. ಇದರಲ್ಲಿ ಬಹಳ ಒಳ್ಳೆಯರೀತಿಯಲ್ಲಿ ಮಾನವ ಆಶ್ವಸ್ತನಾಗಿ ಬಾಳಬಹುದು.

ಇದರ ನಂತರ ಮಾನವನ ಪರಿಭಾಷೆ: "ಮನಾಕಾರವನ್ನು ಸಾಕಾರ ಮಾಡುವವನಿಗೆ ಮಾನವನೆಂದು ಹೇಳುತ್ತೇವೆ". ಅರ್ಥಾತ್ ಮಾನವನ ಮನದಲ್ಲಿ ಏನೇ ಬರುತ್ತದೆಯೋ (ಯಂತ್ರ ಮಾಡುವುದು, ಮನೆ ಕಟ್ಟುವುದು) ಅದನ್ನು ಸಾಕಾರ ಮಾಡುವವನು ತಥಾ ಮನಃ ಸ್ವಸ್ಥತೆಯ ಆಶಾವಾದಿ ಅರ್ಥಾತ್ ಸುಖದ ಆಸೆಯಲ್ಲಿಯೇ ಪ್ರತ್ಯೇಕ ಮಾನವ ಬಾಳುತ್ತಾನೆ. ಮಾನವ ಸುಖಧರ್ಮಿ. ಈ ರೀತಿಯಲ್ಲಿ ಮೌಲ್ಯ, ನೈತಿಕತೆ, ಸಚ್ಚಾರಿತ್ರ್ಯದ ಸ್ವರೂಪ ಅರಿವಾಗುತ್ತದೆ. ಪರಿಭಾಷೆಯ ಅನುಸಾರ ಮನಾಕಾರವನ್ನು ಸಾಕಾರ ಮಾಡುವ ಮಾತನ್ನೇನೋ ಮಾನವ ಪಡೆದಿದ್ದಾನೆ. ಮನಾಕಾರವನ್ನು ಸಾಕಾರ ಮಾಡುವ ಮಾತು ಎರಡು ವಿಧಿಯಲ್ಲಾಗುತ್ತದೆ. ಒಂದು ಸಾಮಾನ್ಯ ಆಕಾಂಕ್ಷೆ (ಆವಾಸ, ಆಹಾರ, ಅಲಂಕಾರ) ಮತ್ತು ಇನ್ನೊಂದು ಮಹತ್ವಾಕಾಂಕ್ಷೆ (ದೂರಶ್ರವಣ, ದೂರದರ್ಶನ, ದೂರಚಲನೆ). ಮಾನವೀಯ ನಡತೆ ಇನ್ನೂ ಎಲ್ಲೂ ಸಿಕ್ಕಿಲ್ಲ. ಸಂವಿಧಾನದಲ್ಲಿ ಮಾನವೀಯತೆ ಪೂರ್ಣ ನಡತೆಯನ್ನು ಮೌಲ್ಯಾಂಕಿತ ಮಾಡುವ ಯಾವ ವ್ಯವಸ್ಥೆಯು ಇಲ್ಲ. ಶಕ್ತಿ ಕೇಂದ್ರಿತ ಯಾವುದೇ ಸಂವಿಧಾನದಲ್ಲಿ ಮಾನವೀಯತೆ ಪೂರ್ಣ ನಡತೆಯನ್ನು ಪ್ರಮಾಣೀಕರಿಸುವ ಅವಕಾಶವಿರುವುದಿಲ್ಲ ಏಕೆಂದರೆ ಇದು ಮಾನವೀಯ ಸಂವಿಧಾನವಲ್ಲ. ಆದ್ದರಿಂದ ಇದರಲ್ಲಿ ಮಾನವೀಯ ನಡತೆ ಆಗಲು ಸಾಧ್ಯವಿಲ್ಲ. ಮಾನವೀಯತೆಪೂರ್ಣ ನಡತೆಯನ್ನು ಯಾರು ಪ್ರಮಾಣೀಕರಿಸಲು ಆಗಲಿಲ್ಲ. ಅರಿವನ್ನು ಆಧಾರವಾಗಿಟ್ಟು, ಹೀಗೆ ಮೌಲೀಕರಣ ಮಾಡುವ ಸಾಹಸವನ್ನು ಮಾಡಲಾಗಲಿಲ್ಲ. ಈ ಕಡಿಮೆಗಳನ್ನು ಪೂರೈಸದೇ ಮಾನವ ಸುಖವಾಗಿ ಬಾಳಲಾಗುವುದಿಲ್ಲ ಮತ್ತು ಯುದ್ಧ ಜಗಳ ಮಾಡುತ್ತಲೇಯಿರುತ್ತಾನೆ. ಈ ಅವ್ಯವಸ್ಥೆಯಿಂದ ತಪ್ಪಿಸಿಕೊಳ್ಳಲು, ಅರಿವು ಒಂದೇ ಉಪಾಯ. ಇದಕ್ಕಾಗಿ ಶಿಕ್ಷಣದ ಮಾನವೀಕರಣ ಮಾಡುವುದು ಅತಿ ಆವಶ್ಯಕ. ಶಿಕ್ಷಣದಲ್ಲಿ ವಿಜ್ಞಾನದ ಸಹಿತ ಚೈತನ್ಯ ಪ್ರಕೃತಿಯ ದರ್ಶನದ ಸಹಿತ ಕ್ರಿಯೆ ಪಕ್ಷದ, ಮನೋವಿಜ್ಞಾನದ ಸಹಿತ ಸಂಸ್ಕಾರ ಪಕ್ಷದ, ಭೂಗೋಳ ಮತ್ತು ಇತಿಹಾಸದಲ್ಲಿ ಮಾನವ ತಥಾ ಮಾನವೀಯತೆಯ ಸಮಾವೇಶ ಮಾಡುತ್ತೇವೆ. ಈ ರೀತಿಯಲ್ಲಿ ಶಿಕ್ಷಣದಲ್ಲಿ ಮಾನವೀಯತೆಯ ಸಮಾವೇಶವಾಗುವುದರಿಂದ ಮಾನವನ ಪ್ರವೃತ್ತಿ ಸಹಜ ರೂಪದಿಂದ ವ್ಯವಸ್ಥೆಯಲ್ಲಿ ಬಾಳುವ ಹಾಗು ತನ್ನನ್ನು ಪ್ರಮಾಣೀಕರಿಸಲು ಆಗುತ್ತದೆ. ತನ್ನ ಗುರುತಿನ ಸಹಿತ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವದಲ್ಲಿ ಬಾಳುವ ಅವಸರ ಆವಶ್ಯಕತೆ ಸಫಲತೆಯ ಸ್ಥಾನಕ್ಕೆ ನಾವು ಸೇರುತ್ತೇವೆ. ಆದ್ದರಿಂದ ಶಿಕ್ಷಣ - ಸಂಸ್ಕಾರ ಮಾನವೀಯತೆಯ ಸಹಿತವೇ ಪೂರ್ಣವಾಗುತ್ತದೆ, ಬೇರೆ ವಿಧಿಯಿಂದಾಗುವುದಿಲ್ಲ. ಇವಾಗ ನಾವು

ಯಾವ ಸಂಸ್ಕಾರಗಳ ಮಾತನಾಡುತ್ತವೆಯೋ ಅವು ನಮ್ಮ ಮಾನ್ಯತೆಗಳ ಮೇಲೆ ಆಧಾರಿತವಾಗಿವೆ, ಅವಲ್ಲಿ ಸಾರ್ವಭೌಮತೆಯಿಲ್ಲ.

ಮೂರನೆಯ ಬಿಂದು 'ಸತ್ಯ'. ಸತ್ಯವೆಂದರೇನು? ಅಸ್ತಿತ್ವ, ಸಹ-ಅಸ್ತಿತ್ವದ ರೂಪದಲ್ಲಿ ಅರಿವಾಗುವುದೇ ಸತ್ಯ. ಸತ್ಯ ಅರಿವಾದನಂತರ ವ್ಯವಸ್ಥೆ ಅರಿವಾಗುತ್ತದೆ. ಅಸ್ತಿತ್ವವನ್ನು ಸತ್ವದಲ್ಲಿ ಸಂಪೃಕ್ತ ಪ್ರಕೃತಿಯ ರೂಪದಲ್ಲಿಯೇ ಅಧ್ಯಯನ ಮಾಡಲಾಗುತ್ತದೆ. ಮಾನವೇತ್ತರ ಪ್ರಕೃತಿ ಮತ್ತು ಮಾನವ ಒಬ್ಬರಿನೋಬ್ಬರಿಗೆ ಪೂರಕವಾಗಿದ್ದರೆ. ಈ ವಿಧಿಯಿಂದ ಬಾಳುವ ಕಲೆಯನ್ನು ವಿಕಸಿತ ಮಾಡುವುದರಿಂದ ಮಾನವೀಯ ವ್ಯವಸ್ಥೆಯೇ ಆಗುತ್ತದೆ. ಇದನ್ನು ಅರಿತನಂತರ ನಾವು ನ್ಯಾಯದಲ್ಲಿ ಬಾಳುತ್ತೇವೆ, ವ್ಯವಸ್ಥೆಯಲ್ಲಿ ಬಾಳುತ್ತೇವೆ, ಪರಿವಾರದಲ್ಲಿ, ವ್ಯವಹಾರದಲ್ಲಿ ಪ್ರಾಮಾಣಿಕತೆಯನ್ನೇ ಪ್ರಮಾಣೀಕರಿಸುತ್ತೇವೆ ಮತ್ತು ಅನ್ಯಥಾ ಯಾವುದೇ ರೀತಿಯ ಶಕ್ತಿ ಕೇಂದ್ರಿತ ಶಾಸನ ಮಾಡುವುದಿಲ್ಲ.

ಈ ರೀತಿಯಲ್ಲಿ ಆಶ್ವಸ್ತ, ವಿಶ್ವಸ್ತ, ಸಮೃದ್ಧ ಸ್ಥಾನಕ್ಕೆ ಸೇರುತ್ತೇವೆ. ಇವಾಗ ನಮಗೆ ವಿಜ್ಞಾನದಲ್ಲಿ ಏನೆಂದು ಹೇಳಿಕೊಡುತ್ತಾರೆಂದರೆ ಏನಿದೆಯೋ ಅದೆಲ್ಲ ಅವ್ಯವಸ್ಥೆ, ಅನಿಶ್ಚಿತ. ಇದನ್ನು ಓದಿದ ಫಲಸ್ವರೂಪ ಪ್ರತ್ಯೇಕ ವಿಧ್ಯಾರ್ಥಿ ತನ್ನನ್ನು ಅವ್ಯವಸ್ಥೆಯಲ್ಲಿರುವುದನ್ನು ಸ್ವೀಕರಿಸುತ್ತಾನೆ. ಫಲಸ್ವರೂಪ ಅವ್ಯವಸ್ಥೆಯನ್ನು ಹರುಡುವುದರಲ್ಲಿ ಭಾಗವಹಿಸುತ್ತಾರೆ, ಇದರ ಉದಾಹರಣೆ ಸಂಪೂರ್ಣ ಧರಣಿ. ಈ ಧರಣಿಯಲ್ಲಿ ತಾಪ ಹೆಚ್ಚಾಗುತ್ತಿದೆ. ಕಾರಣವೇನು? ಧರಣಿಯ ಒಳಗಿನಿಂದ ಇದ್ದಿಲು, ಪೆಟ್ರೋಲಿಯಂ ತೆಗೆಯುವುದರಿಂದ ತಾಪ ಹೆಚ್ಚಾಗುತ್ತಿದೆ. ಹೇಗೆ ಹೆಚ್ಚಾಯಿತು, ಏಕೆ ಆಯಿತು ಇದು ಅವರೂ ತಿಳಿದಿದ್ದಾರೆ ನಾವೂ ತಿಳಿದುಕೊಂಡಿದ್ದೇವೆ. ಇದ್ದಿಲು ಮತ್ತು ಪೆಟ್ರೋಲಿಯಂ ತಾಪವನ್ನು ತಮ್ಮಲಿಯೇ ಜೀರ್ಣಿಸಿಕೊಳ್ಳುವಂತಹ ಪದಾರ್ಥಗಳು. ಧರಣಿಯಲ್ಲಿ ತಾಪವನ್ನು ಜೀರ್ಣಿಸಿಕೊಳ್ಳುವಂತಹ ಪದಾರ್ಥಗಳನ್ನು ತೆಗೆದರೆ ಧರಣಿಯು ತಾಪ ಹೆಚ್ಚಾಗುತ್ತದೆ. ತಾಪ ಹೆಚ್ಚಾಗುವುದರಿಂದ ಸಮುದ್ರದ ಜಲ ಸ್ತರ ಹೆಚಾಯಿತು. ನೀರಿನ ಮಟ್ಟ ಎಷ್ಟು ಹೆಚ್ಚಾಗಬಹುದು? ನಾವು ಕುಳಿತುಕೊಂಡಿರುವ ಜಾಗದಿಂದ ಇನ್ನೂರು ಅಥವ ಮುನ್ನೂರು ಫೀಟ್ ಹೆಚ್ಚಾಗಬಹುದು. ಕೆಲವು ಪರ್ವತಗಳ ಶಿಖರಗಳು ಮಾತ್ರ ಉಳಿಯಬಹುದು. ಇದನ್ನು ಸೇರಿಪಡಿಸುವುದಕ್ಕಾಗಿ ಎಲ್ಲ ದೊಡ್ಡ-ದೊಡ್ಡ ದೇಶಗಳು ಸೇರಿ ಆಹ್ವಾನ ಮಾಡುತ್ತಾರೆ, ಬನ್ನಿ ಎಲ್ಲರು ಸೇರಿ ಸೇರಿಪಡಿಸೋಣ ಮತ್ತು ಇದನ್ನು ಯಾರು ಪ್ರಾರಂಭಿಸಿದರು ಎಂಬುವುದನ್ನು ಇತಿಹಾಸ ಸ್ಪಷ್ಟ ಮಾಡುತ್ತದೆ. ಅರಿತುಕೊಳ್ಳದೆ ಇಂಧನಕ್ಕಾಗಿ ಇದ್ದಿಲು ಮತ್ತು ಖನಿಜತೈಲ ಪದಾರ್ಥ ಉಪಯೋಗ ಮಾಡಿರುವುದು ಈ ಧರಣಿಯ ಜೊತೆ ಆಗಿರುವ ವೈಪರೀತ್ಯ, ಇದರ ಋಣ ತೀರಿಸಬಹುದೋ ಇಲ್ಲವೋ ಎಂಬುವುದರ ಪರೀಕ್ಷಣೆ ಈ ವೈಪರೀತ್ಯವನ್ನು ನಿಲ್ಲಿಸಿದ ಮೇಲೆ ಮಾಡಬಹುದು. ಇದು ಹೇಗೆ ನಿಲ್ಲುತ್ತದೆ ಎಂಬುವುದನ್ನು ಮುಂದೆ ಮಾತನಾಡೋಣ. ಧರಣಿಯ ಮೇಲೆ ಮಾನವ ಹೆಚ್ಚು ತಾಪಮಾನದಲ್ಲಿಯೂ ನಿವಾಸಿಸುತ್ತಾನೆ ($50^0$ ಡಿಗ್ರೀ ಸೆಂಟಿಗ್ರೇಡ್) ಮತ್ತು ಕಡಿಮೆ ತಾಪಮಾನದಲ್ಲಿಯೂ ($-20^0$ ಡಿಗ್ರೀ ಸೆಂಟಿಗ್ರೇಡ್) ನಿವಾಸಿಸುತ್ತಾನೆ. ಈ ಅಂತರವನ್ನು ಅಳತೆಮಾಡುವುದು ಸಾಧ್ಯವಾಗಿದೆ. ಇಷ್ಟು ತಾಪಮಾನದ ಅಂತರದಲ್ಲಿ ನಿವಾಸಿಸುವ ಮಾನವನ

ಶರೀರದ ತಾಪಮಾನ ಒಂದೇಯಾಗಿರುತ್ತದೆ. ಇದು ಹೇಗೆ? ಹೊರಗಿನ ತಾಪ ಅಧಿಕ ಮತ್ತು ಕಡಿಮೆಯಾಗುವುದರಿಂದಲೂ ಶರೀರದ ತಾಪವನ್ನು ಸಂತುಲಿತವಾಗಿರುವುದಕ್ಕಾಗಿ ಶರೀರದಲ್ಲಿ ದ್ರವ್ಯಗಳಿವೆ. ಇದೇ ರೀತಿಯಲ್ಲಿ ಧರಣಿಯ ತಾಪವನ್ನು ಸಂತುಲಿತವಾಗಿರುವುದಕ್ಕಾಗಿ ಧರಣಿಯ ಒಳಗೆ ಇದ್ದಿಲು ಮತ್ತು ಖನಿಜತೈಲ ಪದಾರ್ಥಗಳಿವೆ.

ಇವಾಗ ಮುಖ್ಯ ಬಿಂದು, ಇದ್ದಿಲು ಮತ್ತು ಖನಿಜತೈ ತೆಗೆಯುವುದನ್ನು ಹೇಗೆ ನಿಲ್ಲಿಸುವುದು? ಒಂದು ಉಪಾಯವೇನೆಂದರೆ ನಮ್ಮ ಧರಣಿಯ ಮೇಲೆ ಹಲವಾರು ನದಿಗಳು ಹರಿಯುತ್ತವೆ, ಇವುಗಳ ಪ್ರವಾಹ ಶಕ್ತಿಯಿಂದ ಧರಣಿಯ ಮೇಲಿರುವ ಎಲ್ಲ ವಿದ್ಯುತ್ತಿನ ಆವಶ್ಯಕತೆಗಿಂತ ೫೦ ಗುಣ ಹೆಚ್ಚು ವಿಧ್ಯುತ ಉಪಲಬ್ಧವಾಗಬಹುದು. ಇದಕ್ಕಾಗಿ ಪ್ರವಾಹ ಬಲದಿಂದ ವಿಧ್ಯುತ ಪಡೆಯುವ ಯಂತ್ರವನ್ನು ನಿರ್ಮಿಸುವ ಅವಶ್ಯಕತೆಯಿದೆ. ಇನ್ನೊಂದು ಪ್ರಕಾರದ ಯಂತ್ರ, ತೈಲದಿಂದ ನಡೆಯುವ ಯಂತ್ರಗಳಿಗಾಗಿ ವನಸ್ಪತಿ ತೈಲದಿಂದ ನಡೆಯುವ ಇಂಜಿನ್ ನಿರ್ಮಿಸುವ ಅವಶ್ಯಕತೆಯಿದೆ. ಇದಕ್ಕಾಗಿ ತೈಲವಿರುವ ವನಸ್ಪತಿಗಳು ಧರಣಿಯ ಮೇಲೆ ಹಲವಾರು ಸಿಗುತ್ತವೆ, ಇವುಗಳನ್ನು ಅಧಿಕಾಧಿಕ ಮಾತ್ರದಲ್ಲಿ ಉತ್ಪಾದಿಸಬಹುದೆಂದು ನನ್ನ ವಿಚಾರ. ಸೌರ ಇಂಧನದ ದಿಕ್ಕಿನಲ್ಲಿ ಜನಗಳ ಧ್ಯಾನವಿದ್ದೇಯಿದೆ, ಇನ್ನೂ ಅಧಿಕಾಧಿಕ ಆತುರತೆಯಿಂದ ಧ್ಯಾನ ನೀಡುವ ಅವಶ್ಯಕತೆಯಿದೆ. ಸೌರ ಇಂಧನವನ್ನು ಇನ್ನೂ ವ್ಯವಹಾರಿಕ ಯಂತ್ರಗಳನ್ನು, ಉಪಯೋಗದಲ್ಲಿ ತರುವ ಅವ್ವಶ್ಯಕತೆಯಿದೆ. ಈ ರೀತಿಯಲ್ಲಿ ಧರಣಿಯ ಮೇಲೆ ಎಷ್ಟು ಊರ್ಜೆ ಅವಶ್ಯಕತೆಯಿದೆಯೋ ಅದಕ್ಕಿಂತ ಹೆಚ್ಚು ಊರ್ಜೆ ಧರಣಿಯ ಮೇಲೆ ಉಪಲಬ್ಧವಾಗುವ ಮಾತು ಅರಿವಾಗುತ್ತದೆ. ಈ ರೀತಿಯಲ್ಲಿ ಇದ್ದಿಲು ಮತ್ತು ಖನಿಜ ತೈಲದ  ಉಪಯೋಗ ನಿಲ್ಲಿಸಿ, ಅದರ ಸ್ಥಾನದಲ್ಲಿ ವನಸ್ಪತಿ ತೈಲ, ಪ್ರವಾಹ ಶಕ್ತಿ ಮತ್ತು ಸೌರ್ ತಾಪದ ಉಪಯೋಗ ಮಾಡಬಹುದು, ನಂತರ, ಇಲ್ಲಿಯವರೆಗೆ ನಾವು ಅಗೆದಿರುವ ಗುಂಡಿಯನ್ನು ಧರಣಿ ಸ್ವಯಂ ಮುಚ್ಚಲು ಎಷ್ಟು ಸಕ್ಷಮವಾಗಿದೆ ಎಂಬುದನ್ನು ಪರೀಕ್ಷಣೆ ಮಾಡಬಹುದು.

ಮೂರನೆಯದೊಂದು ಕತ್ತಿ ಮಾನವನ ಮೇಲೆ ನೇತಾಡುತ್ತಿದೆ. ಈ ಧರಣಿಯ ಮೇಲೆ ನೀರು ಸೃಜನವಾಗುವ ಘಟಣೆಯಾದಾಗ, ಇಂತಹ ಘಟನೆಯ ಮೂಲದಲ್ಲಿ ಶೋಧ ಮಾಡಿದರೆ ಬ್ರಹ್ಮಾಂಡೀಯ ಕಿರಣಗಳ ಸಂಯೋಗದಿಂದ ಈ ಘಟಣೆ ಘಟಿತವಾಗಿದೆ, ಬ್ರಹ್ಮಾಂಡೀಯ  ಕಿರಣಗಳೇ ಈ ಘಟನೆಯ ಒಂದೇ ಸ್ರೋತ, ಇವಾಗ ಅದರ ನಿರಂತರತೆಯಾಗಿದೆ.  ಧರಣಿಯ ವಾತಾವರಣ ಕ್ಷಯವಾಗಿದೆ. ಇದರಿಂದ, ಬ್ರಹ್ಮಾಂಡೀಯ ಕಿರಣಗಳು ವಿಪರೀತ ವಿಧಿಯಲ್ಲಿ ಪ್ರಭಾವ ಬಿದ್ದರೆ ಧರಣಿಯ ಮೇಲಿರುವ ನೀರು ಸಮಾಪ್ತವಾಗಬಹು ದೆಂಬುವ ಸಂಭವನೀಯತೆ ಇದೆ. ಯಾವ ಯಾವ ಸ್ರೋತದಿಂದ ಧರಣಿಯ ಆವರಣ ಕ್ಷತಿಗ್ರಸ್ತವಾಗಿದೆಯೆಂದು ವೈಜ್ಞಾನಿಕರು ಕಂಡುಹಿಡಿದ್ದಿದ್ದಾರೆ. ಆದರೆ ಕೇವಲ ಸ್ರೋತ ಕಂಡುಹಿಡಿಯುವುದರಿಂದ ಕ್ಷತಿ ಸೇರಿಯಾಗುವುದಿಲ್ಲ, ಮತ್ತೆ ಸೃಜನವಾಗುವ ಅವಶ್ಯಕತೆಯಿದೆ. ಸೃಜನವಾಗುವ ವಿಷಯದಲ್ಲಿ, ಧರಣಿಯ ಜೊತೆಯಾಗಿರುವ ಎಲ್ಲ ಅತ್ಯಾಚಾರವನ್ನು ನಿಲ್ಲಿಸಬೇಕು. ಖನಿಜ ತೈಲ, ಇದ್ದಲು ಮತ್ತು ವಿಷಾದ ಅನಿಲಗಳು ಮತ್ತು ದ್ರವ ಪದಾರ್ಥಗಳನ್ನು ಮಾನವ ಯುದ್ಧದ ಸಾಮಗ್ರಿಗಾಗಿ ಮಾಡಿದ್ದಾನೋ  ಅದರಿಂದಲೇ ಧರಣಿಯ ರಕ್ಷಣೆ ಕವಚ ಕ್ಷತಿಗ್ರಸ್ತವಾಗಿದೆ, ಇದು

ಸಮಾಚಾರದಲ್ಲಿಯೂ ನೋಡಬಹುದು. ಇದು ಸತ್ಯವಾದರೆ ಈ ಎಲ್ಲಾ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು. ಇದರಿಂದ ಧರಣಿಯ ವಾತಾವರಣ ಕ್ಷತಿಗ್ರಸ್ತವಾಗುತ್ತದೆ. ಮಾನವ ಕ್ಷತಿಗ್ರಸ್ತ ಮಾಡಿದ ನಂತರ ಕ್ಷತಿಪೂರ್ತಿಯ ಉಪಾಯವೂ ಯೋಚಿಸುತ್ತಾನೆ, ಮಾಡುತ್ತಾನೆ, ಇದು ಬಹಳ ದೊಡ್ಡ ಗುಣ, ಆದರೆ ಅನ್ಯ ಜೀವಗಳಲ್ಲಿ ಹೀಗಿಲ್ಲ. ಧರಣಿಯ ಕ್ಷತಿಪೂರ್ತಿಗಾಗಿ ಮಾನವ ಯಾವ ಕಾರ್ಯವನ್ನು ಮಾಡಿಲ್ಲ, ಪ್ರತಿ ದಿನ ಇನ್ನೂ ನಷ್ಟ ಕಾಣುತ್ತದೆ. ಇನ್ನೂ ಎಷ್ಟು ದಿನ ಹೀಗೇ ಮಾಡುತ್ತೇವೆ? ಈ ನಷ್ಟವನ್ನು ಸೆರಿಪಡಿಸಲು ಯಾವಾಗಾದರೂ ಏನಾದರು ಮಾಡುತ್ತೇವೋ ಇಲ್ಲವೋ?

ಧರಣಿ, ಮಾನವನಿಗೆ ಸುರಕ್ಷಿತವಾದ ವಿಧಿಯಿಂದ ಬಾಳುವ ವಿಧಾನವನ್ನು ಸೃಜಿಸುತ್ತಾ ಬಂದಿದೆ, ಆದರೆ ಮಾನವ ತನ್ನ ಬುದ್ಧಿಯಿಂದ ಸಮಸ್ತ ಧರಣಿಯ ಜೊತೆ ವಿದ್ರೋಹ ಮಾಡಿದ್ದಾನೆ, ಧರಣಿಯ ಮೇಲೆ ಆಕ್ರಮಣ ಹಾಗು ಶೋಷಣೆ ಮಾಡಿದ್ದಾನೆ. ಆದಿಕಾಲದಿಂದಲೇ ಮಾನವ ಧರಣಿಯ ವಾತಾವರಣವನ್ನು ನಷ್ಟಮಾಡುವುದರಲ್ಲೇ ಇದ್ದಾನೆ. ವಿಜ್ಞಾನಿ ಯುಗದ ನಂತರ ಹೆಚ್ಚು ನಷ್ಟವಾಗಿದೆ, ಆದ್ದರಿಂದ ನಾವು ಸಂಕಟಗ್ರಸ್ತರಾಗಿದ್ದೇವೆ. ಮಾನವ ನದಿಯಲ್ಲಿ ಮುಳುಗಿದರೆ ಮೇಲೆ ಉದ್ಭವವಾಗುವ ಸಂಭವನೀಯತೆಯೂ ಇದೇ. ಹಾಗಾದರೆ ಧರಣಿಯನ್ನು ಕಾಪಾಡುವ ಸಂಭವನೀಯತೆಯನ್ನು ನಾವು ನಡಿಸಲು ಬಯಸುತ್ತೇವೆಯೋ ಇಲ್ಲವೋ ಎಂಬುವುದು ನಮ್ಮ ವಿಚಾರಗಳ ಮೇಲೆ ಇದೆ. ವಿಚಾರಗಳಿಂದ ಪರಿಸ್ಥಿತಿಗಳಾಗುತ್ತವೆ, ನಾವು ಬಯಸಿದರೆ ಪರಿಸ್ಥಿತಿಗಳು ಅನುಕೂಲವಾಗುತ್ತವೆ, ನಾವು ಬಯಸದಿದ್ದರೆ ಪ್ರತಿಕೂಲವಾಗುತ್ತವೆ. ನಮ್ಮ ಬುದ್ಧಿ ಭ್ರಮಿತವಾಗಿರುವ ಕಾರಣ ವಾಸ್ತವಿಕತೆಯ, ಪ್ರಕೃತಿಯ ವಾತಾವರಣದ ಮಹಿಮೆಯ ಮೌಲೀಕರಣೆ ಮಾಡುವುದರಲ್ಲಿ ತಪ್ಪು ಮಾಡಿದ್ದೇವೆ. ಫಲಸ್ವರೂಪ ನಾವು ವಿವಿಧ ಪ್ರಕಾರವಾಗಿ ಕ್ಷತಿಗ್ರಸ್ತವಾಗಿ ಮತ್ತು ಪ್ರಕೃತಿಯನ್ನೋ ಕ್ಷತಿಗ್ರಸ್ತ ಮಾಡಿದ್ದೇವೆ. ಕ್ಷತಿಗ್ರಸ್ತ ಮಾಡುವ ತನಕ ನಾವು ನಮ್ಮ ಏಳಿಗೆಯನ್ನು ಆಚರಿಸಿದೆವು ಆದರೆ ಸ್ವಯಂ ಕ್ಷತಿಗ್ರಸ್ತರಾಗುವ ಸಂಭವನೀಯತೆಯ ಭಯವೂ ಇದೇ. ಇದೀಗಾಯಿತು ಗತಕಾಲದ ವಿಶ್ಲೇಷಣೆ. ಮಾನವ ಸಂಚೇತನದಿಂದ ಮಾನವ ವ್ಯವಸ್ಥೆಯಲ್ಲಿ ಬಾಳಲು ತತ್ಪರವಾದರೆ ಜೀವನ ವಿದ್ಯೆ ಒಬ್ಬರಿಂದ ಇನ್ನೊಬ್ಬರಿಗೆ ಸೇರುತ್ತದೆ ಇದರ ಪ್ರಮಾಣ ಸಿಕ್ಕಿದೆ. ಇದನ್ನು ನಾವು ಒಂದು ಶಾಲೆಯಲ್ಲಿ ತಯಾರಿಸಿದ್ದೇವೆ. ಇದರ ಶುಭ ಪರಿಣಾಮಗಳನ್ನು ನೋಡುತ್ತಾ ಇದರ ಲೋಕವ್ಯಾಪೀಕರರಣೆಯ ಆವಶ್ಯಕತೆಯಿದೆ.

ಅವಿವೇಕವಿಲ್ಲದೆ ಯಾವ ಮಾನವನು ಕುಕೃತ್ಯವನ್ನು ಮಾಡುವುದಿಲ್ಲ. ನನ್ನ ಪ್ರಕಾರ ಪ್ರತ್ಯೇಕ ವ್ಯಕ್ತಿ ಶುಭವನ್ನು ಬಯಸುತ್ತಾನೆ ಮತ್ತು ಶುಭಕ್ಕಾಗಿ ಜವಾಬ್ದಾರನಾಗಿದ್ದಾನೆ. ಫಲಸ್ವರೂಪ ಯಾವಾಗಲಾದರೂ ಶುಭಕ್ಕಾಗಿ ಜವಾಬ್ದಾರನಾಗಿ ಅನಿಸುಕೊಳ್ಳುತ್ತಾನೆ. ಸರ್ವಶುಭವನ್ನನಿಸುವ ಅರ್ಥದಲ್ಲಿಯೇ ಜೀವನ ಜಾಗೃತಿಯ ಮಾತು ಬರುತ್ತದೆ. ಸೌಕರ್ಯಗಳ ಸಂಗ್ರಹದಿಂದ ಮುಕ್ತಿ ಮತ್ತು ಭಕ್ತಿ-ವಿರಕ್ತಿಯ ಸ್ಥಾನದಲ್ಲಿ ಸ್ವಸ್ಥ ಸಮಾಜದ ರಚನೆಗಾಗಿಯೇ ಅರಿವಿನ ಮಾತು, ಜೀವನ ಜಾಗೃತಿಯ ಮಾತ್ತನ್ನು ಕೆರಳಿಸುವ ಮನಸ್ಸಾಯಿತು. ಬುದ್ಧಿಯಲ್ಲಾಗುವ ಬೋಧ ಮತ್ತು ಸಂಕಲ್ಪ ಕ್ರಿಯೆಯ ಪ್ರಮಾಣೀಕರಣ, ಬುದ್ಧಿಯಲ್ಲಿ ನ್ಯಾಯಬೋಧ, ಸತ್ಯ ಬೋಧ, ಧರ್ಮ ಬೋಧವಾದಾಗಲೇ

ಆಗುತ್ತದೆ. ಈ ಮೂರು ಬೋಧವಾದನಂತರವೇ ಬುದ್ಧಿಯನ್ನು ಸದ್ಬುದ್ಧಿಯೆಂದು ಕರೆಯುತ್ತಾರೆ. ಫಲಸ್ವರೂಪ ಸರ್ವ್ವಶುಭದ ಜವಾಬ್ದಾರಿಯನ್ನು ಮಾನವ ಸ್ವೀಕರಿಸುತ್ತಾನೆ. ಅಸ್ತಿತ್ವವನ್ನು ಅರಿತುಕೊಂಡಾಗ ಸಹ-ಅಸ್ತಿತ್ವದ ರೂಪದಲ್ಲಿ ನಿತ್ಯ ವರ್ತಮಾನವಾಗಿರುವುದರ ಬೋಧವಾಗುತ್ತದೆ. ಇದರ ಅಧ್ಯಯನವನ್ನು ನಾವು ಮಾಡಿಸುತ್ತೇವೆ.

ಇದರ ಒಂದು ಇಣಕು ಗಣಿತೀಯ ವಿಧಿಯಿಂದ ವಿಭಾಗೀಕರಣ ವಿಧಿಯನ್ನು ಕಂಡುಹಿಡಿಯುವುದು. ವಿಭಾಗೀಕರಣ ವಿಧಿಯನ್ನು ಹೆಚ್ಚಾಗಿ ಶಕ್ತಿಶಾಲಿ ಅಣುಬಾಂಬು ಮಾಡುವುದಕ್ಕಾಗಿ ಕಂಡುಹಿಡಿದರು. ಏಟಂ ಬಾಂಬು ತಯಾರಿಸುವ ಪ್ರಯೋಜನೆ ನಾಶಕ್ಕಾಗಿ ಹೊರೆತು ಬೇರೆಯೇನಕ್ಕೂ ಅಲ್ಲ. ನಾಶಮಾಡುವುದಲ್ಲದೆ (ಉದಾಹರಣೆಗೆ ಹಿರೋಶಿಮ), ನಾಶಮಾಡುವುದಕ್ಕಾಗಿ ಪದೇ-ಪದೇ ಮಾಡಿದ ಪ್ರಯೋಗದಿಂದ ವಾತಾವರಣದ ಅಧಿಕ ಕ್ಷತಿಯಾಯಿತು. ಇದನ್ನು ಕೆಲವು ಜನರು ಮಾಡಿದರು ಆದರೆ 700 ಕೋಟಿ ಜನರು ಇದರ ಫಲವನ್ನು ಭೋಗಿಸುತ್ತಿದ್ದಾರೆ. ನಾಶ ಮಾಡುವುದಕ್ಕಾಗಿ ಉಪಯೋಗಿಸಿದ ವಿಧಾನದಿಂದ ಸಾಮಾನ್ಯ ಮನುಷ್ಯ ಕ್ಷತಿಗ್ರಸ್ತನಾದನು, ಹೇಗೆ? ಗಣಿತೀಯ ವಿಧಿಯಿಂದ 'ವರ್ತಮಾನ' ಹೆಚ್ಚುಕಡಿಮೆ ಶೂನ್ಯವಾಗಿ ಹಾಗು 'ವರ್ತಮಾನದ' ಸಂಖ್ಯೆ ಸಿಗುವುದಿಲ್ಲ. ಆದರೆ ಇರುವುದು ಇದರ ವಿಪರೀತ, ನಿತ್ಯ ವರ್ತಮಾನವೇ ಇರುತ್ತದೆ. ವರ್ತಮಾನ ಇಲ್ಲದೆ ಬೇರೇನೂ ಇರುವುದಿಲ್ಲ. ಅಸ್ತಿತ್ವದ ಎಲ್ಲಾ ವೈಭವ ನಿತ್ಯ ವರ್ತಮಾನ ಆದರೆ ವಿಭಾಗೀಕರಣ ವಿಧಿಯಿಂದ ವರ್ತಮಾನವೇ ಇಲ್ಲ. ಈ ರೀತಿಯಲ್ಲಿ ಸುಳ್ಳಿನ ಕಂತೆ ಎಷ್ಟಾಗಿದೆ ಎಂದರೆ ಇದರಿಂದ ಮೇಲೆಬ್ಬುವುದಕ್ಕೆ ಮಾನವನಿಗೆ ತನ್ನ ಮೇಲೆ ವಿಶ್ವಾಸವಿರಬೇಕು. ಮಾನವನು, ಪರಮಾಣು-ಬಾಂಬಿನ ಮೇಲೆ, ಕತ್ತಿಯ ಮೇಲೆ, ಬಾವುಟದ ಮೇಲೆ, ಕಲ್ಲಿನ ಮೇಲೆ ವಿಶ್ವಾಸವಿಡುವ ವರೆಗೂ ಮನುಷ್ಯ ಮನುಷ್ಯನ ಮೇಲೆ ವಿಶ್ವಾಸವಿಡುವುದಾಗುವುದಿಲ್ಲ, ಇದು ಸತ್ಯ ಮತ್ತು ಸ್ವಯಂನನ್ನು ಅರಿತುಕೊಂಡಾಗಲೇ ಸ್ವಯಂವಿನ ಮೇಲೆ ವಿಶ್ವಾಸವಾಗುತ್ತದೆ. ಸ್ವಯಂನನ್ನು ಅರಿತುಕೊಳ್ಳುವುದಕ್ಕಾಗಿ ಪ್ರತ್ಯೇಕ ನರ-ನಾರಿ ಸ್ವಯಂನಲ್ಲಿ ನ್ಯಾಯ, ಧರ್ಮ, ಸತ್ಯವನ್ನು ನಿಷ್ಕೃಷ್ಟತೆಯಿಂದ ಅರಿತುಕೊಳ್ಳಬೇಕು ಎಂಬುವುದು ಜೀವನದ ಪ್ರಕಾಶನ. ನ್ಯಾಯ ಎಲ್ಲಿಂದ ಅರಿವಾಗುತ್ತದೆ, ಸಂಬಂಧಗಳ ಆಧಾರದ ಮೇಲೆ, ಧರ್ಮ ಎಲ್ಲಿಂದ ಅರಿವಾಗುತ್ತದೆ ವ್ಯವಸ್ಥೆಯಿಂದ, ಸತ್ಯ ಎಲ್ಲಿಂದ ಅರಿವಾಗುತ್ತದೆ ಅಸ್ತಿತ್ವದಿಂದ. ಅಸ್ತಿತ್ವ, ಸಹ-ಅಸ್ತಿತ್ವದ ರೂಪದಲ್ಲಿ ನಿತ್ಯ ಪ್ರಭಾವಿ ಆಗಿರುತ್ತದೆ. ಮಾನವನನ್ನು ಬಿಟ್ಟು ಶೇಷ ಮೂರೂ ಅವಸ್ಥೆಗಳ ಸಂಪೂರ್ಣ ವೈಭವ ವ್ಯವಸ್ಥೆಯಲ್ಲಿಯೇ ಇದೇ.

ಮಾನವನಲ್ಲಿಯೂ 'ವ್ಯವಸ್ಥೆ'ಯಲ್ಲಿರುವ ಹಾತೊರೆ ಯಾವುದಾದರು ಒಂದು ಅಂಶದಲ್ಲಿದ್ದೇಯಿದೆ. ಭ್ರಮಿತ (ಪ್ರಚಲಿತ) ಪಾಠ್ಯಪುಸ್ತಕಗಳನ್ನು ಓದುವುದರಿಂದ ವ್ಯವಸ್ಥೆಯ ಬೋಧವಾಗುವುದಿಲ್ಲ. ವ್ಯವಸ್ಥೆಯ ಬೋಧವಾದ ನಂತರ ವ್ಯವಸ್ಥೆಯಲ್ಲಿ ಬಾಳುವುದರ ಜೊತೆ ಮಾನವ, ಧರ್ಮವನ್ನೂ ನಿಭಾಯಿಸಲು ಯೋಗ್ಯನಾಗುತ್ತಾನೆ. ಮಾನವನ ಧರ್ಮ 'ವ್ಯವಸ್ಥೆ'ಯಲ್ಲೇ ಬಾಳುವುದು. ಅಸ್ತಿತ್ವದಲ್ಲಿ ಪ್ರತ್ಯೇಕ ವಸ್ತುವಿನ ವ್ಯವಸ್ಥೆಯಲ್ಲಿರುವುದು ವ್ಯವಸ್ಥೆಯಲ್ಲಿ ಭಾಗವಹಿಸುವುದೇ, ಧರ್ಮದ ರೂಪದಲ್ಲಿ ತೋರುತ್ತದೆ. ಪದಾರ್ಥಾವಸ್ಥೆಯ ಧರ್ಮ **ಅಸ್ತಿತ್ವ (ಇರುವುದು).** ಪ್ರಾಣಾವಸ್ಥೆಯ ಧರ್ಮ **ಪುಷ್ಟಿ ಸಹಿತ ಅಸ್ತಿತ್ವ**. ಜೀವಾವಸ್ಥೆಯ ಧರ್ಮ, **ಬಾಳುವ ಆಸೆ, ಪುಷ್ಟಿ ಸಹಿತ ಅಸ್ತಿತ್ವದ**

**ರೂಪದಲ್ಲಿ ಪ್ರಕಾಶಿತವಾಗುತ್ತದೆ.** ಜ್ಞಾನಾವಸ್ಥೆಯ (ಮಾನವ) ಧರ್ಮ **ನಿರಂತರ, ಅಸ್ತಿತ್ವ, ಪುಷ್ಟಿ, ಆಸೆ ಸಹಿತ ಸುಖ ಧರ್ಮಿಯಾಗಿರುವುದು ನೋಡಲಾಗಿದೆ.** ಸುಖವೇ ಮಾನವನ ಧರ್ಮ. ಸುಖ ಹೇಗೆ ಬರುತ್ತದೆ? ಸಮಾಧಾನದಿಂದ. ಸಮಾಧಾನ ಬರುತ್ತದೆ ವ್ಯವಸ್ಥೆಯಲ್ಲಿ ಬಾಳುವುದರಿಂದ. ವ್ಯವಸ್ಥೆಯಲ್ಲಿ ಬಾಳುವುದು ಮಾನವನ ಅರಿವಿನ ಮೇಲೆ ಆವಲಂಬಿತವಾಗಿದೆ ಮತ್ತು ಒಟ್ಟು ಅಸ್ತಿತ್ವ, ಜೀವನ ಮತ್ತು ಮಾನವೀಯತೆ ಪೂರ್ಣ ನಡತೆಯ ಬೋಧವಾಗುವುದೇ ಅರಿವು.

ವ್ಯವಸ್ಥೆಯ ಬೋಧವಾದ ನಂತರ ವ್ಯವಸ್ಥೆಯಲ್ಲಿ ನಿಷ್ಠೆ, ಸಂಕಲ್ಪವಾಗುವುದು ಸ್ವಾಭಾವಿಕ. ನಿಷ್ಠೆ, ಸಂಕಲ್ಪವಾದ ನಂತರ ಮಾನವ ವ್ಯವಸ್ಥೆಯಲ್ಲಿ ಬಾಳುತ್ತಾನೆ, ಈ ರೀತಿಯಲ್ಲಿ ಬಾಳುತ್ತಾ ನಾವು ಒಳ್ಳೆ ಪರಿಸ್ಥಿತಿಯನ್ನು ನಿರ್ಮಿಸಬಹುದು. ಅತಃ ಮಾನವೀಯ ಶಿಕ್ಷಣ ವಿಧಿಯನ್ನು ಒಳಗೊಳ್ಳಬೇಕು ಫಲಸ್ವರೂಪ ಸದ್ಬುದ್ಧಿ ಉದಯವಾಗುತ್ತದೆ. ಇದಿಲ್ಲದೆ, ಈ ಧರಣಿಯನ್ನು ಸರ್ವ ನಾಶದಿಂದ ಕಾಪಾಡುವಂತಹ ಯಾವ ಉಪಾಯವೂ ಇಲ್ಲ. ಈ ಮಾತನ್ನು ನಾವು ಅರಿತುಕೊಳ್ಳಬೇಕು. ಇದರ ಅವಶ್ಯಕತೆಯಿದೆ. ಅರಿತುಕೊಳ್ಳದಿರುವುದರಿಂದ ಪರಿಸ್ಥಿತಿ, ಅರಿತುಕೊಳ್ಳುವುದಕ್ಕಾಗಿ ನಮ್ಮನು ಬಂಧಿಸುತ್ತದೆ.

ಈ ರೀತಿಯಲಿ ಧರ್ಮದಲ್ಲಿ ಬಾಳುವುದು ಅರ್ಥಾತ್ ಸಾರ್ವಭೌಮ ವ್ಯವಸ್ಥೆಯಲ್ಲಿ ಬಾಳುವುದು, ಅಖಂಡ ಸಮಾಜದಲ್ಲಿ ಬಾಳುವುದಂತೆಯೇ. ಈ ವಿಧಿಯಿಂದ ಮಾನವನ ಅಖಂಡತೆಯನ್ನು ನಾನು ನೋಡಿದ್ದೇನೆ. **ಮಾನವ ಜಾತಿ ಒಂದೇ, ಕರ್ಮ ಅನೇಕ; ಮಾನವ ಧರ್ಮ ಒಂದೇ.** ಮಾನವ ಸುಖ ಉಳ್ಳವವನಾಗುವುದಕ್ಕಾಗಿ ಹಲವಾರು ಪ್ರಕಾರದ ಕರ್ಮಗಳನ್ನು ಮಾಡಬಹುದು. ಅನೇಕ ಕರ್ಮಗಳ ಅರ್ಥ ಬೇರೆ-ಬೇರೆ ಕಾರ್ಯಗಳು, ಉದಾಹರಣೆಗೆ ಬಟ್ಟೆ ಹೊಲಿಯುವ ಕೆಲಸ, ಮಣ್ಣಿನ ಕೆಲಸ, ಬೇಳೆಯ (ಕಾಳು, ಧಾನ್ಯ) ಕೆಲಸ, ಇತ್ಯಾದಿ. ಮಾನವ, ಮಾನವನನ್ನು ಒಂದು ಜಾತಿಯ ರೂಪದಲ್ಲಿ ಗುರುತಿಸುವ ತನಕ ಮಾನವನ ಜೊತಿ ಶುಭ ಕಾರ್ಯವನ್ನು ಹೇಗೆ ಮಾಡಲಾಗುತ್ತದೆ. ಮಾನವನು, ಹಲವಾರು ಕಾರ್ಯಗಳನ್ನು ಮಾಡುತ್ತಾನೆ ಎಂಬುವುದು ಸ್ವಾಭಾವಿಕ. ಮಾನವ ಜಾತಿ ಒಂದೇ ಎಂಬುವುದನ್ನು ನಾವು ಈ ರೀತಿಯಲ್ಲಿ ಸ್ವೀಕರಿಸುತ್ತೇವೆ, ಮಾನವನ ಉದ್ದೇಶ ಒಂದೇ, ಅದು ಸುಖ ಉಳ್ಳವವನಾಗುವುದು. ಸಮೃದ್ಧ ಆಗುವುದು, ಸಮಾಧಾನಿತನಾಗುವುದು ಉಭಯವಾಗುವುದು ಮತ್ತು ಸಹ-ಅಸ್ತಿತ್ವವನ್ನು ನಿರಂತರ ಪ್ರಮಾಣೀಕರಿಸುವುದು. ಈ ಉದ್ದೇಶಗಳನ್ನು ಪೂರೈಸುವುದಕ್ಕಾಗಿ ಮಾಡುವ ಕಾರ್ಯಕ್ರಮಗಳು "ಮಾನವ ಜಾತಿ, ಮಾನವ ಧರ್ಮ ಒಂದೇ", ಎಂಬುವ ಆಧಾರದ ಮೇಲೆ ಆಗುತ್ತದೆ. ಸುಖ ಪಡೆಯುವ ರಸ್ತೆಯ ಹೆಸರೇ ಧರ್ಮ (ವ್ಯವಸ್ಥೆ). ಒಂದು ದೇಶ ಕಾಲದಲ್ಲಿ ಅರಿವುಳ್ಳವವರಾಗಿ ವ್ಯವಸ್ಥೆಯನ್ನು ಪ್ರಮಾಣೀಕರಿಸಬಹುದಾದರೆ ಪ್ರತ್ಯೇಕ ದೇಶ ಕಾಲದಲ್ಲಿ ಪ್ರಮಾಣೀಕರಿಸಬಹುದು ಎಂಬುವುದೇ ಈ ಪ್ರಸ್ತಾಪದ ಮಹಿಮೆ.

**ಜಯವಾಗಲಿ, ಮಂಗಳವಾಗಲಿ.**

# ಪ್ರಶ್ನೆ – ಉತ್ತರ

ಪುಸ್ತಕದ ಈ ಭಾಗದಲ್ಲಿ ಜೀವನ ವಿದ್ಯೆಯ ಪ್ರತಿ ಜಿಜ್ಞಾಸುಗಳ ಮನದಲ್ಲಿ ಉದಯವಾಗುವ ಪ್ರಶ್ನೆಗಳಿಂದ ಕೆಲವು ಮಹತ್ವಪೂರ್ಣ ಪ್ರಶ್ನೆಗಳ ಆಯ್ಕೆ ಮಾಡಿ ಪೂಜ್ಯ ಬಾಬಾಜಿರವರಿಂದ ಅವುಗಳ ಸಮಾಧಾನ ಬಯಸಲಾಗಿತು. ಬಾಬಾಜಿರವರಿಂದ ಪ್ರಸ್ತುತ ಸಮಾಧಾನ ಇಲ್ಲಿ ನೀಡಲಾಗಿದೆ.

**ಪ್ರಶ್ನೆ: ೧. ಭೌತಿಕವಸ್ತುಗಳ ಬೆಲೆ (ಮೌಲ್ಯ) ಇಲ್ಲವೇ?**

**ಉತ್ತರ –** ಭೌತಿಕ ವಸ್ತುಗಳ ಮೌಲ್ಯ ನಿಶ್ಚಿತವಾಗಿದೆ, ಒಂದು ಕಿಲೋ ಗೋದಿಯ ಮೌಲ್ಯ ನೂರು ವರ್ಷಗಳ ಮುಂಚೆ ಎನಿತ್ತೂ ಇವತ್ತಿಗೂ ಅದೇ ಮೌಲ್ಯವಿದೆ. ನಾವು ಇದರಲ್ಲಿ ಹಸ್ತಕ್ಷೇಪ ಮಾಡಿದಾಗ ಮೌಲ್ಯವನ್ನು ಕಡಿಮೆ ಮಾಡಿದೆವು (ರಾಸಾಯನಿಕ ಗೊಬ್ಬರವನ್ನು ಹಾಕಿ). ರಾಸಾಯನಿಕ ಗೊಬ್ಬರದ ಉಪಯೋಗದಿಂದ ಮನುಷ್ಯ ಸೋಮಾರಿ ಆದ ಮತ್ತು ಪ್ರಾಕೃತಿಕ ಗೊಬ್ಬರ ಮಾಡುವುದನ್ನೂ ನಿಲ್ಲಿಸಿದ ಮತ್ತು ಪ್ರಾಣಿಗಳ ಹತ್ಯವನ್ನು ಮಾಡಿ ಬಕ್ಷಿಸಿದ. ಪ್ರಾಣಿಗಳ ಹತ್ಯವನ್ನು ಮಾಡಿ ವಿದೇಶಕ್ಕೆ ಮಾರಾಟಮಾಡಿ ದುಡ್ಡು ಸಂಪಾದಿಸುತ್ತೆವೆಂದು ಹೇಳುತ್ತಾರೆ. ಇದು ಎಷ್ಟು ನಿಜ, ಎಷ್ಟು ವ್ಯವಹಾರಿಕ, ಎಷ್ಟು ಮನುಷ್ಯನಿಗೆ ಶುಭಕರ, ಯಾರು ಉತ್ತರ ನೀಡುತ್ತಾರೆ? ಸಮೃದ್ಧಿಗಾಗಿ ಭೌತಿಕ ವಸ್ತುಗಳ ಮೌಲ್ಯ ಆವಶ್ಯಕ, ಇದು ಮಾನವನ ಶ್ರಮೆ ನಿಯೋಜನೆಯ ಫಲನ. ಭೌತಿಕ ವಸ್ತುಗಳ ಉಪಯೋಗ ಮೂರ ಕಡೆಯಾಗುತ್ತದೆ ಶರೀರ ಪೋಷಣೆ, ಸಂರಕ್ಷಣೆ ಮತ್ತು ಸಮಾಜ ಗತಿಗಾಗಿ. ಸಂಪೂರ್ಣ ವಸ್ತುಗಳ ಉಪಯೋಗ ಮಾಡಬೇಕು ಇದಿಲ್ಲದೆ ಮಾನವನಿಗೆ ಸಂಪೂರ್ಣ ಸುಖ ಸಿಗುವುದೂ ಇಲ್ಲ.

**ಪ್ರಶ್ನೆ: ೨. ಮಾನವ ಧರ್ಮ ಎಂದರೇನು, ಮತ ಎಂದರೇನು?**

**ಉತ್ತರ –** ಎಲ್ಲ ಮಾನವರು ಸುಖಧರ್ಮಿಯರು, ಇದು ಸ್ಪಷ್ಟವಾಗದಿರುವುದರಿಂದಲೇ ಅನೇಕ 'ಮತ' ಗಳಿವೆ. ನಾನು ಎಷ್ಟು ವ್ಯವಸ್ಥೆಯಲ್ಲಿ ಬಾಳುತ್ತೇನೋ, ಇವತ್ತು ಎಷ್ಟು ಸುಂದರವಾಗಿ ಬಾಳುತ್ತೇನೋ ನಾಳೆ ಅದಕ್ಕಿಂತ ಅಧಿಕವಾಗಿ ಬಾಳಬಹುದು ಉತ್ತರೋತ್ತರ ಮತ್ತು ಅಧಿಕ ಸುಖಪೂರ್ವಕ ಬಾಳುವುದೇ 'ಧರ್ಮ'. ಸಮಸ್ಯೆಗಳ ಸಹಿತ ಸುಖವನ್ನು ಪಡೆಯಲು ಸಾಧ್ಯವಿಲ್ಲ, ಅರಿವು ಸಮಾಧಾನದ ಆಧಾರದ ಮೇಲೆ ಸುಖಿಯಾಗುವುದಾಗುತ್ತದೆ. ಭೌತಿಕ ವಸ್ತುಗಳ

ಆಧಾರದ ಮೇಲೆ ಸಮಾಧಾನ ಚಿಗುರಿ, ಸುಖ ಉಳ್ಳವವರಾಗುವುದಿಲ್ಲ. ಸಮಾಧಾನ, ಅರಿವು ನಮ್ಮ ಬುದ್ಧಿಯಲ್ಲಿ ಒಳಗೊಂಡಿದೆ. ಅರಿವಿನ ಆಧಾರದ ಮೇಲೆ ಭೌತಿಕ ವಸ್ತುಗಳನ್ನು ತಯಾರಿಸುವುದಾಗುತ್ತದೆ.

ನಾವು ಸಮಾಧಾನಿತರಾಗಿದ್ದು ನಮ್ಮ ಹತ್ತಿರ ಯಾವುದೇ ಭೌತಿಕ ವಸ್ತುವಿಲ್ಲ, ಇಂತಹ ಸ್ಥಿತಿ ಆಗಲು ಸಾಧ್ಯವಿಲ್ಲ. ಸಮಾಧಾನದ ಸಹಿತ ಭೌತಿಕ ವಸ್ತು ನಮ್ಮ ಸಂಮೃದ್ಧಿಯ ಅರ್ಥದಲ್ಲಿ ಒಳಗೊಂಡಿರುತ್ತದೆ, ಇದು ನಮ್ಮ ಪರಿವಾರದಲ್ಲಿ ಸ್ಪಷ್ಟವಾಗುತ್ತದೆ. ಈ ಸಂತುಲಿತ ವಿಧಿಯಿಂದ ನಾವು ಸುಖವನ್ನು ಪಡೆಯುವ ಮಾರ್ಗ ಪ್ರಶಸ್ತ ಮಾಡುತ್ತೇವೆ. ಈ ಆವಷ್ಯಕತೆಗಳನ್ನು ಧಾರ್ಮಿಕ ಅವಶ್ಯಕತೆಗಳೆಂದು ಹೇಳುತ್ತೇವೆ. ಇದುವರಗೆ ಯಾವುದೇ ಸಂಪ್ರದಾಯದ ರೂಢಿಗಳು, ಸಾರ್ವಭೌಮವಾಗಿಲ್ಲ ಮತ್ತು ಆಗುವುದೂ ಇಲ್ಲ. ಸಾರ್ವಭೌಮ ಒಂದೇ ಮಾತಿನದಾಗುತ್ತದೆ, ಮಾನವ ವ್ಯವಸ್ಥೆಯಲ್ಲಿ ಬಾಳುವುದು, ಸರ್ವಶುಭ, ಸುಖ. ಮಾನವನ ವ್ಯವಸ್ಥೆಯಲ್ಲಿ ಬಾಳುವುದು ವ್ಯವಸ್ಥೆಯಲ್ಲಿ ಭಾಗವಹಿಸುವುದು ನಮಗೆ ಅರಿವಾಗುತ್ತದೆ. ನಮ್ಮಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಈ ರೀತಿಯಲ್ಲಿ ನಾವು, ಮಾನವ ಧರ್ಮ ಸಮಾಧಾನವೆಂಬುವ ನಿಷ್ಕರ್ಶಕ್ಕೆ ಬರುತ್ತೇವೆ. ವ್ಯವಸ್ಥೆಯ ರೂಪದಲ್ಲಿ ಬಾಳುವುದೇ ಸಮಾಧಾನ. ವ್ಯವಸ್ಥೆಯ ರೂಪದಲ್ಲಿ ಬಾಳುವು ಫಲಸ್ವರೂಪ ನಾವು ನಿರಂತರ ಸಮಾಧಾನಿತವಾಗಿರುತ್ತೇವೆ ಮತ್ತು ನಿರಂತರ ಸುಖವುಳ್ಳವವರಾಗುತ್ತೇವೆ. ಜೀವನ ಸುಖವಾದರೆ ವ್ಯವಹಾರದಲ್ಲಿ ಸಮಾಧಾನ ಪ್ರಮಾಣೀಕರಿಸಬಹುದು. ವ್ಯವಹಾರದಲ್ಲಿ ಪ್ರಮಾಣೀಕರಿಸುವ ಕಾರಣವೇ ಮಾನವ ಸುಖವುಳ್ಳ ವವನಾಗಿದ್ದಾನೆ ಎಂಬುವುದನ್ನು ಸ್ವೀಕರಿಸುತ್ತೇವೆ.

ಮಾನವ ಅಖಂಡ ಸಮಾಜ ಸೂತ್ರ ವ್ಯಾಖ್ಯೆ ರೂಪದಲ್ಲಿ ಸ್ವಾಭಾವಿಕ ರೂಪದಲ್ಲಿ, ಕಪ್ಪಾಗಿರಲಿ, ಬಿಳಿಯಾಗಿರಲಿ, ಬಲಿಷ್ಟನಾಗಿರಲಿ, ನಿರ್ಬಲಿಯಾಗಿರಲಿ, ಧನಿಯಾಗಿರಲಿ, ದರಿದ್ರನಾಗಿರಲಿ, ಎಲ್ಲರೂ ಸುಖವನ್ನು ಪಡೆಯಲು ಬಯಸುತ್ತಾರೆ, ಇದರಲ್ಲೇನು ಎರಡು ಮತವಿಲ್ಲ. ಸುಖ ಉಳ್ಳವವರಾಗುವ ಪ್ರಕ್ರಿಯೆಯ ಬಗ್ಗೆ, ಇದುವರಗೆ ಇಂದ್ರಿಯ ಸಂವೇದನೆಯಲ್ಲಿ ಸುಖವನ್ನು ಹುಡುಕುವ ಮಾತು ಗತಕಾಲದಿಂದವಾಗಿದೆ ಆದರೆ ಅದರಿಂದ ಸಂಭವವಾಗಿಲ್ಲ. ಫಲಸ್ವರೂಪ ಅರಿವಿನ ಆಧಾರದ ಮೇಲೆ ಸುಖ ಪಡೆಯುವ ಮಾತು ಇವಾಗ ಸ್ಪಷ್ಟವಾಗಿದೆ. ಮಾನವ ಸ್ವಯಂನನ್ನು ಮತ್ತು ಅಸ್ತಿತ್ವವನ್ನು ಅರಿತುಕೊಳ್ಳುವುದೇ ಅರಿವು.

ಅಸ್ತಿತ್ವ ಒಂದು ಶಾಶ್ವತ ಸತ್ಯ, ಇದು ಕಡಿಮೆಯಾಗುವುದಿಲ್ಲ, ಹೆಚ್ಚಾಗುವುದಿಲ್ಲ, ಇದರ ಪ್ರಮಾಣವೇನು? ಇವಾಗ ನಮ್ಮ ಮುಂದಿರುವುದೆಲ್ಲಾ ವರ್ತಮಾನ. ವರ್ತಮಾನ ಸಮಾಪ್ತವಾಗುವುದಿಲ್ಲ, ನಿರಂತರವಿರುತ್ತದೆ. ಈ ಧರಣಿಯ ಮೇಲೆ ನಾಲ್ಕು ಅವಸ್ಥೆಗಳಿವೆಯೋ, ಒಂದೇ ಅವಸ್ಥೆಯಿದೆಯೋ, ಕನಿಷ್ಠ ಒಂದು ಅವಸ್ಥೆಯಿದ್ದೇ ಇರುತ್ತದೆ. ಭೌತಿಕ ವಸ್ತುಗಳು ನಿರಂತರವಿದ್ದೇ ಇರುತ್ತವೆ ಇವುಗಳ ನಾಶವಾಗುವುದಿಲ್ಲ. ಭೌತಿಕ ವಸ್ತುಗಳೆ ರಾಸಾಯನಿಕ ವಸ್ತುವಿನಲ್ಲಿ ಪ್ರಕಾಶಿತವಾಗುತ್ತವೆ ಇವನ್ನು ರಾಸಾಯನಿಕ ಉರ್ಮಿಯೆಂದು ಹೇಳುತ್ತೇವೆ. ಎರಡು ಪ್ರಕಾರದ ವಸ್ತು ಸೇರಿ ತಮ್ಮ ತಮ್ಮ ನಡತೆಯನ್ನು ತ್ಯಜಿಸಿ ಮೂರನೆಯ ಪ್ರಕಾರದ ನಡತೆಯನ್ನು ಮಾಡುವುದೇ ರಾಸಾಯನಿಕ ಉರ್ಮಿ. ರಾಸಾಯನಿಕ ಉರ್ಮಿವಶವೇ ಸಮಸ್ತ ಪ್ರಕಾರದ ಪ್ರಾಣಾವಸ್ಥೆಯ ವಸ್ತುಗಳು ನಿರ್ಮಿತವಾಗಿವೆ. ರಾಸಾಯನಿಕ

ವಸ್ತುವಿನಿಂದ ಪ್ರಾಣ ಕೋಶ, ಪ್ರಾಣ ಸೂತ್ರ, ರಚನೆ ವಿಧಿ ಮೂರೂ ತಮ್ಮಲ್ಲಿಯೇ ಸಂಪನ್ನವಾಗುತ್ತವೆ. ಇದರಲ್ಲಿ ಪ್ರಪಂಚದ ಯಾವುದೇ ಇಂಜಿನಿಯರ್, ಡಾಕ್ಟರ್, ಬುದ್ಧಿವಂತ ಮನುಷ್ಯನ ಕೊಡುಗೆ ಇಲ್ಲ. ಇದರರಿಂದ, ಅಸ್ತಿತ್ವದಲ್ಲಿ ವಿಕಾಸಕ್ರಮದ ಹಂತಗಳಿವೆ ಎಂದು ಕಂಡುಬರುತ್ತದೆ. ಮಾನವನೂ ವಿಕಾಸಕ್ರಮದಲ್ಲಿ ಒಂದು ಹಂತ. ಇದು ನಮೆಲ್ಲರಿಗೂ ಅರಿವಾಗುತ್ತದೆ. ಮಾನವನು ತನ್ನ ಕ್ರಮಾನುಸಾರ, ಕ್ರಿಯಾನುಸಾರ, ವಿಚಾರಾನುಸಾರ ವ್ಯವಸ್ಥೆಯಲ್ಲಿ ಬಾಳಲಾಗದಿದ್ದರೆ ಮಾನವನಿಗೆ ಬಾಳಲು ಅನುಕೂಲವಾಗಿ ಈ ಧರಣಿ ಇರುವುದಿಲ್ಲ, ಮಾನವನೂ ಸಮಾಪ್ತನಾಗುತ್ತಾನೆ. ಆದರೆ ಬಾಕಿ ಯಥಾವತ್ತಾಗಿ ಇರುತ್ತದೆ ಭೌತಿಕ ರಾಸಾಯನಿಕ ವಸ್ತುಗಳು ಹಾಗೆಯೇ ಇರುತ್ತವೆ, ಮಾನವ ಜಾತಿ ಮಾತ್ರ ನಾಶವಾಗಿ ಹೋಗುತ್ತದೆ. ಅಸ್ತಿತ್ವದಲ್ಲಿ ಯಾವುದೇ ಹಾನಿ ಅಥವಾ ಲಾಭವಿಲ್ಲ. ಅರ್ಥಾತ್ ಅಸ್ತಿತ್ವ ಕಡಿಮೆಯಾಗುವುದಿಲ್ಲ, ಹೆಚ್ಚೂ ಆಗುವುದಿಲ್ಲ. ಅಸ್ತಿತ್ವದಲ್ಲಿ ನಾಲ್ಕು ಅವಸ್ಥೆಗಳು ನಿರಂತರವಿರುತ್ತವ್ವೆ, ಇದು ಅಸ್ತಿತ್ವ ಸಹಜ ಕ್ರಿಯೆ. ನಾಲ್ಕೂ ಅವಸ್ಥೆಗಳು ಈ ಧರಣಿಯ ಮೇಲಿಲ್ಲದ್ದಿದ್ದರೆ ಬೇರೆ ಧರಣಿಯ ಮೇಲಿರುತ್ತದೆ. ಈ ಧರಣಿಯನ್ನು ಮಾನವನು ವಾಸಿಸಲು ಯೋಗ್ಯವಾಗದೇ ಇರುವಂತೆ ಮಾಡುವುದನ್ನು ವಿಕಾಸವೆಂದು ಮಾನವನು ಅರಿತುಕೊಂಡಿದ್ದಾನೆ ಇದಕ್ಕಿಂತ ಕಲ್ಲಿನಂತಹ ಮೆದುಳು ಇರಲು ಸಾಧ್ಯವೇ? ಬಹಳಷ್ಟು ಜನರು ಈ ರೀತಿಯ ಅಡಚಣೆಯನ್ನು ಹುಟ್ಟಿಸುವಂತಹ ಮಾನವರನ್ನು, ದೇಶವನ್ನು, ಸಮುದಾಯವನ್ನು ವಿಕಸಿತವೆಂದು ನಂಬುತ್ತಾರೆ. ಇದು ಯೋಚಿಸುವಂತಹ ಬಿಂದು. ನಾವು ಇಂದು ಬಂದು ಸೇರಿರಿವ ಸ್ಥಳದಲ್ಲಿ, ನಮ್ಮ ಕೃತ್ಯಗಳಿಂದಲೇ ನಾವು ಸಿಕ್ಕಿಕೊಂಡಿದ್ದೇವೆ. ಸಿಕ್ಕಿಕೊಂಡ ಜಾಗದಿಂದ ಬಿಡಿಸಿಕೊಳ್ಳುವ ಆವಶ್ಯಕತೆಯೂ ಇದೆ. ಇದರ ಪ್ರಸ್ತಾಪ ನಿಮ್ಮ ಮುಂದೆ ಪ್ರಸ್ತುತವಾಗಿದೆ. ಇದರ ಮೇಲೆ ವಿಹಾರ ಮಾಡುವ ಆವಶ್ಯಕತೆ ಇದೆ. ನಿಮ್ಮ ಸೌಜನ್ಯತೆಯೇ ಇದರ ಆಧಾರ. ಮಾನವ ಸ್ವಯಂಸ್ಫೂರ್ತ ವಿಧಿಯಿಂದ ಶುಭ, ಅಶುಭ ಪ್ರವೃತ್ತಿಗಳಲ್ಲಿ ಬಾಳುತ್ತಾನೆ. ಶುಭ ಪ್ರವೃತ್ತಿಯ ದಿಕ್ಕಿನಲ್ಲಿ ದಾರಿಯಿಲ್ಲದಿರುವಾಗ ಅಶುಭ ಪ್ರವೃತ್ತಿಯ ದಿಕ್ಕಿನ್ನಲ್ಲಿ ಓಡುತ್ತಾನೆ. ಶುಭದ ದಿಕ್ಕಿನಲ್ಲಿ ನಡೆಯಲು ಪ್ರಸ್ತಾಪವಿದೆ, ಇದರ ಶೋಧನೆ ಮಾಡುವ ಆವಶ್ಯಕತೆಯಿದೆ. ಮೊದಲನೆಯದಾಗಿ - ಮನುಷ್ಯ ಹೇಗೆ ಇರಲಿ, ಮಾನವೀಯ ಚಾರಿತ್ರ್ಯ ಒಂದೇ. ಮಾನವೀಯ ಚಾರಿತ್ರ್ಯದ ಸ್ವರೂಪ - ಸ್ವಧನ, ಸ್ವನಾರಿ / ಸ್ವಪುರುಷ, ದಯೆಪೂರ್ಣ ಕಾರ್ಯ ವ್ಯವಹಾರದ ರೂಪದಲ್ಲಿರುತ್ತದೆ.

ಎರಡನೆಯದಾಗಿ - ಸಂಬಂಧಗಳ ಗುರುತಿನಿಂದ ಮೌಲ್ಯಗಳು ಹರಿಯುತ್ತವೆ. ಸಂಬಂಧಗಳ ಗುರುತು, ಮೌಲ್ಯಗಳ ನಿರ್ವಹಣೆ, ಮೌಲೀಕರಣೆ, ಉಭಯ ತೃಪ್ತಿ, ಇದು ದೊರಕಿದಾಗ ಮೌಲ್ಯಗಳ ನಿರ್ವಹಣೆ ಆಯಿತೆಂದು ನಾನು ಅರಿತುಕೊಂಡಿದ್ದೇನೆ.

ಮೂರನೆಯದಾಗಿ - ಮೂರನೆಯ ವಿಧಿಯಲ್ಲಿ ನಮ್ಮ ತನ, ಮನ, ಧನ ರೂಪಿ ಅರ್ಥದ ಸದುಪಯೋಗ ಮಾಡುತ್ತಾ ರಕ್ಷಣೆ ಮಾಡಿದಾಗಲೇ ನಾವು ನೈತಿಕರಾಗುತ್ತೇವೆ.

ಈ ರೀತಿಯಲ್ಲಿ ನೈತಿಕ ಮಾನವ, ಮೌಲ್ಯ ಸಂಪನ್ನ ಮಾನವ, ಚಾರಿತ್ರ್ಯ ಮಾನವ, ಈ ಮೂರೂ ಸೇರಿ ಮಾನವೀಯ ನಡತೆ ಆಗುತ್ತದೆ. ವ್ಯವಸ್ಥೆಯಲ್ಲಿ ಬಾಳುವುದಕ್ಕಾಗಿ ಇವುಗಳೇ ಆಧಾರ. ಇದೇ ಸೂತ್ರ, ಪರಿವಾರದಲ್ಲಿ,

ಸಮಾಜದಲ್ಲಿ, ವ್ಯವಸ್ಥೆಯಲ್ಲಿ, ವ್ಯವಸಾಯದಲ್ಲಿ, ಪ್ರಕೃತಿಯಲ್ಲಿ, ಎಲ್ಲ ಸ್ತರಗಳಲ್ಲಿಯೂ ಈ ನಡತೆಯನ್ನು ವ್ಯಾಖ್ಯಾಯಿತ ಮಾಡುವುದರಿಂದ, ಅನ್ವಯಿಸುವುದರಿಂದ ಮಾನವೀಯ ಸಂವಿಧಾನ ನನಗೆ ಗ್ರಹಿಕೆ ಆಯಿತು. ಮಾನವೀಯ ನಡತೆಯೇ ರಾಷ್ಟ್ರೀಯ ಚಾರಿತ್ರ್ಯದ ರೂಪದಲ್ಲಿ ವೈಭವಿತವಾಗುತ್ತದೆ. ಗತಕಾಲದಲ್ಲಿ ಧಾರ್ಮಿಕ ರಾಜ್ಯನೀತಿ, ಆರ್ಥಿಕ ರಾಜ್ಯನೀತಿಯ ಬಗೆ ಯೋಚಿಸಿರುವುದೂ ಪರಾಭವಿತವಾಯಿತು. ನಾವು ಯಾವಾಗಲಾದರೂ ವಿಕಲ್ಪವನ್ನು ಹುಡುಕಲೇ ಬೇಕು. ಇದಕ್ಕಾಗಿ ಪ್ರಸ್ತಾಪ, ರಾಷ್ಟ್ರೀಯ ಚಾರಿತ್ರ್ಯದ ಆಧಾರ ಬಿಂದು ಮಾನವೀಯತೆ ಪೂರ್ಣ ನಡತೆಯೇ. ಇದನ್ನು ಅರಿತುಕೊಳ್ಳುವುದಕ್ಕಾಗಿ ಮಾನವನಿಗೆ ಯಾವುದೇ ದೇಶ ಕಾಲದಲ್ಲಿ ಕಷ್ಟವಾಗುವುದಿಲ್ಲ. ಮಾನವೀಯತೆ ಪೂರ್ಣ ನಡತೆಯ ಸುಖವನ್ನು ಒಂದು ಸಲ ಆಸ್ವಾದಿಸುವು ಆವಶ್ಯಕತೆಯಿದೆ. ಈ ರೀತಿಯಲ್ಲಿ ಮಾನವೀಯತೆ ಪೂರ್ಣ ನಡತೆ, ಮಾನವೀಯ ಆಚಾರ ಸಂಹಿತ ರೂಪದಲ್ಲಿರುವ ಸಂವಿಧಾನದ ವ್ಯಾಖ್ಯೆ ನಾವು ನೀಡುತ್ತೇವೆ. ಅದೇ ಸಮಾಜಶಾಸ್ತ್ರದ ರೂಪದಲ್ಲಿ ನಮಗೆ ಪ್ರಾಪ್ತವಾಗಿದೆ. ಶಿಕ್ಷಣದಲ್ಲಿ ಮಾನವೀಯತೆ ಪೂರ್ಣ ಸಮಾಜ ಶಾಸ್ತ್ರವನ್ನು ಒಳಗೊಳ್ಳಿಸುವ ಆವಶ್ಯಕತೆಯಿದೆ. ಮಾನವ ಹೇಗೆ ಅರಿವುಳ್ಳವನಾಗುತ್ತಾನೆ, ಮಾನವೀಯತೆಪೂರ್ಣ ಮಾನವನ ವೈಭವವೇನು? ಮಾನವೀಯತೆಪೂರ್ಣ ಮಾನವ ಪರಿವಾರದಲ್ಲಿ, ಸಮಾಜದಲ್ಲಿ, ವ್ಯವಸ್ಥೆಯಲ್ಲಿ ಹೇಗೆ ಬಾಳುತ್ತಾನೆ ಇದು ಸಂಪೂರ್ಣವಾದ ಸಮಾಜ ಶಾಸ್ತ್ರ, ಇದನ್ನು ಅಧ್ಯಯನ ಮಾಡುವ ಆವಶ್ಯಕತೆಯಿದೆ. ಮಾನವ, ಬಹಳ ಒಳ್ಳೆ ರೀತಿಯಲ್ಲಿ ವರ್ತಮಾನದಲ್ಲಿ ವಿಶ್ವಾಸವಿಟ್ಟು ಬಾಳಬಹುದು. ಅಸ್ತಿತ್ವ ಹೆಚ್ಚು ಅಥವಾ ಕಡಿಮೆಯಾಗುವುದಿಲ್ಲ, ಈ ರೂಪದಲ್ಲಿ ಅಸ್ತಿತ್ವವನ್ನು ಗುರುತಿಸಬಹುದು. ಸತ್ವದಲ್ಲಿ ಸಂಪೃಕ್ತ ಪ್ರಕೃತಿಯೇ ಅಸ್ತಿತ್ವ.

ವರ್ತಮಾನ ಯಂದಿಗೂ ನಷ್ಟವಾಗುವುದಿಲ್ಲ. ನಾವು ನಮ್ಮ ಬುದ್ಧಿಯಿಂದ ವರ್ತಮಾನದಿಂದ ಅಸಂತುಷ್ಟವಾಗಿ ಬಾಳುವುದಾಗುತ್ತದೆ, ಏಕೆಂದರೆ ವ್ಯವಸ್ಥೆಯಲ್ಲಿ ಬಳಲಾಗದೆ ಭೂತಕಾಲದಲ್ಲಿ ಬಾಳುತ್ತೇವೆ, ಇದರಿಂದ ಕುಂಠಿತವಾಗಿ, ಪೀಡಿತರಾಗುತ್ತೇವೆ. ಭವಿಷ್ಯದಲ್ಲಿ ಬಾಳಿದರೂ ಕುಂಠಿತರಾಗುತ್ತೇವೆ, ಪೀಡಿತರಾಗುತ್ತೇವೆ. ಅಸ್ತಿತ್ವದಲ್ಲಿ ಅವ್ಯವಸ್ಥೆ ಎಂಬುವು ವಸ್ತು ಇಲ್ಲ. ಅಸ್ತಿತ್ವ ಸಂಪೂರ್ಣವಾಗಿ ವ್ಯವಸ್ಥೆಯೇ ಆಗಿದೆ. ಮಾನವ ಯಾವುದೇ ವಸ್ತುವನ್ನೂ ತಯಾರಿಸಲು ಪ್ರಯತ್ನಿಸುತ್ತಾನೋ ಅದನ್ನು ಹಾಳು ಮಾಡುತ್ತಾನೆ. ಯಂತ್ರವನ್ನು ತಯಾರಿಸಿದರೆ ಅದು ಹಾಳು ಆಗೇ ಆಗುತ್ತದೆ, ಮನೆ ಮಾಡಿದರೆ ಅದು ಹಾಳಾಗೇ ಆಗುತ್ತದೆ. ಆದರೆ ಮೂಲ ವಸ್ತುವಿನ ನಾಶವಾಗುವುದಿಲ್ಲ. ಆದ್ದರಿಂದ ಮನೆ ಹಾಳಾದರೆ ಪುನಃ ಕಟ್ಟುತ್ತಾನೆ. ನಮ್ಮ ಹತ್ತಿರ ಶ್ರಮೆ ನಿಯೋಜನೆಗಾಗಿ ವಸ್ತುವಿದ್ದೇ ಇದೆ. ಜೀವನದಲ್ಲಿ ಅಕ್ಷಯ ಬಲವಿದ್ದೇ ಇದೆ, ನಮ್ಮ ಅಕ್ಷಯ ಶಕ್ತಿಗಳನ್ನು ಶರೀರದ ಪೋಷಣೆ ಸಂರಕ್ಷಣೆ ಮತ್ತು ಸಮಾಜಗತಿಗಾಗಿ ನಾವು ನಿಯೋಜಿತ ಮಾಡುತ್ತೇವೆ, ಇದಕ್ಕೆ ಸಮೃದ್ಧಿಯೆಂದು ಹೇಳುತ್ತೇವೆ. ನಮ್ಮ ಅವಶ್ಯಕತೆ, ದಿನದಲ್ಲಿ ಒಂದು ಬಾರಿ ಫೋನ್ ಮಾಡುವುದು. ಫೋನ್ ಇಪ್ಪತ್ತು ನಾಲ್ಕು ಗಂಟೆ ನಮ್ಮ ಹತ್ತಿರವಿರುತ್ತದೆ, ಇದು ಸಮೃದ್ಧಿ. ನಾವು, ದಿನದಲ್ಲಿ ಒಂದು ಬಾರಿ ಎಲ್ಲಾದರು ಹೋಗಬೇಕಾಗಿರುತ್ತದೆ. ಮನೆಯಲ್ಲಿ ಸೈಕಲ್ಲು ಇಡೀ ದಿನವಿರುತ್ತದೆ, ಇದನ್ನು ಸಮೃದ್ಧಿ ಎಂದು ಹೇಳದೆ ಬೇರೇನು ಹೇಳುವುದು. ಒಂದು ಕ್ವಿಂಟಲು ಅಕ್ಕಿಯ ಅವಶ್ಯಕತೆಯಿದ್ದು, ಇಪತ್ತು ಕ್ವಿಂಟಲು ಅಕ್ಕಿಯನ್ನು ಬೆಳೆಸಿದರೆ, ಇದೇ ಸಮೃದ್ಧಿ. ಈ ಉದಾಹರಣೆಗಳಿಂದ,

ಸ್ರೋತವನ್ನು ಕಾಪಾಡುವ ಸಾಧನಗಳು ಅಧಿಕ, ಆವಶ್ಯಕತೆ ಕಡಿಮೆ, ಎನ್ನುವುದು ತಿಳಿಯುತ್ತದೆ. ನಾವು ಎಲ್ಲಾ ಆಯಾಮಗಳಲ್ಲಿ ಸಮೃದ್ಧಿಯನ್ನು ಅನುಭವಿಸುತ್ತೇವೆ, ಸಮೃದ್ಧಿಯನ್ನು ಅನುಭವಿಸುವುದು ಒಂದು ಅವಶ್ಯಕತೆ. ಭೌತಿಕ ಪ್ರಪಂಚದ ಉಪಯೋಗವೇನಾದರು ಇದ್ದರೆ ಮಾನವ ಸಮೃದ್ಧಿಯನ್ನು ಅನುಭವಿಸುವುದಕ್ಕಾಗಿಯೇ. ಸಮೃದ್ಧಿಯನ್ನು ಅನುಭವಿಸಲು ಒಂದೇ ಉಪಾಯ, ಪರಿವಾರದ ಆವಶ್ಯಕತೆಗಿಂತ ಅಧಿಕ ಉತ್ಪಾದನೆ ಮಾಡುವುದು. ಇದೇ ಸಮೃದ್ಧಿ-ಸಮಾಧಾನ. ಸಮೃದ್ಧಿಯ ಸಹಿತ ವ್ಯವಸ್ಥೆಯಲ್ಲಿ ಬಾಳುವುದರಿಂದ ಸಮಾಧಾನದ ನಿರಂತರತೆಯಿರುತ್ತದೆ. ಅರಿವಿನ ನಂತರ, ಸಮಾಧಾನದ ನಂತರ ಅರಿವು ನಿತ್ಯ ನಮ್ಮಲ್ಲಿರುತ್ತದೆ. ಇದಕ್ಕಾಗಿ ಎಲ್ಲಿಯೂ ಓಡಬೇಕಾಗಿಲ್ಲ. ಇದೇ ಸುಸ್ವಾದದ ಆಧಾರ. ಸಮಸ್ಯೆ ಧ್ಯಾನಕ್ಕೆ ಬಂದಾಗಲೆಲ್ಲ ಸುಸ್ವಾದಿಸಲಾಗುವುದಿಲ್ಲ. ಈ ರೀತಿಯಲ್ಲಿ ಸಮಾಧಾನದ ಆಧಾರದ ಮೇಲೆ ಅರಿವು, ಶ್ರಮ ನಿಯೋಜನೆಯ ಆಧಾರದ ಮೇಲೆ ಸಮೃದ್ಧಿ ಹಾಗು ಸಹ-ಅಸ್ತಿತ್ವದ ಸಹಿತ ವ್ಯವಸ್ಥೆಯಲ್ಲಿ ಬಾಳುವುದರಿಂದ ಅಭಯದ ಅನುಭವವಾಗುತ್ತದೆ. ನಾನು ಇದನ್ನು ಈ ರೀತಿಯಲ್ಲಿ ನೋಡಿದ್ದೇನೆ, ಅರಿತುಕೊಂಡಿದ್ದೇನೆ, ಬಾಳಿದ್ದೇನೆ ಮತ್ತು ನಿಮ್ಮನ್ನೂ ಅರಿವುಗೊಳಿಸುವುದರಲ್ಲಿ ಸಮರ್ಥನಾಗಿದ್ದೇನೆ.

ನ್ಯಾಯ = ಅಖಂಡ ಸಮಾಜ ಸಾರ್ವಭೌಮ ವ್ಯವಸ್ಥೆಯಲ್ಲಿ ಬಾಳಲು ಯೋಗ್ಯರಾಗುತ್ತೇವೆ. ಸತ್ಯ = ಪ್ರಾಮಾಣಿಕರಾಗಲು ಯೋಗ್ಯರಾಗುತ್ತೇವೆ.

ಪ್ರಾಮಾಣಿಕರಾಗುವ ಅರ್ಥ, ನಾವು ಅರಿತಿರುವುದನ್ನು ಮತ್ತವರಿಗೂ ಅರಿವುಪಡಿಸಬಹುದು. ಅರಿವುಗಾಗಿ ಮಾತ್ರ ಒಂದೇ ಸೂತ್ರ, ವ್ಯವಸ್ಥೆಯಲ್ಲಿ ಬಾಳುವುದನ್ನು ಅರಿತುಕೊಳ್ಳುವುದು, ನ್ಯಾಯವನ್ನು ಅರಿತುಕೊಳ್ಳುವುದು ಮತ್ತು ಮಾನವನನ್ನು ಅರಿತುಕೊಳುವುದೇ. ಇದನ್ನು ಅರಿತುಕೊಳ್ಳುವ ವಿಧಿಯಲ್ಲಿರುವ ಸಫಲ ವ್ಯಕ್ತಿಗಳಲ್ಲಿ ನಾನು ಒಬ್ಬ.

ಅನುಭವದ ಫಲಸ್ವರೂಪ ಪ್ರಾಮಾಣಿಕತೆ ಬರುತ್ತದೆ. ಅನಭವವೆಂದರೇನು? ನಾವು ನಂಬಿರುತ್ತೇವೆ, ಆದರೆ ತಿಳಿವಳಿಕೆ ಇಲ್ಲದಿದ್ದರೆ ತೃಪ್ತಿ ಸಿಗುವುದಿಲ್ಲ. ತಿಳಿವಳಿಕೆ ಇದ್ದು, ನಂಬಿಕೆಯಿಲ್ಲದಿದ್ದರೂ ತೃಪ್ತಿ ಸಿಗುವುದಿಲ್ಲ. ತಿಳಿವಳಿಕೆ, ನಂಬಿಕೆಯ ತೃಪ್ತಿ ಸಿಗುವುದರಿಂದ, ಗುರುತಿಸುವುದು, ನಿರ್ವಹಿಸುವುದರಲ್ಲಿ ತೃಪ್ತಿ ಸಿಗುತ್ತದೆ. ಇದುವರೆಗು ನಾವು ಗುರುತಿಸುವುದು, ನಿರ್ವಹಿಸುವುದರ ಕ್ರಮ ಕೈಗೊಂಡಿದ್ದೇವೆ, ನಮಗೆ ತೃಪ್ತಿ ಸಿಕ್ಕಿಲ್ಲ, ಏಕೆಂದರೆ ತಿಳಿವಳಿಕೆ, ನಂಬಿಕೆ ಇರಲಿಲ್ಲ. ತೃಪ್ತಿ ಬಿಂದುವನ್ನು ಹೇಗೆ ಗುರುತಿಸುವುದು? ಅರಿವಿನಲ್ಲಿ ಪಾರಂಗತವಾಗುವುದೇ ಅನುಭವ ಮೂಲಕ ವಿಧಿಯಿಂದ ಚಿಂತನದ ಆಧಾರದ ಮೇಲಾಗುವ ಬೋಧಕ್ಕೆ, ಸಾಕ್ಷಾತ್ಕಾರ ಕ್ರಿಯೆಯ ಸಹಿತ ನಮ್ಮಲ್ಲಿ ನಿರಂತರವಾಗುವುದು ಪ್ರಾರಂಭವಾದರೆ ಅದರ ತೃಪ್ತಿ ಬಿಂದು ಸಿಗುತ್ತದೆ, ಪ್ರಾಮಾಣಿಕತೆಯ ಜೊತೆ ತೃಪ್ತಿ ಬಿಂದು ಕ್ಕೇ ಸಿಗುತ್ತದೆ, ಪ್ರಾಮಾಣಿಕತೆ ಸ್ವಯಂನಲ್ಲಿ ಪ್ರಮಾಣ. ಈ ರೀತಿಯಲ್ಲಿ ಅನುಭವವನ್ನು ಸಂಪ್ರೇಷಿತ ಮಾಡುವುದರಲ್ಲಿ ಸಮರ್ಥರಾಗುತ್ತೇವೆ. ಫಲಸ್ವರೂಪ ಅನುಭವವನ್ನು ಮಾನವ ಪರಂಪರೆಯಲ್ಲಿ ಸಂಪ್ರೇಷಿತ, ಅಭಿವ್ಯಕ್ತ ಮಾಡಿ ತಮ್ಮಲ್ಲಿಯೇ ತೃಪ್ತಿ ಪಡೆಯುತ್ತೇವೆ, ಇದೇ ನಮ್ಮ ಧನ. ನನ್ನ ಅನುಭವವನ್ನು ನಾನು ನಿಮಗೆ ಸಂಪ್ರೇಷಿತ ಮಾಡಿದಾಗ, ನಾನು ತೃಪ್ತನಾಗುತ್ತೇನೆ, ಇದೇ ನನ್ನ ಧನ. ನೀವು ಅರಿತುಕೊಂಡರೆ, ಇದು ಇನ್ನೂ

ಉತ್ಸವದ ಕಾರಣ, ನೀವು ಅರಿತುಕೊಳ್ಳದಿದ್ದರೆ ನನ್ನ ತೃಪ್ತಿ ನನ್ನ ಹತ್ತಿರ ಇದ್ದೇ ಇದೆ. ಅನುಭವವನ್ನು ನಾವು ನಿತ್ಯ ಸಂಪ್ರೇಷಿತ ಮಾಡಬಹುದು. ಇಂದಿನ ವರೆಗೂ ಇರುವ ಆದರ್ಶವಾದ ವಿಚಾರದ ಅನುಸಾರ ಅನುಭವವನ್ನು ನಾವು ಹೇಳಲಾಗುವುದಿಲ್ಲ. ಜೀವನವನ್ನು ಗುರುತಿಸಿರುವ ಆಧಾರದ ಮೇಲೆ ಅರಿವಾಯಿತು, ಜೀವನದಲ್ಲಿ ಅನುಭವ ಒಂದು ಸ್ವಾಭಾವಿಕ ಕ್ರಿಯೆ. ಅನುಭವವನ್ನು ಪ್ರಮಾಣೀಕರಿಸುವುದು ಪರಂಪರೆಯಲ್ಲಿಯೇ ಸಂಭವ, ಇದರಲ್ಲಿ ಯಾವುದೇ ಭೌತಿಕ ದ್ರವ್ಯದ ಆವಶ್ಯಕತೆಯಿಲ್ಲ, ಕೇವಲ ಅರಿವಿನ ಆವಶ್ಯಕತೆಯಿದೆ. ತಿಳಿವಳಿಕೆ, ನಂಬಿಕೆಯ ಕ್ರಿಯೆಗಳು ಜೀವನಗತ. ಸಂವೇದನೆಯ ಆಧಾರದ ಮೇಲೆ ಇಲ್ಲದೆಯಿರುವುದರಿಂದ ಇದರಲ್ಲಿ ಭೌತಿಕ ದ್ರವ್ಯಗಳ ಅವಶ್ಯಕತೆ ಇಲ್ಲ, ವ್ಯವಸ್ಥೆಯಲ್ಲಿ ಬಾಳುವ ಸ್ಥಳದಲ್ಲಿ ಗುರುತಿಸುವ, ನಂಬುವ ಕ್ರಿಯೆಗಳಿವೆ. ಗುರುತಿಸುವ ನಿರ್ವಹಿಸುವ ಕ್ರಮದಲ್ಲಿ ನಾವು ಮಾನವನ ಸಹಿತವಿರುತ್ತೇವೆ. ಅನುಭವದಲ್ಲಿ ಮನದ ನಿಯೋಜನೆಯಿಲ್ಲ. ನೇರವಾಗಿ ಮನದ ಉತ್ಸವವಾಗುತ್ತದೆ. ಮನ ಅನುಭವದಲ್ಲಿ ಉತ್ಸವಿತವಾಗಿ ಪ್ರಪಂಚಕ್ಕೆ ತಿಳಿಸುತ್ತದೆ. ಉತ್ಸವಿತವಾಗಿರುವುದಕ್ಕಾಗಿ ಆತ್ಮವೇ ಮೂಲ ತತ್ವ. ಆತ್ಮದ ಮಹಿಮೆಯೇ ಮುಗ್ಧವಾಗಿರುವುದು ಮತ್ತು ಉತ್ಸವಿತವಾಗಿರುವ ವಸ್ತು. ಅನುಭವದ ವಸ್ತು. ಫಲಸ್ವರೂಪ ಮನ ಮಾನವನನ್ನು ಅರ್ಪಿಸುತ್ತದೆ. ಎಷ್ಟು ಉತ್ಸವಿತವಾಗಿರುತ್ತದೆ ಎಂದರೆ ಅರ್ಪಿಸಲೇ ಬೇಕಾಗುತ್ತದೆ. ನಾವು ಬಹಳ ವಸ್ತುಗಳನ್ನು ಪ್ರಾಪ್ತಿಸಿದಾಗ ಅದನ್ನು ಅರ್ಪಿಸುತ್ತೇವೆ. ಇದೇ ರೀತಿಯಲ್ಲಿ, ಇಷ್ಟು ದೊಡ್ಡ ಸಂಪತ್ತಾದ ಅನುಭವವನ್ನು ಮನಸ್ಸು ಸಂಭಾಳಿಸಲು ಆಗುವುದಿಲ್ಲ. ಫಲಸ್ವರೂಪ ಅನುಭವವನ್ನು ವ್ಯಕ್ತ ಪಡಿಸಲು ಪ್ರಾರಂಭಿಸುತ್ತದೆ.

ಹೀಗೆ ನಾನು ನೋಡಿದ್ದೇನೆ, ಅರಿತುಕೊಂಡಿದ್ದೇನೆ, ಅನುಭವಿಸಿದ್ದೇನೆ. ಆದರೆ ಗತ ಕಾಲದಿಂದ ನಮ್ಮ ಹಿರಿಯರು ಹೇಳುತ್ತಾ ಬಂದಿದ್ದಾರೆ, ಅನುಭವವನ್ನು ಹೇಳಲಾಗುವುದಿಲ್ಲ ಎಂದು. ಇದನ್ನು ನಂಬುವುದಾದರೆ, ಇದರ ಅಧ್ಯಯನ ಮಾಡಬೇಕು. ಮಾನವನ ಇಚ್ಛೆಯಿಂದ ಅನಭವವನ್ನು ಹೇಳಬಹುದು, ಪ್ರಕಾಶಿತ ಮಾಡಬಹುದು, ಇದೇ ನಿಷ್ಪನ್ನವಾಗುತ್ತದೆ. ಘಟನೆಯ ರೂಪದಲ್ಲಿ ಇದು ಸಮ್ಮುಖವಾಗಿದೆ.

ಅನುಭವದ ನಂತರ ಅನುಭವದ ಪ್ರಮಾಣಗಳ ರೂಪದಲ್ಲಿ ಪ್ರಸ್ತುತ ಪಡೆಸುವ ಕ್ರಮ ಬರುತ್ತದೆ. ಇದುವರಗೆ ಪ್ರಮಾಣದ ರೂಪದಲ್ಲಿ ಪ್ರಸ್ತುತವಾಗಿದೆ ಯಂತ್ರ ಪ್ರಮಾಣ ಮತ್ತು ಪುಸ್ತಕ ಪ್ರಮಾಣ. ಸತ್ಯವನ್ನು ಪ್ರಮಾಣೀಕರಿಸಿರುವಂತಹ ಪ್ರಮಾಣ ಇದುವರಗೆ ಆಗಿಲ್ಲ. ಯಂತ್ರ ಪ್ರಮಾಣ ಪರಿವರ್ತನಶೀಲ, ಇದು ಸತ್ಯ. ವೈಜ್ಞಾನಿಕರು ಸ್ವಯಂ ಹೇಳುತ್ತಾರೆ ಇದು ಅಂತಿಮ ಸತ್ಯ, ಮೊದಲನೆಯ ಸತ್ಯ, ಮಧ್ಯದ ಸತ್ಯ, ಸಮೀಪದ ಸತ್ಯ, ದೂರದ ಸತ್ಯ, ಇವನೆಲ್ಲಾ ಹೇಗೆ ಅರಿತುಕೊಳ್ಳುವುದೆಂಬುವುದೇ ಒಂದು ದೊಡ್ಡ ದ್ವಂದ್ವ. ಸತ್ಯವೂ ಇರುತ್ತದೆ ಅಸತ್ಯವೂ ಇರುತ್ತದೆ. ಅಸತ್ಯದ ಅರ್ಥ ಮಾನವ ಭ್ರಮೆಯಲ್ಲಿರುತ್ತಾನೆ. ಅಸತ್ಯ ಎಂಬುವ ಹೆಸರಿನ ವಸ್ತು ಅಸ್ತಿತ್ವದಲ್ಲಿ ತಯ್ಯರಿಸಲಾಗಿಲ್ಲ. ನಮ್ಮ ಅರಿವಿಲ್ಲದೇ ಇರುವ ಸ್ಥಿತಿಗೆ, ಭ್ರಮೆಗೆ, ಅಸತ್ಯವೆನ್ನಬಹುದು. ಸತ್ಯದ ಅಸ್ತಿತ್ವವೇ ಸರ್ವಸ್ವ, ಸತ್ಯ ಯಾವತ್ತೂ ಹೆಚ್ಚಾಗುವುದಿಲ್ಲ, ಕಡಿಮೆಯಾಗುವುದಿಲ್ಲ. ಮೊದಲನೆಯ ಸತ್ಯ, ಸಹ-ಅಸ್ತಿತ್ವ ರೂಪದಲ್ಲಿ ಅಂತಿಮ ಸತ್ಯವೆನ್ನುವುದೇನು ಇಲ್ಲ. ಕೇವಲ ನಿರಂತರ ಸತ್ಯವೇ ಇರುತ್ತದೆ. ಈ ಸತ್ಯವನ್ನು ನಾವು

ಅರಿತುಕೊಂಡಿರುವುದಿಲ್ಲ, ಇದೇ ಭ್ರಮೆಯ ಸ್ಥಿತಿ ಮಾನವನ ಸಹಿತವಿರುತ್ತದೆ. ಅರಿವಿನ ಸಹಿತವೇ ಸತ್ಯ ಅರಿವಾಗುತ್ತದೆ. ಸಹ-ಅಸ್ತಿತ್ವದಿಂದ ಅರಿತುಕೊಳ್ಳುವುದೇ ಪರಮ ಸತ್ಯ.

ಅಸ್ತಿತ್ವ ಅರಿವಾಗುವುದರ ಫಲವೇ ಅಸ್ತಿತ್ವ ಸ್ವಯಂ ವ್ಯವಸ್ಥೆಯಲ್ಲಿದೆ. ಅಸ್ತಿತ್ವ ಸ್ವಯಂ ವ್ಯವಸ್ಥೆಯ ರೂಪದಲ್ಲಿರುವಾಗ ಮಾನವ ವ್ಯವಸ್ಥೆಯ ರೂಪದಲ್ಲಾಗುವುದಕ್ಕಾಗಿ ಪ್ರವರ್ತನಶೀಲವಾಗುವುದು ಸ್ವಭಾವಿಕ. ಮಾನವ ಧರ್ಮ ಒಂದೇ ವ್ಯವಸ್ಥೆಯಲ್ಲಿ ಬಾಳುವುದೇ ಸಾರ್ವ್ವಭೌಮತೆ ಎಂದು ತಿಳಿಯಿತು. ಮಾನವ ಧರ್ಮದ ಸಾರ್ಥಕತೆ ವ್ಯವಸ್ಥೆಯಲ್ಲಿ ಬಾಳುವುದೇ. ವರ್ತಮಾನದಲ್ಲಿ ವಿಶ್ವಾಸವಿರುವುದೇ, ಸುಖ ಪಡೆಯುವುದು. ಆದರೆ ಮೊದಲು ಆದರ್ಶವಾದದಲ್ಲಿ ಸುಖವನ್ನು ಪಡೆಯುವ ಉಪಾಯ ಭಕ್ತಿ-ವಿರಕ್ತಿ ಎಂದು ಹೇಳಿದರು, ಇದರ ಪ್ರಮಾಣವಿಲ್ಲ. ವಿರಕ್ತಿಯ ಅವಸ್ಥೆಯಲ್ಲಿ ಸಾಧನೆಯ ಅಂತದಲ್ಲಿ ಸಮಾಧಿಯ ಅವಸ್ಥೆಯಾಗುತ್ತದೆ. ಸಮಾಧಿಯಲ್ಲಿ ನಾವು ಸುಖವನ್ನು ಪಡೆದೆವೋ, ದುಃಖವನ್ನು ಪಡೆದೆವೋ ಎಂದು ಹೇಳಲಾಗುವುದಿಲ್ಲ. ಸತ್ಯಾಪಿತ ಮಾಡಲಾಗುವುದಿಲ್ಲ, ಆದ್ದರಿಂದ ಸುಖ ದುಃಖಕಿಂತ ಮೇಲೆ ಎಂದು ಹೇಳುತ್ತೇವೆ. ನೀವು ಸಮಾಧಿ ಅವಸ್ಥೆಯನ್ನು ಪ್ರಾಪ್ತಿಸಿದರೆ ನೀವು ಇದನ್ನೇ ನೋಡುತ್ತೀರಾ. ಸಮಾಧಿ ವಿಚಾರ ಮುಕ್ತ ಅವಸ್ಥೆ. ಇದನ್ನು ನಾನು ಸ್ವಯಂ ನೋಡಿದ್ದೇನೆ. ಸಮಾಧಿಯ ಘಟನೆ ಸಂಭವನೀಯ ಘಟನೆ. ನಿಶ್ಚಿತ ಘಟನೆಯಲ್ಲಿ ಯಾರಿಗೆ ಯಾವಾಗ ಸಮಾಧಿಯಾಗಬಹುದೆಂಬುವುದನ್ನು ಯಾರು ಹೇಳಲಾಗುವುದಿಲ್ಲ. ಹೇಗಾಗುತ್ತದೆ ಎಂಬುವುದನ್ನು ನಿಶ್ಚಯಪೂರ್ವಕ ಹೇಳಲಾಗುವುದಿಲ್ಲ ಏಕೆಂದರೆ ಇದಕ್ಕಾಗಿ ಹಲವಾರು ವಿಧಿಗಳಿವೆ, ಸಾಧನೆ, ವಿಧಿ, ಆಗಂತುಕ ವಿಧಿ, ಯೋಗ ವಿಧಿ, ಧ್ಯಾನ ವಿಧಿ, ಪೂಜೆ ವಿಧಿ, ಜಪ ವಿಧಿ.

ವ್ಯವಸ್ಥೆಯಲ್ಲಿ ಬಾಳಲಾರಂಭಿಸಿದರೆ ನಮ್ಮ ಭಾಗವಹಿಸುವಿಕೆ ವ್ಯವಸ್ಥೆಯಲ್ಲಾಗುತ್ತದೆ. ಶಿಕ್ಷಾ ಸಂಸ್ಕಾರದಲ್ಲಿ ಭಾಗವಹಿಸಿದರೆ ನಿರಂತರ ಉಪಕಾರವಿಧಿಯಿಂದಲೇ ಸಾರ್ಥಕವಾಗುತ್ತದೆ ಪ್ರತಿಫಲ ವಿಧಿಯಿಂದ ಸಾರ್ಥಕವಾಗುವುದಿಲ್ಲ. ಪ್ರತಿಫಲ ವಿದ್ಧಿಯಿಂದ ಶಿಕ್ಷಣ ಸಂಸ್ಕಾರ ನೀಡಿ ನಾವು ಸತ್ಯ ಬೋಧ, ಯಥಾರ್ಥತೆಯ ಬೋಧ ಮಾಡಲಾಗುವುದಿಲ್ಲ.

ನಾನು ಈ ರೀತಿಯಲ್ಲಿ ಶಿಕ್ಷಣ ಸಂಸ್ಕಾರ ಸಂಪನ್ನ ಮಾಡುತ್ತೇನೆ. ಪ್ರತಿಫಲ (ಭೌತಿಕ ವಸ್ತು) ಸಿಗುತ್ತದೆ ಎಂಬುವ ಊಹೆ ಮನದಲ್ಲಿ ಬರಲೇ ಇಲ್ಲ. ಅರಿವನ್ನು ಅರಿವುಪಡಿಸುವುದಕ್ಕಾಗಿ ಭೌತಿಕ ಸಮೃದ್ಧಿಯ ಆವಶ್ಯಕತೆ ಇಲ್ಲ. ಶಿಕ್ಷಣ ಕಾರ್ಯಕ್ರಮದಲ್ಲಿರುವ ಅಧ್ಯಾಪಕರು ತಮ್ಮಲಿಯೇ ಸ್ವಾಯತ್ತವಾಗಿದ್ದು, ಸ್ವಾವಲಂಬಿಯಾಗಿರುವ ಆವಶ್ಯಕತೆ ಇದೆ. ಸ್ವಾಯತ್ತವಾಗಿರುವ ಮನುಷ್ಯ ಸ್ವಾವಲಂಬಿಯಾಗಿರುವುದು ಸ್ವಾಭಾವಿಕ ಎಂಬುವುದು ಅರಿವಿನಿಂದ ಬರುತ್ತದೆ. ಅರಿವು ಸ್ವಾಯತ್ತತೆ ಸ್ವಾವಲಂಬನೆ ಆವಷ್ಯಕೀಯ ವಸ್ತುಗಳನ್ನು ನಿರ್ಮಿತ ಮಾಡುತ್ತಾನೆ, ಸಮರ್ಥನಾಗಿರುತ್ತಾನೆ, ಉಪಕಾರ ಮಾಡುತ್ತಾನೆ. ಪ್ರತ್ಯೇಕ ಮಾನವನಲ್ಲಿ ಸಹಯೋಗ, ಉಪಕಾರ ಪ್ರವೃತ್ತಿಯಿರುತ್ತದೆ. ಇದರ ಸರ್ವೇಕ್ಷಣೆ ಮಾಡಬಹುದು ಇದೇ ಉಪಕಾರವಾದ ವಿಧಿಯ ಉತ್ಪನ್ನ ಸ್ಥಳಿ. ಸ್ವಾಭಾವಿಕ ರೂಪದಲ್ಲಿ ಚಿಕ್ಕ ವಯಸ್ಸಿನಲ್ಲಿ ಸಹಯೋಗಿ ಪ್ರವೃತ್ತಿಯನ್ನು ದೃಢ ಮಾಡುತ್ತಾ ಬಂದರೆ ಪ್ರೌಢ ಅವಸ್ಥೆಯಲ್ಲಿ ಅದು ಉಪಕಾರಿ ಆಗೇ ಆಗುತ್ತದೆ. ನಮಗೆ ಮಾಡ ಬೇಕಾಗಿರುವುದು ಇಷ್ಟೇ, ಶಿಕ್ಷಣದಲ್ಲಿ ಈ ಸ್ರೋತವನ್ನು ಸಾರ್ಥಕ ಮಾಡುವು ಆವಶ್ಯಕತೆ ಹಾಗು

ಇದರ ಪೂರ್ವ ಸಿದ್ಧತೆಯಿರಬೇಕು, ಇದನ್ನು ಮಾನವೀಯ ಶಿಕ್ಷಣವೇ ಸಾರ್ಥಕ ಪಡಿಸುತ್ತದೆ. ಯಾಂತ್ರಿಕ ಶಿಕ್ಷಣ ಹಾಗು ವ್ಯಾವಸಾಯಿ ಶಿಕ್ಷಣ ಇದನ್ನು ಸಾರ್ಥಗೊಳಿಸುವುದಿಲ್ಲ. ಈ ದಿಕ್ಕಿನಲ್ಲಿ ಧ್ಯಾನಾಕರ್ಷಣೆ ಮಾಡಿದರ ನಂತರ, ವ್ಯವಹಾರ ಮತ್ತು ವ್ಯವಸ್ಥೆ ಶಿಕ್ಷಣದ ದಿಕ್ಕಿನಲ್ಲಿ, ಪ್ರಮಾಣ ಶಿಕ್ಷಣೆಯ ದಿಕ್ಕಿನ್ನಲಿ ನಿಮ್ಮ ಪ್ರವೃತ್ತಿಯಾಗುವ ಸಂಭವನೀಯತೆಯಿದೆ. ಪ್ರಮಾಣದ ಆಧಾರ ಮಾನವನೇ ಆಗಬೇಕು. ಯಾಂತ್ರಿಕ ಶಿಕ್ಷಣದಿಂದ, ವ್ಯಾವಸಾಯಿ ಶಿಕ್ಷಣದಿಂದ ಮಾನವ ಸಾಮಾಜಿಕನಾಗುವುದು ಆಗುವುದಿಲ್ಲ. ಇದರಿಂದ ಮಾನವನ ಸಹಿತ ಅನಾಚಾರ ಅತ್ಯಾಚಾರವಾಗುತ್ತದೆಯೋ ಇಲ್ಲವೋ, ಧರಣಿಯ ಸಹಿತವೇನೋ ಅನಾಚಾರ ಅತ್ಯಾಚಾರ ಅವಶ್ಯವಾಗಿ ಆಗುತ್ತದೆ. ಯಾಂತ್ರಿಕ ಮತ್ತು ವ್ಯಾವಸಾಯಿ ಶಿಕ್ಷಣದಿಂದ ಈ ಧರಣಿ ನಾಶವಾಗಿದೆ. ಅತಃ ಇದರ ವಿಕಲ್ಪದಲ್ಲಿ ಮಾನವೀಯ ಶಿಕ್ಷಣ, ವ್ಯವಹಾರ ಶಿಕ್ಷಣ, ಸಮಾಧಾನ ಸಂಪನ್ನ ಶಿಕ್ಷಣ, ಪ್ರಮಾಣ ಪರಂಪರೆ ಸಹಜ ಶಿಕ್ಷಣ ಬೇಕು. ಇಂತಹ ಶಿಕ್ಷಣಕ್ಕಾಗಿ ಮಾನವೀಯತೆಪೂರ್ಣ ನಡತೆಯನ್ನು ಮಧ್ಯದಲ್ಲಿಡಬೇಕು. ಮಾವೀಯತೆಪೂರ್ಣ ನಡತೆಯನ್ನು ಸಂರಕ್ಷಿತ ಮಾಡುವುದಕ್ಕಾಗಿ, ಮಾನವನನ್ನು ಅರಿವುಳ್ಳವವನಾಗಿಸುವುದಕ್ಕಾಗಿ ಸಂಪೂರ್ಣ ವಾಙ್ಗಮಯವನ್ನು ತಯ್ಯಾರಿಸಿ ಹಾಗು ತಯ್ಯಾರಾಗಿರುವುದರ ಅಧ್ಯಯನ ಮಾಡಬೇಕು.

ಮಾನವ ಆವೇಶಾತ್ಮಕ ಹಾಗು ಉತ್ತೇಜನಾತ್ಮಕ ಕಾರ್ಯಗಳನ್ನು ತತ್ಕಾಲ ಮಾಡುತ್ತಾನೆಂಬುವುದನ್ನು ನೋಡಿದ್ದೇನೆ. ಎಲ್ಲಿ ಸಮಾಧಾನ, ವಿವೇಕ, ಪ್ರಯೋಜನಶೀಲ ಕಾರ್ಯವಿದೆಯೋ ಅದನ್ನು ಹತ್ತು ಸಲ ಯೋಚನೆ ಮಾಡಿ ಮಾಡುತ್ತಾನೆ. ಬಾಲ್ಯದಲ್ಲಿ ಇಂತಹ ಪ್ರವೃತ್ತಿಯಿರುವುದಿಲ್ಲ. ಬಾಲ್ಯದ ನಂತರ ಪ್ರೌಢನಾಗುತ್ತಾ, ತನ್ನಲ್ಲಿ ಭಯ ವಶ ಸಹಯೋಗವಾದಿ ಪ್ರವೃತ್ತಿಯ ಮೇಲೆ ಶಂಕೆಯಾಗಲು ಪ್ರಾರಂಭವಾಗುತ್ತದೆ ಮತ್ತು ಪ್ರಾತಮಿಕತೆ ಕ್ರಮದಲ್ಲಿ ಆ ಪ್ರವೃತ್ತಿ ಕಡಿಮೆಯಾಗುತ್ತಾ ಬರುತ್ತದೆ. ಫಲಸ್ವರೂಪ ತಡವಾಗುತ್ತದೆ ಮತ್ತು ಸಮಯೋಚಿತ ಪರಿಸ್ಥಿತಿಯಾಗಿರುವುದು ಬದಲಾಗುತ್ತದೆ. ಬದಲಾವಣೆಯ ಕಾರಣ ಇನ್ನಷ್ಟು ಶಂಕೆ ಹೆಚ್ಚಾಗುತ್ತದೆ, ಈ ರೀತಿಯಲ್ಲಿ ಸರಿಯಾದ ಮಾತು ಎಂಬುವುದು ಇರುವುದಕ್ಕೆ ಸಾಧ್ಯವೇ ಇಲ್ಲ ಎಂಬುವ ಜಾಗಕ್ಕೆ ಬಂದು ಕೂತಿದ್ದಾನೆ ಮಾನವ. ನಾವು ಸರಿಯಾದ ಕಾರ್ಯವನ್ನು ಮಾಡಲಾಗುವುದೇ ಇಲ್ಲವೆಂಬುವ ನಿರ್ಣಯ ಮಾಡಿಕೊಂಡಿದ್ದಾನೆ ಮಾನವ. ಆದರೆ ಮಾನವ ವ್ಯವಸ್ಥೆಯನ್ನು ಬಯಸುತ್ತಾನೆ. ವ್ಯವಸ್ಥೆ ಹೇಗೆ ಸರ್ವಸುಲಭವಾಗಬಹುದು, ಲೋಕವ್ಯಾಪಿಕೃತವಾಗಬಹುದು? ಇದಕ್ಕಾಗಿ ಈ ಪ್ರಸ್ತಾಪ. ಮಾನವನು ಇದಕ್ಕಾಗಿ ಅರಿವುಳ್ಳವವನಾಗಲೇ ಬೇಕು. ಮಾನವ ತನ್ನಲ್ಲಿಯೇ ಮಾನವೀಯತೆಪೂರ್ಣ ನಡತೆಯನ್ನು ಪ್ರತ್ಯೇಕ ಆಯಾಮ, ಕೋನ, ದಿಶೆ, ಪರಿಪೇಕ್ಷೆಗಳಲ್ಲಿ ಪ್ರಮಾಣೀಕರಿಸುವುದೇ ವ್ಯವಸ್ಥೆ, ಇದರಿಂದ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ ಫಲವತಿಯಾಗುತ್ತದೆ. ಈ ಫಲಗಳಿಗಾಗಿಯೇ ಮಾನವ ಚಿರಕಾಲದಿಂದ ತ್ರಸ್ತನಾಗಿದ್ದಾನೆ, ಪ್ರತೀಕ್ಷಿತನಾಗಿದ್ದಾನೆ.

ಇವಾಗ ಮಾನವ ತನ್ನ ಆವಶ್ಯಕತೆಯನ್ನು ಉಪಯುಕ್ತ ಎಂದು ನಂಬಿದ್ದಾನೆ, ಮತ್ತವರ ಆವಶ್ಯಕತೆಯನ್ನು ಉಪಯುಕ್ತ ಎಂದು ನಂಬಿಲ್ಲ. ಹೀಗಾಗಿ, ಒಬ್ಬ ಮನುಷ್ಯ ಇನೊಬ್ಬ ಮನುಷ್ಯನ, ಒಂದು ಪರಿವಾರ ಇನ್ನೊಂದು ಪರಿವಾರದ, ಒಂದು ಸಮುದಾಯ ಇನ್ನೊಂದು ಸಮುದಾಯದ, ಒಂದು ದೇಶ ಇನ್ನೊಂದು ದೇಶದ ಶೋಷಣೆ

ಮಾಡುತ್ತದೆ. ಈ ಸಾಕ್ಷಿಗಳ ಆಧಾರದ ಮೇಲೆ ಅರಿವಾಗುತ್ತದೆ, ಮಾನವ ಧರ್ಮದ, ಮಾನವೀಯತೆಪೂರ್ಣ ನಡತೆಯನ್ನು ನಾವು ತಕ್ಷಣ ಅರಿತುಕೊಳ್ಳುವ ಗುರುತಿಸುವ ಆವಶ್ಯಕತೆಯಿದೆ ಮತ್ತು ಇದೇ ಶರೀರ ಯಾತ್ರೆಯಲ್ಲಿ ಸಾರ್ಥಕ ಮಾಡುವುದಕ್ಕಾಗಿ ನಿಷ್ಠೆ, ಸಾಹಸಿಕತೆಯನ್ನು ಒಟ್ಟುಗೂಡಿಸಕೊಳ್ಳಬೇಕು. ಇದನ್ನು ಸಂಕಲ್ಪವೆಂದು ಹೇಳುತ್ತಾರೆ, ಇದು ಪ್ರಮಾಣೀಕರಿಸುವುದಕ್ಕಾಗಿ ನಿಷ್ಠೆಯನ್ನು ಜೋಡಿಸಿಕೊಳ್ಳುತ್ತದೆ, ಮೂರನೆಯ ಸ್ಥಳದಲ್ಲಿ ನಿರಂತರ ನ್ಯಾಯ ಪ್ರದಾಯಿ ಕ್ಷಮತೆಯನ್ನು ನಿಯೋಜಿತ ಮಾಡುತ್ತಲಿರುತ್ತೇವೆ, ನ್ಯಾಯ ಪೂರ್ವಕ ಬಾಳುತ್ತಲಿರುತ್ತೇವೆ, ನ್ಯಾಯಕ್ಕಾಗಿ ಬಾಳುತ್ತೇವೆ ಹಾಗು ಇದಕ್ಕಾಗಿ ನಿಷ್ಠೆ ಇರುತ್ತದೆ. ಈ ರೀತಿಯಲ್ಲಿ ನ್ಯಾಯ, ಧರ್ಮ, ಸತ್ಯಕ್ಕಾಗಿ ನಿಷ್ಠೆ ಇರುತ್ತದೆ, ಬೇರೆ ಯಾವುದಕ್ಕೂ ನಿಷ್ಠೆಯಿರುವುದನ್ನು ನಾನು ನೋಡಿಲ್ಲ. ಪೂಜೆ, ಪಠಣ, ಧ್ಯಾನದಲ್ಲಿ ನಿಷ್ಠೆ, ಇವೆಲ್ಲಾ ನಾವು ಯಾವ ಆವಶ್ಯಕತೆಗಾಗಿ ಮಾಡುತ್ತೇವೆಯೋ ಇದು ಅದನ್ನೇ ಹೆಚ್ಚು ಮಾಡುತ್ತದೆ. ಅದನ್ನೇ ಬೃಹದವಾಗಿಸುತ್ತದೆ. ಇದರ ನಂತರವೇ ತೀವ್ರ ಜಿಜ್ಞಾಸ. ಸರ್ವ ಮೋಕ್ಷಕ್ಕಾಗಿಯೂ ಇದೇ ಮಾಡಲಾಗುತ್ತದೆ ಎಂದು ಹೇಳಲಾಗಿದೆ. ಇದನ್ನೇ ಅನಾದಿ ಕಾಲದಿಂದ ಶುಭ ಕಾರ್ಯವೆಂದು ನಂಬುತ್ತ ಬರುತ್ತಿದ್ದೇವೆ. ಲೋಕ ಪ್ರಚಲಿತದಲ್ಲಿ ಇದಕ್ಕೆ ಸ್ವೀಕೃತಿ ನೀಡಲಾಗಿದೆ, ಮನ್ನಣೆ ನೀಡಲಾಗಿದೆ, ಇದರಿಂದ ಹಲವಾರು ಜನರಿಗೆ ನೆಮ್ಮದಿ ಸಿಗುತ್ತದೆ. ತಾತ್ಕಾಲಿತ ನೆಮ್ಮದಿ ಸಿಗುವುದರಿಂದ ಮಾತ್ರ ನಾವು ವ್ಯವಸ್ಥೆಯಲ್ಲಿ ಬಾಳುವುದಾಗುವುದಿಲ್ಲ.

ಪೂಜೆ, ಪಠಣ, ಧ್ಯಾನ ಇತ್ಯಾದಿಗಳ ಮೇಲೆ ನನಗೆ ಅವಿಶ್ವಾಸವಿದೆ ಎಂಬ ಮಾತೆನಿಲ್ಲ. ಆದರೆ ಅದರ ಒಂದು ಸೀಮೆಯಿದೆ, ಅಲ್ಲಿವರಗೆ ಅದರ ಪ್ರಭಾವ ಇರುತ್ತದೆ, ನಂತರ ಮೋಕ್ಷದ ಕಾಮನೆಯ ಅಂತಿಮ ಸ್ಥಿತಿ ಸಮಾಧಿ, ಇದರಲ್ಲಿ ಏನನ್ನೂ ಪಡೆಯುವ ಮಾತಿರುವುದಿಲ್ಲ, ಕಳೆದುಕೊಳ್ಳುವ ಮಾತೂ ಇರುವುದಿಲ್ಲ. ಈ ರೀತಯಲ್ಲಿ ನಾನು ನಿಷ್ಕರ್ಷಕ್ಕೆ ಬಂದೆನು, ಭಕ್ತಿ ವಿಧಿಯಿಂದ, ವಿರಕ್ತಿ ವಿಧಿಯಿಂದ, ಸಂಗ್ರಹ ವಿಧಿ ಯಿಂದ ಯಾವುದೇ ವ್ಯವಸ್ಥೆ ಉತ್ಪನ್ನವಾಗುವುದಿಲ್ಲ. ಹೀಗಿದ್ದರೆ ಮಾನವ ಹೇಗೆ ಬಾಳಬೇಕು? ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ ಪೂರ್ವಕ ಬಾಳಿ ಮಾನವೀಯತೆಪೂರ್ಣ ಬಾಳುವ ಕಲೆಯ ಸ್ವರೂಪವಾಗುತ್ತದೆ. ಹೀಗೆ ನಾನು ಬಾಳಿದ್ದು ನೋಡಿದ್ದೇನೆ, ಇದು ಸಾರ್ಥಕವಾಗಿದೆ, ನೀವು ಬಾಳಬಹುದು. ಪ್ರತ್ಯೇಕ ವ್ಯಕ್ತಿ ಇದನ್ನು ಬಾಳಿ ಪ್ರಮಾಣೀಕರಿಸಬೇಕೆಂಬುವ ಮಾತು ನನಗನಿಸುತ್ತದೆ. ಸಾರ್ಥಕತೆ ಎಲ್ಲರಿಗೂ ಸ್ವೀಕಾರವಾಗುತ್ತದೆ ಎಲ್ಲರಿಗೂ ಶ್ರೇಷ್ಠ. ಮಾನವೀಯತೆಪೂರ್ಣ ನಡತೆ ಮಾನವ ಜಾತಿಗಾಗಿ ಸ್ವತ್ವ ಸಾರ್ಥಕವಾಗಿದೆ. ಅಸ್ತಿತ್ವದಲ್ಲಿ ಪ್ರತ್ಯೇಕ ಮಾನವ ಘಟಕ ವ್ಯವಸ್ಥೆಯಲ್ಲಿರಲು ಬಯಸುತ್ತಾನೆ, ಇದೇ ಅವನ ಧರ್ಮ. ಮಾನವನೂ ವ್ಯವಸ್ಥೆಯಲ್ಲಿ ಬಾಳಲು ಬಯಸುತ್ತಾನೆ. ಈ ಆಧಾರದ ಮೇಲೆ ಮಾನವತ್ವ ಅವನಿಗೆ ಸ್ವೀಕಾರ್ಯ. ಇದನ್ನು ಪ್ರಮಾಣೀಕರಿಸುವುದೇ ನಮ್ಮ ಜಾಗೃತಿಯ ಪ್ರಮಾಣ. ಮಾನವೀಯತೆ ಪೂರ್ಣ ನಡತೆಯನ್ನು ನಾನು ಪ್ರಮಾಣೀಕರಿಸಿದಾಗ, ಮಾನವತ್ವವೇ ನಮ್ಮ ಸ್ವತ್ವವೆಂದು ನನಗೆ ಬೋಧವಾಯಿತು, ಇದರ ವೈಭವವಿದೆ ಮತ್ತು ಇದರ ಉತ್ಕರ್ಷ ನಿರಂತರ ಹರಿಯಲು ಆರಂಭಿಸಿತು. ಸಂಪೂರ್ಣ ಮಾನವ ಜಾತಿಯೂ ಮಾನವತ್ವಕ್ಕಾಗಿ ತೃಷಿತವಾಗಿದೆ ಎಂದು ನಾನು

ಅರಿತುಕೊಂಡಿದ್ದೇನೆ. ಮಾನವತ್ವ ಮಾನವನ ಸ್ವತ್ವ, ಅದನ್ನು ಬಿಟ್ಟು ಎಲ್ಲೂ ಓಡಿಹೋಗಲಾಗುವುದಿಲ್ಲ, ಇವತ್ತಲ್ಲಾ ನಾಳೆ ಆ ಸ್ಥಳಕ್ಕೆ ಬರಲೇಬೇಕಾಗುತ್ತದೆ.

ಮಾನವ ಪರಂಪರೆಗಾಗಿ ಪ್ರತ್ಯೇಕ ಮಾನವನಲ್ಲಿ ಎಷ್ಟು ದೊಡ್ಡ ಸಂಪತ್ತು ಒಳಗೊಳ್ಳುವ ಅಪಾರ ಸಂಭವನೀಯತೆಯಿದೆ. ಪ್ರಮಾಣ ಪ್ರತ್ಯೇಕ ಮನುಷ್ಯನ ಇಚ್ಛೆ, ಆವಶ್ಯಕತೆ ಮತ್ತು ಉತ್ಸವದ ಆಧಾರದ ಮೇಲಿದೆ. ಒಬ್ಬ ವ್ಯಕ್ತಿಯಲ್ಲಿ ಮಾತ್ರ ವ್ಯವಸ್ಥೆಯಲ್ಲಿರುವ ಗುಣ ಬಂದರೆ, ಅನ್ಯ ವ್ಯಕ್ತಿಗಳಲ್ಲಿ ಯಾಂತ್ರಿಕವಾಗಿ ನಡೆಯುತ್ತಾಯಿದ್ದರೆ ಎಲ್ಲರಲ್ಲಿಯೂ ಸುಖವನ್ನು ಪಡೆಯುವ ಇಚ್ಛೆ, ಆವಶ್ಯಕತೆ ಆಗುವುದಿಲ್ಲ.

ಪೀಠದ ಮೇಲೆ ಕುಳುತಿಕೊಂಡಿರುವವರಿಗೂ ಸುಖ, ಸ್ವರಾಜ್ಯ ಸ್ವತಂತ್ರತೆ ಸಿಗಲಿಲ್ಲ. ಪೀಠದ ದಿಕ್ಕಿನಲ್ಲಿ ದಿಟ್ಟಿಸಿ ನೋಡುವವರಿಗೂ ಸುಖ ಸ್ವರಾಜ್ಯ ಸಿಗಲಿಲ್ಲ. ಇದುವರಗೆ ನಾವೆಲ್ಲ ಖಾಲಿಯಾಗಿಯೇ ಇದ್ದೇವೆ ಎಂಬುವುದು ಈ ವಿಧಿಯಿಂದ ತಿಳಿಯುತ್ತದೆ. ಈ ರಿಕ್ತತೆಯನ್ನು ತುಂಬಿಸಲು ಪ್ರತ್ಯೇಕ ಮಾನವನಲ್ಲಿ ಚೇತನ ವಿಕಾಸದಿಂದ ಮಾನವತ್ವದಲ್ಲಿ ಬಾಳುವುದೇ ವಿಕಲ್ಪ. ಮಾನವ ಜಾಗೃತನಾಗುವುದಕ್ಕಾಗಿ ಮಾನವೀಯ ಶಿಕ್ಷಣವೇ ವಿಕಲ್ಪ. ಇದಕ್ಕೆ ನಾನು ಪ್ರಯಾಸ ಮಾಡಿದ್ದೇನೆ, ಸಂತೋಷಕ್ಕಾಗಿ ಮಾಡಿದ್ದೇನೆ. ಯಾರಿಗೂ ಉಪಕಾರ ಮಾಡುವುದಕ್ಕಾಗಲಿ, ಆಭಾರ ಹೇರುವುದಕ್ಕಾಗಲಿ ಮಾಡಲಿಲ್ಲ. ನಾನು ಬೋಧ ಪೂರ್ವಕ ಅನುಭವದ ಬೋಧವಾಗುವ ಆಧಾರದ ಮೇಲೆ (ಅನುಭವವೇ ಪ್ರಾಮಾಣಿಕತೆ - ಪ್ರಾಮಾಣಿಕತೆಯಾ\ ಬೋಧ ಬುದ್ಧಿಯಲ್ಲಾಗುತ್ತದೆ) ಬುದ್ಧಿಯ ಪ್ರವರ್ತನವಾಗುತ್ತದೆ. ಇದರ ಹೆಸರೇ ಸಂಕಲ್ಪ. ಸಂಕಲ್ಪದ ಆಧಾರದ ಮೇಲೆ ನಾವು ಅಭಿವ್ಯಕ್ತಿ, ಸಂಪ್ರೇಷಿತ ಆಗುವ ಇಚ್ಛೆ ಆಗುತ್ತದೆ. ಪ್ರಮಾಣೀಕರಿಸುವ ಪ್ರವೃತ್ತಿಯಿರುತ್ತದೆ. ನಾನು ಪ್ರಮಾಣೀಕರಿಸಿ ನೋಡಿದ್ದೇನೆ, ಇದು ಎಲ್ಲರಿಗೂ ಆವಶ್ಯಕ. ಹೀಗೆ ತಿಳಿದುಕೊಂಡು ಮುಂದೆ ಕಾರ್ಯಕ್ರಮ ಪ್ರಸ್ತುತಿಸುವುದು ಪ್ರಾರಂಭಿಸಿದೆ.

ಮೊದಲನೆಯ ಪ್ರಯಾಸದಲ್ಲಿ ಜೀವನ ವಿದ್ಯೆ ಯೋಜನೆಯಿತ್ತು, ಇದರಲ್ಲಿ ಚಿಂತನದಿಂದ ಪ್ರಾರಂಭಿಸಿ ಸಂಕಲ್ಪದ ತನಕ ಜೀವನ ಕ್ರಿಯೆಗಳನ್ನು ಸ್ಪಷ್ಟ ಮಾಡಿದೆನು. ಯಾರಿಗೆ ಸಂಕಲ್ಪವಾಯಿತೋ; ಅದರ ಅನುಸಾರ ಬಾಳುವ ಕಲೆಗಾಗಿ ಸ್ವಾಭಾವಿಕ ರೂಪದಿಂದ ಚಿತ್ರಣವಾಗುತ್ತದೆ. ಇದಕ್ಕೆ ಮುನ್ನ ಸಂವೇದನೆಗಳ ಆಧಾರದ ಮೇಲೆ ಬಾಳುವುದಕ್ಕಾಗಿ ಚಿತ್ರಣವಾಗುತ್ತಿತ್ತು. ಇವಾಗ ಅದರ ಸ್ಥಾನದಲ್ಲಿ ಪ್ರಮಾಣಿಕತೆ ಪೂರ್ವಕ ಬಾಳುವ ಕಲೆಗಾಗಿ ಚಿತ್ರಣವಾಗಲು ಪ್ರಾರಂಭವಾಗುತ್ತದೆ. ಇದರ ಸ್ವರೂಪ ಉಪಕಾರ ವಿಧಿ. ಉಪಕಾರ ವಿಧಿಯಿಂದ ನಾವು ನಮ್ಮ ಸಾಮಾನ್ಯಾಕಾಂಕ್ಷೆಗಳನ್ನು, ಮಹತ್ವಾಕಾಂಕ್ಷೆಗಳನ್ನೂ ಚಿತ್ರಿತ ಮಾಡಿದಾಗ ನಾವು ಸ್ವಯಂ ಸ್ವಾಯತ್ತ ರೂಪದಲ್ಲಿ ಸಮಾಧಾನ ಸಮೃದ್ಧಿಯನ್ನು ಪ್ರಮಾಣೀಕರಿಸುತ್ತೇವೆ. ಅವಾಗಲೇ ನಾವು ಉಪಕಾರ ಮಾಡಲು ಯೋಗ್ಯರಾಗುತ್ತೇವೆ, ಇಂತಹ ಯೋಗ್ಯತೆಯನ್ನು ನಾವು ಬಚ್ಚಿಡುವುದಕ್ಕಾಗುವುದಿಲ್ಲ. ಅದು ಸ್ವಾಭಾವಿಕ ರೂಪದಿಂದ ಉಪಕಾರಕ್ಕಾಗಿ ನಿಯೋಜಿತವಾಗುತ್ತದೆ. ಈ ಉಪಕಾರ ವಿಧಿಯಿಂದ ನಮ್ಮ ಸಾಮಾನ್ಯ ಆಕಾಂಕ್ಷೆಗಳು, ಮಹತ್ವಾಕಾಂಕ್ಷೆಗಳು ಸೀಮಿತವಾಗುತ್ತದೆ. ಈ ಸೂತ್ರದಲ್ಲಿ ಆವರ್ತನಶೀಲ ಅರ್ಥಶಾಸ್ತ್ರ ಸ್ವಯಂ ಒಳಗೊಂಡಿದೆ, ಸಮಯೋಚಿತವಾಗಿದೆ. ಮಾನವ ಅದನ್ನು ಅರಿತುಕೊಳ್ಳಬಹುದು, ಜಾಗೃತಿಯ ನಂತರ ಅರಿವಾಗೇ ಆಗುತ್ತದೆ. ಈ

ರೀತಿಯಲ್ಲಿ ಆವರ್ತನಶೀಲ ಅರ್ಥ ವ್ಯವ್ವಸ್ಥೆಯ ಸಹಿತ (ಅರ್ಥ = ತನ, ಮನ, ಧನ) ನಾವು ಧಾರ್ಮಿಕತೆಯಲ್ಲಿ (ಧರ್ಮನೀತಿ) (ವ್ಯವಹಾರ, ಉತ್ಪಾದನೆ, ವ್ಯವಸ್ಥೆ) ನಿಯೋಜಿತರಾಗುತ್ತೇವೆ. ಶಿಕ್ಷಣದಲ್ಲಿ ನಿಯೋಜಿತ ಮಾಡೇ ಮಾಡುತ್ತೇವೆ. ಈ ರೀತಿಯಿಂದ ಮಾನವನಿಗೆ ಸಮಸ್ತ ದಿಕ್ಕಿನಲ್ಲಿ ನಿಯೋಜಿತನಾಗುವ ಅವಸರವಿರುತ್ತದೆ ಮತ್ತು ಆ ಅವಸರಗಳನ್ನು ನಿಯೋಜಿತ ಮಾಡುವ ವಿಧಿ ಸ್ವಯಂಸ್ಫೂರ್ತ ಬರುತ್ತದೆ.

ಆಧುನಿಕ ಪರಂಪರೆಯಲ್ಲಿ ಓದು ಬರಹವಾದ ನಂತರ ಮಾನವ ಮೆಲ್ಲಗೆ ಉತ್ಪಾದನೆ ಇಂದ ವಿಮುಖವಾಗಲಾರಂಭಿಸುತ್ತಾನೆ ಮತ್ತು ಅಧಿಕಾಧಿಕವಾಗಿ ಸೌಕರ್ಯಗಳ ಸಂಗ್ರಹಕ್ಕಾಗಿ ತೃಷಿತನಾಗುತ್ತಾನೆ. ಆದರೆ ಜಾಗೃತಿ ಪೂರ್ವಕ ವ್ಯವಸ್ಥೆಯಲ್ಲಿ ಮಾನವೀಯತೆಪೂರ್ಣ ವಿಧಿಯಿಂದ ಚಿತ್ರಣ ಮಾಡಿದರೆ ನಮ್ಮ ಸಾಮನ್ಯ ಆಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆ ಸದುಪಯೋಗದ ಆಧಾರದ ಮೇಲೆ ಸೀಮಿತವಾಗುತ್ತದೆ ಮತ್ತು ಕಡಿಮೆ ಸಾಧನಗಳಿಂದ ನಮ್ಮ ಆವಶ್ಯಕತೆಗಳನ್ನು ಪೂರೈಸಲಾಗುತ್ತದೆ. ಈ ವಿಧಿಯಿಂದಲೇ ವ್ಯವಹಾರಿಕ ಚಿತ್ರಣ ಶುರುವಾಗುತ್ತದೆ. ಈ ರೀತಿಯಿಂದ ನಾವು ನಮ್ಮ ಜೀವನದ ಮಹಿಮೆಯಿಂದ ವ್ಯವಸ್ಥೆಯಲ್ಲಿ ಬಾಳುವ ಚಿತ್ರಣ ಮಾಡುತ್ತೇವೆ ಫಲಸ್ವರೂಪ ನಿರಂತರ ಸುಖಪೂರ್ವಕ ಬಾಳುವ ಕ್ರಮವಿರುತ್ತದೆ. ಶರೀರ ಕಾಲವಿರುವ ವರೆಗೂ ಸುಖಪೂರ್ವಕ ಬಾಳುವ ಸಮಸ್ತ ವ್ಯವಸ್ಥೆ, ಸಮಸ್ತ ನಿಯಮ, ವಿಧಿಗಳು, ನೀತಿಗಳು ವರ್ತಮಾನವಾಗುತ್ತದೆ, ಈ ರೀತಿ ಚಿತ್ರಣದ ಸಾರ್ಥಕತೆ ಅರಿವಾಗುತ್ತದೆ. ಚಿಂತನದ ಸಾರ್ಥಕತೆ ನ್ಯಾಯ, ಧರ್ಮ, ಸತ್ಯದಲ್ಲಿ ಸಾಕ್ಷಾತ್ಕಾರ ಚಿಂತನ ಮಾಡಲೇಬೇಕು. ಚಿತ್ರಣದ ಅನುಸಾರ ವಿಶ್ಲೇಷಣೆ ಆಗೇ ಆಗುತ್ತದೆ, ಇದು ಸಾರ್ಥಕತೆಯ ಅರ್ಥದಲ್ಲಿ ಯೇ ಆಗುತ್ತದೆ. ಇದೇ ಆಧಾರದ ಮೇಲೆ ಆಯ್ಕೆ ಆಗುತ್ತದೆ ಮತ್ತು ಸಂತೋಷ ಆಗುತ್ತದೆ ಮತ್ತು ಆಸ್ವಾದವಾಗುತ್ತದೆ. ಆಸ್ವಾದ, ಮೌಲಗಳದೇ ಆಗುತ್ತದೆ. ಮೌಲಗಳು, ಜೀವನ ಮೌಲ್ಯ, ಸ್ಥಾಪಿತ ಮೌಲ್ಯ, ಶಿಷ್ಟ ಮೌಲ್ಯ, ವಸ್ತು ಮೌಲ್ಯ.

ವಸ್ತು ಮೌಲ್ಯ ಸತತ ಒಂದೇ ರೀತಿಯಲ್ಲಿರುತ್ತದೆ. ಉದಾಹರಣೆಗೆ, ಒಂದು ಕಿಲೋ ಎಳ್ಳಿನಲ್ಲಿರುವ ಮೌಲ್ಯ (ಉಪಯುಕ್ತತೆ ಮೌಲ್ಯ) ಯಾವಾಗಲು ಹಾಗೆಯೇ ಇರುತ್ತದೆ. ಇದೇ ರೀತಿಯಲ್ಲಿ ಔಷಧಿ, ಅಕ್ಕಿ, ಗೋದಿ, ಗಿಡಮರಗಳಲ್ಲಿ ಅವುಗಳ ಮೌಲ್ಯ ಹಾಗೆಯೇ ಇರುತ್ತದೆ. ಇದನ್ನು ಉಪಯುಕ್ತತೆ ಮೌಲ್ಯವೆಂದು ಹೇಳುತ್ತೇವೆ. ಇದರ ನಂತರ ಮಾನವ ಉತ್ಪಾದನೆ ಮಾಡುವುದರಲ್ಲಿ ಉಪಯುಕ್ತತೆ ಸುಂದರತೆ ಮೌಲ್ಯ ಸೇರುತದೆ. ಉಪಯುಕ್ತತೆಯ ಸಹಿತ ಸೌಕರ್ಯದ ಅರ್ಥದಲ್ಲಿ ಸುಂದರತೆ ಸೇರಿದರೆ ಸಾರ್ಥಕತೆಯಿದೆ. ಈ ರೀತಿಯಲ್ಲಿ ನಮ್ಮ ವಿಶ್ಲೇಷಣೆಯ ಸ್ವರೂಪ ಆಗುತ್ತದೆ. ನಾವು ಉಪೋಗಿಯಾಗುತ್ತೇವೆ, ಸಾರ್ಥಕರಾಗುತೇವೆ, ಸುಂದರವೂ ಆಗುತ್ತೇವೆ. ಮೌಲ್ಯಗಳ ಬಿಂದುವಿನ ಮೇಲೆ ಜೀವನ ಮೌಲ್ಯ, ಸುಖ, ಶಾಂತಿ , ಸಂತೋಷ, ಆನಂದದ ಹೆಸರಿನಿಂದ ತಿಳಿದುಬರುತ್ತದೆ. ಇದು ಜೀವನದ ತಾರತಮ್ಯತೆಯ ನಾಮ. ಮನ ಮತ್ತು ವೃತ್ತಿಯಲ್ಲಿ ಸಂಗೀತವಾದಾಗ ಸುಖ, ವೃತ್ತಿ ಮತ್ತು ಚಿತ್ತದಲ್ಲಿ ಸಂಗೀತವಾದಾಗ ಸಂತೋಷ, ಚಿತ್ತ ಮತ್ತು ಬುದ್ಧಿಯಲ್ಲಿ ಸಂಗೀತವಾದಾಗ ಶಕ್ತಿ ಹಾಗು ಬುದ್ಧಿ ಮತ್ತು ಆತ್ಮದಲಿ ಸಂಗೀತವಾದಾಗ ಆನಂದ ಎಂದು ನಾಮ ನೀಡಲಾಗಿದೆ. ಇದು ಒಟ್ಟು ಜೀವನ ಸಂಗೀತ. ನಾವು ಅನುಭವ ಮೂಲಕ ಪದ್ಧತಿಯಿಂದ ಬಾಳಿದಾಗ ಜೀವನ ಸಂಗೀತ ಸಹಜ, ಸ್ವಾಭಾವಿಕ. ಜೀವನದ ಸಹಜ

ಅಪೇಕ್ಷೆಯೇ, ಜೀವನದ ಸಹಜ ಉಪಲಬಧಿಯೇ, ಸಾರ್ಥಕತೆ. ಆಸ್ವಾದದಲ್ಲಿ ಮೌಲ್ಯಗಳ ಸುಖ ಆಗುವಾಗ ಆ ಮುಲ್ಯಗಳಲ್ಲಿ ಮಾನವನ ಸಹಿತ ಪ್ರೇಮ, ವಿಶ್ವಾಸ, ಸ್ನೇಹ್ವ, ಕೃತಜ್ಞತೆ, ವಾತ್ಸಲ್ಯ, .......ಈ ನಾಮಗಳು ನೀಡಲಾಗಿದೆ. ಸಾರ್ಥಕತೆಯ ಸಹಿತ ಸಂಬಂಧವನ್ನು ಗುರುತಿಸಿದಾಗ ಇಂತಹ ಮೌಲ್ಯಗಳು ತಾನಾಗಿಯೇ ಜೀವನದಿಂದ ಹೊರಬರುತ್ತವೆ. ಇದರ ಉದಾಹರಣೆ, ತಾಯಿ ತನ್ನ ಮಕ್ಕಳನ್ನು ಗುರುತಿಸಿದಾಗ ಮಮತೆ ತಾನಾಗಿಯೇ ತುಂಬಿ ಹೊರ ಉಕ್ಕಲಾರಂಭಿಸುತ್ತದೆ. ಇದಕ್ಕಾಗಿ ಯಾವುದೇ ಐದು ವರ್ಷದ ಯೋಜನೆಯ ಅವಶ್ಯಕತೆಯಿಲ್ಲ. ಮೌಲ್ಯವನ್ನು ಹುಡುಕಿ ಒಟ್ಟುಗೂಡಿಸುವ ಆವಶ್ಯಕತೆಯಿಲ್ಲ. ಮೌಲ್ಯ ಜೀವನದಲ್ಲಿ ಒಳಗೊಂಡಿದೆ ಹಾಗು ಸಂಬಂಧಗಳನ್ನು ಗುರುತಿಸುವುದರಿಂದ ನಿಯೋಜಿತವಾಗುತ್ತದೆ. ಸಂಬಂಧಗಳ ಗುರುತು ಪರಿವಾರದ ಅರ್ಥದಲ್ಲಿ, ಸಮಾಜದ ಅರ್ಥದಲ್ಲಿ, ವ್ಯವಸ್ಥೆಯ ಅರ್ಥದಲ್ಲಿ ಮತ್ತು ಸಹ-ಅಸ್ತಿತ್ವದ ಅರ್ಥದಲ್ಲಿ, ಈ ನಾಲ್ಕು ಪ್ರಕಾರದಿಂದ ಸಂಬಂಧದ ಸ್ಥಂಬವಿದ್ದೇ ಇದೇ. ನಾವು ಪಾರಂಗತರಾಗುವ ಆವಶ್ಯಕತೆಯಿದೆ. ನಾವು ಎಷ್ಟು ಪಾರಂಗತರಾಗುತ್ತೆವೋ ಅಷ್ಟೇ ವಿಶಾಲ ರೂಪದಲ್ಲಿ ನಾವು ಪ್ರಮಾಣ ಪ್ರಸ್ತುತ ಪಡಿಸುವುದರಲ್ಲಿ, ಸಾರ್ಥಕತೆ ಪ್ರಸ್ತುತ ಪಡಿಸುವುದರಲ್ಲಿ ಸಮರ್ಥರಾಗುತ್ತೇವೆ. ಈ ರೀತಿಯಲ್ಲಿ ಮೌಲ್ಯಗಳ ಆಸ್ವಾದ ಮಾಡಲಾರಂಭಿಸುತ್ತೇವೆ. ಜೀವನ ತನ್ನಿಂದ ನಿಷ್ಪನ್ನ ಮೌಲ್ಯಗಳ ಮೌಲೀಕರಣೆ ಮಾಡೇ ಮಾಡುತ್ತದೆ. ವಸ್ತು ಮೌಲ್ಯ ಎಲ್ಲಾ ಕಡೆ ಹರಡಿದೆ ಆದರೆ ಜೀವನ ಮೌಲ್ಯ, ಮಾನವ ಮೌಲ್ಯ, ಸ್ಥಾಪಿತ ಮೌಲ್ಯ ನಮ್ಮಲಿಯೇ ಇದೆ (ಜೀವನದಲ್ಲಿ) ಮತ್ತು ಜೀವನ ತನ್ನಿಂದಲೇ ಇವುಗಳ ಮೌಲೀಕರಣೆ ಮಾಡುತ್ತದೆ, ಎಷ್ಟು ಸಹಜ ಕಾರ್ಯ, ಎಷ್ಟು ಮಹಿಮಪೂರ್ಣ. ಇದಕ್ಕಾಗಿ ಹೊರಗಿನಿಂದ ಯಾವುದೇ ಯಂತ್ರೋಪಕರಣಗಳನ್ನು ಜೋಡಿಸುವ ಆವಶ್ಯಕತೆಯಿಲ್ಲ. ಇದು ಸ್ವಯಂವಿಗೆ, ಸ್ವಯಂನಿಂದ, ಸ್ವಯಂಗಾಗಿ ಪರೀಕ್ಷಣೆ ಮಾಡುವ ಮಾತು. ಇದು ಎಲ್ಲರ ಆವಶ್ಯಕತೆ. ಇದರ ಸಂಭವನೀಯತೆಯನ್ನು ಸರ್ವಸುಲಭ ಮಾಡುವುದರಲ್ಲಿ ವಿಧಿಯ ಮಾತು ಬರುತ್ತದೆ, ನಿಯಮ, ನಿಯಂತ್ರಣ, ಸಮತೋಲನ, ನ್ಯಾಯದ ಬಿಂದುಗಳ ಮೇಲೆಯೇ ಶಿಕ್ಷಣ ಸಂಸ್ಕಾರ ಕಾರ್ಯ ಸಂಪಾದಿತವಾಗುತ್ತದೆ. ಇದು ವಿಧಿವತ್ತಾಗಿ ಸಂಪಾದಿತವಾದಾಗ ಜೀವನ ಜಾಗೃತ ಆಗುತ್ತದೆ ಫಲಸ್ವರೂಪ ಸಂಬಂಧಗಳನ್ನು ಗುರುತಿಸುವುದರಲ್ಲಿ ಸಮರ್ಥ ಆಗುತ್ತದೆ. ಸಂಬಂಧಗಳನ್ನು ಪ್ರಾಯೋಜನೆಗಳ ಅರ್ಥದಲ್ಲಿ ಗುರುತಿಸುತ್ತದೆ ಫಲಸ್ವರೂಪ ಮನುಷ್ಯ ಸುಖ ಉಳ್ಳವವನಾಗುತ್ತಾನೆ. ಈ ವಿಧಿಯಿಂದ ನಾವು ಆಸ್ವಾದ ತನಕ ಬಂದೆವು. ನಂತರ ತುಲನ. ಪ್ರಿಯ, ಹಿತ, ಲಾಭ ವಿಧಿಯಿಂದ ತುಲನವನ್ನು ಜೀವಿಜಂತುಗಳು ಮಾಡುತ್ತವೆ, ಮಾನವನ ತುಲನ ವಿಧಿ ನ್ಯಾಯ, ಧರ್ಮ, ಸತ್ಯ. ಇದು ಧೃವ ಬಿಂದು, ಇದನ್ನು ಹಿಡಿದು, ಸ್ವೀಕರಿಸುವ ಆವಶ್ಯಕತೆಯಿದೆ. ಇದನ್ನು ಸ್ವೀಕರಿಸಿದ ತಕ್ಷಣ ನಮ್ಮ ಪ್ರಯತ್ನ ಈ ದಿಶೆಯಲ್ಲಿ ಆರಂಭವಾಗುತ್ತದೆ. ಇದುವರಗೆ ಮಾನವ ಮಾಡಿರುವ ಶಿಕ್ಷಣ, ಸಂಸ್ಕಾರ, ಮೌಲೀಕರಣೆ, ಇವೆಲ್ಲ ಸಂವೇದನಗಳ ಆಧಾರದ ಮೇಲೆ ಮಾಡಿದ ಹಾಗು ಇದು ಪೂರೈಸಲಿಲ್ಲ ಆದ್ದರಿಂದ ಸಾರ್ವಭೌಮ ಪರಂಪರೆಯಾಗಲಿಲ್ಲ. ಆದ್ದರಿಂದ ತುಲನದಿಂದ ಪ್ರಿಯ, ಹಿತ, ಲಾಭವನ್ನು ನ್ಯಾಯ, ಧರ್ಮ, ಸತ್ಯದಲ್ಲಿ ವಿಲೀನಮಾಡುವ ಆವಶ್ಯಕತೆಯಿದೆ.

ಅರ್ಥಾತ್ ನ್ಯಾಯಪೂರ್ಣ ಪ್ರಿಯ, ನ್ಯಾಯಪೂರ್ಣ ಹಿತ ಮತ್ತು ನ್ಯಾಯಪೂರ್ಣ ಸಮೃದ್ಧಿ. ನ್ಯಾಯ ದೃಷ್ಟಿಯಿಂದ ಲಾಭದ ಬದಲು ಸಮೃದ್ಧಿ ಬರುತ್ತದೆ. ನ್ಯಾಯದಿಂದ ಉತ್ಪಾದನೆ ಮಾಡಿ ನಾವು ಸಮೃದ್ಧಿಯ ಹಂತಕ್ಕೆ ಸೇರುತ್ತೇವೆ, ಸಂಗ್ರಹ ವಿಧಿಯಿಂದ ನಾವು ಶೋಷಣೆಯ ಹಂತಕ್ಕೆ ಸೇರುತ್ತೇವೆ. ಶೋಷಣೆಯಿಂದ ನಾವು ಸ್ವಯಂ ಕ್ಷತಿಗ್ರಸ್ತರಾಗುತ್ತೇವೆ ಮತ್ತು ಪ್ರಪಂಚವನ್ನೂ ಕ್ಷತಿಗ್ರಸ್ತ ಮಾಡುತ್ತೇವೆ. ಇದನ್ನು ಸ್ಪಷ್ಟವಾಗಿ ಅಧ್ಯಯನ ಮಾಡುವ ಆವಶ್ಯಕತೆಯಿದೆ, ಸ್ವೀಕರಿಸುವ ಆವಶ್ಯಕತೆಯಿದೆ ಮತ್ತು ಇದರ ಮೇಲೆ ದೃಢ ಸಂಕಲ್ಪವನ್ನು ಸ್ಥಾಪಿಸುವ ಆವಶ್ಯಕತೆಯಿದೆ. ಆದ್ದರಿಂದ ಮಾನವೀಯ ಶಿಕ್ಷಣದ ಆವಶ್ಯಕತೆಯಿದೆ. ಇದರಿಂದ ಪ್ರತ್ಯೇಕ ಮಗು ಸ್ವಾಯತ್ತನಾಗಿ ಆರು ಸದ್ಗುಣಗಳಿಂದ ಪೂರ್ಣನಾಗುತ್ತಾನೆ :-

೧. ಸ್ವಯಂನಲ್ಲಿ ವಿಶ್ವಾಸ

೨. ಶ್ರೇಷ್ಠತೆಯ ಸನ್ಮಾನ

೩. ಪ್ರತಿಭೆಯಲ್ಲಿ ಸಮತೋಲನ

೪. ವ್ಯಕ್ತಿತ್ವದಲ್ಲಿ ಸಮತೋಲನ

೫. ವ್ಯವಹಾರದಲ್ಲಿ ಸಾಮಾಜಿಕ

೬. ವ್ಯವಸಾಯದಲ್ಲಿ ಸ್ವಾವಲಂಬಿ

ಇಂತಹ ಸ್ವಾಯತ್ತ ಮಾನವ, ಪರಿವಾರದಲ್ಲಿ ತಾನಾಗಿಯೇ ಸಮಾಧಾನ ಸಮೃದ್ಧಿಯನ್ನು ಪ್ರಮಾಣೀಕರಿಸುತ್ತಾನೆ ಫಲಸ್ವರೂಪ ಸಮಾಜ ಸೂತ್ರ ಮತ್ತು ವ್ಯವಸ್ಥೆ ಸೂತ್ರ ತಾನಾಗಿಯೇ ನಿಷ್ಪನ್ನವಾಗುತ್ತದೆ. ವ್ಯವಸ್ಥೆಯೇ ಅಖಂಡ ಸಮಾಜ ಸೂತ್ರ ವ್ಯವಸ್ಥತೆ ಸಹಜ ಸೂತ್ರ ವ್ಯಾಖ್ಯೆಯ ಉದ್ಗಮ ಸ್ಥಳಿಯೇ ಪರಿವಾರ. ಇದನ್ನು ನಾನು ನೋಡಿದ್ದೇನೆ, ಇದು ಹಲವಾರು ರೀತಿಯಲ್ಲಿ ಸಾರ್ಥಕವಾಗುತ್ತದೆ, ಇದರ ನಂತರ ವ್ಯವಸ್ಥೆಯ ಸ್ವರೂಪ. ಅರಿವಿನ ನಂತರ ವ್ಯವಸ್ಥೆ ತಾನಾಗಿಯೇ ಉದ್ಗಮಿತವಾಗುತ್ತದೆ, ಹರಿಯುತ್ತದೆ.

ಪ್ರತ್ಯೇಕ ಅಭಿಭಾವಕ ತಮ್ಮ ಮಕ್ಕಳಿಗೆ ಹೇಳಿಕೊಡುತ್ತಾರೆ ನಂತರ ಶಿಕ್ಷಣ ಸಂಸ್ಥೆಗಳಲ್ಲಿ ಹೇಳಿಕೊಡುತ್ತಾರೆ, ಮತ್ತು ರಾಜಪೀಠ, ಧರ್ಮಪೀಠ ತಮ್ಮ ರೀತಿಯಲ್ಲಿ ಹೇಳಿಕೊಡುತ್ತಾರೆ. ನಾವು ಏನೇ ಶಿಕ್ಷಣ ಪಡೆದೆವೋ ಅದರಿಂದ ಮಾನವರಾಗಲಿಲ್ಲ. ಇವಾಗ ಮಾಡಬೇಕಾಗಿರುವ ವಿಚಾರವಿಷ್ಟೇ, ಪ್ರಯತ್ನವಿಷ್ಟೇ ಪ್ರಮಾಣವಿಷ್ಟೇ, ಮಾನವ ಮಾನವತ್ವ ಸಂಪನ್ನವಾಗಲಿ ಎಂದು. ಮಾನವ ಪರಂಪರೆಯಾಗಲಿ ಎಂದು. ಇದರಿಂದ ನೈಸರ್ಗಿಕ ಸಮತೋಲನ ಮತ್ತು ಮಾನವನಲ್ಲಿ ನ್ಯಾಯ ಸ್ಥಾಪಿತವಾಗುವ ಅನುಕೂಲತೆಯಾಗುತ್ತದೆ. ನ್ಯಾಯಪೂರ್ವಕ ವ್ಯವಸ್ಥೆಯಲ್ಲಿ ಬಾಳಲೇಬೇಕು. ಇದೆಂತಹ ದೊಡ್ಡ ದುರ್ಗಮ ಕಾರ್ಯ? ಆದರೆ ಮಾನವನಿಗೆ ಇದು ಆವಶ್ಯಕವೆಂದು ಅನಿಸಬೇಕು. ಇದುವರೆಗೂ ಮಾಡಿರುವುದರಿಂದ ಧರಣಿ ನಾಶವಾಗಿದೆ, ಮನುಷ್ಯನೇನೋ ನಾಶವೇ. ಆದ್ದರಿಂದ

ವೃದ್ಧಿಯಾಗಬೇಕಾದರೆ ಮಾನವೀಯತೆಯನ್ನು ಗುರುತಿಸಲೇ ಬೇಕು. ಮಾನವೀಯತೆಪೂರ್ಣ ವ್ಯವಸ್ಥೆಯಲ್ಲಿ ಬಾಳಲೇ ಬೇಕು, ಅದರ ನಿರಂತರತೆಯ ಸಂಭವನೀಯತೆ ಇದೆ. ವರ್ತಮಾನದಲ್ಲಿ ಮುಖ್ಯ ಬಿಂದು, ನೈಸರ್ಗಿಕತೆಯ ಜೊತೆ ಅಪರಾಧವೂ ನಿಲ್ಲುವುದು. ವ್ಯವಸ್ಥೆಯ ಸ್ವರೂಪ :-

೧. ಶಿಕ್ಷಣ - ಸಂಸ್ಕಾರದಲ್ಲಿ ಭಾಗವಹಿಸುವಿಕೆ

೨. ನ್ಯಾಯ - ರಕ್ಷಣೆಯಲ್ಲಿ ಭಾಗವಹಿಸುವಿಕೆ

೩. ಉತ್ಪಾದನೆ - ಕಾರ್ಯದಲ್ಲಿ ಭಾಗವಹಿಸುವಿಕೆ

೪. ವಿನಿಮಯ - ಕೋಶದಲ್ಲಿ ಭಾಗವಹಿಸುವಿಕೆ.

೫. ಸ್ವಾಸ್ಥ್ಯ - ಸಂಯಮದಲ್ಲಿ ಭಾಗವಹಿಸುವಿಕೆ.

ಈ ಐದು ಆಯಾಮಗಳಲ್ಲಿ ಭಾಗವಹಿಸುವುದೇ ವ್ಯವಸ್ಥೆಯಲ್ಲಿ ಭಾಗವಹಿಸುವುದು. ಇದು ಜಾಗೃತಿಯ ನಂತರ ಇಂತಹ ವ್ಯವಸ್ಥೆ ಪ್ರತ್ಯೇಕ ಮನುಷ್ಯನಿಂದ ಉದ್ಗಮಿತವಾಗುತ್ತದೆ, ಪ್ರತ್ಯೇಕ ಮನುಷ್ಯನಲ್ಲಿ ಪ್ರಮಾಣಿತವಾಗುತ್ತದೆ. ಈ ರೀತಿಯಲ್ಲಿ ಸಂಕ್ಷಿಪ್ತವಾಗಿ ವ್ಯವಸ್ಥೆಯ ಪ್ರತಿಪಾದನೆ ಪೂರ್ಣವಾಯಿತು. ಪ್ರತ್ಯೇಕ ಬುದ್ಧಿಯುಳ್ಳವನು ಇದನ್ನು ಸ್ವೀಕರಿಸಬಹುದು.

ಯಾವುದೇ ಬಿಂದು ಅರಿವಾಗುವ ತನಕ ಶೋಧ, ಅನುಸಂಧಾನ ಅನಿಸಿಕೊಳ್ಳುತ್ತದೆ. ಶೋಧ ಅಥವ ಅನುಸಂಧಾನದ ಯಾವುದೇ ವಸ್ತುವನ್ನು ನಾವು ಪ್ರಮಾಣೀಕರಿಸಿದಾಗ ಅದನ್ನು ಶಿಕ್ಷಣ ಸಂಸ್ಕಾರ ವಿಧಿಯಿಂದ ಲೋಕವ್ಯಾಪಿಕರಣ ಮಾಡಲು ಮೊದಲಿಂದಲೇ ತಿಳಿದಿರುತ್ತೇವೆ. ಲೋಕವ್ಯಾಪೀಕರಣ ಮಾಡುವುದು ಮೊದಲನೆಯ ಬಿಂದು. ಲೋಕವ್ಯಾಪೀಕರಣ ಮಾಡುವ ಸಮಯ ಶಿಕ್ಷಕರು ಸತತ ನಿಷ್ಠೆಯಿಂದ ವ್ಯವಹಾರಿಕ, ವಿಧಿಯಿಂದ ತರ್ಕಸಂಗತ, ವಿವೇಕ ವಿಜ್ಞಾನ, ವಿಧಿಯಿಂದ ಪಾರಂಗತರಾಗಿರುತ್ತಾರೆ. ಪಾರಂಗತರಾಗಿರುವ ಅರ್ಥ ಅವರಲ್ಲಿ ಅವಧಾರಣ ಆಗಿರುತ್ತದೆ. ಅವಧಾರಣದ ನಂತರ ಪ್ರತ್ಯೇಕ ಮನುಷ್ಯ ತನ್ನ ಪ್ರವೃತ್ತಿ, ತನ್ನದೇ ಪ್ರಯಾಸ ತನ್ನದೇ ಆವಶ್ಯಕತೆಯಿಂದ ಪ್ರಾಮಾಣಿಕನಾಗುತ್ತಾನೆ. ಪ್ರಮಾಣಿಕ ಆಗುವ ಆವಶ್ಯಕತೆ ಪ್ರತ್ಯೇಕ ಮನುಷ್ಯನಲ್ಲಿ ಒಳಗೊಂಡಿದೆ. ಪ್ರಾಮಾಣಿಕನಾಗುವುದು ಅತ್ಯಂತ ಅವಶ್ಯಕವೆಂದು ನಿಮಗೆ ಅನಿಸಿದಾಗ ನೀವು ಸುಮ್ಮನೆ ಎಲ್ಲಿ ಇರುತ್ತೀರಿ, ನೀವೂ ಪ್ರಮಾಣಿತರಾಗೆ ಆಗುತ್ತೀರಿ. ಮೊದಲು ಅನುಸಂಧಾನ ವಿಧಿಯಿಂದ ಎರಡನೆಯದಾಗಿ ಶೋಧ ವಿಧಿಯಿಂದ ನಾನು ಪಡೆದಿದ್ದೇನೆ, ನನ್ನಿಂದ ನೀವು ಪಡೆಯುವುದ ಅಧ್ಯವಸಾಯ ವಿಧಿ. ಅಧ್ಯಯನದ ನಂತರ ಸ್ವಯಂವಿನ ಜವಾಬ್ದಾರಿ, ಬೋಧದ ನಂತರ ಪ್ರಾರಂಭವಾಗುತ್ತದೆ. ಬೋಧದ ಉಪರಾಂತ ಪ್ರಮಾಣೀಕರಿಸುವುದು ಆಗೇ ಆಗುತ್ತದೆ. ಯಾವುದೇ ಅವಧಾರಣವನ್ನು ಬೋಧದ ನಂತರ ಪ್ರಮಾಣೀಕರಿಸಲು ಉದ್ಧತರಾಗುತ್ತೇವೋ ಮತ್ತು ಪ್ರಪಂಚದಲ್ಲಿ ಸಂಪ್ರೇಷಿತ ಮಾಡುವುದಕ್ಕಾಗಿ ಓಡುತ್ತೇವೋ, ಅವಾಗ ನಾವು ಅನುಭೂತರಾಗುತ್ತೇವೆ.

ಇದರ ನಂತರವೇ ಮತ್ತವರಿಗೆ ಬೋಧವಾಗುವುದಾಗುತ್ತದೆ. ಈ ವಿಧಿಯಿಂದ ಪ್ರತ್ಯೇಕ ವ್ಯಕ್ತಿ ಅನುಭವಪೂರ್ವಕವೇ ಮತ್ತವರಿಗೆ ಬೋಧಿಸುತ್ತಾನೆ. ಮಾತನಾಡುವುದರಿಂದ ಮಾತ್ರ ಬೋಧವಾಗುವುದಿಲ್ಲ. ಇದರಲ್ಲಿ ಅಪವಾದವೂ ಇದೆ, ಒಬ್ಬ ಮನುಷ್ಯ ಮಾತನಾಡುವುದರಲ್ಲಿ ನಿಷ್ಣಾತನಾಗಿದ್ದರೆ, ಅನುಭವವಾಗದಿದ್ದರೂ ಮತ್ತವರಿಗೆ ಬೋಧವಾಗಬಹುದು. ಇದುವರೆಗೂ ಹೀಗೆಯೇ ನಡೆದು ಬಂದಿದೆ. ಕೆಲವು ಮಾತುಗಳನ್ನು ಕೇಳಿದ ಫಲಸ್ವರೂಪ ನಮಗೆ ಬೋಧವಾಗುತ್ತದೆ ಮತ್ತು ನಾವು ಅನುಸಂಧಾನದಲ್ಲಿ ನಿರತರಾಗುತ್ತೇವೆ, ನನ್ನ ವಿಧಿಯಲ್ಲಿಯೂ ಹೀಗೆಯೇ ಆಯಿತು. ಆದರೆ ಅಧಿಕಾಂಶ ಜನರು ಅಧ್ಯಯನ ಮಾಡುತ್ತಾರೆ, ಅನುಭವ ಮಾಡುತ್ತಾರೆ ಮತ್ತು ಪ್ರಮಾಣೀಕರಿಸುತ್ತಾರೆ ಎಂದು ನನಗೆ ಅರಿವಾಗುತ್ತದೆ.

**ಪ್ರಶ್ನೆ – ಮೊದಲಿಂದೆ ಇರುವ ಪ್ರಚಲಿತ ಪರಂಪರೆಗಳು ಹಾಗು ಅವುಗಳಲ್ಲಿ ಸಿಕ್ಕಿಕೊಂಡಿರುವ ಮನುಷ್ಯರ ಬಗೆ ನಿಮ್ಮ ಅಭಿಪ್ರಾಯವೇನು?**

ಉತ್ತರ - ನೋಡಿ, ನೀವು ಎರಡು ಶಬ್ಧವನ್ನು ಪ್ರಯೋಗ ಮಾಡಿದ್ದೀರಿ. ೧. ಪರಂಪರೆ ೨. ಸಾಮಾನ್ಯ ಮನುಷ್ಯ. ನಾನು ಪರಂಪರೆಯನ್ನು ತಿಳಿದಿರುವ ಬಗೆ ನಾಲ್ಕು ಭಾಗಗಳಲ್ಲಿ ಪ್ರಸ್ತುತ ಮಾಡುತ್ತಿದ್ದೇನೆ.

೧. ಶಿಕ್ಷಣ ೨. ಧರ್ಮಪೀಠ ೩. ರಾಜಪೀಠ ೪. ವ್ಯಾಪಾರ ಪೀಠ. ಇದೇ ಪರಂಪರೆಯ ಕರ್ಣಧಾರಾ. ಇದರಲ್ಲಿಯೇ ಪ್ರಕಾರಾಂತರದಿಂದ ಪ್ರತ್ಯೇಕ ವ್ಯಕ್ತಿ ಪ್ರಯಾಣ ಮಾಡುತ್ತಾನೆ. ನಾನು ನೋಡಿರುವ ಪರಂಪರೆಗಳು ಪೂರ್ಣತಃ ವಿಘಟಿತವಾಗಿವೆ. ಆದ್ದರಿಂದ ಇದರಲ್ಲಿ ಪ್ರಯಾಣ ಮಾಡುವವರಿಗೆ ಇದು ಏನು ನೀಡಲಾಗುವುದಿಲ್ಲ. ಆದರೆ ಈ ನಾಲ್ಕು ಪರಂಪರೆಗಳು ಎಷ್ಟು ಜಂಬ ಕೊಚ್ಚಿಕೊಳ್ಳುತ್ತಾರೆಂದರೆ, ನಾವು ನಿಮ್ಮ ಸಫಲತೆಗಾಗಿಯೇ ಪ್ರಾರಂಭಿಸಿದ್ದೇವೆ, ನಿರತರಾಗಿದ್ದೇವೆ. ಆದರೆ ಸಫಲತೆ ಪಡೆದಂತೆ ಒಬ್ಬ ಮನುಷ್ಯನೂ ಕಂಡಿಲ್ಲ. ಸಫಲತೆಯನ್ನು ನೀಡುವವನೂ ಅದರಲ್ಲಿಯೇ ಮುಳುಗಿರುವಂತೆ ತೋರುತ್ತದೆ. ಈ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ, ಪರಂಪರೆಗಳೆಲ್ಲ ನಾಶವಾಗಿವೆ, ಕ್ಷಯವಾಗಿವೆ. ಸಾರ್ಥಕತೆಯ ಸ್ರೋತವಿದ್ದರೆ ಅದು ಮಾನವ. ನಾನು ಅಧ್ಯಯನ ಮಾಡಿದ್ದೇನೆ ಪ್ರತ್ಯೇಕ ಮಾನವ ಕನಿಷ್ಠ ೫೧ % ಗಿಂತ ಅಧಿಕ ಸಾರ್ಥಕನಾಗಿರುತ್ತಾನೆ. ಮಾನವನನ್ನು ಸುಧಾರಿಸಬಹುದು. ಪರಂಪರೆಯ ಸುಧಾರಣೆಯಾಗುವ ಸ್ಥಾನದಲ್ಲಿ ಇನ್ನೊಂದು ಪರಂಪರೆಯ ಸ್ಥಾಪನೆ ಆಗುತ್ತದೆ. ಪರಂಪರೆ ಸುಧಾರಣೆಯಾಗುವುದಿಲ್ಲ.

ಸಾರ್ಥಕ ಶಿಕ್ಷಣವಾಗಲಿ, ನಿರರ್ಥಕ ಶಿಕ್ಷಣವಾಗಲಿ, ಸಾರ್ಥಕ ರಾಜ್ಯವಾಗಲಿ, ನಿರರ್ಥಕ ರಾಜ್ಯವಾಗಲಿ; ಶಿಕ್ಷಣದ ಪರಂಪರೆ, ರಾಜ್ಯದ ಪರಂಪರೆ ಇದ್ದೇ ಇರುತ್ತದೆ. ವರ್ತಮಾನದಲ್ಲಿ ರಾಜ್ಯದ ಮೂಲ ತತ್ವ ಶಾಸನ, ಇದರ ಆಧಾರ ಸಂವಿಧಾನ; ಇದರ ಮೂಲ ಶಕ್ತಿ ಕೇಂದ್ರಿತ ಶಾಸನ. ಇದರ ಅರ್ಥ, ತಪ್ಪನ್ನು ತಪ್ಪಿನಿಂದ ತಡೆಯುವುದು, ಯುದ್ಧವನ್ನು ಯುದ್ಧದಿಂದ ತಡೆಯುವುದು, ಅಪರಾಧವನ್ನು ಅಪರಾಧದಿಂದ ತಡೆಯುವುದು. ಹೀಗೆ ಮಾಡುವುದರಿಂದ ಮನುಷ್ಯನಲ್ಲಿ ಸುಧಾರಣೆ ಹೇಗಾಗುತ್ತದೆ. ಎಷ್ಟು ತಡೆಯಲು ಪ್ರಯತ್ನಿಸುತ್ತೆವೋ ಅಷ್ಟೇ ಅಪರಾಧ ಯುದ್ಧ ಹೆಚ್ಚಾಗಿದೆ, ಇದನ್ನು ಎಲ್ಲರೂ ನೋಡಬಹುದು. ವ್ಯಾಪಾರದ ವ್ಯಸನ ಶೋಷಣೆಯಿಂದ ತಪ್ಪಿದ್ದಲ್ಲ.

ಧರ್ಮದ ವ್ಯಸನ, ಎಲ್ಲರಿಗೂ ಆಶ್ವಾಸನೆ ನೀಡುವುದು ಮತ್ತು ಸನ್ಮಾನ ಪಡೆಯುವುದು. ಆಶ್ವಾಸನೆ ನೀಡುವುದೇನೆಂದರೆ ಪಾಪಿಗಳನ್ನು ವಿಮೋಚನೆಗೊಳಿಸುತ್ತೇವೆ, ಸ್ವಾರ್ಥಿಯನ್ನು ಪಾರಮಾರ್ಥಿ ಮಾಡುತ್ತೇವೆ, ಅಜ್ಞಾನಿಯನ್ನು ಜ್ಞಾನಿ ಮಾಡುತ್ತೇವೆ. ಈ ಆಶ್ವಾಸನೆಗಳು ಪೂರೈಸುವುದರ ಯಾವ ಪ್ರಮಾಣವೂ ಸಿಗಲಿಲ್ಲ. ಮಾನವ ಜಾತಿ ಇದುವರೆಗೂ, ನಾನು ತಪ್ಪು ಪರಂಪರೆ ಸರಿ ಎಂದು ಯೋಚಿಸುತ್ತಾ ಬಂದಿದೆ. ಇಲ್ಲಿ ನಾನು ಮಾನವನ ಕಣ್ಣುಗಳ ತೆರೆ ತೆಗೆಯಲು ಬಯಸುತ್ತೇನೆ, ಪರಂಪರೆಯದಲ್ಲ. ನನ್ನ ಕೊಡು ಕೊಳ್ಳು ಪರಂಪರೆಯ ಜೊತೆಯಲ್ಲ, ನಾನು ಒಬ್ಬ ಮನುಷ್ಯ, ನನ್ನ ಸಂಬಂಧವಿರುವುದು ಮನುಷ್ಯರೊಡನೆ.

**ಪ್ರಶ್ನೆ – ಒಂದು ಪಕ್ಕ ನೀವು ಪರಂಪರೆಗಳು ನಾಶವಾಗಿವೆ ಎಂದು ಹೇಳುತ್ತೀರಿ, ಆದರೆ ಮನುಷ್ಯ ಅದೇ ಪರಂಪರೆಯಲ್ಲಿ ಹಣ್ಣಾಗಿ ಬಂದಿದ್ದಾನೆ, ಆ ಪರಂಪರೆಯಲ್ಲಿಯೇ ಹಣ್ಣಾಗಿರುವ ಕಾರಣ ಮನುಷ್ಯನೂ ನಾಶವಾಗಿದ್ದಾನೆಂದು ಹೇಳಬೇಕು. ಆದರೂ ನೀವು ಮನುಷ್ಯ ೫೦% ಗಿಂತ ಅಧಿಕ ಸಾರ್ಥಕವೆಂದು ಹೇಳುತ್ತೀರ. ಸಾರ್ಥಕವಾಗಿದ್ದಾನೆ ಎಂಬುವುದರ ತಾತ್ಪರ್ಯವೇನು?**

ಉತ್ತರ - ಇವಾಗಲೇ ನಾಲ್ಕು ಪರಂಪರೆಯ ಮಾತನಾಡಿದೆವು, ಇವುಗಳಲ್ಲಿ ಕುಳುತಿಕೊಂಡಿರುವ ಜನರಲ್ಲಿ ಸುಧಾರಣೆಗೆ ಯಾವ ಜಿಜ್ಞಾಸವೂ ಇಲ್ಲ. ಪೀಠವನ್ನು ಪೂಜಿಸುವವರಲ್ಲಿ ಮತ್ತು ಪೀಠದ ಕಾಗದಪತ್ರಗಳಲ್ಲಿ ಜಿಜ್ಞಾಸದ ಆಧಾರವಿಲ್ಲ. ಆದ್ದರಿಂದ ನಾಶವಾಗಿದೆ. ಆದರೆ ಮನುಷ್ಯನಲ್ಲಿ ಎಲ್ಲಾದರು ಜಿಜ್ಞಾಸ ಉದಯವಾಗಿದ್ದೇ ಇರತ್ತದೆ, ಈ ಆಧಾರದ ಮೇಲೆ ನಾನು ಹೇಳುತ್ತೇನೆ, ಮನುಷ್ಯ ೫೧% ಗಿಂತ ಅಧಿಕ ಸರಿ ಎಂದು.

**ಪ್ರಶ್ನೆ – ನೀವು ವಿಕಾಸದ ಮಾತು ಹೇಳಿದ್ದೀರಿ. ಇದುವರಗೆ ನಾವು ಗ್ರಾಮದಲ್ಲಿ ರಸ್ತೆ ಮಾಡುವುದು, ವಿದ್ಯುತ ಶಕ್ತಿ ಚಾಲಿಸುವುದು, ಕಂದಾಯ ಹೆಚ್ಚಾಗುವುದು, ಇವುಗಳನ್ನು ವಿಕಾಸವೆಂದು ಹೇಳುತ್ತಾಬಂದಿದ್ದೇವೆ. ನಿಮ್ಮ ವಿಕಾಸದ ಅರ್ಥವೇನು?**

ಉತ್ತರ - ಇದುವರಗೆ ಇದನ್ನೇ ವಿಕಾಸವೆಂದು ಹೇಳುತ್ತಾ ಬಂದಿದ್ದೇವೆ ಮತ್ತು ಪ್ರತ್ಯೇಕ ತಹಸೀಲಿನಲ್ಲಿ ಜೈಲು ತಯ್ಯಾರಾದರೆ ಇದನ್ನೂ ವಿಕಾಸವೆಂದು ಹೇಳುತ್ತಿದ್ದಾರೆ. ಹೊಳೆಯುತ್ತಿರುವ ಕಟ್ಟಡವನ್ನು ವಿಕಾಸವೆಂದು ಹೇಳುತ್ತಾರೆ. ಇದಕ್ಕೆ ನಂದೇನು ದೊಡ್ಡ ವಿರೋಧವಿಲ್ಲ ಏಕೆಂದರೆ ಮಾನವನ ಸಾಮಾನ್ಯ ಆಕಾಂಕ್ಷೆ ಮಹತ್ವಾಕಾಂಕ್ಷೆಗಳಿಗೆ ಬೇಕಾಗಿರುವ ಸೌಕರ್ಯಗಳ ಕ್ರಮದಲ್ಲಿ ಇವೆಲ್ಲ ಒಳಗೊಂಡಿವೆ. ಆದರೆ ಇವನ್ನು ಉಪಯೋಗಿಸುವ ಕ್ರಮದಲ್ಲಿ ಸಾಮಾಜಿಕ ಚೇತನದ ಆವಶ್ಯಕತೆಯಿದೆ. ಯಾಂತ್ರಿಕ ಚೇತನದಲ್ಲಿ ನಾವು ಎಲ್ಲಾದರು ತಪ್ಪು ಮತ್ತು ಅಪರಾಧದಲ್ಲಿ ಹೋಗುತ್ತೇವೆ. ಮಾನವನಿಗೆ ಎಲ್ಲಾದರು, ಸಾಮಾಜಿಕ ಚೇತನ, ವ್ಯವಹಾರಿಕ ಚೇತನ, ವ್ಯವಸ್ಥೆಯ ಚೇತನದ ಆವಶ್ಯಕತೆಯಿದೆ, ಈ ಚೆತನವನ್ನು ಈಡೇರಿಸುವ ಕ್ರಮದಲ್ಲಿ ಈ ಜೀವನ ವಿದ್ಯೆಯ ಮಾತು ಪ್ರಸ್ತುತವಾಗಿದೆ. ಇದರ ನಂತರ ಶಿಕ್ಷಣದ ಮಾನಾವೀಯಕರಣ ಒಂದು ಪ್ರಸ್ತಾಪ, ಇದರ ನಂತರ ಪರಿವಾರ ಮೂಲಕ ಸ್ವರಾಜ್ಯ ವ್ಯವಸ್ಥೆ ಒಂದು ಪ್ರಸ್ತಾಪ. ಈ ಮೂರು ಪ್ರಸ್ತಾಪಗಳ ಆಧಾರದ ಮೇಲ ನಾವು ನೋಡಿದರೆ, ನಾವು ಎಷ್ಟು ಕಡಿಮೆಯಾಗಿ ಧರಣಿಯನ್ನು ಗಾಯಗೊಳಿಸುತ್ತೆವೋ ಅಷ್ಟೇ ದಿನಗಳು ನಾವು ಬಾಳುವ ಸಂಭವವಿದೆ.

ಧರಣಿಯನ್ನೇ ನಾಶ ಮಾಡಿ ಮಾನವ ಎಲ್ಲಿ ನೆಲಸುತ್ತಾನೆ. ಆದ್ದರಿಂದ ಮಾನವ ವಿಕಸಿತನಾಗಿದ್ದಾನೆ ಎಂಬುವ ಆಧಾರ, ಮಾನವ ಪರಿವಾರದಲ್ಲಿ ಸಮಾಧಾನ ಮತ್ತು ಸಮೃದ್ಧಿಯನ್ನು ಪ್ರಮಾಣೀಕರಿಸಿ, ಪ್ರತ್ಯೇಕ ಮಾನವನನ್ನು ಒಂದೇ ಜಾತಿ ಎಂದು ಅರಿತುಕೊಂಡು ವ್ಯವಹಾರ ಮಾಡಿ ಮತ್ತು ಮೌಲೀಕರಣ ಮಾಡಿ, ಅರ್ಥಾತ್ ಸಾಮಾಜಿಕನಾದಾಗ, ಅವನನ್ನು ವಿಕಸಿತ ಎಂದು ಹೇಳಬಹುದು. ವ್ಯವಸ್ಥೆಯ ಅರ್ಥ ಐದು ಆಯಾಮಗಳಲ್ಲಿ ಭಾಗವಹಿಸಬಲ್ಲ. ಇದನ್ನೇ ನಾವು ಮಾನವನ ವಿಕಾಸ ಅಥವ ಜಾಗೃತಿ ಎಂದು ಹೇಳುತ್ತೇವೆ. ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯವಹಾರಿಕವೆಂದು ಹೇಳುತ್ತೇವೆ. ಇದುವರಗೆ ಇದ್ದ ನಮ್ಮ ವಿಕಾಸದ ತಿಳಿವಳಿಕೆಯಲ್ಲಿ ಸುಖವೇನೋ ಸಿಗಲಿಲ್ಲ. ಚೌಮುಖಿ ಸುಖಕ್ಕಾಗಿ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ ನಾಲ್ಕೂ ಪೂರೈಸಬೇಕು. ಇದಿಲ್ಲದೇ ಸುಖ ಸಿಗುವುದಿಲ್ಲ.

**ಪ್ರಶ್ನೆ – ಡಾರ್ವಿನ್ ವಿಕಾಸದ ಸಿದ್ಧಾಂತವನ್ನು ಹೇಳಿದರು, ಇದು ಇವತ್ತಿಗೂ ಮಾನ್ಯವಾಗಿದೆ. ನಿಮ್ಮ ವಿಕಾಸದ ಸಿದ್ಧಾಂತ ಹಾಗು ಡಾರ್ವಿನ್ ಅವರದಲ್ಲಿ ಏನು ಅಂತರ?**

ಉತ್ತರ - ಡಾರ್ವಿನ್ ಪ್ರಸ್ತಾಪಿಸಿರುವುದು ಶರೀರ ರಚನೆಯ ಆಧಾರದ ಮೇಲೆ ವಿಕಾಸ. ಉದಾಹರಣೆಗೆ ಒಂದು ಕೀಟದ ರಚನೆ, ಜಿಗಣೆಯ ರಚನೆ, ಕುದರೆಯ ರಚನೆ, ಹಸುವಿನ ರಚನೆಯಂತಲೆ ಮಾನವನ ರಚನೆ. ಮೂಳೆಗಳನ್ನು ಇದರ ಆಧಾರವಾಗಿಟ್ಟುಕೊಂಡರು. ಮೂಳೆಗಳು, ಯಾವ ಪ್ರಕಾರ, ಎಷ್ಟು ಉದ್ದ, ಎಷ್ಟು ಅಗಲ, ಇದನ್ನು ವಿಕಾಸವೆಂದರು. ಮಾನವನ ಶರೀರವನ್ನು ಧೃವವೆಂದು ನಂಬಿದರು. ಮಾನವನ ಶರೀರ ರಚನೆಯನ್ನು ಆಧಾರ ಮಾಡಿದರು, ಇದರ ಹಿಂದಿನ ಶರೀರ ರಚನೆಗಳನ್ನು ಸೇರಿಸೆ, ಇದರ ನಂತರ ಇದು ರಚಿತವಾಯಿತು, ಎಂದು ಹೇಳುತ್ತಾರೆ. ಶರೀರ ರಚನೆಯ ಬಗೆ ಡಾರ್ವಿನ್ ಹೇಳುವುದರಲ್ಲಿ ಸ್ವಲ್ಪ ತೊಂದರೆಯಿದೆ ಆದರೆ ಮಾನವನ ಅರ್ಥದಲ್ಲಿ ಹೇಳುವುದರಲ್ಲಿ ಪೂರ್ಣ ತೊಂದರೆಯಿದೆ. ಡಾರ್ವಿನ್ ಹೇಳುವ ಪ್ರಕಾರ ಕೋತಿಯ ಕ್ರಮಶಃ ರೂಪಂತರಣವಾಗಿ ಮಾನವ ಶರೀರ ರಚಿತವಾಯಿತು ಮತ್ತು ಇದರ ನಡುವೆ ಹಲವಾರು ಜೀವಿಶರೀರಗಳು ರಚಿತವಾದೆವು, ಇವುಗಳು ನಂತರ ನಷ್ಟವಾದವು. ಆದರೆ ನನ್ನ ಅನುಸಾರ ಯಾವುದಾದರು ಸಮೃದ್ಧ ಮಸ್ತಿಷ್ಕ ಸಂಪನ್ನ ಜೀವದ ಗರ್ಭಾಶಯದಲ್ಲಿ, ಒಂದು ಶರೀರ ರಚನೆ, ಯಾವುದರ ಮಾಧ್ಯಮದಿಂದ ಜೀವನ ತನ್ನ ಜಾಗೃತಿಯನ್ನು ಪ್ರಮಾಣೀಕರಿಸಬಹುದಂತಹ ರಚನೆಯ ಪರಂಪರೆಯನ್ನು ಸ್ಥಾಪಿತ ಮಾಡುವ ಉದ್ದೇಶದಿಂದ ಪ್ರಾಣಸೂತ್ರದಲ್ಲಿ ಅನುಸಂಧಾನವಾಯಿತು. ಆದರೆ ಡಾರ್ವಿನ್ ಪ್ರಕಾರ ನೈಸರ್ಗಿಕ ಹಾಗು ವಾತಾವರಣದ ಒತ್ತಡದಲ್ಲಿ ಈ ಅನಿಶ್ಚಿತ ಶರೀರ ರಚನೆಗಳು ಘಟಿತವಾದವು. ಡಾರ್ವಿನ್ ಅವರಿಗೆ ಜೀವನ ಜ್ಞಾನವಿರಲಿಲ್ಲ. ಜೀವನವನ್ನು ಧೃವವೆಂದು ನಂಬಿ ಅವರು ಏನನ್ನು ಹೇಳಲಿಲ್ಲ. ಜೀವನ ಮತ್ತು ಶರೀರದ ಸಂಯುಕ್ತ ರೂಪದಲ್ಲಿಯೇ ಮಾನವನಿರುತ್ತಾನೆ. ಇವತ್ತಿಗೂ ವಿಕಾಸವನ್ನು ಶರೀರದಲ್ಲಿ ಹುಡುಕುತ್ತೀದ್ದೇವೆ, ಮೂಳೆಗಳಲ್ಲಿ ಹೊಡುಕುತ್ತೀದೇವೆ ಮತ್ತು ಅದಕ್ಕಾಗಿ ನೊಬೆಲ್ ಪ್ರೈಜ್ ನೀಡುತ್ತಾರೆ, ಡಿಗ್ರಿಗಳು ನೀಡುತ್ತಾರೆ, ಕೆಲಸಗಳಿವೆ, ಇಲ್ಲಿ ವಿಕಾಸದ ಧೃವ ಮಾನವ ಶರೀರ. ಅವರ ಅನುಸಾರ ಶರೀರವನ್ನು ತೈಯ್ಯಾರಿಸಿದರೆ ಮಾನವ ತಯ್ಯಾರಾಗಬೇಕಾಗಿತ್ತು, ಹೀಗೆ

ಆಗಲಿಲ್ಲ. ಮಾನವ, ಶರೀರದ ಮೂಳೆಗಳ ವಿಸ್ತಾರದಲ್ಲಿ ವ್ಯಾಖ್ಯಾಯಿತವಾಗುವುದಿಲ್ಲ. ಇದರ ಸಾಕ್ಷಿ ಡಾರ್ವಿನ್ ಸ್ವಯಂ ಬರದಿದ್ದರೆ, ನಾನು ಶರೀರದ ಮೂಳೆಗಳ ವಿಸ್ತಾರದಲ್ಲಿ ವ್ಯಾಖ್ಯಾಯಿತವಾಗುವುದಿಲ್ಲ. ಅವರು ಮಾನವನನ್ನು ವ್ಯಾಖ್ಯಾಯಿತ ಮಾಡುವುದರಲ್ಲಿ ಅಸಮರ್ಥರಾಗಿದ್ದರು. ರಚನೆ ವಿಧಿಯಲ್ಲಿ ಶ್ರೇಷ್ಠತೆಯನ್ನು ವಿಕಾಸವೆಂದು ನೀವು ಹೇಳುತ್ತೀರ. ಆದರೆ ವಿಕಾಸದ ಧೃವ ಬಿಂದು ಜೀವನ. ಜೀವನವಿಲ್ಲದೆ ಶರೀರ ಯಾವುದೇ ಕೆಲಸ ಮಾಡಲಾಗುವುದಿಲ್ಲ. ಶರೀರವನ್ನು ಜೀವಿತವಾಗಿಡುವುದು ಜೀವನವೇ. ಕೇವಲ ಜೀವನದ ಆಧಾರದ ಮೇಲಲ್ಲ, ಕೇವಲ ಶರೀರದ ಆಧಾರದ ಮೇಲಲ್ಲ, ಜೀವನ ಮತ್ತು ಶರೀರದ ಸಂಯುಕ್ತ ಆದ್ಧಾರದ ಮೇಲಿರುವವನು 'ಮಾನವ'.

ಪರಮಾಣುವಿನಲ್ಲಿರುವ ವಿಕಾಸ ಸಂಘಟನೆ-ಪೂರ್ಣತೆಯ ಅರ್ಥದಲ್ಲಿದೆ. ಭೌತಿಕ - ರಾಸಾಯನಿಕ ಕಾರ್ಯ ಮಾಡುತ್ತಿರುವ ಪ್ರತ್ಯೇಕ ಪರಮಾಣು ಸಂಘಟನೆ-ಶೀಲವಾಗಿದೆ. ಪ್ರತ್ಯೇಕ ಸಂಘಟನೆಯಲ್ಲಿ ಒಂದಕ್ಕಿಂತ ಅಧಿಕ ಅಂಶವಿರುತ್ತದೆ. ಪ್ರತ್ಯೇಕ ಪರಮಾಣುವಿನಲ್ಲಿ ಮಧ್ಯಾಂಶ ಮತ್ತು ಅದರ ನಾಲ್ಕು ದಿಕ್ಕಿನಲ್ಲಿ ಸುತ್ತುವ ಅಂಶಗಳ ಆವಶ್ಯಕತೆಯಿದೆ. ಹೀಗೆ ಅಸ್ತಿತ್ವದಲ್ಲಿ ಸ್ವಾಭಾವಿಕ ರೂಪದಲ್ಲಿರುವುದು ಕಂಡುಬರುತ್ತದೆ. ಇಂತಹ ಪರಮಾಣುಗಳಲ್ಲಿ ಕನಿಷ್ಠ ಎರಡರಿಂದ ಹಿಡಿದು ಹಲವಾರು ಸಂಖ್ಯೆಯಲ್ಲಿ ಅಂಶಗಳು ಒಳಗೊಂಡಿರುತ್ತವೆ. ಹಲವಾರು ಪ್ರಜಾತಿಯ ಪರಮಾಣುಗಳಿವೆ, ಅದರಲ್ಲಿ ಒಂದು ಪ್ರಜಾತಿಯ ಪರಮಾಣು ಜೀವನ ಪರಮಾಣು. ಅಂಶಗಳ ಕಡಿಮೆಯಾಗುವುದು-ಹೆಚ್ಚಾಗುವುದು ಜೀವನ ಪರಮಾಣುವಿನಲ್ಲಾಗುವುದಿಲ್ಲ ಆದ್ದರಿಂದ ಅಕ್ಷಯ ಶಕ್ತಿ, ಅಕ್ಷಯ ಬಲ ಸಂಪನ್ನವಾಗಿರುತ್ತದೆ, ಇದಕ್ಕೆ ಪರಮಾಣುವಿನಲ್ಲಿ ವಿಕಾಸವೆಂದು ಹೆಸರು. ಅತಃ ಜೀವನ ಪರಮಾಣುವನ್ನು ವಿಕಸಿತವೆಂದು ಹೇಳುತ್ತಿದ್ದೇವೆ ಮತ್ತು ವಿಕಾಸದ ನಂತರ ಜಾಗೃತಿಯಾಗುತ್ತದೆ ಜಾಗೃತಿಯ ಪ್ರಮಾಣ ತಿಳಿವಳಿಕೆ-ನಂಬಿಕೆ, ಗುರುತಿಸುವುದು, ನಿರ್ವಹಿಸುವುದು, ಪರಮಾಣು ಅಂಶಗಳಲ್ಲಾಗುತ್ತದೆ. ಒಂದು ಪರಮಾಣು ಅಂಶ ಇನ್ನೊಂದು ಪರಮಾಣು ಅಂಶವನ್ನು ಗುರುತಿಸುತ್ತದೆ ಆದ್ದರಿಂದ ನಿಶ್ಚಿತ ದೂರದಲ್ಲಿದ್ದು ವ್ಯವಸ್ಥೆಯನ್ನು ಸಮೀಕರಣ ಮಾಡಿರುತ್ತದೆ. ವ್ಯವಸ್ಥೆಯ ರೂಪದಲ್ಲಿ ಕಾರ್ಯ ಮಾಡುತ್ತವೆ. ಇದೇ ಭೌತಿಕ ರಾಸಾಯನಿಕ ಕ್ರಿಯಾಕಲಾಪದ ರೂಪದಲ್ಲಿ ಗಣ್ಯವಾಗುತ್ತದೆ. ರಾಸಾಯನಿಕ ಕ್ರಿಯಾಕಲಾಪದ ಚರಮೋತ್ಕರ್ಷ ರಚನೆ ಈ ಧರಣಿಯ ಮೇಲೆ ಮಾನವ ಶರೀರ ರೂಪದಲ್ಲಿ ಪ್ರಮಾಣಿತವಾಗಿದೆ. ಶರೀರವನ್ನು ಜೀವನವೆಂದು ನಂಬಿರುವುದೇ ಭ್ರಮೆ.

**ಪ್ರಶ್ನೆ – ನೀವು ದಿಲ್ಲಿಯಲ್ಲಿ ಭಾರತದ ಚೀಫ್ ಜಸ್ಟಿಸ್ ವೆಂಕಟ ಚಲೈಯ್ಯಜಿ ಅವರನ್ನು ಬೇಟಿ ಮಾಡಿದ್ದೀರ ಮತ್ತು ಸಾರ್ವಭೌಮ ನ್ಯಾಯದ ಬಗೆ ಅವರನ್ನು ವಿಚಾರಿಸಿದ್ದೀರ, ಅದಕ್ಕೆ ಅವರ ಹತ್ತಿರ ಉತ್ತರವಿರಲಿಲ್ಲ. ಭಾರತದಲ್ಲಿ ನ್ಯಾಯ ಬೇರೆ, ಪಾಕಿಸ್ತಾನದಲ್ಲಿ ನ್ಯಾಯ ಬೇರೆ. ಭಾರತದಲ್ಲಿ ಹಿಂದು ಅವರಿಗೆ ನ್ಯಾಯ ಬೇರೆ ಮತ್ತು ಮುಸಲ್ಮಾನ ಅವರಿಗೆ ಬೇರೆ, ಈ ರೀತಿಯಲ್ಲಿ ನ್ಯಾಯದ ಬಗೆ ಬಹಳ ಭ್ರಮೆಯಿದೆ. ನ್ಯಾಯ ಪರಿವಾರದಲ್ಲಿ ಪ್ರಮಾಣಿತವಾಗುತ್ತದೆಯಿಂದು ನೀವು ಹೇಳಿದ್ದೀರಿ, ಆದರೆ ನ್ಯಾಯ ನ್ಯಾಯಾಲಯದಲ್ಲಿದೆ ಎಂದು ನಾವು ನಂಬಿದ್ದೇವೆ, ಸ್ಪಷ್ಟ ಮಾಡಿ.**

ಉತ್ತರ - ಸೂತ್ರ ರೂಪದಲ್ಲಿ ಹೇಳಲಾಗಿದೆ - "ಸಂಬಂಧ, ಮೌಲ್ಯ, ಮೌಲೀಕರಣೆ, ಉಭಯತೃಪ್ತಿ". ಇದೇ ನ್ಯಾಯ. ಸಂಬಂಧದ ಮೌಲೀಕರಣೆಯಾಗುವುದು, ಉಭಯತೃಪ್ತಿಯಾಗುವುದು ಬಹಳ ಅಗತ್ಯ. ಮಾನವನ ಜೊತೆ ಜಡ ಚೈತನ್ಯದ ಸಂಬಂಧವಿದ್ದೇ ಇರುತ್ತದೆ, ಹೇಗೆ ಗಾಳಿಯ ಜೊತೆ ಸಂಬಂಧವಿದೆಯೋ ಹಾಗೆ. ನಕಾರಿಸಿದರೂ ಸರಿ, ಸ್ವೀಕರಿಸಿದರೂ ಸರಿ. ನೈಸರ್ಗಿಕತೆಯ ಜೊತೆ ಸಂಬಂಧವಿಲ್ಲದೆಯಿರುವಂತೆ, ಮಾನವನ ಸಹಿತ ಸಂಬಂಧವಿಲ್ಲದಿರುವಂತೆ ನೀವು ಏನನ್ನು ಮಾಡಲಾಗುವುದಿಲ್ಲ. ಇವೆಲ್ಲ ಮಾನವ ಪರಿವಾರದಲ್ಲೇ ಸಿಗುತ್ತದೆ. ನ್ಯಾಯಾಲಯದಲ್ಲಿ ತೀರ್ಪು ನೀಡಲಾಗುತ್ತದೆ, ನ್ಯಾಯವಲ್ಲ.

**ಪ್ರಶ್ನೆ – ನಿಮ್ಮ ಸಂಪೂರ್ಣ ಪ್ರತಿಪಾದನೆ ಅಸ್ತಿತ್ವ ಮೂಲಕವೇ. ಚೈತನ್ಯ ಪ್ರಕೃತಿ ಸತ್ವದಲ್ಲಿ ಸಂಪೃಕ್ತವಾಗಿದೆ ಎಂದು ನೀವು ಹೇಳಿದ್ದೀರಿ. ಈ ರೀತಿಯಲ್ಲಿ ಅಸ್ತಿತ್ವವೇ ಸರ್ವಸ್ವ. ಎಲ್ಲಿ ಘಟಕ ಇಲ್ಲವೋ ಅಲ್ಲೂ ಸತ್ವ ಇದೇ ಮತ್ತು ಎಲ್ಲಿ ಘಟಕಗಳು ನಿಬಿಡವಾಗಿವೆಯೋ ಅಲ್ಲೂ ಸತ್ವ ಇದೆ, ಇದನ್ನು ತಿಳಿಯಪಡಿಸಿ.**

ಉತ್ತರ - ವ್ಯಾಪಕ ವಸ್ತು ನಮಗೆ ಬೇಗ ಅರಿವಾಗುತ್ತದೆ. ಇದನ್ನು ಖಾಲಿ ಸ್ಥಳ, ಸತ್ವ, ಪರಮಾತ್ಮಾ, ಈಶ್ವರವೆಂದು ಹೇಳಿದ್ದೇವೆ. ಇದೇನು ವಸ್ತು. ಇದು ಮೂಲ ವಸ್ತು, ಊರ್ಜೆ. ಇದೆಂತಹ ವಸ್ತುವೆಂದರೆ ಇದರಲ್ಲಿರುವ ಘಟಕಗಳು ಇದರಲ್ಲಿ ಪ್ರೇರಿತವಾಗಲು ಯೋಗ್ಯವಾಗಿವೆ. ಪ್ರೇರಿತ ಹೇಗೆ ಆಗುತ್ತವೆ, ಮೇಲಿಂದ ಯಾರಾದರು ತಳ್ಳುತ್ತಿದ್ದಾರೆಯೇ? ಒಂದು ಶುರುವಾಯಿತು, ಮತ್ತೆ ಅದು ತಳ್ಳುವುದರಿಂದ ಒಂದೊಂದಾಗಿ ಎಲ್ಲಾ ಶುರುವಾದವು ಎಂದು ಮೊದಲು ಹೇಳುತ್ತಿದ್ದರು. ಸತ್ವದಲ್ಲಿ ತಳ್ಳುವಂತಹ ಯಾವುದೇ ಗುಣವಿಲ್ಲ. ಇದರಲ್ಲಿ ತರಂಗವೂ ಇಲ್ಲ, ಗತಿಯೂ ಇಲ್ಲ, ಒತ್ತಡವೂ ಇಲ್ಲ, ಆದ್ದರಿಂದ ತಳ್ಳುವ ಮಾತೆಯಿಲ್ಲ. ಪ್ರತ್ಯೇಕ ವಸ್ತು ಸತ್ವದಲ್ಲಿ ಸಂಪೃಕ್ತವಾಗಿರುವ ಕಾರಣ ಊರ್ಜಿತವಾಗಿವೆ, ಪ್ರೇರಿತವಾಗಿವೆ, ಇದು ಪ್ರಮಾಣವೇ. ಇದು ಸರ್ವತ್ರ ವಿದ್ಯಮಾನ. ಪ್ರತ್ಯೇಕ ಘಟಕ ವ್ಯಾಪಕದಲ್ಲಿ ಮುಳುಗಿವೆ, ಆವರಿಸಿವೆ. ಒಂದೊಂದು ಬೇರೆಯಿರುವ ಅರ್ಥವೇ, ಅವುಗಳ ಮಧ್ಯದಲ್ಲಿ ಸತ್ವ ಇದೇ ಎಂದು. ಅವುಗಳ ಮಧ್ಯೆ ಸತ್ವವಿಲ್ಲದಿದ್ದರೆ ಅವು ಬೇರೆ ಬೇರೆಯಾಗಲು ಸಾಧ್ಯವೇಯಿಲ್ಲ. ಅವು ಒಟ್ಟುಗೂಡುವುದೂ ಸತ್ವವಿರುವುದರಿಂದ. ಈ ರೀತಿಯಲ್ಲಿ ಇದು ರಚನೆ ವಿರಚನೆಯ ಆಧಾರವಾಯಿತು ಹಾಗು ನೆನೆದಿರುವ ಕಾರಣ ಊರ್ಜೆ ಸಂಪನ್ನತೆ ವಸ್ತುವಿನಲ್ಲಿ ಇದ್ದೇ ಇದೆ ಏಕೆಂದರೆ ಕ್ರಿಯಾಶೀಲತೆಯಿದ್ದೇಯಿದೆ.

ಈ ವಸ್ತುವನ್ನು ಪುನಃ ಇನ್ನೊಂದು ರೀತಿಯಿಂದ ಅಧ್ಯಯನ ಮಾಡಿದೆ. ಘಟಕದ ರೂಪದಲ್ಲಿ ವಸ್ತುಗಳು ಕಂಡುಬರುತ್ತವೆ, ಅವುಗಳ ಗಾತ್ರ ಮತ್ತು ವ್ಯಾಪಕ ರೂಪದಲ್ಲಿರುವುದರ ಗಾತ್ರ ಸಮಾನವಾಗಿದೆಯೋ ಅಥವಾ ಬಿನ್ನವಾಗಿದೆಯೋ ಎಂದು ಯೋಚಿಸಿದೆ. ವ್ಯಾಪಕ ವಸ್ತುವಿಗೆ ಯಾವ ಗಾತ್ರವೂ ಇಲ್ಲ, ಸೀಮೆಯೂ ಇಲ್ಲ.

ಭೌತಿಕವಾದದ ಅನುಸಾರ ಘಟಕಗಳು ಇರುವ ಜಾಗದಲ್ಲಿ ವ್ಯಾಪಕ ಸತ್ವ ಇರುವುದಿಲ್ಲ ಅರ್ಥಾತ್ ಘಟಕ ವ್ಯಾಪಕ ವಸ್ತುವನ್ನು ಸರಿಸುತ್ತದೆ. ಅತಃ ಘಟಕಗಳು ವ್ಯಾಪಕ ವಸ್ತುಗಿಂತ ಬಲವುಳ್ಳ (ಭಾರವುಳ್ಳ) ಎಂದು ನಂಬಿಕೆಯಿದೆ. ಆದರೆ ಯಥಾರ್ಥದಲ್ಲಿ ನೋಡಿದರೆ ಸಮಸ್ತ ವಸ್ತುಗಳು ಶೂನ್ಯಾಕರ್ಷಣೆಯಲ್ಲಿವೆ. ಧರಣಿ, ಸೂರ್ಯ, ಸೌರಮಂಡಲ, ಆಕಾಶಗಂಗೆಗಳು ಎಲ್ಲವೂ ಶೂನ್ಯಾಕರ್ಷಣೆಯಲ್ಲಿವೆ. ಶೂನ್ಯಾಕರ್ಷಣೆ ಸ್ಥಿತಿಯಲ್ಲಿದೆ - ಇದರಿಂದ ಇದು

ಸ್ಪಷ್ಟವಾಗುತ್ತದೆ, ಸತ್ವ ಮತ್ತು ಘಟಕದ ಪರಸ್ಪರತೆಯಲ್ಲಿ ಭಾರವಿಲ್ಲ. ಆದರೆ ಘಟಕಗಳ ಪರಸ್ಪರತೆಯಲ್ಲಿಯೇ ಭಾರ ಸ್ಪಷ್ಟವಾಗುತ್ತದೆ. ಎರಡು ಪರಮಾಣುಗಳ ಪರಸ್ಪರತೆಯಲ್ಲಿ ಅಣು ಆಗುವ ಪ್ರವೃತ್ತಿವಶ ಭಾರ ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ ಒಂದಕ್ಕಿಂತ ಅಧಿಕ ಅಣು ನಿಶ್ಚಿತ ರಚನೆ ಪ್ರಕೃತಿವಶ ಭಾರ ಸ್ಪಷ್ಟವಾಗಿದೆ. ಘಟಕಗಳಲ್ಲಿ ಒಂದು ಇನ್ನೊಂದರ ಪರಸ್ಪರತೆಯಲ್ಲಿ ಭಾರವನ್ನು ಸ್ಪಷ್ಟ ಮಾಡುವ ಕ್ರಮದಿಂದ, ಯಾವುದನ್ನು ನಾವು ಆಕರ್ಷಣ ಬಲವೆಂದು ಹೇಳುತ್ತೇವೆಯೋ; ವಾಸ್ತವಿಕತೆಯಲ್ಲಿ ಅದು ವಿಕಾಸಕ್ರಮದಲ್ಲಿ ಭಾಗವಹಿಸುವ ಅಥವಾ ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವ ಅರ್ಥದಲ್ಲಿದೆ. ಉದಾಹರಣೆಗೆ, ಒಂದು ಕಲ್ಲನ್ನು ಧರಣಿಯ ವಾತಾವರಣದಿಂದ ಸ್ವಲ್ಪ ದೂರ ಬಿಡುವುದರಿಂದ ಧರಣಿಯ ಮೇಲೆ ಬರುತ್ತದೆ, ಇದು ಆ ಕಲ್ಲಿನಲ್ಲಿ ಒಳಗೊಂಡಿರುವ ವಿಕಾಸೋನ್ಮುಖಿ ಪ್ರವೃತ್ತಿಯ ಆಧಾರದ ಮೇಲೇಯೇ ಇದೆ. ಈ ಪ್ರವೃತ್ತಿಯನ್ನು ಪ್ರಕಾಶಿತ ಮಾಡುವ ಸಮಯ ಇದನ್ನು ಆಕರ್ಷಣ ಬಲ ಎಂದು ಹೆಸರು ನೀಡಲಾಗಿದೆ. ಇವೆಲ್ಲವೂ ಕ್ರಿಯಾಶೀಲವಾಗಿವೆ ಎಂದು ಈ ಎರಡು ಪ್ರಮಾಣಗಳಿಂದ ನಮಗೆ ಅರಿವಾಗುತ್ತದೆ. ಸತ್ವ ಪಾರಗಾಮಿ, ಇದರ ಸಾಕ್ಷಿ ಪ್ರತ್ಯೇಕ ಘಟಕ ಕ್ರಿಯಾಶೀಲ, ನಿಯಂತ್ರಿತ, ಬಲ ಸಂಪನ್ನವಾಗಿದೆ. ಅಸ್ತಿತ್ವದಲ್ಲಿ ಘಟಕ ಎಲ್ಲೇ ಸ್ಥಿತವಾಗಿದ್ದರೂ ನಿಯಂತ್ರಣ, ಕ್ರಿಯಾಶೀಲತೆ ಮತ್ತು ಬಲ ಸಂಪನ್ನತೆ ಯಥಾವತ್ತಾಗಿ ಇರುತ್ತದೆ ಇದು ಸತ್ವ ಪಾರಗಾಮಿಯಾಗಿರುವ ಸಾಕ್ಷಿ.

**ಪ್ರಶ್ನೆ – ಸತ್ವದಲ್ಲಿ ಅನಂತ ಘಟಕಗಳು ಮುಳುಗಿ, ಆವರಿಸಿದ್ದು, ನೆನೆದಿವೆ, ಎಂದು ನೀವು ಹೇಳಿದ್ದೀರಿ, ಅವುಗಳು ಪರಸ್ಪರತೆಯಲ್ಲಿಯೂ ಅನಂತ ಕೋನಗಳಿಂದ ಪ್ರಕಾಶಿತವಾಗುತ್ತವೆ, ಇದನ್ನು ಸ್ಪಷ್ಟ ಮಾಡಿ.**

ಉತ್ತರ - ಇದಕ್ಕೆ ಒಂದು ಸೂತ್ರ ಬರದಿದೆ, ಪ್ರತ್ಯೇಕ ಏಕ ತನ್ನಲ್ಲಿ ಅನಂತ ಕೋನ ಸಂಪನ್ನವಾಗಿದೆ. ಅನಂತ ಕೋನ ಯಾವುದಾದರು ದಿಶೆಯಲ್ಲಿ ನೇರ ರೇಖೆಯಲ್ಲಿ ಹೋಗುತ್ತದೆ ಮತ್ತು ಆ ನೇರ ರೇಖೆಯಲ್ಲಿ ವಸ್ತು ಪ್ರತಿಬಿಂಬಿತವಾಗಿ ಇದ್ದೇ ಇರುತ್ತದೆ. ಕೋನ ಎಲ್ಲಾದರು ಹೋಗಿ ಯಾವುದಾದರು ವಸ್ತುವಿನ ಮೇಲೆ ನಿಲ್ಲುತ್ತದೆ. ಎದುರಿನಲ್ಲಿ ಒಂದು ವಸ್ತು ಕಾಣುವ ತನಕ ಆ ಕೋನ ಹೋಗುತ್ತಲಿರುತ್ತದೆ. ಎಲ್ಲಿ ವಸ್ತು ಸಿಗುತ್ತದೆಯೋ ಅದರ ಮೇಲೆ ವಸ್ತು ಪ್ರತಿಬಿಂಬಿತವಾಗಿರುತ್ತದೆ. ಈ ರೀತಿಯಲ್ಲಿ ವಸ್ತು ಪ್ರಕಾಶಮಾನವಾಗಿದೆ, ಇದರ ಪ್ರಮಾಣವಿದೆ. ವಸ್ತು ಪ್ರಕಾಶಿತವಾಗಿರುವ ಪ್ರಮಾಣದ ಸಹಿತ ಪ್ರತ್ಯೇಕ ವಸ್ತುವಿನಲ್ಲಿ ಪ್ರಕಾಶ ಒಳಗೊಂಡಿದೆ. ಈ ರೀತಿಯಲ್ಲಿ ಪ್ರತ್ಯೇಕ ಏಕದಲ್ಲಿ ಅನಂತ ಕೋನ ಒಳಗೊಂಡಿರುವುದು ಸ್ಪಷ್ಟವಾಗುತ್ತದೆ, ಇದು ಪ್ರಕಾಶಮಾನತೆಯ ಅರ್ಥದಲ್ಲಿಯೇ ಇದೆ. ನಿಮ್ಮ ಪ್ರತಿಬಿಂಬ ನನ್ನ ಮೇಲೆ ಇರುವ ಫಲಸ್ವರೂಪ ನಿಮ್ಮ ಪ್ರಕಾಶಮಾನತೆ ನನಗೆ ಅರಿವಾಗುತ್ತದೆ.

**ಪ್ರಶ್ನೆ – ಇವತ್ತು ಪ್ರಪಂಚ ವ್ಯಾಪಾರದಲ್ಲಿ, ಜೀವನೋಪಾಯದಲ್ಲಿ, ಶಿಕ್ಷಣದಲ್ಲಿಯೂ ಲಾಭವನ್ನು ಸಂಪಾದಿಸುವ ದಿಕ್ಕಿನಲ್ಲಿ ಓಡುತ್ತಿದೆ, ಇದನ್ನು ನೀವು ಲಭೋನ್ಮಾದವೆಂದು ಹೇಳಿದ್ದೀರಿ. ಇದರಿಂದಾಗಿರುವ ವಿಶ್ವದಲ್ಲಿ ಸಾಮಾಜಿಕ, ಆರ್ಥಿಕ, ನೈಸರ್ಗಿಕ ಸಮಸ್ಯೆಗಳು ಉತ್ಪನ್ನವಾಗಿವೆ, ಇವುಗಳ ಪರಿಹಾರ ಎಲ್ಲಿ ಸಿಗುತ್ತದೆ? ಲಾಭ ಸಂಪಾದಿಸುವ ಚಕ್ರವನ್ನು ಪ್ರಪಂಚ ಬಿಡಬೇಕೆಂದರೆ ಅದರ ವಿಕಲ್ಪವೇನು?**

ಉತ್ತರ - ಯಾವುದಾದರು ವಸ್ತು ನಿಷ್ಫಲವಾದರೆ ಸಫಲತೆಗಾಗಿ ಪ್ರಯಾಸ ಮಾಡಬಹುದು. ಲಕ್ಷ್ಯ ವಿಹೀನತೆ, ದಿಶೆ ವಿಹೀನತೆಯ ಸ್ಥಿತಿಯಲ್ಲಿ ಮಾನವ ಸಿಕ್ಕಿಕೊಂಡಿದ್ದಾನೆ, ಅವನು ದಿಶೆ ಹಾಗು ಲಕ್ಷ್ಯದಿಂದಾಗಲೇ ವಂಚಿತನಾಗಿದ್ದಾನೆ, ಇದರ ಕಾರಣ ಅದರ ಯೋಜನೆ ಮತ್ತು ಕಾರ್ಯಕ್ರಮದಲ್ಲಿಯೂ ನಿಶ್ಚಿತತೆ ಬರಲಿಲ್ಲ. ಲಕ್ಷ್ಯ ಸ್ಥಿರವಾಗಿರುವಾಗಲೇ ಕಾರ್ಯಕ್ರಮದ ನಿಶ್ಚಯತೆಯಾಗುತ್ತದೆ, ದಿಶೆ ನಿಶ್ಚಿತವಾಗುತ್ತದೆ. ಇದರಲ್ಲಿ ತಾತ್ವಿಕ ರೂಪದಲ್ಲಿ ವಿವೇಕ ಸಮ್ಮತ ವಿಜ್ಞಾನ, ವಿಜ್ಞಾನ ಸಮ್ಮತ ವಿವೇಕ, ಎರಡರ ಸಮನ್ವಯ ಒಂದು ಸಂಗೀತದ ರೂಪದಲ್ಲಿ, ಒಂದು ಗತಿಯ ರೂಪದಲ್ಲಿ ನಮಗೆ ಸಿಗುತ್ತದೆ. ಇದೇ ಮುಖ್ಯ ಮಾತು. ಇವಾಗಿರುವ ಲಾಭೋನ್ಮಾದಿ ರೂಪಿ ಅರ್ಥ ವ್ಯವಸ್ಥೆಯ ಲಕ್ಷ್ಯವನ್ನು ಹುಡುಕಲು ಹೋದರೆ ಲಕ್ಷ್ಯ ಕೇವಲ ಸಂಗ್ರಹ, ಸೌಕರ್ಯ, ಭೋಗ, ಅತಿಭೋಗವೇ. ಇದರ ನಿಶ್ಚಯನವಾಗುವುದೇ ಇಲ್ಲ. ಸಂಗ್ರಹ-ಸೌಕರ್ಯಗಳ ಯಾವ ತೃಪ್ತಿ ಬಿಂದು ಇಲ್ಲ. ಈ ಧರಣಿಯ ಮೇಲಿರುವ ೭೦೦ ಕೋಟಿ ಮಾನವ ಅಥವ ಯಾವ ಒಬ್ಬ ಮನುಷ್ಯನಿಗೆ ಸಂಗ್ರಹ - ಸೌಕರ್ಯದ ತೃಪ್ತಿ ಬಿಂದು ಸಿಕ್ಕಿರುವಂತೆ ಕಂಡಿಲ್ಲ ಮತ್ತು ಸಿಗುವುದೂ ಇಲ್ಲ, ಪ್ರಮಾಣೀಕರಿಸಲು ಆಗುವುದಿಲ್ಲ. ಇದೇ ದಿಶೆ ವಿಹೀನತೆ ಹಾಗು ಲಕ್ಷ್ಯ ವಿಹೀನತೆಯ ಸಾಕ್ಷಿ. ಲಕ್ಷ್ಯ ಮತ್ತು ದಿಶೆ ನಿಶ್ಚಿತವಾದರೆ ನಮ್ಮ ಕಾರ್ಯಕ್ರಮವೂ ನಿಶ್ಚಿತ ಆಗುತ್ತದೆ. ಲಾಭೋನ್ಮಾದಿ ಹೇಳಿರುವುದೇಕೆಂದರೆ ಇದರಲ್ಲಿ ಎಂದಿಗೂ ತೃಪ್ತಿ ಪಡೆಯಲು ಸಾಧ್ಯವಿಲ್ಲ ಆದರೆ, ಯಾವಾಗಲೂ ಅಯ್ಯೋ-ಅಯ್ಯೋವೆನ್ನುವುದರ ಸಹಿತವಿರಬೇಕು, ಇದರ ಹೆಸರು ಉನ್ಮಾದ. ಸಂಗ್ರಹದ ಸ್ವರೂಪವನ್ನು ನಾನು ನೋಡಿದ್ದೇನೆ, ನೀವೂ ನೋಡಬಹುದೇನೋ. ಸಂಗ್ರಹದ ವಿಸ್ತಾರ ಹೆಚ್ಚುತ್ತಾ ಹೋಗುತ್ತದೆ, ಕಡಿಮೆಯಾಗುವುದಿಲ್ಲ. ಸಂಗ್ರಹದ ವಿಸ್ತಾರವನ್ನು ಹೆಚ್ಚಿಸಿ ನಾವು ಯಾವ ಲಕ್ಷ್ಯವನ್ನು ಪಡೆಯಲು ಸಾಧ್ಯ, ಎಲ್ಲಿ ಸೇರಿ ತೃಪ್ತಿ ಪಡೆಯಲು ಸಾಧ್ಯ? ಈ ನಂತರ ಸಂಗ್ರಹ-ಸೌಕರ್ಯವನ್ನು ನಾವು ಪಡೆದರೂ ಅದರ ನಿಯೋಜನೆ, ಭೋಗ, ಬಹುಭಾಗ, ಅತಿಭೋಗದ ಸೀಮೆಯಲ್ಲೇ ಆಗಲು ಸಾಧ್ಯ, ಇದರ ಯಾವುದೇ ಗಮ್ಯ ಸ್ಥಳಿ ಇಲ್ಲ. ಇವತ್ತಿಗೂ ಭೋಗದಿಂದ ತೃಪ್ತಿ ಪಡೆಯಲು ಯಾರಿಗೂ ಸಾಧ್ಯವಾಗಿಲ್ಲ. ಈ ಎರಡೂ ಸಾಕ್ಷಿಗಳಿಂದ ನಾನು ಈ ನಿಷ್ಕರ್ಷಕ್ಕೆ ಬಂದಿದ್ದೇನೆ, ಇದು ಉನ್ಮಾದವಲ್ಲದೆ ಇನ್ನೇನು? ಈ ರೀತಿಯ ಉನ್ಮಾದದಿಂದ ೭೦೦ ಕೋಟಿ ಮನುಷ್ಯರು ಉನ್ಮಾದಿತವಾಗುತ್ತಾರೆ, ಇದರಿಂದ ತಪ್ಪಿಸಿಕೊಳ್ಳುವವರು ಯಾರು? ಈ ಪ್ರಶ್ನೆಯನ್ನು ದೂರ ಮಾಡುವ ಕ್ರಮದಲ್ಲಿಯೇ ಅನುಸಂಧಾನಪೂರ್ವಕ ಸರ್ವಶುಭ ಸುಖ ಬಯಸುತ್ತೇವೆ, ನಿಶ್ಚಯ ಬಯಸುತ್ತೇವೆ, ನಿರಂತರತೆ ಬಯಸುತ್ತೇವೆ. ಇವೆಲ್ಲಾ ಒಟ್ಟು ಅನುಸಂಧಾನದ ವಸ್ತು. ಇದರ ಪಕ್ಷದಲ್ಲಿ ಅರ್ಥವ್ಯವಸ್ಥೆಯೂ ಒಂದು ಅಂಶ. ತನ, ಮನ, ಧನ ರೂಪಿ ಅರ್ಥವಿರುತ್ತದೆ. ತನವೂ ಇರುತ್ತದೆ, ಮನವೂ ಇರುತ್ತದೆ, ಧನವೂ ಇರುತ್ತದೆ, ಈ ಮೂರರಿಂದ ಯಾವುದನ್ನೂ ಬೇರ್ಪಡಿಸಿ ಅರ್ಥಶಾಸ್ತ್ರವಿರಲು ಸಾಧ್ಯವಿಲ್ಲ. ಆದರೆ ಇದುವರಗೆ ಓದಿರುವ ಅರ್ಥಶಾಸ್ತ್ರದ ಅನುಸಾರ ಪ್ರತೀಕವನ್ನು (ಹಣಗುರ್ತ) ಅರ್ಥವೆಂದು ಹೇಳಿದ್ದಾರೆ. ಹಣಗುರ್ತ, ಎರಡು ಪ್ರಕಾರವಾಗಿ ಹೇಳಿದ್ದಾರೆ (೧) ಧಾತು (೨) ಪತ್ರ. ಪತ್ರದ ಹಣಗುರ್ತ ಯಾವುದಾದರು ಮುದ್ರಣಾಲಯದಲ್ಲಿ ಮುದ್ರಿಸಲಾಗುತ್ತದೆ. ಇವಾಗ ಮುದ್ರಿಸುವ ತಂತ್ರ ಲೋಕವ್ಯಾಪೀಕರಣವಾಗಿದೆ, ಇದರ ಕಾರಣ ನಕಲಿ ನೋಟು ಮುದ್ರಿಸಲಾಗುತ್ತದೆ. ಹೀಗಿರುವಾಗ, ವರ್ತಮಾನ ಅರ್ಥಶಾಸ್ತ್ರ, ಯಾವುದರ ಕೀರ್ತಿ ಹಾಡಲಾಗುತ್ತದೆಯೋ, ಅದು ಪತ್ರ ಹಣಗುರ್ತ

ಹಾಗು ಧಾತು ಹಣಗುರ್ತ ವಿಜ್ಞಾನ. ಧಾತು ಹಣಗುರ್ತ, ಪತ್ರ ಹಣಗುರ್ತ, ನಮ್ಮ ಹತ್ತಿರವಷ್ಟೇ ಇದ್ದರೂ ಅದರಿಂದ ಅಪೇಕ್ಷಿತ ವಸ್ತು ಸಿಗದೇ ಇರುವಾಗ ಆ ಹಣಗುರ್ತದಿಂದ ದಾಹವೂ ಈಡೆರುವುದಿಲ್ಲ, ಹೊಟ್ಟೆಯೂ ತುಂಬುವುದಿಲ್ಲ. ಇದನ್ನು ಏನೆಂದು ನಂಬುವುದು. ವಸ್ತುವಿನ ಪ್ರತೀಕವನ್ನು ಪ್ರಾಪ್ತಿಸುವುದರಿಂದ ವಸ್ತುವಿನ ಪ್ರಾಪ್ತಿಯಾಗುವುದಿಲ್ಲ. ಹಣಗುರ್ತದ ಪ್ರಾಪ್ತಿಯನ್ನು ನಾವು ವಸ್ತುವಿನ ಪ್ರಾಪ್ತಿಯೆಂದು ನಂಬಿರುವುದೇ ಬುದ್ಧಿಭ್ರಮಣೆ. ಇದರ ನಿರಾಕರಣೆಗಾಗಿ ನಾನು ಪ್ರಸ್ತುತ ಮಾಡಿರುವುದು ತನ, ಮನ, ಧನ ರೂಪಿ ಅರ್ಥ. ಇಲ್ಲಿ ಧನದ ಅರ್ಥ ಸಾಮಾನ್ಯ ಆಕಾಂಕ್ಷೆ ಹಾಗು ಮಹತ್ವಾಕಾಂಕ್ಷೆ ಸಂಬಂಧಿ ವಸ್ತುಗಳು. ಇದರಲ್ಲಿ ಆಹಾರ, ಆವಾಸ, ಅಲಂಕಾರ, ದೂರದರ್ಶನ, ದೂರಚಲನೆ, ದೂರಶ್ರವಣ ಸಂಬಂಧಿ ಆವಶ್ಯಕ ವಸ್ತುಗಳಿವೆ. ಈ ರೀತಿಯಲ್ಲಿ ನಮ್ಮ ಆವಶ್ಯಕವಾದ ವಸ್ತುಗಳ ಉಪಯೋಗವಾಗುತ್ತದೆ ಸಂಗ್ರಹವಾಗುವುದಿಲ್ಲ. ಉದಾಹರಣೆಗೆ ಧಾನ್ಯವನು ಬೆಳೆಯುತ್ತೇವೆ, ಅದನ್ನು ಒಂದು ವರ್ಷ, ಎರಡು ವ್ವರ್ಷ, ನಾಲ್ಕು ವರ್ಷ ಇಡಬಹುದು ನಂತರ ಅದು ಮುಗ್ಗಿಹೋಗುತ್ತದೆ. ಅದೇ ರೀತಿ ಯಾವುದೇ ಯಂತ್ರ ಉಪಕರಣವನ್ನು ಉಪಯೋಗ ಮಾಡದಿದ್ದರೆ ಅದು ತುಕ್ಕು ಹಿಡಿದು ಸಮಾಪ್ತವಾಗುತ್ತದೆ. ಈ ರೀತಿಯಲ್ಲಿ ನಾವು ಯಾವುದೇ ಯಂತ್ರವನ್ನು ತಯ್ಯಾರಿಸುತ್ತೆವೆಯೋ ಅವು ಉಪಯೋಗಕ್ಕಾಗಿ ಇರುತ್ತವೆ, ಇವನ್ನು ಸಂಗ್ರಹ ಮಾಡಲಾಗುವುದಿಲ್ಲ. ಸಂಗ್ರಹ ಮಾಡಿದರು ಅದು ಒಂದು ಸೀಮೆಯ ತನಕ ಮಾತ್ರ. ಎಷ್ಟು ಹೆಚ್ಚಾಗಿ ನಾವು ಸಂಗ್ರಹ ಮಾಡಲು ಪ್ರಯತ್ನಿಸುತ್ತೆವೆಯೋ ಅಷ್ಟೇ ಕಷ್ಟದಾಯಕವಾಗುತ್ತದೆ. ಆದ್ದರಿಂದ ಇವುಗಳ ಉಪಯುಕ್ತತೆ ಅಗತ್ಯವಾಗುತ್ತದ. ಉಪಯುಕ್ತತೆಯ ನಂತರ ಸದುಪಯೋಗಿತೆ ಮತ್ತು ಪ್ರಯೋಜನಶೀಲತೆಗಾಗಿ ಸಮಸ್ತ ವಸ್ತುಗಳನ್ನು ನಿಯೋಜಿತ ಮಾಡಬಹುದು. ಒಂದು ಬಹಳ ಸುಂದರ ಮಾತನ್ನು ನಾನು ನೋಡಿದ್ದೇನೆ ಯಾವುದೇ ವಸ್ತುವಿನ ಉತ್ಪಾದನ ಮಾಡುವ ಸಮಯ ಮನಸ್ಸು ಇರುವುದು ಅಗತ್ಯ, ಮನಸ್ಸು ಇರುವುದರ ಸಹಿತ ತನವಿರುವುದು ಅಗತ್ಯ. ಮನಸ್ಸು ಮತ್ತು ತನದ ಸಂಯೋಗದಿಂದಲೇ ಎಲ್ಲಾ ವಸ್ತುಗಳ ಉತ್ಪಾದನೆ ಆಗುತ್ತದೆ. ಈ ರೀತಿಯಲ್ಲಿ ನಾವು, ವಸ್ತುವಿನ ಅರ್ಥ ಧನ ಮತ್ತು ಇವುಗಳ ಅರ್ಥ ಸಾಮಾನ್ಯ ಆಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆ ಸಂಬಂಧಿ ವಸ್ತು ಎಂಬುವ ಅವಧಾರಣವನ್ನು ನಾವು ಸ್ವೀಕರಿಸಬಹುದು. ಈ ನಿರ್ಣಯದಿಂದಾಗುವ ಅನುಕೂಲತೆ ಮಾನವ ಜಾತಿಯ ಮನಸ್ಸು ಉತ್ಪಾದನೆಯ ದಿಕ್ಕಿನಲ್ಲಿ ಹೋಗಲು ಪ್ರಾರಂಭವಾಗುತ್ತದೆ. ಇದುವರೆಗೂ ಅರ್ಥಶಾಸ್ತ್ರದ ಡಂಗೂರ ಹೊಡೆದು ಹೊಡೆದು ಮಾನವ ಜಾತಿಯ (ಓದಿದವರ) ಉತ್ಪಾದನೆ ಪ್ರಕೃತಿಯನ್ನು ನಿರರ್ಥಕ ಅಥವ ನಿರ್ಮೂಲನ ಮಾಡುತ್ತಿದ್ದೇವೆ, ನಾಶ ಮಾಡುತ್ತಿದ್ದೇವೆ. ಇದರ ನಂತರ ಇನ್ನೂ ಯಾವುದಾದರು 'ಸ್ಪೆಶಲೈಸೆಶನ್', ಎಂದು ಮಾತನಾಡುತ್ತೇವೆ, ಇದರಿಂದ ಉತ್ಪಾದನೆಯ ಪ್ರವೃತ್ತಿ ಇನ್ನೂ ನಾಶವಾಗುತ್ತದೆ. ನಾಶವಾದ ನಂತರ ಅವನನ್ನು ಒಂದು ಒಳ್ಳೆ ಮನುಷ್ಯನೆಂದು ನಂಬಲಾಗುತ್ತದೆ. **ಇಂತಹ ಒಳ್ಳೆ ಮನುಷ್ಯನಾದ ನಂತರ ಉತ್ಪಾದನೆ ಮಾಡದೆ ಅವನಿಗೆ ಎಲ್ಲಾ ಬೇಕು, ಎಲ್ಲರಿಗಿಂತಲೂ ಹೆಚ್ಚಾಗಿ ಬೇಕು.** ಹೀಗೆ ಉತ್ಪಾದನೆ ಮಾಡದೇ ಇರುವ ಪ್ರವೃತ್ತಿ ಮತ್ತು ಸಂಪೂರ್ಣ ವಸ್ತುಗಳನ್ನು ಹೆಚ್ಚು ಪಡೆಯುವ ಇಚ್ಛೆ, ಇವೆರಡೂ ಸೇರಿ ಪ್ರಪಂಚದ ಸಹಿತ ದ್ರೋಹ ವಿದ್ರೋಹ, ಶೋಷಣೆಯಾಗುವುದು ಭಾವಿಯಾಗುತ್ತದೆ. ಹೀಗಾಗಿ ಮಾನವ ಸಿಕ್ಕಿಕೊಂಡಿದ್ದಾನೆ. ಇದರಿಂದ ಮುಕ್ತಿ ಬೇಕು. ನಾನು ಮುಕ್ತಿ ಪಡೆದಿದ್ದೇನೆ, ನನಗೆ ಯಾರ ಶೋಷಣೆ ಮಾಡುವ ಅವಶ್ಯಕತೆಯಿಲ್ಲ,

ದ್ರೋಹ, ವಿದ್ರೋಹ ಮಾಡುವ ಅವಶ್ಯಕತೆಯಿಲ್ಲ. ಪರಿಶ್ರಮದಿಂದ ನಾನು ಸ್ವಯಂ ನನ್ನ ಆವಶ್ಯಕತೆಗಿಂತ ಅಧಿಕ ಉತ್ಪಾದನೆ ಮಾಡುತ್ತೇನೆ. ನೀವು ಮಾಡಬಹುದು. ಆವಶ್ಯಕತೆ ಪರಿವಾರದಲ್ಲಿಯೇ ನಿಶ್ಚಿತವಾಗುತ್ತದೆ, ವ್ಯಕ್ತಿಯಲ್ಲಲ್ಲ, ಪ್ರಪಂಚದಲಲ್ಲ. ಪರಿವಾರದ ಆವಶ್ಯಕತೆಗಿಂತ ಅಧಿಕ ಉತ್ಪಾದನೆ ಮಾಡಿದರೆ ನಾವು ಸಮೃದ್ಧಿಯನ್ನು ಅನುಭವಿಸುತ್ತೇವೆ. ಈ ರೀತಿಯಿಂದ ಆವರ್ತನಶೀಲ ಅರ್ಥ ವ್ಯವಸ್ಥೆಯ ಅಧ್ಯಯನದ ಆವಶ್ಯಕತೆ ಅನಿಸಿತು. ಅದನ್ನು ನಿಶ್ಚಿತ ರೂಪದಲ್ಲಿ ರಚಿಸಿ ಹಿಂದಿ ಭಾಷೆಯಲ್ಲಿ ಪ್ರಪಂಚಕ್ಕೆ ಕೊಡಲಾಗಿದೆ. ಅದು ಲೋಕ ಗಮ್ಯವಾದರೆ ಅದರಿಂದ ಉಪಕಾರವಾಗುತ್ತದೆ. ಇದರಿಂದ ಯಾವತ್ತು ಪ್ರಪಂಚದ ಯಾವುದೇ ಮನುಷ್ಯ, ಯಾವುದೇ ಪರಿವಾರ, ಎಲ್ಲೂ ಕ್ಷತಿಯಾಗುವುದಿಲ್ಲ. ಏನಾದರು ಉಪಕಾರವೇ ಆಗುತ್ತದೆ. ನಾವು ಶೋಷಣೆ ವಿಧಿಯಿಂದ ಮುಕ್ತರಾಗಬೇಕು. ದ್ರೋಹ, ವಿದ್ರೋಹದಿಂದ ಮುಕ್ತರಾಗಬೇಕು. ರಾಜನೀತಿಯ ಸ್ಥಾನದಲ್ಲಿ ನಮ್ಮ ಮನಸ್ಸಿನಲ್ಲಿ ವ್ಯವಹಾರ ಚಾತುರ್ಯವನ್ನು ನಾವು ಸ್ವೀಕರಿಸಿದ್ದೇವೆ, ಇದರಿಂದ ಎಲ್ಲೂ ಅಭಯ, ನೆಮ್ಮದಿ, ಅನಾಯಾಸ ಆಗುವುದಿಲ್ಲ. ನೆಮ್ಮದಿ, ಅನಾಯಾಸಕ್ಕಾಗಿ ಆವರ್ತನಶೀಲ ಅರ್ಥ ವ್ಯವಸ್ಥೆ ಬೇಕು. ತನ, ಮನ, ಧನ ರೂಪಿ ಅರ್ಥವನ್ನು ಪ್ರಾಕೃತಿಕ ಐಶ್ವರ್ಯದ ಮೇಲೆ ನಾವು ನಿಯೋಜಿತ ಮಾಡಿದರೆ ಇದರಿಂದ ಉತ್ಪಾದಿತ ವಸ್ತು ನಮ್ಮ ಶರೀರಕ್ಕಾಗಿ ಪೋಷಣೆ, ಸಂರಕ್ಷಣೆ, ಸಮಾಜ ಗತಿಯ ಆಧಾರವಾಗುತ್ತದೆ. ಪುನಃ ನಮ್ಮ ಇದೇ ಸಮಾಜ ಗತಿ, ಪೋಷಣೆ, ಸಂರಕ್ಷಣೆಯ ಆಧಾರದ ಮೇಲೆ ನಾವು ಪುನಃ ವಸ್ತುವನ್ನ ನಿರ್ಮಿತ ಮಾಡಲು ಯೋಗ್ಯರಾಗುತ್ತೇವೆ, ಈ ರೀತಿಯಲ್ಲಿ ಇದು ಆವರ್ತನಶೀಲವಾಗಿರುತ್ತದೆ. ಮಾನವ ತನ್ನ ಶಕ್ತಿಗಳನ್ನು ವಿಚಾರ ಶಕ್ತಿಯ ಸಹಿತ ಶರೀರದಿಂದ ಪ್ರಾಕೃತಿಕ ಐಶ್ವರ್ಯದ ಮೇಲೆ ಶ್ರಮ ನಿಯೋಜನೆ ಮಾಡುತ್ತಾನೆ ಫಲಸ್ವರೂಪ ವಸ್ತು ನಿರ್ಮಿತವಾಗುತ್ತದೆ. ಎಷ್ಟು ವಸ್ತುವಿನ ಅಗತ್ಯವಿದೆಯೋ ಅದಕ್ಕಿಂತ ಹೆಚ್ಚಾಗಿ ನಾವು ನಿರ್ಮಿತ ಮಾಡಬಹುದು, ಅಯ್ಯೋ-ಅಯ್ಯೋ ಎಂದು ಹೇಳುವುದರಿಂದ ಮುಕ್ತಿ ಪಡೆಯಬಹುದು. ನಾವು ಮೊದಲಿಂದಲೇ ತೃಪ್ತರಾಗಲು ಬಯಸುತ್ತಾ ಇದ್ದೇವೆ, ಸುಖವನ್ನು ಬಯಸುತ್ತಾ ಇದ್ದೇವೆ, ಆದ್ದರಿಂದ ತೃಪ್ತಿಯ ಉಪಾಯವನ್ನು ಹುಡುಕುತ್ತಿದ್ದೇವೆ, ಉಪಾಯವನ್ನು ಹುಡುಕುತ್ತಾ-ಹುಡುಕುತ್ತಾ ತೃಪ್ತಿಯ ಉಪಾಯ ದೊರಕಿದಾಗ ಅದನ್ನು ಸ್ವೀಕರಿಸುತ್ತೇವೆ. ಇದರಲ್ಲಿ ತ್ಯಜಿಸುವ ಯಾವ ಮಾತು ಇಲ್ಲ. ತಪ್ಪನ್ನು ತಿದ್ದಿ ಸೇರಿಮಾಡುವ ಮಾತು, ಅಪರಾಧವನ್ನು ನ್ಯಾಯಕ್ಕೆ ಬದಲಾಗುವ ಮಾತು, ವಿದ್ರೋಹವನ್ನು ಮೈತ್ರಿಯಲ್ಲಿ, ಶೋಷಣೆಯನ್ನು ಉಪಕಾರದಲ್ಲಿ ಬದಲಾಗುವ ಮಾತು ಬರುತ್ತದೆ, ಇವನ್ನೆಲ್ಲಾ ನಾವು ಸ್ವೀಕರಿಸುತ್ತೇವೆ. ೭೦೦ ಕೋಟಿ ಜನರನ್ನು ಕೇಳಿರಿ ದ್ರೋಹ, ವಿದ್ರೋಹ, ಶೋಷಣೆ, ಯುದ್ಧ ಮಾಡಬೇಕೆ ಇಲ್ಲವೇ. ಎಲ್ಲರೂ ಮಾಡಬಾರದೆಂದೇ ಹೇಳುತ್ತಾರೆ. ನನ್ನ ಪ್ರಕಾರ ಯಾವ ಮನುಷ್ಯನೂ ಅಯ್ಯೋ - ಅಯ್ಯೋ ಎಂದು ಬಾಳುವುದಕ್ಕೆ ತಯಾರಾಗುವುದಿಲ್ಲ. ಈ ಆವರ್ತನಶೀಲ ಅರ್ಥ ಕ್ರಮದಿಂದ ಮಾನವ ಜಾತಿ ಅಯ್ಯೋ - ಅಯ್ಯೋ, ದ್ರೋಹ, ವಿದ್ರೋಹ, ಶೋಷಣೆ, ಯುದ್ಧದಿಂದ ಮುಕ್ತನಾಗಬಹುದು, ಹೇಗೆ ಹುಚ್ಚ, ಸ್ವಸ್ಥನಾಗಲು ಇಚ್ಛಿಸುತ್ತಾನೋ, ಹಾಗೆಯೇ ಮನುಷ್ಯನಲ್ಲಿಯೂ ಲಾಭೋನ್ಮಾದಿ ಅರ್ಥ ವ್ಯವಸ್ಥೆಯಲ್ಲಿ ಆವರ್ತನಶೀಲ ಅರ್ಥವ್ಯವಸ್ಥೆಯ ಆಕಾಂಕ್ಷೆ ಒಳಗೊಂಡಿರುತ್ತದೆ, ಅದನ್ನು ಜಾಗೃತಗೊಳಿಸಬೇಕು. ಶುಭಾಕಾಂಕ್ಷೆ ಪ್ರತ್ಯೇಕ ಮಾನವನಲ್ಲಿ ಒಳಗೊಂಡಿದೆ ಅದನ್ನು ಎಚ್ಚರಗೊಳಿಸಬೇಕು. ಎಚ್ಚರಗೊಳಿಸುವ ಕ್ರಮದಲ್ಲಿ ಆವರ್ತನಶೀಲ ಅರ್ಥ ವ್ಯವಸ್ಥೆ ಒಂದು ಅವಿಭಾಜ್ಯ ಸ್ವರೂಪ,

ಇದರ ಮೂಲ ಸಿದ್ಧಾಂತ ಶ್ರಮ ನಿಯೋಜನೆ, ಶ್ರಮ ವಿನಿಮಯ ಸಿದ್ಧಾಂತ. ಇದರಲ್ಲಿಯೇ ನಮ್ಮ ಮಹತ್ವಾಕಾಂಕ್ಷೆ, ಸಾಮಾನ್ಯಾಕಾಂಕ್ಷೆಗೆ ಸಂಬಂಧಿತ ವಸ್ತುಗಳನ್ನು ನಿರ್ಮಿಸಬೇಕು. ಆವರ್ತನಶೀಲ ಅರ್ಥವ್ಯವಸ್ಥೆಯಿರುವುದೇ ವರ್ತಮಾನ, ಪ್ರಕೃತಿ ಸಹಜ, ನಿಯತಿ ಸಹಜ, ಸಹ-ಅಸ್ತಿತ್ವ ಸಹಜ. ಆದ್ದರಿಂದ ಇದನ್ನು ನಾವು ಸಂಪೂರ್ಣವಾಗಿ ಅಧ್ಯಯನ ಮಾಡಬೇಕು. ಜೀವನದಲ್ಲಿ ಚರಿತಾರ್ಥ ಮಾಡಬೇಕು ಮತ್ತು ಸ್ವಯಂ ಸಂತುಷ್ಟರಾಗಿ ಸಂತುಷ್ಟಿಯ ಸ್ರೋತರಾಗಬೇಕು.

**ಪ್ರಶ್ನೆ – ಮುನುಷ್ಯ – ಮನುಷ್ಯನ ನಡುವೆ ವಿಸಂಗತಿ ಹಾಗು ದುರ್ಗತಿಯನ್ನು ನೋಡಿ ಕಾರ್ಲ್ ಮಾರ್ಕ್ಸ್ ಅವರು ದ್ವಂದ್ವಾತ್ಮಕ ಭೌತಿಕವಾದದ ಅವಧಾರಣವನ್ನು ನೀಡಿದರು. ಇದಕ್ಕೆ ಸಾಮ್ಯವಾದ ಹೆಸರು ನೀಡಿದರು. ಮಾನವ-ಮಾನವನ ನಡುವೆ ಆರ್ಥಿಕ ವಿಷಮತೆಗಳ ಅಂತ್ಯ ಈ ಸಾಮ್ಯವಾದದಿಂದ ಒಂದು ರಾಜನೈತಿಕ ವ್ಯವಸ್ಥೆಯ್ಯ ಅವತಾರದಿಂದ ಸಂಪನ್ನವಾಗಬಹುದೆಂಬ ಸ್ವಪ್ನವನ್ನು ತೋರಿದರು. ಹಿಂದಿನ ೭೦ ವರ್ಷಗಳಲ್ಲಿ ೧/೩ ಪ್ರಪಂಚ ಸಾಮ್ಯವಾದವನ್ನು ಸ್ವೀಕರಿಸಿ ಅದರ ಮೇಲೆ ಗಹನ ಪ್ರಯೋಗವಾಗಿದೆ. ಇದರಿಂದ ಕೋಟಿ ಮನುಷ್ಯರು ಹಲವರು ಯಾತನೆಗಳನ್ನು ಈ ಸ್ವರ್ಗವು ಕೆಳಗಿಳಿದುಬರುವ ಆಸೆಯ ವಶೀಕರಣದಿಂದ ಸಹಿಸಿಕೊಂಡರು ಆದರೆ ಸಾಮ್ಯವಾದ ಸಮಸ್ತ ಧರಣಿಯ ಮೇಲೆ, ಪ್ರಯೋಗಾತ್ಮಕ ರೂಪದಲ್ಲಂತು, ಬಹಳ ಕೆಟ್ಟದಾಗಿ ಅಸಫಲವಾಯಿತು. ದ್ವಂದ್ವ, ಮನುಷ್ಯನ ಸುಖವಾಗೀ ಬಾಳುವ ಆಧಾರವಾಗಲು ಸಾಧ್ಯವಿಲ್ಲ ಎನ್ನುವ ಮಾತ್ತು ಈ ವಿಶ್ವದಲ್ಲಿ ಸಿದ್ಧವಾಯಿತು. ನಿಮ್ಮಿಂದ ನಾವು ಕೇಳಿದ್ದೀವಿ, ವ್ಯವಹಾರಾತ್ಮಕ ಜನವಾದ; ಇದರಿಂದ ನೀವು ಮಾನವ ಮಾನವನ ನಡುವೆಯಿರುವ ಸಮಸ್ಯೆಗಳು, ವಿಸಂಗತಿಗಳನ್ನು ದೂರ ಪಡಿಸಿ ಸಮಾಧಾನದ ವರಗೆ ಮುಟ್ಟಿಸಬಹುದೆಂದು ನೀವು ಪದೇ ಪದೇ ಹೇಳಲು ಪ್ರಯತ್ನಿಸಿದ್ದೀರಿ. ಇದರ ಸ್ವರೂಪವನ್ನು ಸ್ಪಷ್ಟಪಡಿಸಿ, ಅರಿವುಪಡಿಸಿರಿ.**

ಉತ್ತರ - ದ್ವಂದ್ವಾತ್ಮಕ ಭೌತಿಕವಾದದ ಪರಿಕಲ್ಪನೆ ಏನೆಂದರೆ, ಏನೇ ಕಾರ್ಯ ನಡೆಯುತ್ತಲಿದೆಯೋ ಅದು ಆಕರ್ಷಣೆಯಿಂದ (ನೂಕು-ಎಳೆತ) ನಡೆಯುತ್ತಿದೆ. ಇದನ್ನು ವ್ಯವಹಾರಿಕ ರೂಪದಲ್ಲಿ ಹೀಗೆ ನೋಡಬಹುದು; ನಿಮ್ಮ ಬಲದ ಪ್ರಯೋಗ ನನ್ನ ಮೇಲಾಗುತ್ತದೆ, ನನ್ನ ಬಲದ ಪ್ರಯೋಗ ನಿಮ್ಮ ಮೇಲಾಗುತ್ತದೆ ಆದ್ದರಿಂದ ಇಬ್ಬರ ಕಾರ್ಯ ನಡೆಯುತ್ತದೆ ಎಂದು ಯೋಚಿಸಲಾಗಿತು. ಇಬ್ಬರ ವಿಕಾಸವಾಗುತ್ತದೆ ಅಥವ ಒಬ್ಬರ ನಾಶವಾಗಿ ಹಾಗು ಒಬ್ಬರ ವಿಕಾಸವಾಗುತ್ತದೆ ಎಂದು ಯೋಚಿಸಲಾಗಿತ್ತು. ಇದೇ ಆಧಾರದ ಮೇಲೆ, ಬಲಶಾಲಿಯಾಗಿರುವುದೇ ಬಾಳಲು ಯೋಗ್ಯ ವಸ್ತು, ಬಲಹೀನ ಬಾಳಲು ಯೋಗ್ಯ ವಸ್ತುವಲ್ಲ, ಎಂದು ದ್ವಂದ್ವಾತ್ಮಕ ಭೌತಿಕವಾದದ ಅನುಸಾರ ನಂಬಿಕೆಯಿದೆ. ನಾನು ನೋಡಿರುವಹಾಗೆ ಅಸ್ತಿತ್ವದಲ್ಲಿ ಯಾವುದೇ ಆಕರ್ಷಣೆ ಇಲ್ಲ, ಒಂದೊಂದು ಬಲ ಸಂಪನ್ನವಾಗಿರುವ ಸ್ಥಿತಿಯನ್ನು ನಾನು ನೋಡಿದ್ದೇನೆ, ಒಂದು ಪರಮಾಣು ಅಂಶವೂ ಬಲ ಸಂಪನ್ನವಾಗಿದೆ, ಪರಮಾಣುವೂ ಬಲ ಸಂಪನ್ನವಾಗಿದೆ, ಅಣು, ಅಣು ರಚಿತ ಪಿಂಡ, ಎಲ್ಲವೂ ಬಲ ಸಂಪನ್ನವಾಗಿದೆ. ಇವು ಒಂದು ಇನ್ನೊಂದರ ಸಹಿತ ಆದಾನ - ಪ್ರದಾನದ ರೂಪದಲ್ಲಿ ಪೂರಕತೆ ವಿಧಿಯನ್ನು ಸಂಪನ್ನ ಮಾಡಲು ಯೋಗ್ಯವಾಗಿವೆ, ಫಲಸ್ವರೂಪ ವಿಕಾಸವಾಗುತ್ತದೆ. **ಅಸ್ತಿತ್ವವನ್ನು ಅರಿತುಕೊಂಡು ದ್ವಂದ್ವಾತ್ಮಕ ಭೌತಿಕವಾದವನ್ನು ಬರೆಯಲು**

**ಸಾಧ್ಯವಿಲ್ಲ. ಬುದ್ಧಿಯ ಸರಿಯಾದ ಪ್ರಯೋಗವಾಗದಿರುವ ಫಲವಾಗಿಯೇ ನಾವು ಹೀಗೆ ಯೋಚಿಸುತ್ತೇವೆ, ನಾವು ಬಾಳುತ್ತೇವೆ ಬೇರೆ ಎಲ್ಲಾ ನಾಶವಾಗುತ್ತದೆ, ನಮ್ಮ ಧರ್ಮವಿರುತ್ತದೆ ಬೇರೆ ಎಲ್ಲಾ ಧರ್ಮಗಳು ನಾಶವಾಗುತ್ತವೆ.** ನಾವು ಧರಣಿಯ ಮೇಲೆ ಬಾಳುತ್ತೇವೆ, ರಾಜಿಸುತ್ತೇವೆ, ಬೇರೆ ಎಲ್ಲರ ನಾಶವಾಗುತ್ತದೆ. ಹೀಗೆ ಕೋಲಾಹಲ, ದಂಗೆಯೇಳುವುದು, ಘೋಷಣೆಗಳು ಪ್ರತಿದಿನ ಕೇಳಿಬರುತ್ತದೆ, ಇವೆಲ್ಲ ಶೇಖಚಿಲ್ಲಿಯ ಕಥೆಗಳು. ಇದರಿಂದ ಯಾವುದೇ ನಿಶ್ಚಿತ ದಿಶೆ, ಲಕ್ಷ್ಯವನ್ನು ಪಡೆದಿಲ್ಲ ಮತ್ತು ಪಡೆಯುವುದೂ ಇಲ್ಲ. ದಿಶೆ ಹಾಗು ಲಕ್ಷ್ಯ ನಿಶ್ಚಿತವಾಗುವುದರಿಂದಲೇ ನಿಶ್ಚಿತ ಕಾರ್ಯಕ್ರಮದ ಬಾರಿ ಬರುತ್ತದೆ, ಇದನ್ನು ನಾನು ನೋಡಿದ್ದೇನೆ. ಇದನ್ನು ನಾನು ಅಧ್ಯಯನ ಮಾಡುತ್ತೇನೆ, ಅಧ್ಯಯನ ಮಾಡಲು ಬಯಸುವವರಿಗೆ ಅದನ್ನು ನಿಷ್ಕ್ರುಷ್ಟತೆಯಿಂದ ಅದ್ಯಯನ ಮಾಡಿಸುತ್ತೇನೆ. ಇದು ನನ್ನ ಪ್ರತಿದಿನದ ಕಾರ್ಯ, ಇದರಿಂದ ನಾನು ನಿಮ್ಮ ಮೇಲೆ ದೊಡ್ಡ ಆಭಾರವನ್ನು ಮಾಡುತ್ತಿಲ್ಲ, ಇದು ನನ್ನ ಕೆಲಸ, ಹೇಗೆ ಗಾಳಿ ತನ್ನ ಕೆಲಸವನ್ನು ಮಾಡುತ್ತದೆಯೋ, ನೀರು ತನ್ನ ಕೆಲಸವನ್ನು ಮಾಡುತ್ತದೆಯೋ, ಹಾಗೆಯೇ ನಾನು ನನ್ನ ಕೆಲಸವನ್ನು ಮಾಡುತ್ತೇನೆ. ನನ್ನಲ್ಲಿ ದೃಢ ವಿಶ್ವಾಸವಿದೆ, ಇದುವರಗೆ ನಾನು ಎಷ್ಟು ದಿನ ಎಷ್ಟು ಕ್ಷಣ ಎಷ್ಟು ಕಾರ್ಯ ಮಾಡಲಾಯಿತೋ, ಇದೇ ಅವಧಾರಣ ಮತ್ತು ಇದೇ ಉದ್ದೇಶವಿಟ್ಟು ಮಾಡಿದ್ದೇನೆ. ಇದರಲ್ಲಿ ನನಗೆ ಪ್ರತ್ಯೇಕ ತಿರುವು, ಬಿಂದು, ಕಾರ್ಯ, ವ್ಯವಹಾರ, ಉತ್ಪಾದನ ವಿನಿಮಯ ಪ್ರತ್ಯೇಕ ಸ್ಥಳದಲ್ಲಿ ಸುಗಮವಾಗಿ ಸಮಾಧಾನ ಸಿಗುತ್ತಲಿರುತ್ತದೆ, ಇದರಿಂದ ನಾನು ಸುಖವನ್ನು ಪಡೆದಿದ್ದೇನೆ ನನ್ನ ಪರಿವಾರ ಜನರೂ ಸುಖವನ್ನು ಪಡೆದಿದ್ದಾರೆ. ಪ್ರತ್ಯೇಕ ಪರಿವಾರ ಸುಖ ಪಡೆಯಲು ಬಯಸುತ್ತದೆ, ಪ್ರತ್ಯೇಕ ಮಾನವ ಸುಖಿ, ಅರಿವುಳ್ಳವವನಾಗಲು ಬಯಸುತ್ತಾನೆ, ಯಾವುದೇ ಮನುಷ್ಯ ಮೂರ್ಖನಾಗಲು ಬಯಸುವುದಿಲ್ಲ. ಆದ್ದರಿಂದ ಮೂರ್ಖನನ್ನು ಮೂರ್ಖನೆಂದು ಹೇಳುವುದರಿಂದ ಅವನು ದಬಾಯಿಸಿ ನೀನೆ ಮೂರ್ಖನೆಂದು ಹೇಳುತ್ತಾನೆ. ಆದ್ದರಿಂದ ಅಸ್ವೀಕೃತ ಮಾತು ಯಾರಿಗೂ ಸ್ವೀಕೃತವಾಗುವುದಿಲ್ಲ. ಭೌತಿಕವಾದಿ ಹೇಳುವುದು ದ್ರೋಹ ವಿದ್ರೋಹವಿಲ್ಲದೆ ಏನು ಆಗಲು ಸಾಧ್ಯವೇಯಿಲ್ಲ. ಇದರ ಬದಲಾಗಿ ಸಮಾಧಾನಾತ್ಮಕ ಭೌತಿಕವಾದದ ದೃಷ್ಟಿಯಲ್ಲಿ ಅಸ್ತಿತ್ವದಲ್ಲಿರುವುದೆಲ್ಲಾ ಬಲ ಸಂಪನ್ನತೆಯಿಂದಿದೆ. ಬಲ ಸಂಪನ್ನತೆಯ ಉಪಯೋಗ, ಸದುಪಯೋಗ, ಪ್ರಯೋಜನಶೀಲತೆ ಜಾಗೃತ ಜೀವನದಲ್ಲಾಗುವ ಸ್ವಾಭಾವಿಕ ಸುಗಂಧ. ವಿಜ್ಞಾನ ಸಮ್ಮತ ವಿವೇಕವಾದರೆ ಇದೇ ಮುಖ್ಯ ಬಿಂದು. ವಿವೇಕದ ಅರ್ಥ ಪ್ರಯೋಜನೆ, ಪ್ರಯೋಜನೆ ವಿಜ್ಞಾನ ಸಮ್ಮತವಾಗಲಿ ಮತ್ತು ವಿವೇಕ ಸಮ್ಮತ ವಿಜ್ಞಾನವಾಗಲಿ. **ವಿಜ್ಞಾನ ಸಮ್ಮತ ವಿವೇಕದ ಅರ್ಥ, ಮಾನವ ಪ್ರಯೋಜನೆಗಳ ವಿಶ್ಲೇಷಣೆ ಮಾಡಲು ಯೋಗ್ಯವಾಗಲಿ ಎಂದು. ಪ್ರಾಯೋಜನೆಯನ್ನು ನಾವು ವಿಶ್ಲೇಷಣೆ ಮಾಡಲಾಗದಿರುವ ತನಕ ನಮ್ಮ ತರ್ಕ ಅಪೂರ್ಣವಾಗಿರುತ್ತದೆ.** ಇದುವರಗೆ ವಿಜ್ಞಾನವಾದಿ ನಿಯಮ ಹೇಳುವುದೇನೆಂದರೆ ನಾವು ತರ್ಕ ಸಂಗತ ಭೌತಿಕವಾದವನ್ನು ನೀಡಿದ್ದೇವೆ, ಆದ್ದರಿಂದ ಮೊದಲು ಬರುವ ತರ್ಕ ನಾನು ಏನು? ನಾನು ಯಾರು? ನಾನೇಕೆ ಇರುವುದು? ಮತ್ತು ನನ್ನ ಶಾಂತಿ, ಅಶಾಂತಿ, ಸುಖ, ದುಃಖ ಹೇಗೆ ನಿರ್ಮಿತವಾಗುತ್ತದೆ? ಇದರಿಂದ ನಾವು ಪೀಡಿತ ಏಕೆ ಆಗುತ್ತೇವೆ? ಪ್ರಸನ್ನ ಏಕೆ ಆಗುತ್ತೇವೆ? ಇದರ ಉತ್ತರ ವಿಜ್ಞಾನದಿಂದ ಸಿಗುವುದಿಲ್ಲ. ನಾವು ಸುಳ್ಳಿನಿಂದ ಯಾವುದೇ ಮಾತನ್ನು ಪ್ರಾರಂಭಿಸಿ ಸತ್ಯವನ್ನು ಪಡೆಯಲು ಸಾಧ್ಯವಿಲ್ಲ. ಸಮಾಧಾನವಿದೆ, ಅಸ್ತಿತ್ವದಲ್ಲಿ

ನಿಯತಿಯಿದೆ, ನಿಯತಿಕ್ರಮವಿದೆ. ನಿಯತಿಕ್ರಮದ ಅರ್ಥ ಸಮಾಧಾನದ ದಿಕ್ಕಿನಲ್ಲಿ ಗತಿಗಳು. ಈ ಮಾತನ್ನು ಅರಿವು ಪಡಿಸುವುದಕ್ಕಾಗಿ ಸಮಾಧಾನಾತ್ಮಕ ಭೌತಿಕವಾದದಲ್ಲಿ ಪ್ರಯತ್ನಿಸಲಾಗಿದೆ. ಇದರ ಆಧಾರದ ಮೇಲೆಯೇ ವ್ಯವಹಾರಾತ್ಮಕ ಜನವಾದವೂ ಇದೆ. ಮಾನವ ಸುಖ ಉಲ್ಲವವನಾಗಲು ಬಯಸುತ್ತಾನೆ ಮತ್ತು ಸಮಾಧಾನ = ಸುಖ, ಸಮಸ್ಯೆ = ದುಃಖ. ಸಮಾಧಾನ ಬೇಕೇಬೇಕು, ಸಮಾಧಾನವಾಗುವುದು ಹೇಗೆ? ವ್ಯವಹಾರದಿಂದಾಗುತ್ತದೆ. ಹೇಗಾಗುತ್ತದೆ? ಸಂಬಂಧ, ಮೌಲ್ಯ, ಮೌಲೀಕರಣೆ ಮತ್ತು ಉಭಯ ತೃಪ್ತಿಯಿಂದ ಸಮಾಧಾನಿತರಾಗುತ್ತೇವೆ. ಸಂಬಂಧಗಳನ್ನು ಗುರುತಿಸಲಾಗದಿದ್ದರೆ ನಾವು ಸಮಸ್ಯೆಯಿಂದ ಗ್ರಸ್ತರಾಗುತ್ತೇವೆ, ಮೌಲ್ಯಗಳ ನಿರ್ವಾಹವಾಗುವುದಿಲ್ಲ, ಸಂಬಂಧಗಳ ಅನುರೂಪವಾಗಿಯೂ ಸಮಸ್ಯೆಗಳಿಂದ ಗ್ರಸ್ತರಾಗಿರುತ್ತೇವೆ. ಈ ನಾಲ್ಕು (ಸಂಬಂಧ, ಮೌಲ್ಯ, ಮೌಲೀಕರಣೆ, ಉಭಯತೃಪ್ತಿ) ಆಗುವುದರಿಂದ ಸಮಾಧಾನವಾಗುತ್ತದೆ. ಈ ರೀತಿಯಾಗಿ ಈ ನಾಲ್ಕು ಒಂದಕ್ಕೊಂದು ಸೇರುವುದರಿಂದ ನಾಲ್ಕು ಸಮಸ್ಯೆಯ ಬದಲಾಗಿ ಒಂದು ಸಮಾಧಾನವಾಗುತ್ತದೆ. ಮನುಷ್ಯ ಸಮಸ್ಯೆಗಳಿಂದ ತೂಗುತ್ತಿದ್ದಾನೆ. ಕೇವಲ ಸಮಸ್ಯೆ ಕಂಡುಬರುತ್ತದೆ, ಮಾನವನ ಪತ್ತೆಯೇ ಇಲ್ಲ. ಇದರ ಸಾಕ್ಷಿ, ರಾಜನೈತಿಕ, ಸಾಮುದಾಯಿಕ, ಸಾಂಸ್ಕೃತಿಕ, ಆರ್ಥಿಕ ಸಮಸ್ಯೆಗಳು ಅಂತಹೀನವಾಗಿ ಮನುಷ್ಯನನ್ನು ಆವರಿಸಿದೆ. ಪ್ರತ್ಯೇಕ ಮನುಷ್ಯನು ಪ್ರತ್ಯೇಕ ಪೀಳಿಗೆಯ ಸಮಸ್ಯೆಯಿಂದ ಅಣಗಿ ನರಳುತ್ತಾ-ನರಳುತ್ತಾ ಅಂತವಾಗುತ್ತದೆ. ಇದರ ಬದಲು ವ್ಯವಹಾರಾತ್ಮಕ ಜನವಾದ ಒಂದು ಪ್ರತಿಪಾದನೆ, ವ್ಯವಹಾರದಿಂದ ಮಾನವ ಸಮಾಧಾನಿತನಾಗುತ್ತಾನೆ. ವ್ಯವಹಾರವನ್ನು ನಾವು ಎರಡು ಸ್ಥಿತಿಯಲ್ಲಿ ಮಾಡುತ್ತೇವೆ, ಒಂದು ನೈಸರ್ಗಿಕ ಸಂಬಂಧ ಹಾಗು ಒಂದು ಮಾನವ ಸಂಬಂಧ. ನೈಸರ್ಗಿಕ ಸಂಬಂಧದಲ್ಲಿ ನಾವು ಎಷ್ಟೇ ವ್ಯವಹಾರ ಮಾಡಿದರು, ನಿಯಮ, ನಿಯಂತ್ರಣ, ಸಮತೋಲನದ ಅರ್ಥದಲ್ಲಿ ಮಾಡುತ್ತೇವೆ ಆದ್ದರಿಂದ ನಾವು ಸಮಾಧಾನವನ್ನು ಪಡೆಯುತ್ತೇವೆ, ಇಲ್ಲದ್ದಿದ್ದರೆ ಸಮಸ್ಯೆಯಿಂದ ಇವಾಗ ಗ್ರಸ್ತರಾಗಿರುವಂತೆ ಗ್ರಸ್ತರಾಗುತ್ತೇವೆ. ನಾವು ತಿಳಿವಳಿಕೆ ಇಲ್ಲದೆ ಮಾಡಿರುವ ಪ್ರೌದ್ಯೋಗಿಕಿ ಕರ್ಮಗಳಿಂದೆಲ್ಲಾ ಧರಣಿಯ ಹೊಟ್ಟೆಯನ್ನು ಸಿಗಿದು ಫಲಸ್ವರೂಪ ಕಷ್ಟಗ್ರಸ್ತರಾಗಿದ್ದೇವೆ. ಈ ಸಮಸ್ಯೆಗಳ ಕಾರಣ ಮಾನವ ಈ ಧರಣಿಯ ಮೇಲೆ ಇರುತ್ತಾನೋ ಇಲ್ಲವೋ ಎಂಬುವುದೇ ಪ್ರಶ್ನೆ ಚಿನ್ಹೆಯಾಗಿದೆ. ನಾನು ನೋಡಿರುವ ಅನುಸಾರ ಪ್ರತ್ಯೇಕ ಮಾನವ, ಪ್ರತ್ಯೇಕ ಸ್ಥಿತಿ, ಪ್ರತ್ಯೇಕ ಗತಿಯಲ್ಲಿ ಸಮಾಧಾನಿತನಾಗಬಹುದು, ಇದೇ ವ್ಯವಹಾರಾತ್ಮಕ ಜನವಾದದಲ್ಲಿ ಪ್ರತಿಪಾದನೆಯ ಮಾತು. ಇದರ ಸಾರ ಬಿಂದುವೇನೆಂದರೆ ಸಂಬಂಧ, ಮೌಲ್ಯ ಮೌಲೀಕರಣೆ, ಉಭಯತೃಪ್ತಿ. ಹೀಗೆ ನಡೆದುಕೊಂಡರೆ ಸರ್ವತೊಮುಖಿ ಸಮಾಧಾನ ನಮಗೆ ದೊರಕುತ್ತದೆ. ಆರ್ಥಿಕ ಸಮಾಧಾನ ಸಿಗುತ್ತದೆ, ಆವರ್ತನಶೀಲ ವಿಧಿಯಿಂದ. ಸಾಂಸ್ಕೃತಿಕ ವಿಧಿ ದೊರಕುತ್ತದೆ ಮಾನವ ಸಂಚೇತನವಾದಿ ಮನೋವಿಜ್ಞಾನದಿಂದ. ಮಾನವ ಜ್ಞಾನಾವಸ್ಥೆಯ ಘಟಕ, ಅವನು ಸಂಜ್ಞಾನಶೀಲತೆಯಿಂದಲೇ ತನ್ನನ್ನು ಪ್ರಮಾಣೀಕರಿಸಬಲ್ಲ. ಸಂಬಂಧವಿರುವುದು, ವರ್ತಮಾನದಲ್ಲಿ ವಿಶ್ವಾಸವಿರುತ್ತದೆ, ವ್ಯವಸ್ಥೆಯ್ಯಲ್ಲಿ ಬಾಳುವುದು ಮತ್ತು ಸಹ-ಅಸ್ತಿತ್ವದಲ್ಲಿ ಪ್ರಮಾಣೀಕರಿಸುವುದು. ಈ ರೀತಿಯಲ್ಲಿ ವ್ಯವಹಾರಾತ್ಮಕ ಜನವಾದ ಸರ್ವತೊಮುಖಿ ಸಮಾಧಾನದ ಅರ್ಥದಲ್ಲಿ ಪ್ರತಿಪಾದಿತವಾಗಿದೆ.

Version 2

**ಪ್ರಶ್ನೆ – ಫ್ರೈಡ್ ಅವರು ಒಂದು ಪ್ರತಿಪಾದನೆಯನ್ನು ಪ್ರಸ್ತುತಿಸಿದ್ದಾರೆ, ಇದರಲ್ಲಿ ಮನುಷ್ಯನ ಸಮಸ್ತ ಇಚ್ಛೆಗಳನ್ನು ಒಂದು ಬಿಂದುವಿನ ಮೇಲೆ ಕೇಂದ್ರಿತ ಮಾಡಿದ್ದಾರೆ, ಅದು 'ಕಾಮ (ಸೆಕ್ಸ್)'. ಇವತ್ತು ಪ್ರಪಂಚದಲ್ಲಿ ಈ ವಿಚಾರಧಾರೆಯನ್ನು ಸಮಸ್ತ ಜನರು ಅಘೋಷಿತ ಅಥವಾ ಘೋಷಿತ ರೂಪದಲ್ಲಿ ಸ್ವೀಕರಿಸಿದ್ದಾರೆ ಆದರೆ ಇದರಿಂದ ಪ್ರಪಂಚದಲ್ಲಿ ಮನುಷ್ಯನ ಬಗೆ ಒಂದು ಸ್ಪಷ್ಟ ಮತ್ತು ಸಮಾಧಾನಕಾರಿ ಚಿಂತನ ಮತ್ತು ಪರಿಣಾಮ ಸಿಗುವುದಿಲ್ಲವೆಂದು ನಾವು ನೋಡಲಾಗಿದೆ. ನೀವು ಮಾನವ ಸಂಚೇತನವಾದಿ ಮನೋವಿಜ್ಞಾನದ ಮಾತು ಹೇಳಿದ್ದೀರಿ. ಈ ಮನೋವಿಜ್ಞಾನ ಯಾವ ರೀತಿಯಲ್ಲಿ ಫ್ರೈಡ್ ಅವರ ಮನೋವಿಜ್ಞಾನದಿಂದ ಬಿನ್ನವಾಗಿದೆ? ಈ ಅವಧಾರಣದಿಂದ ಹೇಗೆ ಮನುಷ್ಯ ಸುಖ-ಶಾಂತಿಯನು ಪ್ರಾಪ್ತಿಸಬಹುದು ಮತ್ತು ಸಮಗ್ರ ಮಾನವ ಜಾತಿ ಒಂದು ಸರಿಯಾದ ದಿಶೆಯನ್ನು ಪ್ರಾಪ್ತಿಸಬಹುದು?**

ಉತ್ತರ - ಪ್ರತ್ಯೇಕ ಮಾನವ ಜೀವನ ಮತ್ತು ಶರೀರದ ಸಂಯುಕ್ತ ರೂಪ, ಈ ಮಾತನ್ನು ಸ್ಪಷ್ಟ ಮಾಡಲಾಗಿದೆ. ಜೀವನ ಮೂಲ ರೂಪದಲ್ಲಿ ಸಂಘಟನೆ-ಪೂರ್ಣ ಪರಮಾಣು. ಪರಮಾಣು ಸಂಕ್ರಮಿತವಾಗಿ ಚೈತನ್ಯ ಪ್ರಕೃತಿಯಾಗುತ್ತದೆ (ಜೀವನ). ಅವಾಗ ಪ್ರಕೃತಿ ತನ್ನ ಚೈತನ್ಯ ರೂಪದಲ್ಲಿ ವೈಭವಿತವಾಗಲು ಸಾಧ್ಯ. ಸಂಘಟನೆ-ಪೂರ್ಣ ಪರಮಾಣು ಭಾರಬಂಧನ ಹಾಗು ಅಣುಬಂಧನದಿಂದ ಮುಕ್ತವಾಗಿದೆ. ಇದೇ ಅದರ ವೈಭವ. ಇದು ಸಹ-ಅಸ್ತಿತ್ವ ವಿಧಿಯಿಂದ ಸಮೃದ್ಧ ಮಸ್ತಿಷ್ಕ-ಸಂಪನ್ನ ಶರೀರವನ್ನು ಚಾಲಿಸಲು ಯೋಗ್ಯವಾಗುತ್ತದೆ. ಇವೆರಡು ನಿಯತಿಕ್ರಮದಲ್ಲಿ ಬರುವ ವಿಧಿಗಳು ಅರ್ಥಾತ್ ನಿಶ್ಚಿತ ರೂಪದಲ್ಲಿ ಅಸ್ತಿತ್ವ ಸಹಜ ಉಪಲಬ್ಧಿಗಳು. ಮಾನವನಲ್ಲಿ ಮತ್ತು ಅನ್ಯ ಜೀವಗಳಲ್ಲಿ ಜೀವನದ ಮತ್ತು ಶರೀರದ ಸಂಯುಕ್ತ ರೂಪದಲ್ಲಿರುತ್ತದೆ. ಇದನ್ನು ಹಲವಾರು ಪ್ರಕಾರದಿಂದ ನೋಡಲಾಗಿದೆ. ಇದರ ಅಧ್ಯಯನ ಮಾಡಬಹುದು. ಇದು ಅಧ್ಯಯನದ ಕೇಂದ್ರ ಬಿಂದು, ಜೀವಿತವಾಗಿರುವುದು, ಜೀವಿತವಾಗಿಲ್ಲದಿರುವುದು, ಜೀವನ-ಸಂಪನ್ನವಾಗಿರುವುದು ಮತ್ತು ಜೀವನ ರಹಿತವಾಗಿರುವುದು ಇದು ಸ್ಪಷ್ಟವಾಗುತ್ತದೆ. ಇದರಲ್ಲಿ ಜೀವನ ಸಂಪನ್ನವಾಗಿರುವ ಪ್ರಮಾಣ ಜ್ಞಾನೇಂದ್ರಿಯಗಳ ವ್ಯಾಪಾರದಿಂದ ಅರಿವಾಗುತ್ತದೆ. ಜೀವನ ಶರೀರದಿಂದ ಪ್ರಕಾಶಿತವಾಗಲಾಗುವುದಿಲ್ಲ ಅರ್ಥಾತ್ ಜ್ಞಾನೇಂದ್ರಿಯಗಳ ಕಾರ್ಯ ಕಲಾಪವಾಗದಿರುವಾಗ ಸತ್ತುಹೋದರೆಂದು ಹೇಳುತ್ತೇವೆ. ಸಾಯುವ ಅರ್ಥ ಶರೀರವನ್ನು ಜೀವನ ಬಿಟ್ಟು ಹೋಗಿರುತ್ತದೆ. ಶರೀರದಿಂದ ಜೀವನ ಬೇರೆಯಾದ ಸಮಯದಿಂದ ಮೃತಕನಾದನೆಂದು ಘೋಷಣೆ ಮಾಡುತ್ತೇವೆ. ಇಂತಹ ಶರೀರವನ್ನು ನಾವು ಮಾನವನೆಂದು ಹೇಳುವುದಿಲ್ಲ. 'ಜೀವನ' ಶರೀರವನ್ನು ಚಲಿಸುವ ಸ್ಥಿತಿಯಲ್ಲಿಯೇ ಮಾನವನೆಂದು ಹೇಳುತ್ತೇವೆ. ಹೀಗೆ ಪ್ರತ್ಯೇಕ ಮಾನವ ಒಂದು ವಿಚಾರಶೀಲ ಘಟಕ. ಜೀವಗಳಲ್ಲಿ ವಿಚಾರದ ಯಾವುದೇ ಸ್ಥಾನವಿಲ್ಲ. ಜೀವಗಳ ವಿಚಾರ ವಂಶಾನುಷಂಗೀಯ ರೂಪದಲ್ಲಿಯೇ ಇದೆ. ಮಾನವ ವಂಶಾನುಷಂಗೀಯ ವಿಧಿಯಿಂದ ಬಾಳಲು ಬಯಸಿದರೂ ಕಲ್ಪನಾಶೀಲತೆ, ಕರ್ಮಸ್ವತಂತ್ರತೆ ಅದಕ್ಕಿಂತ ಅಧಿಕ ದೂರದ ತನಕ ಮುಟ್ಟಿರುತ್ತದೆ. ವಂಶಾನುಷಂಗೀಯತೆಯ ಅರ್ಥಾತ್ ಶರೀರದ ಸೀಮೆಯಲ್ಲಿ ನಮ್ಮ ವಿಚಾರ ಸೀಮಿತವಾಗದಿದ್ದರೆ ಆ ಸ್ಥಿತಿಯಲ್ಲಿ ನಮ್ಮ ವಿಚಾರ ದೂರ - ದೂರವರೆಗೂ ಹರಡಿರುತ್ತದೆ. ಇದರ ಕಾರಣ, ನಾವು (ಜೀವನದ) ಶರೀರ ಸೀಮೆಯಲ್ಲಿ ಸೀಮಿತರಾಗಿರಲಾಗಲಿಲ್ಲ. ಇದರ ಕಾರಣ,

ನಾವು ಶರೀರ ಸೀಮೆಯ ತನಕ ವಿಚಾರ ಮಾಡಿ ತೃಪ್ತರಾಗಲಿಲ್ಲ, ಸಮಾಧಾನಿತರಾಗಿಲ್ಲ. ಇದರ ಸಾಕ್ಷಿ, ನಾವು ಸಾಮಾಜಿಕ ಆಗಲಿಲ್ಲ ಮತ್ತು ಅಖಂಡ ಸಮಾಜವೂ ಮಾಡಲಾಗಲಿಲ್ಲ. ಸಾರ್ವಭೌಮ ವ್ಯವಸ್ಥೆಯನ್ನು ಪಡೆಯಲಿಲ್ಲ. ನಾಯಿಯ ವ್ಯವಸ್ಥೆ ಸಾರ್ವ್ವಭೌಮವಾಗಿದೆ, ಕುದುರೆಯ ವ್ಯವಸ್ಥೆ ಸಾರ್ವಭೌಮವಾಗಿದೆ, ಪ್ರತ್ಯೇಕ ಜೀವಿಯ ವ್ಯವಸ್ಥೆ ಸಾರ್ವಭೌಮವಾಗಿದೆ, ಮಾನವನು ಎಂತಹ ನಿರ್ಭಾಗ್ಯ, ಅವನ ವ್ಯವಸ್ಥೆಯೆ ಇನ್ನೂ ಆಗಿಲ್ಲ? ವಿಚಾರಶೀಲತೆ ನಮ್ಮ ಸ್ವತ್ವ, ನಾವು ನೀವು ಮೌನವಾಗಿರಲು ಸಾಧ್ಯವಿಲ್ಲ. ವಿಚಾರವನ್ನು ಮೌನ ಮಾಡುವುದು ನಮ್ಮ ಅಧಿಕಾರದಲಿಲ್ಲ. ಅಸ್ತಿತ್ವದಲ್ಲಿ ಕತ್ತೆ, ಕುದುರೆ, ನಾಯಿ, ಹುಲ್ಲು-ಗಿಡ, ಕಲ್ಲು, ಕಬ್ಬಿಣ, ಮಣಿ-ಮಾಣಿಕ್ಯ ಇವೆಲ್ಲರ ಉಪಯೋಗವಿದೆ ಅಥವ ಒಂದು ಇನ್ನೊಂದಕ್ಕೆ ಪೂರಕವಾಗಿವೆ. ಹಾಗಿದ್ದರೆ ಮಾನವನಾಗಿ ಪೂರಕವಾಗದಿರುವುದು, ಇದು ಹೇಗೆ ಸಧ್ಯ? ಮೌನವಾಗುವುದು ಎಂದರೆ ಪ್ರಕೃತಿ ವಿರೋಧಿಯಾಗುವುದು, ನಿಯತಿ ವಿರೋಧಿಯಾಗುವುದು, ವಿಕಾಸ ವಿರೋಧಿಯಾಗುವುದು ಮತ್ತು ಜಾಗೃತಿ ವಿರೋಧಿಯಾಗುವುದು. ಈ ರೀತಿಯಲ್ಲಿ ನಾಲ್ಕು ವಿಧಿಯಿಂದ ವಿರೋಧಿಯಾಗಿ, ವಿರೋಧದಿಂದ ಸಮಸ್ಯೆ ಜನಿಸುತ್ತದ್ದೆ. ಇದೇ ಆಗಿರುವುದು. ನಮ್ಮ ದೇಶದಲ್ಲಿ ಎಷ್ಟು ಜನರು ಸಮಾಧಿಗಾಗಿ ಪ್ರಯತ್ನ ಮಾಡಿದ್ದಾರೆ. ಇವೆಲ್ಲಾ ಪ್ರಯೋಗದಲ್ಲಿ ಸಮಾಧಿಯ ಸಾಕ್ಷಿ ನೀಡುವ ಬಾರಿ ಬಂದಾಗ ಕೆಲವರು ಸುತ್ತಿಬಳಿಸುವ ವಿಧಿಯಿಂದ ಸಾಕ್ಷಿ ನೀಡಿದ್ದಾರೆ. ಆದರೆ ನಾನು ಸಮಾಧಿ ಪಡೆದ್ದಿದ್ದೇನೆ, ಸಮಾಧಿಯ ಇದೇ ಫಲ, ನಾನು ಇದರ ಪ್ರಮಾಣ, ಎಂದು ಹೇಳಲು ಆಗಲಿಲ್ಲ. ಇದರ ನಂತರ ಅವತಾರ ಪುರಷರು ಬಂದರು. ಮಾನವನು ಅವತಾರಗಳಲ್ಲಿ ಎಷ್ಟೇ ದಾಖಲೆಗಳಿವೆಯೋ, ಅವೆಲ್ಲ ಮಾನವನ ಅಂತಿಮ ಕಲ್ಪನೆಗಳನ್ನು ಪ್ರಸ್ತುತ ಪಡಿಸುವ ಪ್ರಯ್ಯತ್ನ ಮಾಡಿದ್ದಾರೆ. ಶುಭಕ್ಕಾಗಿಯೇ ಮಾಡಿದರು, ಆದರೆ ಸರ್ವಶುಭ ಘಟಿತವಾಗಲಿಲ್ಲ. ಶುಭದ ಅರ್ಥ ಸಮಾಧಾನ, ಸಮೃದ್ಧಿ, ಅಭಯ ಸಹ-ಅಸ್ತಿತ್ವದಲ್ಲಿ ಪ್ರಮಾಣಿತವಾಗಲಿಲ್ಲ. ಅಖಂಡ ಸಮಾಜ, ಸಾರ್ವಭೌಮ ವ್ಯವಸ್ಥೆ ಪ್ರಸ್ತಾಪಿತ ಪ್ರಮಾಣಿತವಾಗಲಿಲ್ಲ, ಪ್ರತ್ಯೇಕ ಮಾನವ ಅರಿವುಳ್ಳವನಾಗಿದ್ದಾನೆ ಎಂಬುವ ಮಾತನ್ನು ಸತ್ಯಾಪಿತ ಮಾಡಲು ಯೋಗ್ಯವೂ ಆಗಲಿಲ್ಲ. ಎಲ್ಲರಿಗೂ ಸುಖ, ಶಾಂತಿ, ಸಂತೋಷ ಪ್ರಾಪ್ತವಾಗಲಿಲ್ಲ. ಇವೆಲ್ಲಾ ಮಾತುಗಳನ್ನು ಧ್ಯಾನದಲಿಟ್ಟು ಸಫಲತೆಯ ಮಾತನಾಡುತ್ತಿದ್ದೇನೆ. ಇದರ ವಿಪರೀತ ಭೌತಿಕವಾದ ಹೇಳಿರುವುದು ಸಂಗ್ರಹ - ಸೌಕರ್ಯ, ಇದರಿಂದಲೂ ಸಫಲತೆ ಸಿಗಲಿಲ್ಲ, ಅಸಫಲತೆಯ ತುದಿಗೆ ಬಂದು ಸೇರಿದೆ. ಸಫಲತೆಯ ಮಾತು ಮಾನವ ಸಂಚೇತನದಿಂದಲೇ ಆಗುತ್ತದೆ. ಮಾನವ ಸಂಚೇತನ ಎಲ್ಲಿರುತ್ತದೆ? ಇದು ಜೀವನದಲ್ಲಿರುತ್ತದೆ, ಶರೀರದಲ್ಲಿರುವುದಿಲ್ಲ. ನೀವು ಫ್ರೈಡ್ ನವರ ಮಾತು ಹೇಳಿದಿರಲ್ಲಾ, ಅವರಿಗೂ ಜೀವನದ ಮಾತಿಗೂ ಸಂಬಂಧವೇ ಇಲ್ಲ.

ಕಾಮದ ಇಚ್ಛೆಯಿಂದ ಪೀಡಿತವಾಗುವುದೇ ಜೀವನದ ಅಪೇಕ್ಷೆಯಾಗಿದ್ದರೆ, ಇದೇ ಸತ್ಯವಾಗಿದ್ದರೆ, ಮೊದಲೇ ನಾಯಿ, ಬೆಕ್ಕು ಇತ್ಯಾದಿ ಜೀವಿಗಳಲ್ಲಿ ಇದು ಮುಗಿದಿರಬೇಕು, ನಿಯತಿ ಕ್ರಮದಲ್ಲಿ ಮಾನವನಾಗುವ ಆವಶ್ಯಕತೆ ಏನಿತ್ತು? ಹೀಗೆ ಪ್ರಶ್ನಿಸಿದರೆ ಮಾನವನಾಗುವ ಯಾವುದೇ ಲಕ್ಷ್ಯವಿಲ್ಲವೆಂಬುವ ತರ್ಕವೇ ಬರುತ್ತದೆ, ಬೇರೆ ಯಾವ ಭಿನ್ನತೆ ಕಂಡುಬರುತ್ತದೆ? ಮಾನವನ ಲಕ್ಷ್ಯ ಸುಖ ಉಳ್ಳವನಾಗುವುದು. ಸುಖ ಪಡೆಯುವುದಕ್ಕಾಗಿ ಸಮಾಧಾನ ಬೇಕು. ಸಮಾಧಾನವಿಲ್ಲದೆ ಯಾರೇ ಸಮೃದ್ಧಿಯನ್ನು ಪ್ರಮಾಣೀಕರಿಸಲು ಆಗುವುದಿಲ್ಲ. ಸಮಾಧಾನವನ್ನು ಬಿಟ್ಟು ನಾವು

ಸಮೃದ್ಧರಾಗಲು ಸಧ್ಯವಿಲ್ಲ. ಆದ್ದರಿಂದ ಇದರ ಮೇಲೆ ಯೋಚಿಸುವ ಆವಶ್ಯಕತೆಯಿದೆ, ವಿಚಾರಪೂರ್ವಕ ನನಗೆ ಅರಿವಾಗಿದೆ, ಮಾನವ ಸಂಚೇತನದ ಸಂಪೂರ್ಣತೆ ಸಂಜ್ಞಾನಶೀಲತೆ ಮತ್ತು ಸಂವೇದನಶೀಲತೆಯಲ್ಲಿ ವ್ಯಾಖ್ಯಾಯಿತವಾಗುತ್ತದೆ. ಸಂಜ್ಞಾನಶೀಲತೆಯಲ್ಲಿ ಎರಡು ಮಾತು (೧) ತಿಳಿವಳಿಕೆ (೨) ನಂಬಿಕೆ ಮತ್ತು ಸಂವೇದನಶೀಲತೆಯಲ್ಲಿ ಎರಡು ಮಾತಿದೆ (೧) ಗುರುತಿಸುವುದು (೨) ನಿರ್ವಹಿಸುವುದು. ಸಂವೇದನಶೀಲತೆಯ ಎಲ್ಲ ಪ್ರಯತ್ನ, ಪ್ರಾರಂಭ ಇಂದ್ರಿಯ ಮೂಲಕ ವಿಧಿಯಿಂದಾಗುತ್ತದೆ. ಇಂದ್ರಿಯ ಸಂವೇದಗಳ ಜೀವಂತ ಶರೀರದ ಆಧಾರದ ಮೇಲೆ ಮಾಡುವು ನಿರ್ಣಯಗಳೆಲ್ಲ ಸಾಮಯಿಕವಾಗಿರುತ್ತವೆ. ಇದರಲ್ಲಿ ನಿರಂತರತೆ ಇರುವುದಿಲ್ಲ. ಉದಾಹರಣೆಗೆ, ಆಹಾರವನ್ನು ರುಚಿಸಿದರೆ ಆಹಾರ ಸೇವನೆ ಮಾಡುತ್ತಲೇ ಇರುವುದು, ನಿದ್ದೆ ಮಾಡುವುದು ಪ್ರಿಯವೆನಿಸಿದರೆ ನಿದ್ದೆ ಮಾಡುತ್ತಲೇ ಇರುವುದು, ಹೀಗಾಗಲು ಸಾಧ್ಯವಿಲ್ಲ. ಇಂದ್ರಿಯ ವ್ಯಾಪಾರದಲ್ಲಿ, ಸತತವಾಗಿ ನಿರಂತರ ಮಾಡುವಂತಹ ಕ್ರಿಯೆಯಾವುದು ಇಲ್ಲ, ಆದರಲ್ಲಿ ಬದಲಾವಣೆ ಆವಶ್ಯಕ. ಪರಿವರ್ತನವಿಲ್ಲದೆ ಯಾವುದೇ ಮನುಷ್ಯ ನಿರಂತರ ಯಾವುದೇ ಇಂದ್ರಿಯ ವ್ಯಾಪಾರದಲ್ಲಿ ಲಿಪ್ತನಾಗಲು ಸಾಧ್ಯವಿಲ್ಲ. ಈ ಭವಣೆ ಏಕೆ? ಎಂದು ಕೇಳಿದರೆ, ಇದರ ಉತ್ತರ ಮಾನವ ಸಂಜ್ಞಾನಶೀಲತೆಯ ದಿಕ್ಕಿನಲ್ಲಿ ಪ್ರವೃತ್ತನಾಗುವುದಕ್ಕಾಗಿಯೇ. ಆದ್ದರಿಂದ ವ್ಯವಸ್ಥೆ ಎಷ್ಟು ಶುಭವೆಂದರೆ, **ಸಂವೇದನಶೀಲತೆಯ ಭಂಗುರತೆಯೇ ಮಾನವನು ಜಾಗೃತನಾಗಲು ಎಬ್ಬಿಸುವ ಘಂಟೆ**, ಮಾನವ ಜಾಗೃತಿಗಾಗಿ ಪ್ರೇರಣೆ, ಮಾನವ ಜಾಗೃತಿಗಾಗಿ ದಿಶೆ, ನನಗೆ, ನಿಮಗೆ. ಇದು ಯಾವಾಗ ಉದ್ಗಮಿತವಾಗುತ್ತದೆ, ಇದನ್ನು ನೀವು ಯಾವಾಗ ಸತ್ಯಾಪಿತ ಮಾಡುತ್ತೀರೆಂಬುವುದನ್ನು ನೀವೇ ಯೋಚಿಸಿರಿ. ಇದರ ದಾಯಿತ್ವ ನಿಮ್ಮದೇ, ನನಗೆಲ್ಲ ಬಂದಾಯಿತು. ಇದು ನಮ್ಮಲ್ಲಿ ಪ್ರಮಾಣಿತವಾದರೆ ನಾವು ರೋಮಾಂಚಿತವಾಗುವುದು ಸ್ವಾಭಾವಿಕ. ಇದು ತನ್ನಲ್ಲಿಯೇ ಎಷ್ಟು ವ್ಯವಸ್ಥಿತ ಮಾತು. ಸ್ವಲ್ಪ ವಿಚಾರಶೀಲವಾಗುವುದರಿಂದ, ಮನುಷ್ಯನು ವಿಚಾರ ಮಾಡಬಹುದು, ಇದರ ಆಧಾರದ ಮೇಲೆ ನಾನು ಮಾಡಿರುವ ಪ್ರಯೋಗದಿಂದ ಸ್ಪಷ್ಟವಾಗಿದೆ, ಸಂವೇದನಶೀಲತೆ ಭಂಗುರಶೀಲ ಮತ್ತು ನಾವು ನಿರಂತರ ಸುಖವನ್ನು ಬಯಸುತ್ತೇವೆ. ಸಂವೇದನೆಗಳಲ್ಲಿ ಸಂವೇದನೆಗಳ ಯೋಗದಲ್ಲಿ ನಮಗೆ ಸುಖದ ಭಾಸವಾದರೂ ಸುಖದ ಅನುಭೂತಿಯ ನಿರಂತರತೆಯಿಲ್ಲ. ನಮ್ಮ ದಾಹಾ ನಿರಂತರ ಸುಖಕ್ಕಾಗಿ, ಇದು ಅನುಭವವಿಲ್ಲದೆ ಆಗುವುದಿಲ್ಲ. ಅನುಭವ ನಿರಂತರವಾಗೇ ಆಗುತ್ತದೆ. ಅನುಭವ ಭಂಗುರವಾಗುವುದಿಲ್ಲ. ಈ ಆಧಾರದ ಮೇಲೆ ಸುಖದ ನಿರಂತರತೆಗಾಗಿ ಇದು ಅವಶ್ಯಕವಾಗಿತ್ತು. ಸಂವೇದನೆಗಳಲ್ಲಿ ಭಂಗುರತೆ ಸಹಜ, ಇದೇ ವ್ಯವಸ್ಥೆ. ಈ ಆಧಾರದ ಮೇಲೆ ನಾವು ಇದರ ಮೌಲೀಕರಣೆ ಮಾಡಬಹುದು. ಇದರ ನಂತರ ಸಂಜ್ಞಾನಶೀಲತೆಯ ಅರ್ಥ ಅರಿವಾಯಿತು; ಜೀವನದ ಎಲ್ಲ ಕ್ರಿಯಾಕಲಾಪ ಅನುಭವ ಮೂಲಕ ವಿಧಿಯಿಂದ ಅನುಪ್ರಾಣಿತವಾಗುವುದು. ಇದೇ ಮಾನವ ಸಂಚೇತನ, ಇದೇ ಜಾಗೃತ ಸಂಚೇತನ. ಇದನ್ನು ನಾನು ಸ್ವಯಂ ಅನುಭವ ಮಾಡಿದ್ದೇನೆ. ನಾನು ನಿಮಗೆ ಅಧ್ಯಯನ ಮಾಡಿಸುತ್ತೇನೆ. ಇದು ಅದ್ಯಯನ ಮೂಲಕ ವಿಧಿಯಿಂದಲೇ ಬರುತ್ತದೆ. ಇದನ್ನು ಪದೇ-ಪದೇ ಪಠಣ - ಪಾಠ ಹೇಳಿಕೊಡುವುದರಿಂದ ಬೋಧಕ್ಕಾಗಿ ಸಹಾಯಕವಾಗಬಹುದು. ಜೀವನ ಅರಿವಾದರೆ ಮಾನವ ಸಂಚೇತನಕ್ಕೆ ಆಧಾರವಾಗುತ್ತದೆ. ಮಾನವೀಯತೆ ಪೂರ್ಣ ನಡತೆ ಅರಿವಾದರೆ ಪರಂಪರೆಯಾಗುತ್ತದೆ.

ಪರಂಪರೆಗಾಗಿ ಮಾನವ ಮಾನವೀಯ ವ್ಯವಹಾರವನ್ನು, ಮಾನವೀಯತೆ ಪೂರ್ಣ ನಡತೆಯನ್ನು ಅರಿತುಕೊಳ್ಳದೇ ಮಾನವ ಪರಂಪರೆಯಾಗುವುದಿಲ್ಲ. ಸರ್ವ ದೇಶ ಕಾಲದಲ್ಲಿ ಒಂದೇ ರೀತಿಯಾಗಿ ಇರುವು ವಸ್ತು, ಮಾನವೀಯ ನಡತೆ. ಮೌಲ್ಯ, ಚಾರಿತ್ರ್ಯ, ನೈತಿಕತೆಯ ಸಂಯುಕ್ತ ಸ್ವರೂಪ ನಡವಳಿಕೆಯೇ. ಚಾರಿತ್ರ್ಯವೆಂದರೆ ಸ್ವಧನ, ಸ್ವನಾರಿ - ಸ್ವಪುರುರ್ಷ ಹಾಗು ದಯಾಪೂರ್ಣ ಕಾರ್ಯ ವ್ಯವಹಾರ. ತನ, ಮನ, ಧನದ ಸದುಪಯೋಗ ಹಾಗು ರಕ್ಷಣೆ ಮಾಡುವುದು ನೈತಿಕತೆ. ಒಳಗೊಂಡಿರುವ ಮೌಲ್ಯಗಳ ನಿರ್ವಹಿಸುವುದು, ಸಂಬಂಧಗಳಲ್ಲಿ ಮೌಲೀಕರಣೆ ಮಾಡುವುದು ಹಾಗು ಫಲಸ್ವರೂಪ ಉಭಯ ತೃಪ್ತಿಯಾಗುವುದೇ ಮೌಲ್ಯ. **ಜೀವನ ಲಕ್ಷ್ಯ ಸುಖ ಪಡೆಯುವುದು, ಮಾನವ ಲಕ್ಷ್ಯ ಸಮಾಧಾನ, ಸಮೃದ್ಧಿ, ಅಭಯ, ಸಹ-ಅಸ್ತಿತ್ವ.** ಲಕ್ಷ್ಯಕ್ಕಾಗಿ ನಾವು ಪ್ರತ್ಯೇಕ ಸ್ಥಳದಲ್ಲಿ ನೈತಿಕತೆಯನ್ನು ಸೇರಿಸುತ್ತೇವೆ ನೈತಿಕತೆ ಇದೇ ಅರ್ಥದಲ್ಲಿ ಸಾರ್ಥಕವಾಗುತ್ತದೆ, ಇದೇ ಅರ್ಥದಲ್ಲಿ ಪ್ರಾಯೋಜಿತವಾಗುತ್ತದೆ. ಮೌಲ್ಯ ವಿಧಿಯೂ ಹೀಗೆಯಿದೆ ಮತ್ತು ಚಾರಿತ್ರ್ಯವಿಧಿಯೂ ಹೀಗೆ ಇದೆ. ದುಷ್ಚಾರಿತ್ರ್ಯದಲ್ಲಿ ದುಖಿಯಾಗುತ್ತೇವೆ, ಅನೈತಿಕತೆಯಲ್ಲಿ ದುಖಿಯಾಗುತ್ತೇವೆ, ಮೌಲ್ಯದ ಅವಮರ್ಯಾದೆಯ ಮೇಲೆ ದುಖಿಯಾಗುತ್ತೇವೆ. ಈ ರೀತಿಯಲ್ಲಿ ಮೌಲ್ಯ, ನೈತಿಕತೆ, ಚಾರಿತ್ರ್ಯವನ್ನು ನಿರ್ವಹಿಸುವುದೇ ಮಾನವೀಯ ನಡತೆ, ಇದೇ ಸ್ವಭಾವ. ಇಂತಹ ನಡತೆಗಾಗಿ ಯಾವು ವಸ್ತುವಿನ ಆವಶ್ಯಕತೆಯಿತ್ತು? ಅಸ್ತಿತ್ವ, ಜೀವನ ಹಾಗು ಮಾನವೀಯತೆಪೂರ್ಣ ನಡತೆಯ ಜ್ಞಾನದ ಆವಶ್ಯಕತೆ ಇದೆ. ಜ್ಞಾನ ಎಂದರೇನು? ಸಹ-ಅಸ್ತಿತ್ವ ವಿಧಿಯಿಂದ ತಿಳಿವಳಿಕೆ, ನಂಬಿಕೆಯೇ ಜ್ಞಾನ. ತಿಳಿವಳಿಕೆ, ನಂಬಿಕೆಯ ನಂತರವೇ ತೃಪ್ತಿ ಬಿಂದುವನ್ನು ಹುಡುಕುವ ಮಾತು ಬರುತ್ತದೆ. ತಿಳಿವಳಿಕೆ ಇಲ್ಲದಿರುವಾಗ, ನಂಬಿಕೆ ಇಲ್ಲದಿರುವಾಗ ತೃಪ್ತಿಯನ್ನು ಯಾಕೆ ಹುಡುಕುತ್ತೇವೆ? ಉದಾಹರಣೆಗೆ, ನಾವು ದಿಲ್ಲಿ ನಗರವನ್ನು ತಿಳಿದಿದ್ದೇವೆ, ನಂಬುತ್ತೇವೆ, ಆದದ್ದರಿಂದ ದಿಲ್ಲಿ ಹೋಗುವ ಕಾರ್ಯಕ್ರಮ ಮಾಡುತ್ತೇವೆ. ದಿಲ್ಲಿ ಎಂಬುವ ನಗರವಿದೆ ಎಂದು ತಿಳಿದೂ ಇಲ್ಲ, ನಂಬಿಕೆಯೂ ಇಲ್ಲದ್ದಿದ್ದರೆ ಅಲ್ಲಿ ಹೋಗುವ ಕಾರ್ಯಕ್ರಮ ಹೇಗಾಗುತ್ತದೆ? ಚಂದ್ರ ಗ್ರಹ ಇರುವುದು ನಂಬಿದ್ದು ಚಂದ್ರ ಗ್ರಹಕ್ಕೆ ಪ್ರಯಾಣ ಮಾಡಿದಾಯಿತು. ತಿಳಿವಳಿಕೆ ಮತ್ತು ನಂಬಿಕೆಯ ತೃಪ್ತಿ ಬಿಂದುವಿಗಾಗಿ ನಾವು ಬಹಳ ಪ್ರಯತ್ನಗಳು ಮಾಡುತ್ತೇವೆ. ಮುಖ್ಯವಾಗಿ ಮಾಡಬೇಕಾಗಿರುವುದು ಅಸ್ತಿತ್ವ ಅರಿವಾಗುವುದರಿಂದ ಸಹ-ಅಸ್ತಿತ್ವ ಅರಿವಾಗುತ್ತದೆ; ಸಹ ಅಸ್ತಿತ್ವ ಅರಿವಾದ ಫಲಸ್ವಾರೂಪ ಮಾನವೀಯತೆ ಪೂರ್ಣ ನಡತೆ ನಿಷ್ಪನ್ನವಾಗೇ ಆಗುತ್ತದೆ. ಮಾನವ ಸಂಚೇತನವಾದಿ ಮನೋವಿಜ್ಞಾನದಲ್ಲಿ ಇದರ ಪುಷ್ಟಿ ಇದೆ. ಇನ್ನೊಂದು ಮಾತು ಜೀವನದಲ್ಲಿ ನಾನು ೧೨೨ ಕ್ರಿಯಾಕಲಾಪಗಳನ್ನು ನೋಡಿದ್ದೇನೆ. ಈ ೧೨೨ ಕಿರ್ಯಾಕಲಾಪಗಳಲ್ಲಿ ಮನದಲ್ಲಿ ಎಷ್ಟು ಕ್ರಿಯಾಕಲಾಪಗಳಾಗುತ್ತವೆ, ವೃತ್ತಿಯಲ್ಲಿ ಎಷ್ಟು , ಬುದ್ಧಿಯಲ್ಲಿ ಎಷ್ಟು, ಆತ್ಮದಲ್ಲಿ ಎಷ್ಟು, ಇದನ್ನು ಸ್ಪಷ್ಟ ಪಡಿಸುವ ಪ್ರಯತ್ನ ಮಾಡಿದ್ದೇನೆ. ಇದರದೇನು ಪ್ರಾಯೋಜನೆ? ಇದರಿಂದ ಆಗುವ ಪ್ರಾಯೋಜನೆ, ಒಂದಾದಮೇಲೆ ಒಂದನ್ನು ಕೇಳಿ ಅರಿತುಕೊಂಡರೆ ತೃಪ್ತಿ ಬಿಂದುಗಾಗಿ ಅನುಭವ ಮಾಡವುದಾಗುತ್ತದೆ, ಇದರಿಂದ ಮತ್ತವರಿಗೆ ಬೋಧಿಸುವ ಅರ್ಹತೆ ಬರುತ್ತದೆ. ಮತ್ತವರಿಗೆ ಬೋಧವಾದನಂತರವೇ ನಮ್ಮ ಸಂಪತ್ತಿನ ಪ್ರಮಾಣ. ನಾವು ಮತ್ತವರಿಗೆ ಅರಿವು ಪಡಿಸಿದರೆ ನಮ್ಮ ಅರಿವಿನ ಪ್ರಮಾಣವಿದೆ. ನಾವು ನಿರೋಗಿಯಾಗಿದ್ದರೆ ಮತ್ತವರನ್ನು ನಿರೋಗಿ ಮಾಡುವುದರಲ್ಲಿ ನಮ್ಮ ಧನ

ಪ್ರಮಾಣಿತವಾಗುತ್ತದೆ. ನಾವು ಧಣಿಯಾಗಿದ್ದರೆ ಮತ್ತವರನ್ನು ಧಣಿ ಮಾಡಿದರೆ ಆವಾಗಲೇ ನಾವು ಧಣಿಯಾಗಿರುವ ಪ್ರಮಾಣವಾಗುತ್ತದೆ. ಈ ರೀತಿಯಲ್ಲಿ ಸರಳತೆಯಿಂದ ಸಾಮಾಜಿಕವಾಗಿರುವ ರೀತಿ ಬರುತ್ತದೆ. ಇದುವರಗೆ ಮಾನವ ಸಂವೇದನಶೀಲತೆಯಲ್ಲಿಯೇ ಬಾಳುತ್ತಿದ್ದಾನೆ ಆದ್ದರಿಂದ ಸಂಗ್ರಹ, ಸೌಕರ್ಯ, ದ್ರೋಹ-ವಿದ್ರೋಹ, ಶೋಷಣೆಯ ಮಾತು ನಡೆಯುತ್ತಾ ಬರುತ್ತಿದೆ. ಮಾನವ ಸಂಚೇತನಾವಾದಿ ಮನೋವಿಜ್ಞಾನದ ಮೂಲ ರೂಪ ಸ್ಪಷ್ಟವಾಗುತ್ತದೆ, ಅದು ತಿಳಿವಳಿಕೆಗಾಗಿ ಮೂಲತಃ ಜೀವನದ ಕ್ರಿಯೆಯೇ, ನಂಬಿದರೆ, ತಿಳಿವಳಿಕೆಯ ಆಧಾರದ ಮೇಲೆ ಪ್ರವರ್ತಿತರಾಗುತ್ತೇವೆ ಮತ್ತು ಗುರುತಿಸುವ ಹಾಗು ನಿರ್ವಹಿಸುವ ಕ್ರಮದಲ್ಲಿ ನಾವು ನ್ಯಾಯಿಕರಾಗುತ್ತೇವೆ, ನಿಯಂತ್ರಿತರಾಗುತ್ತೇವೆ, ಸಂತುಲಿತರಾಗುತ್ತೇವೆ, ಸುಖವುಳ್ಳವರಾಗುತ್ತೇವೆ. ಇದೇ ಒಟ್ಟು ಮಾನವ ಸಂಚೇತನಾವಾದಿ ಮನೋವಿಜ್ಞಾನದ ಪ್ರಾಯೋಜನೆ.

**ಪ್ರಶ್ನೆ: ಬಾಬಜಿ ಇವತ್ತು ಧರಣಿಯ ಮೇಲೆ ಸಾವಿರ ಚಿಕಿತ್ಸೆ ಪದ್ಧತಿಗಳಿವೆ, ಹಲವಾರು ಮಾನವರ ಶ್ರಮೆ ಇದಕ್ಕಾಗಿ ನಿರತವಾಗಿದೆ, ಬಹಳಷ್ಟು ಧನ ನಿಯೋಜಿತ ಮಾಡಿದ ನಂತರವೂ ಮಾನವ ಜಾತಿಯ ಸ್ವಾಸ್ಥ್ಯ ಇವತ್ತಿಗೂ ಕೆಟ್ಟಿದೆ. ಎಷ್ಟು ಧನ ನಿಯೋಜಿತವಾಗಿದೆ, ಎಷ್ಟು ಯಂತ್ರಗಳ ಅನುಸಂಧಾನ ಮಾಡಲಾಗಿದೆ, ಹೀಗಾಗಿಯೂ ರೋಗಗಳ ಸಂಖ್ಯೆ ಹೆಚ್ಚಾಗಿಯೇ ಹೋಗುತ್ತಿದೆ. ಹೊಸ-ಹೊಸ ರೋಗಗಳು ಹುಟ್ಟುತ್ತಿವೆ. ಹಳೇ ಪದ್ಧತಿಗಳಿಂದಲೂ ಘೋಷಣೆ ಮಾಡುವಂತೆ ಉಪಲಬ್ಧತೆ ಆಗುವುದಿಲ್ಲ ಮತ್ತು ಆಧುನಿಕ ಪದ್ಧತಿಗಳಿಂದಲೂ ಹೇಳುವಂತೆ ಪ್ರಮಾಣ ಸಿಕ್ಕಿಲ್ಲ. ಇದರ ಸಂದರ್ಭದಲ್ಲಿ ನೀವು ಜೀವನ ವಿದ್ಯೆಯಿಂದ ಸ್ವಾಸ್ಥ್ಯ-ಸಂಯಮದ ಆಧಾರದ ಮೇಲೆ ಸ್ವಾಸ್ಥ್ಯವನ್ನು ಹೇಗೆ ಗುರುತಿಸಲು ಬಯಸುತ್ತೀರಿ?**

ಉತ್ತರ - ನೀವು ಕೇಳಿರುವ ಪ್ರಶ್ನೆ ಹೆಚ್ಚುಕಡಿಮೆ ಎಲ್ಲರ ಪ್ರಶ್ನೆಯೇ ಕೇಳಿದ್ದೀರಿ. ಇಷ್ಟೆ ಅಲ್ಲಾ ಪ್ರಯತ್ನ ವಿಶೇಷಜ್ಞತೆಗಾಗಿಯೇ ಆಗಿದೆ. ಆದರೆ ವಿಶೇಷಜ್ಞತೆ ಒಂದು ಭೂತವಿದ್ದಹಾಗೆ, ಪಿಶಾಚು ಇದ್ದಹಾಗೆ. ಅದು ಎಲ್ಲರ ಹತ್ಯೆ ಮಾಡುತ್ತದೆ. ನಾವು ವಿಶೇಷಜ್ಞರು ಆದದ್ದರಿಂದ ನಾವು ಹೇಳುವುದೇ ಸರಿಯೆಂದು ನಂಬುವ ಆಧಾರದ ಮೇಲೆ ಸರ್ವಾಧಿಕ ಅಪರಾಧಗಳಾಗಿವೆ. ಇದರಲ್ಲಿ ಹೆಚ್ಚಾದ ಅಪರಾಧವಾಗಿರುವುದು ರೋಗಿಗಳ ಮೇಲೆ. ರೋಗಿ ತನ್ನ ಕಷ್ಟಗಳನ್ನು ಹೇಳಲಾರಂಭಿಸಿದರೆ ಡಾಕ್ಟರ್ ಕೇಳಲು ಬಯಸುವುದಿಲ್ಲ, ಅವರು ರೋಗಿಯನ್ನು ಯಂತ್ರದಿಂದ ಕೇಳಲು ಬಯಸುತ್ತಾರೆ, ಯಂತ್ರದಿಂದ ಮಾನವನ ನೋವು ಗುರುತಿಸಲಾಗುವುದಿಲ್ಲ. ಒಟ್ಟು ಮಾನವನೇ ಮಾನವನ ನೋವನ್ನು ಕೇಳಬಹುದು, ಗುರುತಿಸಬಹುದು, ಇದು ಯಂತ್ರಗಳಿಂದ ಆವುದಿಲ್ಲ ಮತ್ತು ನಾವು ರೋಗವನ್ನು ಗುರುತಿಸಲಾಗುವುದಿಲ್ಲ. ಮೊದಲು, ಆಯುರ್ವೇದದ ವಿಧಿಯಿಂದ, ಯುನಾನಿ ವಿಧಿಯಿಂದ ಮತ್ತು ಇತರ ವಿಧಿಗಳಿಂದ ನಾಡಿ ಜ್ಞಾನದ ಆಧಾರದ ಮೇಲೆ ತೊಂದರೆಯನ್ನು ಗುರುತಿಸುವ ಪ್ರಯತ್ನ ಮಾಡಿದರು, ಇದು ಮೆಚ್ಚತಕ್ಕದ್ದು. ಅವರು, ನಾಡಿಯ ಮೂಲಕ, ನಾಡಿಯ ಗತಿಯಿಂದ, ನಾಡಿಯ ಒತ್ತಡದಿಂದ, ಪ್ರವಾಹದಿಂದ, ಎಳತದಿಂದ, ಬಿಗಿತದಿಂದ, ರೋಗಗಳನ್ನು ಗುರುತಿಸುವ ಪ್ರಯತ್ನ ಮೆಚ್ಚತಕ್ಕದ್ದು. ಮೆಲ್ಲಗೆ ಕಾಲಾಂತರದಲ್ಲಿ, ಯಂತ್ರವನ್ನು ನೋಡಿ ಅದರ (ನಾಡಿ ಪರೀಕ್ಷಣೆಯ) ಕಠಿಣತೆಯನ್ನು ಸ್ವೀಕರಿಸುತ್ತಾ, ಮನುಷ್ಯ ಯಂತ್ರದ ದಿಕ್ಕಿನಲ್ಲಿ

ಓಡಿದ. ಈಗ ಎಲ್ಲರೂ ಯಂತ್ರದ ಮೂಲಕವೇ ನೋವು, ರೋಗವನ್ನು ಕೇಳಲು ಬಯಸುತ್ತಾರೆ. ಯಂತ್ರದ ಆಧಾರದ ಮೇಲೆ ನಾವು ತೆಗೆದುಕೊಳ್ಳುವ ನಿರ್ಣಯದಿಂದ ರೋಗಿ ತೃಪ್ತ ನಾಗುವುದಿಲ್ಲ ಮತ್ತು ರೋಗಗ ಮೂಲ ಸ್ವರೂಪದಿಂದ ಚಿಕಿತ್ಸಕ ದೂರ ಇರುತ್ತಾನೆ. ಇದಕ್ಕಾಗಿ ಯುಕ್ತಿ, ಅನುಸಂಧಾನ, ಶೋಧ ಮಾಡುವ ಮಾತು ಬರುತ್ತದೆ. ಇದರಲ್ಲಿ ತಪ್ಪು ಆಗೇ ಆಗುತ್ತದೆ ಏಕೆಂದರೆ ಅನುಕೂಲತೆ, ಪ್ರತಿಕೂಲತೆಯ ಮಾಡಬೇಕಾಗಿರುವ ಶೋಧ ರೋಗದ ಸಹಿತವಾಗುವುದಿಲ್ಲ. ಸಮಸ್ತ ವಿಶೇಷಜ್ಞತೆ ಸಂಗ್ರಹ ಸೌಕರ್ಯಗಳಲ್ಲಿ ಸಿಕ್ಕಿಕೊಂಡಿದ್ದಾರೆ. ರೋಗಿಯನ್ನು ನೋಡಿ ಔಷಧಿಯನ್ನು ಬರೆಯುವುದಕ್ಕೆ ಐವತ್ತು ರೂಪಾಯಿಯಿಂದ ಹಿಡಿದು ಎರಡು ಸಾವಿರ ರೂಪಾಯಿ ತನಕ ತೆಗೆದುಕೊಳ್ಳುತ್ತಾರೆ. ನಾನು ನೋಡಿರುವಹಾಗೆ ಐವತ್ತು ರೂಪಾಯಿ ತೆಗೆದುಕೊಂಡು ಬರೆಯುವ ಅಔಶಧಿಯನ್ನು, ದೊಡ್ಡ ನಗರಗಳಲ್ಲಿ ಅದೇ ಔಷಧಿಯನ್ನು ಎರಡು ಸಾವಿರ ರುಪಾಯಿ ತೆಗೆದುಕೊಂಡು ಬರೆಯುತ್ತಾರೆ. ಮಾನವ ಹೇಗೆ ಹುಚ್ಚನಾಗಿದ್ದಾನೆ ಎಂದು ನ್ನಿಮ್ಮ ಧ್ಯಾನಾಕರ್ಷಣೆಗೆ ಇದನ್ನು ಹೇಳಿದೆ. ಹೆಚ್ಚು ದುಡ್ಡು ತೆಗೆದುಕೊಳ್ಳುವರು ಒಳ್ಳೆಯ ಚಿಕಿತ್ಸಕರು ಎಂದು ಯೋಚಿಸುವುದರಿಂದ, ಈ ಸೀಮೆಗಿಂತ ಅಧಿಕ ಇದರಲ್ಲಿ ಅಪೇಕ್ಷೆ ಮಾಡಲಾಗುವುದಿಲ್ಲ. ಮೂರನೆಯ ಮಾತು, ನಾವು ಚಿಕಿತ್ಸೆಯಲ್ಲಿ ಸಮಗ್ರತೆಯಲ್ಲಿ ಯೋಚನೆ ಮಾಡಿಲ್ಲ, ಇಂತಹ ಚಿಕಿತ್ಸಕನಾಗಲು ಯೋಚನೆ ಮಾಡಿಲ್ಲ, ಇಂತಹ ಪ್ರಯತ್ನ ಮಾಡಿಲ್ಲ. ಚಿಕಿತ್ಸೆ ಸಮಗ್ರತೆಯಲ್ಲಿ ಎಂದರೆ ಮೊದಲು ಸ್ವಾಸ್ಥ್ಯ ಅಥವಾ ನಿರೋಗದ ಬಲಾಬಲವನ್ನು ಗುರುತಿಸಬೇಕು. ರೋಗದ ಬಲಾಬಲವನ್ನು ಹೇಗೆ ಗುರುತಿಸುವುದು? ನಾಡಿಯಿಂದ ಗುರುತಿಸುತ್ತೇವೆ. ನಾಡಿಯಲ್ಲಿ ಏನು ಗುರುತಿಸುವುದು? ನಾಡಿಯಲ್ಲಿ, ನಾಡಿಯ ಗತಿಗಳನ್ನು ಗುರುತಿಸಿ, ರೋಗಗಳ ಸಾಕ್ಷಾತ್ಕಾರ ಮಾಡಿ ಮತ್ತು ಲಕ್ಷಣಗಳನ್ನು ಜೋಡಿಸಿ, ಇದೇ ರೋಗವೆಂದು ನಿಶ್ಚಯ ಮಾಡುತ್ತೇವೆ. ಅದರ ಚಿಕಿತ್ಸೆ ಮಾಡಿ ಸಫಲವಾದರೆ ನಮ್ಮ ಅರಿವು ಸರಿಯೆಂದು ನಂಬುತ್ತೇವೆ ಮತ್ತು ಅಸಫಲವಾದರೆ ನಮ್ಮ ಅರಿವು ತಪ್ಪೆಂದು ನಂಬುತ್ತೇವೆ. ಈ ನಂತರ ಶೋಧ ಮಾಡುವ ಮಾತು ಬರುತ್ತದೆ. ಇವತ್ತಿನ ಸ್ಥಿತಿಯಲ್ಲಿ, ಯಾರು ಹೇಗೆ ಚಿಕಿತ್ಸೆ ಮಾಡುತ್ತಾರೋ ಅವರು ಅದನ್ನೇ ಸರಿಯೆಂದು ನಂಬುವುದು ಕಂಡುಬರುತ್ತದೆ. ಸಫಲವಾದರೂ ಅಸಫಲವಾದರೂ ನಾವು ಸರಿಯಾದ ಚಿಕಿತ್ಸೆ ನೀಡಿದ್ದೇವೆ ಎಂದು ನಂಬುತ್ತಾರೆ. ಇದರ ಕಾರಣ ನಾವು ಪ್ರಾಣಸಂಕಟದಲ್ಲಿ ಸಿಕ್ಕಿಕೊಂಡಿದ್ದೇವೆ. ಮೊದಲು ರೋಗವನ್ನು ಗುರುತಿಸುವುದು, ರೋಗದ ಬಲಾಬಲವನ್ನು ಗುರುತಿಸುವುದು, ಓಉಶದಿಗಲನ್ನು ಗುರುತಿಸುವುದು, ಅಔಶಧಿಗಳ ಬಲಾಬಲವನ್ನು ಗುರುತಿಸುವುದು, ಅವುಗಳ ಯೋಗ-ಸಂಯೋಗವನ್ನು ಗುರುತಿಸುವುದು, ಅವುಗಳ ಒಪ್ಪತಕ್ಕ ಪ್ರಯೋಗವನ್ನು ಗುರುತಿಸುವುದು, ರೋಗಿಯ ಮನೋಭಾವವನ್ನು ಗುರುತಿಸುವುದು, ಅವರಿಗೆ ಪಥ್ಯ ಅಪಥ್ಯವನ್ನು ಗುರುತಿಸುವುದು, ನಿಯಮ-ಸಂಯಮವನ್ನು ಗುರುತಿಸುವುದು, ಮತ್ತೆ ಉಪಚಾರವನ್ನು ಗುರುತಿಸುವುದ, ಇವೆಲ್ಲಾ ಏಕತ್ರಿತವಾದರೆ ಸಮಗ್ರ ಚಿಕಿತ್ಸೆಯಾಗುತ್ತದೆ. ಔಷಧಿಯ ಯೋಗದಿಂದ ಸಂಪೂರ್ಣ ಚಿಕಿತ್ಸೆಯಾಗುತ್ತದೆ. ಮಣಿ ಚಿಕಿತ್ಸೆಯಲ್ಲಿ ಕಿರಣ - ವಿಕಿರಣದ ಮಾತು ಹಾಗು ಮಂತ್ರ ಚಿಕಿತ್ಸೆಯಲ್ಲಿ ನಮ್ಮ ಮಾನಸಿಕ ತರಂಗದ ಮೇಲೆ ಹೆಚ್ಚು ಪ್ರಭಾವವಿರುತ್ತದೆ. ಕೇವಲ ಔಷಧಿಯೇ ಹೆಚ್ಚಾಗಿ ರಸ ಕ್ರಿಯೆಗಳ ಜೊತೆ ಬೆರೆತು ರಸ ಪರಿವರ್ತನೆ ತರುವ ಕೆಲಸ ಮಾಡುತ್ತದೆ. ರೋಗವನ್ನು ದೂರ ಹೇಗೆ ಮಾಡುವುದ ಎಂಬುವುದು ಶರೀರದ ವ್ಯವಸ್ಥೆಗೆ ಎಷ್ಟು ತಿಳಿವಳಿಕೆಯಿದೆಯೋ, ಅಷ್ಟು ತಿಳಿವಳಿಕೆ ಯಾವುದೇ

ಡಾಕ್ಟರಿಗೆ ಇಲ್ಲ. **ಶರೀರವನ್ನು ಸರಿಪಡಿಸುವ ಟ್ರೈನಿಂಗ ಶರೀರ ವ್ಯವಸ್ಥೆಯಲ್ಲಿಯೇ ಒಲಗೊಂಡಿದೆ**. ಡಾಕ್ಟರ್ ಶರೀರದ ಜೊತೆ ಒತ್ತಾಯ ಮಾಡುತ್ತಾರೆ. ಚಿಕಿತ್ಸಕನಿಗೆ ಮಾಡಬೇಕಾಗಿರುವುದು ಏನು? ಶರೀರ ವ್ಯವಸ್ಥೆಯನ್ನು ಬಲವತಿ ಮಾಡುವುದಕ್ಕಾಗಿ ಶರೀರ ಅವಸ್ಥೆಯ ಅನುಕೂಲ ರಸ-ದ್ರವ್ಯಗಳನ್ನು ಶರೀರಕ್ಕೆ ನೀಡಬೇಕು. ಇದೇ ಚಿಕಿತ್ಸಕನ ಗುಣ, ಇದೇ ಮಹಿಮೆ, ಇದೇ ಅವರ ವಿವೇಕ-ವಿಜ್ಞಾನ. ಇಂತಹ ಚಿಕಿತ್ಸೆಯಿಂದ ನಾವು ಸಫಲವಾಗಬಹುದು. ಅತಃ ಚಿಕಿತ್ಸೆಯನ್ನು ವಿಶೇಷಜ್ಞತೆಯಿಂದ ತೆಗೆದು ಲೋಕವ್ಯಾಪಿಕರಣೆ ಮಾಡಬೇಕು.

ಸ್ವಾಸ್ಥ್ಯ ಎಂಬುವುದು ಶರೀರಕ್ಕೆ ಸಂಬಂಧಿತವಾದದ್ದು. ಸಂಯಮ ಎಂಬುವುದು ಮನಸ್ಸಿನಿಂದಾಗುವುದು. ಇದು ನ್ಯಾಯವಾಗಿರುವುದು, ನಿಯಮಿತವಾಗಿರುವುದು, ನಿಯಮದ ಆಧಾರದ ಮೇಲಾಗುತ್ತದೆ, ನಿಯಂತ್ರಣದ ಆಧಾರದ ಮೇಲಾಗುತ್ತದೆ, ಸಮತೋಲನದ ಆಧಾರದ ಮೇಲಾಗುತ್ತದೆ. ಇದೇ ಸಂಯಮ. ಅತಃ ಸಮತೋಲನದಿಂದ, ನ್ಯಾಯಪೂರ್ವಕವಾಗುವ ಮನೋಭಾವವನ್ನು ಸಂಯಮ ಎಂದು ಹೇಳುತ್ತಾರೆ. ಇದಕ್ಕೆ ಔಷಧಿ ಏನು? ಇದಕ್ಕಾಗಿ ಏನು ಮಾಡಬಹುದು? ಇದಕ್ಕೆ ಔಷಧಿ, ಅರಿವು. ಅರಿವಿಲ್ಲದಿರುವುದರಿಂದ ಅಸಮತೋಲನ, ಮಾನಸಿಕ ಅಸಮತೋಲನ, ಅರಿವಿನಿಂದ ಸಮತೋಲನ ಬಹಳ ಸಾಧಾರಣ ಸೂತ್ರ. ಅರಿವಿನ ಅರ್ಥದಲ್ಲಿ ಸಂಪೂರ್ಣ ವ್ಯವಸ್ಥೆಯಿದೆ, ಸಮತೋಲನವಿರುತ್ತದೆ.

**ಹರಿಹರ್**